ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮನು ಜತೆಗೆ ಶ್ರೀಜೇಶ್ ಧ್ವಜಧಾರಿ

ಭಾನುವಾರ ನಡೆಯಲಿರುವ ಒಲಿಂಪಿಕ್ಸ್ ಕ್ರೀಡಾಕೂಟದ ಸಮಾರೋಪದಲ್ಲಿ ಶೂಟಿಂಗ್ ತಾರೆ ಮನು ಭಾಕರ್ ಅವರೊಂದಿಗೆ ಹಾಕಿ ದಿಗ್ಗಜ ಗೋಲ್ ಕೀಪರ್ ಪಿ.ಆರ್.ಶ್ರೀಜೇಶ್ ಕೂಡ ಭಾರತದ ಧ್ವಜಧಾರಿಯಾಗಲಿದ್ದಾರೆ ಎಂದು ಭಾರತ ಒಲಿಂಪಿಕ್ ಸಂಸ್ಥೆ ಘೋಷಿಸಿದೆ.

ದಾರಿದೀಪೋಕ್ತಿ

ಅದೆಷ್ಟೇ ಬಾರಿ ತನ್ನ ಪೊರೆಯನ್ನು ಕಳಚಿದರೂ ಹಾವು ಹಾವೇ. ಜೀವನದಲ್ಲಿ ಒಮ್ಮೆ ಯಾರಿಂದಲಾದರೂ ಕಚ್ಚಿಸಿಕೊಂಡು, ಅವರನ್ನು ಪುನಃ ಒಳಗೆ ಬಿಟ್ಟುಕೊಳ್ಳುವಾಗ ಸಾಕಷ್ಟು ಸಲ ಯೋಚಿಸಬೇಕು. ಒಂದೇ ಹಾವಿನಿಂದ ಎರಡೆರಡು ಬಾರಿ ಕಚ್ಚಿಸಿಕೊಳ್ಳಬಾರದು.

ವಕ್ರತುಂಡೋಕ್ತಿ

ಇಪ್ಪತ್ತು ನಿಮಿಷ ವಿಳಂಬವಾಗಿ ಹೋಗುವುದು ಹೊಸ ಸಮಯಪಾಲನೆ.

ದೋಸ್ತಿಗಳ ವಿರುದ್ಧ ವಾಗ್ದಾಳಿ ನಡೆಸಿದ ಸಿದ್ದರಾಮಯ್ಯ | ರಾಜೀನಾಮೆ ಕೇಳುವ ನೈತಿಕ ಹಕ್ಕು ಬಿಜೆಪಿಗರಿಗಿಲ್ಲ | ಬಿಜೆಪಿ ವಿರುದ್ಧ ಡಿಕೆಶಿ, ಸುರ್ಜೇವಾಲ ವಾಗ್ದಾಳಿ

ಸಿದ್ದರಾಮಯ್ಯ ಶಕ್ತಿ ಪ್ರದರ್ಶನ

ಮೈಸೂರು/ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಸಮರ ಸಾರಿದ್ದ ಬಿಜೆಪಿ-ಜೆಡಿಎಸ್ ನಾಯಕರಿಗೆ ಸಡ್ಡು ಹೊಡೆಯುವ ರೀತಿಯಲ್ಲಿ ಆರಂಭಿಸಿದ್ದ ಜನಾಂದೋಲನ ಯಾತ್ರೆಯ ಕೊನೆಯ ದಿನ ಕಾಂಗ್ರೆಸ್ ಶಕ್ತಿ ಪ್ರದರ್ಶಿಸಿದೆ.

ಬಿಜೆಪಿ-ಜೆಡಿಎಸ್ ಪಾದಯಾತ್ರೆ ಮೈಸೂರು ನಗರಕ್ಕೆ ಪ್ರವೇಶಿಸುವ ಮೊದಲೇ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಜನಾಂದೋಲನದ ಸಮಾರೋಪ ಸಮಾರಂಭದಲ್ಲಿ ಒಂದೂವರೆ ಲಕ್ಷಕ್ಕೂ ಹೆಚ್ಚು ಜನರು ಭಾಗಿಯಾಗಿದ್ದರು.

ಈ ವೇಳೆ ದೋಸ್ತಿ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದ ಕಾಂಗ್ರೆಸ್ ನಾಯಕರು, ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತಪ್ಪಿಲ್ಲ. ಆದರೆ ಹಿಂದುಳಿದ ನಾಯಕ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದಾರೆ ಎನ್ನುವ ಅಸೂಯೆಯಿಂದ ಸಿದ್ದರಾಮಯ್ಯ ವಿರುದ್ಧ ಷಡ್ಯಂತ್ರ ನಡೆಸಲಾಗಿದೆ ಎಂದು ಟೀಕಾಪ್ರಹಾರ ನಡೆಸಿದರು.

ಸಮಾರಂಭದಲ್ಲಿ ಸಿಎಂ ಸಿದ್ದರಾಮಯ್ಯ ಮಾತನಾಡಿ, ನನ್ನ ಪತ್ನಿಯ ಭೂಮಿಯನ್ನು ಮುಡಾ ಪಡೆದಿತ್ತು. ಇದಕ್ಕೆ ಪ್ರತಿಯಾಗಿ ಕಾನೂನಾತ್ಮಕವಾಗಿ ನಿವೇಶನ ನೀಡಿದ್ದಾರೆ. ನಾನು ಅಧಿಕಾರದಲ್ಲಿ ದ್ದಾಗಲೂ ಈ ನಿವೇಶನಗಳು ಸಿಕ್ಕಿಲ್ಲ. ಇದೇ ಕಡೆ ನಿವೇಶನ ಕೊಡುವಂತೆ ಮನವಿಯನ್ನೂ ಸಲ್ಲಿಸಿಲ್ಲ. ಆದರೂ, ಹೊಟ್ಟೆ ಉರಿಗೆ ಬಿಜೆಪಿ-ಜೆಡಿಎಸ್ ನಾಯಕರು ತಮ್ಮ ವಿರುದ್ಧ ಆರೋಪಿಸುತ್ತಿದ್ದಾರೆ ಎಂದು ಟೀಕಾ ಪ್ರಹಾರ ನಡೆಸಿದರು.

ಒಗ್ಗಟ್ಟು ಪ್ರದರ್ಶನ ಮಾಡಿದ ನಾಯಕರು: ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಬೆಂಗಳೂರಿನಿಂದ ಮೈಸೂರಿನವರೆಗೆ ಜನಾಂದೋಲನ ಯಾತ್ರೆ ನಡೆಸಿದ್ದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ನೇತೃತ್ವ ವಹಿಸಿದ್ದರು.

→ 4

ದಲಿತರ, ಆದಿವಾಸಿಗಳ, ಬಡವರ ಪರವಾಗಿ ಕೆಲಸ ಮಾಡುವ ಸಿದ್ದರಾಮಯ್ಯ ಅವರ ವಿರುದ್ಧ ಮಾಡಿರುವ ಸುಳ್ಳು ಆರೋಪಗಳ ವಿರುದ್ಧ ಉತ್ತರ ನೀಡುವ ಕೆಲಸವಾಗಬೇಕಿದೆ. ಇವರು ದುರ್ಯೋಧನ, ಶಕುನಿಗಳ ರೀತಿ ಪಾದಯಾತ್ರೆ ಮಾಡುತ್ತಿದ್ದಾರೆ. ಇದು ಸಿದ್ದರಾಮಯ್ಯ ಅವರ ವಿರುದ್ಧ, ಕಾಂಗ್ರೆಸ್ ವಿರುದ್ಧ ಪಾದಯಾತ್ರೆಯಲ್ಲ, ಗ್ಯಾರಂಟಿ ಯೋಜನೆಗಳ ವಿರುದ್ಧ, ಮಹಿಳೆಯರ ವಿರುದ್ಧ.

- ರಣದೀಪ್ ಸಿಂಗ್ ಸುರ್ಜೇವಾಲ ರಾಜ್ಯ ಕಾಂಗ್ರೆಸ್ ಉಸ್ತುವಾರಿ

ಸಮಾವೇಶದ ಮುಖ್ಯಾಂಶ

- ದೇವೇಗೌಡ ಕುಟುಂಬದ ಆಸ್ತಿ ಕುರಿತ ಬಿಜೆಪಿ ಹಳೇ ಜಾಹೀರಾತು ಫ್ಲೆಕ್ಸ್ ಅಳವಡಿಸಿ ಕುಟುಕಿದ ಕಾಂಗ್ರೆಸ್
- ಸಮಾರೋಪ ಸಮಾರಂಭದಲ್ಲಿ ನಾನಾ ಜಿಲ್ಲೆಗಳ ಒಂದೂವರೆ ಲಕ್ಷಕ್ಕೂ ಹೆಚ್ಚು ಜನ ಭಾಗಿ
- ವೇದಿಕೆಯಲ್ಲಿ ಇಡೀ ಸಂಪುಟ ಹಾಗೂ ಕಾಂಗ್ರೆಸ್ ವರಿಷ್ಠ ನಾಯಕರ ಹಾಜರಿ, ಶಕ್ತಿ ಪ್ರದರ್ಶನ
- ಹತ್ತು ವರ್ಷಗಳಾದರೂ ನಮ್ಮದೇ ಸರಕಾರ. ಬಿಜೆಪಿ-ಜೆಡಿಎಸ್ ನಾಯಕರಿಗೆ ಸಿಎಂ ಪಂಥಾಹ್ವಾನ
- ಬಿಜೆಪಿ-ಜೆಡಿಎಸ್ ನಾಯಕರು ಈ ಹಿಂದೆ ಪರಸ್ಪರ ವಾಕ್ಸಮರ ನಡೆಸಿದ ವಿಡಿಯೊ ತುಣುಕು ಪ್ರದರ್ಶಿಸಿ, 'ರಾಂಗ್ ಟರ್ನ್' ಎಂದು ಟೀಕಿಸಿದ ಕೈ ಪಡೆ

ಬಿಜೆಪಿ-ಜೆಡಿಎಸ್‌ನವರು ನನ್ನನ್ನು ಹಾಗೂ ನಮ್ಮ ಸರಕಾರ ಅಲುಗಾಡಿಸಲು ಎಷ್ಟೇ ಪ್ರಯತ್ನ ನಡೆಸಿದರೂ ನಿಮ್ಮ ಆಶೀರ್ವಾದ, ಪ್ರೀತಿ, ಅಭಿಮಾನ ಇರುವವರೆಗೂ ನನ್ನನಾಗಲಿ, ಸರಕಾರವನ್ನಾಗಲಿ ಅಲುಗಾಡಿಸಲು ಆಗಲ್ಲ. ನೀವೆಲ್ಲರೂ ನನ್ನ ಪರವಾಗಿ ಯೋಧರಂತೆ ಹೋರಾಡುತ್ತೀರಾ ಎಂಬ ನಂಬಿಕೆ ನನಗಿದೆ.

- ಸಿದ್ದರಾಮಯ್ಯ ಮುಖ್ಯಮಂತ್ರಿ

ಕಾಂಗ್ರೆಸ್ 136 ಸೀಟು ಗೆದ್ದಿದೆ. ಬ್ರಿಟಿಷರು 200 ವರ್ಷ ಆಳಿದರೂ ಈ ಕಾಂಗ್ರೆಸ್ ಅಳಿಸಲಾಗಲಿಲ್ಲ. ನೀವು ಏನೇ ಕುತಂತ್ರ ಮಾಡಿದರೂ ಕಾಂಗ್ರೆಸ್ ಅಳಿಸಲು ಸಾಧ್ಯವಿಲ್ಲ. ಈ ಬಂಡೆ (ಡಿಕೆಶಿ) ಸಿದ್ದರಾಮಯ್ಯ ಅವರೊಂದಿಗಿದೆ. ಈ ಬಂಡೆ ಜತೆ 135 ಶಾಸಕರೂ ಇದ್ದಾರೆ. ಕೋಟ್ಯಂತರ ಜನ ಸಿದ್ದರಾಮಯ್ಯನವರ ಜತೆಗಿದ್ದಾರೆ. ದೋಸ್ತಿ ಪಕ್ಷದಿಂದ ಏನೂ ಮಾಡಲು ಸಾಧ್ಯವಿಲ್ಲ.

- ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಮೈಸೂರು ತಲುಪಿದ ಬಿಜೆಪಿ-ಜೆಡಿಎಸ್ ಪಾದಯಾತ್ರೆ

ಇಂದು ಸಿಎಂ ತವರಲ್ಲಿ ದೋಸ್ತಿಗಳ ಸವಾಲ್

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕಾಂಗ್ರೆಸಿನ ಶಕ್ತಿ ಪ್ರದರ್ಶನ ನಡೆದ ಮೈದಾನದಲ್ಲಿಯೇ ಇಂದು, ಬಿಜೆಪಿ-ಜೆಡಿಎಸ್ ಪಕ್ಷಗಳ ಶಕ್ತಿ ಪ್ರದರ್ಶನಕ್ಕೆ ವೇದಿಕೆ ಸಜ್ಜಾಗಿದೆ.

- ಕಾಂಗ್ರೆಸಿನ ಶಕ್ತಿ ಪ್ರದರ್ಶನ ನಡೆದ ಮೈದಾನದ ಅದೇ ವೇದಿಕೆಯಲ್ಲಿ ಇಂದು, ಬಿಜೆಪಿ- ಜೆಡಿಎಸ್ ಪಕ್ಷಗಳ ಶಕ್ತಿ ಪ್ರದರ್ಶನ

ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಕಳೆದ ಶನಿವಾರ ಬಿಜೆಪಿ-ಜೆಡಿಎಸ್ ಆರಂಭಿಸಿದ್ದ ಪಾದಯಾತ್ರೆ ಶುಕ್ರವಾರ ಸಂಜೆ ಮೈಸೂರು ತಲುಪಿದ್ದು, ಶನಿವಾರ ಬೃಹತ್ ಸಮಾವೇಶದೊಂದಿಗೆ ಪಾದಯಾತ್ರೆ ಪೂರ್ಣಗೊಳ್ಳಲಿದೆ. ಜನಾಂದೋಲನಾ ಯಾತ್ರೆಯ ಸಮಾರೋಪದಲ್ಲಿ ಕಾಂಗ್ರೆಸ್ ನಾಯಕರು ಟೀಕಿಸಿರುವುದಕ್ಕೆ ಶನಿವಾರ ಬಿಜೆಪಿ-ಜೆಡಿಎಸ್ ನಾಯಕರು ಠಕ್ಕರ್ ನೀಡಲಿದ್ದಾರೆ ಎಂದು ಹೇಳಲಾಗಿದೆ. ಆ.3ರಂದು ಮುಡಾ ಹಗರಣ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಕ್ರಮ ಹಣ ವರ್ಗಾವಣೆ ಸೇರಿ ರಾಜ್ಯ ಕಾಂಗ್ರೆಸ್ ಸರಕಾರದ ಭ್ರಷ್ಟಾಚಾರದ ವಿರುದ್ಧ ಬೆಂಗಳೂರಿನಿಂದ ಜಂಟಿ ಪಾದಯಾತ್ರೆಯನ್ನು ಬಿಜೆಪಿ-ಜೆಡಿಎಸ್ ಆರಂಭಿಸಿದ್ದವು. ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಪಾದಯಾತ್ರೆಯ ಅದ್ದೂರಿ ಸಮಾರೋಪ ಸಮಾರಂಭ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಪಾದಯಾತ್ರೆಯುದ್ದಕ್ಕೂ ಎರಡೂ ಪಕ್ಷಗಳ ನಾಯಕರು, ಕಾರ್ಯಕರ್ತರು ಸರಕಾರದ ವಿರುದ್ಧ ಘೋಷಣೆ ಕೂಗಿ ಹಗರಣಗಳ ಬಗ್ಗೆ ಮಾತನಾಡಿದ್ದರು. ಮುಖ್ಯಮಂತ್ರಿ ಹಾಗೂ ರಾಜ್ಯ ಸರಕಾರದ ವಿರುದ್ಧ ಉಭಯ ಪಕ್ಷಗಳ ನಾಯಕರು ಪ್ರತಿದಿನ ನಡೆದ ಬಹಿರಂಗ ಸಭೆಯಲ್ಲಿ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಈಗಾಗಲೇ ಕಾಂಗ್ರೆಸಿಗರು ಬಿಜೆಪಿ-ಜೆಡಿಎಸ್ ಅವಧಿಯಲ್ಲಿನ ಹಲವು ಹಗರಣಗಳನ್ನು ಪ್ರಸ್ತಾಪಿಸಿದೆ. ಇದೀಗ ಶನಿವಾರದ ಕಾರ್ಯಕ್ರಮದಲ್ಲಿ ಪ್ರತ್ಯುತ್ತರ ನೀಡುವುದರೊಂದಿಗೆ, ಕಾಂಗ್ರೆಸ್‌ನ ಅಕ್ರಮದ ಬಗ್ಗೆ ಇನ್ನಷ್ಟು ಗಟ್ಟಿ ಧ್ವನಿಯಲ್ಲಿ ಟೀಕಾಪ್ರಹಾರ ನಡೆಸುವ ಸಾಧ್ಯತೆಯಿದೆ. ಶನಿವಾರದ ಕಾರ್ಯಕ್ರಮದಲ್ಲಿ ಬಿಜೆಪಿ ಹಾಗೂ ಜೆಡಿಎಸ್‌ನ ಹಲವು ಪ್ರಮುಖ ನಾಯಕರು ಭಾಗವಹಿಸುವ ಸಾಧ್ಯತೆಯಿದೆ.

ಪುಟ ತೆರೆದಂತೆ...

ಅಂಬಾನಿಯನ್ನು ಮೀರಿಸಿದ ವಕ್ಫ್ ಮಂಡಳಿ!
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
ಸಂ.ಪುಟ | 6

ಇಷ್ಟು ವರ್ಷದಿಂದ ತಿನ್ನುತ್ತಿದ್ದ ತುಪ್ಪ ತಿನ್ನುವುದು ತಪ್ಪಾ?

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
ಸಂ.ಗಮ | 7

ಪಡಿತರ ಚೀಟಿ ತಿದ್ದುಪಡಿಗೆ ಇಂದೇ ಕೊನೆ ದಿನ

ಬೆಂಗಳೂರು: ಪಡಿತರ ಚೀಟಿ ತಿದ್ದುಪಡಿಗೆ ಕಳೆದ ಒಂದು ತಿಂಗಳಿಂದ ಆಹಾರ ಇಲಾಖೆ ಅವಕಾಶ ನೀಡಿದ್ದು, ಶನಿವಾರ ಕೊನೆಯ ದಿನವಾಗಿದೆ. ಮತ್ತೆ ತಿದ್ದುಪಡಿ ಅವಧಿಯನ್ನು ವಿಸ್ತರಣೆ ಮಾಡುವುದಿಲ್ಲ ಎಂದು ಆಹಾರ ಇಲಾಖೆ ತಿಳಿಸಿದೆ.

ಜುಲೈ 1 ರಿಂದ ಪಡಿತರ ಚೀಟಿಯ ತಿದ್ದುಪಡಿ ಆಹಾರ ಇಲಾಖೆಯು ಅವಕಾಶ ನೀಡಿತ್ತು. ಕಳೆದ 40 ದಿನಗಳಲ್ಲಿ ಸಾವಿರಾರು ಫಲಾನುಭವಿಗಳು ಅಗತ್ಯ ತಿದ್ದುಪಡಿ ಮಾಡಿಸಿದ್ದಾರೆ. ಆಗಸ್ಟ್ 10 ಕೊನೆಯ ದಿನವಾಗಿದ್ದು, ಬೆಳಗ್ಗೆ 10ರಿಂದ ಸಂಜೆ 5ರವರೆಗೆ ತಿದ್ದುಪಡಿಗೆ ಅವಕಾಶವಿದೆ. ಬಾಕಿ ಉಳಿಸಿಕೊಂಡವರು ಶೀಘ್ರವೇ ಅಗತ್ಯ ತಿದ್ದುಪಡಿಗೆ ಅರ್ಜಿ ಸಲ್ಲಿಸಬಹುದು ಎಂದು ಆಹಾರ ಇಲಾಖೆ ತಿಳಿಸಿದೆ.

ಕರ್ನಾಟಕ ಸರ್ಕಾರ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ
ಚಾಮರಾಜನಗರ ಇವರ ಸಂಯುಕ್ತಾಶ್ರಯದಲ್ಲಿ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

ಚೆಲುವ ಚಾಮರಾಜನಗರ

ಸನ್ಮಾನ್ಯ ಮುಖ್ಯಮಂತ್ರಿಗಳು, ಶ್ರೀ ಹೆಚ್.ಕೆ. ಪಾಟೀಲ, ಮಾನ್ಯ ಪ್ರವಾಸೋದ್ಯಮ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹಾಗೂ ಅನ್ಯ ಸಚಿವರುಗಳೊಂದಿಗೆ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಪ್ರವಾಸೋದ್ಯಮ ಇಲಾಖೆಯ ಮಳಿಗೆಯನ್ನು ವೀಕ್ಷಿಸುತ್ತಿರುವ ಸಂದರ್ಭ.

ದಿನಾಂಕ: 10ನೇ ಆಗಸ್ಟ್ 2024 | ಸಮಯ: ಸಂಜೆ 5.00 ಗಂಟೆಗೆ
ಸ್ಥಳ: ಭರಚುಕ್ಕಿ ಜಲಪಾತ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ಕರ್ನಾಟಕ
www.karnatakatourism.org

ಸರ್ವರಿಗೂ ಆದರದ ಸ್ವಾಗತ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
-ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಸಮಾಚಾರ ಸಣ್ಣದಲ್ಲ

ಆ.13 ರಂದು ವಾಕಥಾನ್ ಕಾರ್ಯಕ್ರಮ

ಬೀದರ: ನಗರದ ಕೋಟೆಯಿಂದ ಜಿಲ್ಲಾ ನೆಹರು ಕ್ರೀಡಾಂಗಣದ ವರೆಗೆ ಬೆಳಗ್ಗೆ 7 ಗಂಟೆಗೆ ರಾಷ್ಟ್ರೀಯ ಏಕತಾ (ವಾಕಥಾನ್) ಕಾರ್ಯಕ್ರಮ ಜರುಗಲಿದೆ. ನಗರದ ವಿವಿಧ ಶಾಲಾ- ಕಾಲೇಜ್ ವಿದ್ಯಾರ್ಥಿಗಳು ಸೇರಿದಂತೆ ಸಂಘ ಸಂಸ್ಥೆಗಳ ಪದಾಧಿಕಾರಿಗಳು. ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಅರ್ಜಿ ಆಹ್ವಾನ

ಬೀದರ: ಕರ್ನಾಟಕ ಸಾಹಿತ್ಯ ಅಕಾಡೆಮಿಯ ಕನ್ನಡ ಜಾಣ ಜಾಣೆಯರ ವೇದಿಕೆ ಬೆಂಗಳೂರು ಇವರ ಸಹಯೋಗದಲ್ಲಿ 2024ರ ಸೆಪ್ಟೆಂಬರ್ ಕೊನೆಯ ವಾರದಲ್ಲಿ ಹಾಸನ ಜಿಲ್ಲೆಯಲ್ಲಿ ರಾಜ್ಯಮಟ್ಟದ ಮೂರು ದಿನಗಳ ಪಿ.ಲಂಕೇಶ್ ಕೃತಿಗಳ ಅಧ್ಯಯನ ಶಿಬಿರ ನಡೆಸಲು ಉದ್ದೇಶಿಸಿದ್ದು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು 20 ರಿಂದ 40 ವರ್ಷ ವಯಸ್ಸುಳ್ಳ ರಾಜ್ಯದ ಎಲ್ಲಾ ಭಾಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಆ.17ರಂದು ಕೊನೆಯ ದಿನವಾಗಿದೆ. ಅಭ್ಯರ್ಥಿಗಳು ಕರ್ನಾಟಕ ಸಾಗಹಿತ್ಯ ಅಕಾಡೆಮಿಯ ವೆಬ್‌ಸೈಟ್ http://karnatakasahithyaacademy.org ದಿಂದ ಅರ್ಜಿ ನಮೂನೆ ಹಾಗೂ ವಿವರಗಳನ್ನು ಪಡೆದುಕೊಳ್ಳಬಹುದಾಗಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಗಮದ ಅಧ್ಯಕ್ಷ ಜಿಲ್ಲಾ ಪ್ರವಾಸ

ಬೀದರ: ಕರ್ನಾಟಕ ಕೌಶಲಾಭಿವೃದ್ಧಿ ನಿಗಮದ ಅಧ್ಯಕ್ಷ ಶಿವಕಾಂತಮ್ಮ (ಕಾಂತಾ) ನಾಯಕ ಅವರು ಆ.13 ರಂದು ಬೀದರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿರುತ್ತಾರೆ. ಬೆಳಿಗ್ಗೆ 10 ಗಂಟೆಗೆ ಕಲಬುರಗಿಯಿಂದ ರಸ್ತೆ ಮೂಲಕ ಬೀದರಗೆ ಆಗಮಿಸಿ ಜಿಲ್ಲಾಧಿಕಾರಿಗಳ ಕಚೇರಿಗೆ ಭೇಟಿ ನೀಡಲಿದ್ದಾರೆ. ನಂತರ ಮಧ್ಯಾಹ್ನ 12 ಗಂಟೆಗೆ ಜಿಲ್ಲಾ ಕೌಶಲ ಸಮಿತಿ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಕೆ.ಎಸ್ .ಡಿ.ಸಿ.ಯಿಂದ ಮಾನ್ಯತೆ ಪಡೆದಿರುವ ಕೌಶಲ ತರಬೇತಿ ಕೇಂದ್ರಗಳಿಗೆ ಭೇಟಿ ನೀಡಲಿದ್ದಾರೆ. ನಂತರ ಸಂಜೆ 4 ಗಂಟೆಗೆ ಬೀದರ ಜಿಲ್ಲೆಯ ವಿದ್ಯಾಪೀಠಕ್ಕೆ ಭೇಟಿ ನೀಡುವರು. ಸಂಜೆ 6 ಗಂಟೆಗೆ ಬೀದರ ರಸ್ತೆ ಮೂಲಕ ಕಲಬುರಗಿಗೆ ಪ್ರಯಾಣಿಸಲಿದ್ದಾರೆ ಎಂದು ಅಧ್ಯಕ್ಷರ ಆಪ್ತ ಸಹಾಯಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವ ಪತ್ರಕರ್ತರಿಗೆ ಪ್ರೋತ್ಸಾಹ

ಬೀದರ್: ಗ್ರಾಮೀಣ ಯುವ ಪತ್ರಕರ್ತರಿಗೆ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರೋತ್ಸಾಹಿಸಲಿದೆ ಎಂದು ಅಕಾಡೆಮಿಯ ಅಧ್ಯಕ್ಷೆ ಆಯೀಷಾ ಖಾನಂ ತಿಳಿಸಿದರು. ಬೆಂಗಳೂರಿನ ಮಾಧ್ಯಮ ಅಕಾಡೆಮಿ ಕಾರ್ಯಾಲಯದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ರಾಜ್ಯ ಘಟಕದಿಂದ ಸನ್ಮಾನಿತರಾಗಿ ಅವರು ಮಾತನಾಡಿದರು. ಕಲ್ಯಾಣ ಕರ್ನಾಟಕದ ಯುವಜನ ಪತ್ರಕರ್ತರಿಗೆ ಕರ್ನಾಟಕ ಮಾಧ್ಯಮ ಅಕಾಡೆಮಿಯಿಂದ ವಿವಿಧ ಕಾರ್ಯಾಗಾರಗಳನ್ನು ಆಯೋಜಿಸುವುದು. ಕಾರ್ಯಕ್ರಮ ಹಮ್ಮಿಕೊಳ್ಳುವುದು. ಪತ್ರಿಕೋದ್ಯಮವನ್ನು ಪ್ರೋತ್ಸಾಹಿಸುವುದು. ಹೀಗೆ ಹಲವು ರಚನಾತ್ಮಕ ಚಟುವಟಿಕೆಗಳನ್ನು ಆಯೋಜಿಸಲು ಅಕಾಡೆಮಿ ಸಿದ್ಧವಿರುವುದಾಗಿ ತಿಳಿಸಿದರು. ಇದೇ ವೇಳೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಘಟಕದಿಂದ ಸನ್ಮಾನಿಸಲಾಯಿತು. ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮಾತನಾಡಿದರು.ರಾಜ್ಯ ಉಪಾಧ್ಯಕ್ಷ ಭವಾನಿಸಿಂಗ ಠಾಕೂರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ ಸ್ವಾಮಿ, ಸದಸ್ಯರಾದ ಸುನಿಲ ಹೊನ್ನಾಳೆ ಜೊತೆಗಿದ್ದರು. ನಂತರ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯಿಷಾ ಖಾನಂ ಅವರು ಸಂಘದ ರಾಜ್ಯ ಉಪಾಧ್ಯಕ್ಷ ಭವಾನಿಸಿಂಗ ಠಾಕೂರ್ ಅವರನ್ನು ಸನ್ಮಾನಿಸಿದರು.

ವಿದ್ಯಾರ್ಥಿನಿಲಯ ಪ್ರವೇಶಕ್ಕೆ ಅರ್ಜಿ

ಯಾದಗಿರಿ: 2024-25 ನೇ ಸಾಲಿನ ಹಿಂದುಳಿದ ವರ್ಗಗಳ ಇಲಾಖೆಯ ಮೆಟ್ರಿಕ್ ನಂತರದ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ (ಸಾಮಾನ್ಯ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ) ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಗಂಗಾಧರ ಎಂ ದೊಡ್ಮನಿ ಅವರು ತಿಳಿಸಿದ್ದಾರೆ.ಅರ್ಜಿ ಸಲ್ಲಿಸುವ ಪ್ರಾರಂಭ ಆ.10, ಕೊನೆಯ ದಿನಾಂಕ ಸೆ.04, ಹೊಸ ಅರ್ಜಿಗಳನ್ನು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು ಪರಿಶೀಲನೆ ಮಾಡುವ ನಿಗದಿಪಡಿಸಿದ ಸೆ.06, ತಾಲೂಕು ಆಯ್ಕೆ ಸಮಿತಿ ಮೂಲಕ ಆಯ್ಕೆಯಾದ ಹೊಸ ವಿದ್ಯಾರ್ಥಿಗಳ ಆಯ್ಕೆ ಪಟ್ಟಿ ಪ್ರಕಟಣೆ ಸೆ.11, ಆಯ್ಕೆಯಾದ ವಿದ್ಯಾರ್ಥಿಗಳ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ಪಡೆಯಲು ನಿಗದಿಪಡಿಸಿದ ಅಂತಿಮ ದಿನಾಂಕ ಸೆ.17 ಎಂದು ಅವರು ತಿಳಿಸಿದ್ದಾರೆ.

{ಈಶ್ವರ ಖಂಡ್ರೆ } ಅರಣ್ಯ ಸಚಿವ

ಬಿಜೆಪಿ-ಜೆಡಿಎಸ್ ಅವರ ಕಾಲದಲ್ಲಿ ಅನೇಕ ಹಗರಣಗಳು ನಡೆದಿದ್ದು, ಅದಕ್ಕೆ ಉತ್ತರಿಸಲಿ. ರಾಜ್ಯದ ಜನತೆ ಪಾದಯಾತ್ರೆಗೆ ಮನ್ನಣೆ ಕೊಡಲಿಲ್ಲ ಎಂಬುದು ಅವರಿಗೆ ಅರಿವಾಗಿದೆ. ರಾಜ್ಯಪಾಲರು ಸಂವಿಧಾನ ವಿರೋಧಿ ನಡೆ ಅನುಸರಿಸಿದರು. ಸಿಎಂ ಅವರಿಗೆ ನೋಟೀಸ್ ನೀಡಿರುವುದು ಖಂಡನೀಯ.

ಜಿಲ್ಲೆಯಾದ್ಯಂತ ಸಂಭ್ರಮದಿಂದ ನಾಗರ ಪಂಚಮಿ ಆಚರಣೆ

ಕಂದಕೂರ ಗ್ರಾಮದಲ್ಲಿ ಜೀವಂತ ಚೇಳುಗಳಿಗೆ ಹಾಲು

ಯಾದಗಿರಿ: ಶ್ರಾವಣ ಮಾಸದ ಮೊದಲ ಹಾಗೂ ಮಹಿಳೆಯರ ಪ್ರಮುಖ ಹಬ್ಬವಾದ ನಾಗರ ಪಂಚಮಿ ಹಬ್ಬವನ್ನು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಶುಕ್ರವಾರ ಎಲ್ಲೆಡೆ ಸಂಭ್ರಮ, ಸಡಗರದಿಂದ ಆಚರಣೆ ಮಾಡಲಾಯಿತು.

ಯಾದಗಿರಿ ನಗರದೆಲ್ಲೆಡೆ ನಾಗಮೂರ್ತಿಗೆ ಹಾಲೆರೆದು ಪೂಜೆ ಸಲ್ಲಿಸಿ ನಮ್ಮ ನಾಡು ಸುಭಿಕ್ಷವಾಗಿರಲಿ ಮಳೆ ಬೆಳೆ ಉತ್ತಮವಾಗಲಿ ಎಂದು ಯಾದಗಿರಿ ನಗರದ ಲಕ್ಷ್ಮೀದೇವಿ ದೇವಸ್ಥಾನದ ಆವರಣದಲ್ಲಿರುವ ನಾಗಮೂರ್ತಿಗೆ ಮುತ್ತೈದೆ ಮಹಿಳೆಯರು ಮಕ್ಕಳು ನನ್ನ ಪಾಲು ನನ್ನ ಮನೆಯವರ ಪಾಲು ನನ್ನ ಅಪ್ಪನ ಪಾಲು ನನ್ನ ತಮ್ಮನ ಪಾಲು ನನ್ನ ಅಣ್ಣನ ಪಾಲು ಎಂದು ಹಾಲೇರದು ನಾಗದೇವರಲ್ಲಿ ಪ್ರಾರ್ಥಿಸಿದರು.

ನೂತನವಾಗಿ ಮದುವೆಯಾಗಿ ಗಂಡನ ಮನೆಗೆ ಹೋದ ಸಹೋದರಿಯರನ್ನು ಸಹೋದರರು ಹೋಗಿ ತವರಿಗೆ ಕರೆದುಕೊಂಡು ಬರುವ ಸಂಪ್ರದಾಯ ವಿಶೇಷವಾದದ್ದು, ಮನೆಯಲ್ಲಿ ವಿವಿಧ ಬಗೆಯ ಸಿಹಿ ತಿನಿಸುಗಳಾದ ತಂಬಿಟ್ಟು, ಶೇಂಗಾ ಹುಂಡಿ, ಹೆಸರು ಹುಂಡಿ, ಕರ್ಜಿಕಾಯಿಕೊಬ್ಬರಿ ಬೆಲ್ಲದ ಹುಂಡಿ ಸೇರಿ ಹಾಲನ್ನು ನಾಗದೇವತೆಗೆ ನೈವೇದ್ಯ ರೂಪದಲ್ಲಿ ಅರ್ಪಿಸಿ ತವರು ಮನೆ ಮತ್ತು ಗಂಡನ ಮನೆಯವರು ಬಂಧುಗಳು ಸುಖ ಶಾಂತಿ ಸಮೃದ್ಧಿಯಿಂದ ಇರಲಿ ಎಂದು ಮಹಿಳೆಯರು ಹಾರೈಸುವ ಪ್ರತೀತಿಯಿದೆ.

ಇನ್ನೂ ಗ್ರಾಮಿಣ ಭಾಗದಲ್ಲಿ ಯುವತಿಯರು ಕೂಡಾ ಮನೆಯ ಮುಂದೆ ಬಣ್ಣ ಬಣ್ಣದ ರಂಗೋಲಿ ಹಾಕಿ ಜೋಕಾಲಿ ಆಟ ಹಾಡಿದರೆ ಮಕ್ಕಳು ಕೊಬ್ಬರಿ ಆಟ ಆಡಿ ಸಂಭ್ರಮಿಸಿ ಶ್ರಾವಣ ಮೊದಲ ಹಬ್ಬಕ್ಕೆ ನಾಂದಿ ಹಾಡಿದರು.

ಸಂಪ್ರದಾಯ: ಈ ಹಳ್ಳಿಯ ಪ್ರತಿಯೊಬ್ಬರೂ ದೇವಸ್ಥಾನಕ್ಕೆ ಆಗಮಿಸಿ ಕೊಂಡೆಮ್ಮ ತಾಯಿಗೆ ದೀಪ ಹೊತ್ತಿಸಿದ ಮೇಲೆ ಹಾಲು ಎರೆಯಬೇಕು ಎಂಬ ಸಂಪ್ರದಾಯ ಮೊದಲಿನಿಂದಲೂ ಪಾಲಿಸಿಕೊಂಡು ಬಂದಿದ್ದಾರೆ. ಒಂದು ವೇಳೆ ತಪ್ಪಿದಲ್ಲಿ ಮನೆಯಲ್ಲಿ ಚೇಳುಗಳು ಬರುತ್ತವೆ ಎಂಬ ನಂಬಿಕೆ ಗ್ರಾಮಸ್ಥರಲ್ಲಿ ಬೇರೂರಿದೆ.

ನಗರದ ಲಕ್ಷ್ಮೀದೇವಿ ದೇವಸ್ಥಾನದ ಆವರಣದಲ್ಲಿರುವ ನಾಗಮೂರ್ತಿಗೆ ಮುತ್ತೈದೆ ಮಹಿಳೆಯರು ಮಕ್ಕಳು ನಾಗದೇವರಿಗೆ ಹಾಲೇರದು ಪ್ರಾರ್ಥಿಸಿದರು.

ಜೀವಂತ ಚೇಳಿನ ಜತೆ ಭಕ್ತರ ಆಟ

ಹುತ್ತ ಮತ್ತು ನಾಗ ಮೂರ್ತಿಗೆ ಹಾಲು ಎರೆಯುವುದು ಎಲ್ಲೆಡೆ ವಾಡಿಕೆ. ಆದರೆ, ಕಂದಕೂರಿನ ನಿವಾಸಿಗಳು ಸಮೀಪದ ಕೆಂಪು ಗುಡ್ಡದಲ್ಲಿರುವ ಚೇಳುಗಳಿಗೆ ಹಾಲು ಎರೆಯುತ್ತಾರೆ. ಪ್ರತಿ ವರ್ಷ ಸಹ ನಾಗರ ಪಂಚಮಿ ದಿನ ಹಳ್ಳಿಯ ಕೊಂಡೆಮ್ಮ ತಾಯಿ ಹೆಸರಿನಲ್ಲಿ ಚೇಳುಗಳಿಗೆ ಹಾಲಿನ ಅಭಿಷೇಕ ಮಾಡುವುದು ಇಲ್ಲಿ ಸರ್ವೇ ಸಾಮಾನ್ಯ. ಗ್ರಾಮಕ್ಕೆ ಹೊಂದಿಕೊಂಡಿರುವಂತೆ ಇರುವ ಕೆಂಪುಮಣ್ಣಿನ ದೊಡ್ಡ ಗುಡ್ಡದಲ್ಲಿ ಕೊಂಡೆಮ್ಮ ತಾಯಿ ದೇವಸ್ಥಾನ ಇದೆ. ಗುಡ್ಡದ ಒಂದು ಕಲ್ಲು ಕಿತ್ತಿದರೆ ಸಾಕು ಚೇಳುಗಳು ಸಾಲಾಗಿ ಆಗಮಿಸುತ್ತವೆ. ಮಹಿಳೆಯರು ಕೊಂಡೆಮ್ಮ ತಾಯಿಗೆ ದೀಪ ಬೆಳಗಿಸಿ, ಚೇಳುಗಳ ಮೇಲೆ ಹಾಲಿನ ಅಭಿಷೇಕ ಮಾಡಿ ಭಕ್ತಿ ಸಮರ್ಪಣೆ ಮಾಡುತ್ತಾರೆ.

ರಸ್ತೆ ಸುರಕ್ಷತಾ ಬೈಕ್ ಜಾಥಾಗೆ ಚಾಲನೆ

ರಸ್ತೆ ಸಾರಿಗೆ ನಿಯಮ ಪಾಲನೆಯಿಂದ ಅಪಘಾತ ದೂರ: ಅಪರ ಜಿಲ್ಲಾಧಿಕಾರಿ ಶರಣಬಸಪ್ಪ

ಯಾದಗಿರಿ: ವಾಹನ ಸವಾರರು ಕಡ್ಡಾಯವಾಗಿ ರಸ್ತೆ ನಿಯಮ ಪಾಲಿಸಿದರೆ ಅಪಘಾತ ನಡೆಯವುದನ್ನು ತಡೆಯಲು ಸಾಧ್ಯ ಎಂದು ಅಪರ ಜಿಲ್ಲಾಧಿಕಾರಿ ಶರಣಬಸಪ್ಪ ಕೋಟೆಪ್ಪಗೋಳ ಅವರು ಅಭಿಪ್ರಾಯಪಟ್ಟರು.

ಜಿಲ್ಲಾಡಳಿತ, ಜಿಲ್ಲಾಮಟ್ಟದ ರಸ್ತೆ ಸುರಕ್ಷತಾ ಸಮಿತಿ, ಪ್ರಾದೇಶಿಕ ಸಾರಿಗೆ ಇಲಾಖೆ, ಪೊಲೀಸ್ ಇಲಾಖೆ, ಕೆಎಸ್‌ಆರ್‌ಟಿಸಿ, ಲೋಕೋಪಯೋಗಿ ಇಲಾಖೆ, ಜೆಸ್ಕಾಂ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಹಾಗೂ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ನಗರದ ಪ್ರಾದೇಶಿಕ ಕಚೇರಿಯ ಆವರಣದಲ್ಲಿ ರಸ್ತೆ ಸುರಕ್ಷತೆ ಮತ್ತು ಹೆಲ್ಮೆಟ್ ಕಡ್ಡಾಯ ಕುರಿತು ವಾಹನ ಚಾಲಕರಿಗೆ, ಸಾರ್ವಜನಿಕರಿಗೆ ಅರಿವು ಮೂಡಿಸಿದರು. ನಿಟ್ಟಿನಲ್ಲಿ ಸೇಫ್ಟಿ ಡ್ರೈವ್- ಬೈಕ್ ಜಾಥಾ, ತ್ರೈಮಾಸಿಕ ತೆರಿಗೆ ಬಾಕಿದಾರರಿಗೆ ತೆರಿಗೆ ಕಟ್ಟುವ ಅರಿವು ಕಾರ್ಯಕ್ರಮಕ್ಕೆ ಪಾರಿವಾಳ ಹಾರಿ ಬಿಡುವ ಮೂಲಕ ಹಾಗೂ ಬೈಕ್ ಜಾಥಾಗೆ ಹಸಿರು ನಿಶಾನೆ ತೋರಿ ಮತ್ತು ಸೀಟ್ ಬೆಲ್ಟ್ ವಿತರಿಸಿ ಚಾಲನೆ ನೀಡಿ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ ಸಂಗೀತ, ಪ್ರಾದೇಶಿಕ ಸಾರಿಗೆ ಅಧಿಕಾರಿ ಮಿಲಿಂದಕುಮಾರ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರ ಅಭಿಮನ್ಯು ಕೆ.ಎಸ್.ಶ್ರೀಂಗೇರಿ, ಕೆಎಸ್‌ಆರ್‌ಟಿಸಿ ಜಿಲ್ಲಾ ಅಧಿಕಾರಿ ಸುನಿಲ್ ಕುಮಾರ ಚಂದರಗಿ, ಕೃಷಿ ಇಲಾಖೆ ಅಧಿಕ್ಷಕ ವೆಂಕಟೇಶ ಹಿರೇನೂರ, ಜೆಸ್ಕಾಂ ಇಲಾಖೆ ಕಾರ್ಯನಿರ್ವಾಹಕ ಎಂಜಿನಿಯರ್ ರಾಘವೇಂದ್ರ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ವೀರನಗೌಡ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ವರ್ಗದವರು, ಮೋಟಾರು ಡ್ರೈವಿಂಗ್ ಸ್ಕೂಲಿನ ಮುಖ್ಯಸ್ಥರು ಉಪಸ್ಥಿತರಿದ್ದರು.

ನಗರದ ಪ್ರಾದೇಶಿಕ ಕಚೇರಿಯ ಆವರಣದಲ್ಲಿ ರಸ್ತೆ ಸುರಕ್ಷತೆ ಮತ್ತು ಹೆಲ್ಮೆಟ್ ಕಡ್ಡಾಯ ಕುರಿತು ವಾಹನ ಚಾಲಕರಿಗೆ, ಸಾರ್ವಜನಿಕರಿಗೆ ಅಪರ ಜಿಲ್ಲಾಧಿಕಾರಿ ಶರಣಬಸಪ್ಪ ಕೋಟೆಪ್ಪಗೋಳ ಅರಿವು ಮೂಡಿಸಿದರು.

ಬೈಕ್ ಜಾಥಾದಲ್ಲಿ ಜಿಲ್ಲಾಧಿಕಾರಿ ಬೈಕ್ ಚಾಲನೆ

ಈ ಬೈಕ್ ಜಾಥಾದಲ್ಲಿ ಅಪರ ಜಿಲ್ಲಾಧಿಕಾರಿಯವರು ಬೈಕ್ ಓಡಿಸಿ ಗಮನ ಸೆಳೆದರು. ನಗರದ ಪದವಿ ಕಾಲೇಜು, ಸುಭಾಷ್ ಚೌಕ್, ಶಾಸ್ತ್ರಿಜೀ ವೃತ್ತ, ಹೊಸಳ್ಳಿ ಕ್ರಾಸ್, ಗಂಜ್ ವೃತ್ತ, ಮೈಲಾಪೂರ ಬೇಸ್, ಚಕ್ಕರ್ ಕಟ್ಟಾ, ಗಾಂಧಿ ವೃತ್ತ, ವೀರಶೈವ ಕಲ್ಯಾಣ ಮಂಟಪ, ಹಿರೇ ಅಗಸಿ, ಕನಕ ಸರ್ಕಲ್, ಕಾಡ್ಲೂರ್ ಪೆಟ್ರೋಲ್ ಬಂಕ್ ಸೇರಿದಂತೆ ನಗರದ ಮುಖ್ಯ ಬೀದಿಗಳಲ್ಲಿ ಜಾಥಾ ನಡೆಯಿತು.

ಪತ್ರಕರ್ತರ ಹೆಸರಿನಲ್ಲಿ ಬೆದರಿಕೆ ಆರೋಪ

ಹುಲಸೂರ: ಪತ್ರಕರ್ತರೆಂದು ಹೇಳಿ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆಗೆ ಭಂಗ ತರಲು ಯತ್ನಿಸಿದ ಆರೋಪದ ಹಿನ್ನೆಲೆಯಲ್ಲಿ ಇಬ್ಬರ ವಿರುದ್ಧ ಹುಲಸೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಲೂಕಿನ ಬೇಲೂರು ಗ್ರಾಮದ ನಿವಾಸಿ ಸುಧಾಕರ ಸೂರ್ಯವಂಶಿ ಹಾಗೂ ಬೇಟಬಾಲಕುಂದಾ ಗ್ರಾಮದ ನಿವಾಸಿ ವಿಶ್ವನಾಥ ಸಂಗಪ್ಪ ಕರಸಂಗ್ ವಿರುದ್ಧ ಪ್ರಕರಣ ದಾಖಲಾಗಿದೆ.

ಗೌರ್ ಸರಕಾರಿ ಪ್ರೌಢಶಾಲೆ ಆವರಣದಲ್ಲಿ ಪತ್ರಕರ್ತರ ಹೆಸರಿನಲ್ಲಿ ಈ ಇಬ್ಬರು ಆರೋಪಿಗಳು ಶಾಲೆಯ ದೃಶ್ಯವನ್ನು ಸೆರೆ ಹಿಡಿದು ಹಾಗೂ ಫೋಟೊ ತೆಗೆದು ಶಿಕ್ಷಕರಿಗೆ ಹೆದರಿಸುತ್ತಿದ್ದರು. ಶಾಲೆಯ ಸುರಕ್ಷತೆ ಮತ್ತು ಶಾಂತಿಗೆ ಭಂಗವನ್ನುಂಟು ಮಾಡುವ ಚಟುವಟಿಕೆಗಳಲ್ಲಿ ತೊಡಗಿದ್ದರು ಎಂದು ಶಿಕ್ಷಕ ಸುಧಾಕರ ಮಹೇಂದ್ರಕರ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ.

ಅಲ್ಲದೆ ಆರೋಪಿತರು ಬೇಲೂರು, ಗೌರ್ ಸೇರಿ ತಾಲೂಕಿನ ವಿವಿಧ ಗ್ರಾಮಗಳಲ್ಲಿ ತಾವು ಪತ್ರಕರ್ತರೆಂದು ಹೇಳಿ ಜನರಿಗೆ ಹೆದರಿಸಿ, ಸಮಾಜದಲ್ಲಿ ಶಾಂತಿಗೆ ಭಂಗ ತರುವಂತಹ ಪ್ರವೃತ್ತಿ ಬೆಳೆಸಿಕೊಂಡಿದ್ದಾರೆ. ಎಂದು ದೂರಿನಲ್ಲಿ ವಿವರಿಸಲಾಗಿದೆ. ಶಿಕ್ಷಕ ಶಾಲಾ ಪ್ರೊಜೆಕ್ಟರ್ ಕೇಬಲ್ ತುರುವುದರ ಜತೆಗೆ ನನ್ನ ರಜಾ ಅರ್ಜಿ ಕೊಡಲು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗೆ ತೆರಳಿದ್ದಾರೆ. ಅನಧಿಕ್ರತವಾಗಿ ಕಚೇರಿಗಳಿಗೆ ತೆರಳಿ ಈ ಇಬ್ಬರೂ ಸರಕಾರಿ ನೌಕರರನ್ನು ಬೆದರಿಸಿ. ಹಣ ದೋಚುವ ಉದ್ಯೋಗ ಮಾಡಿಕೊಂಡಿದ್ದಾರೆ. ಉದ್ದೇಶ ಪೂರ್ವಕವಾಗಿ ನಮ್ಮ ಶಾಲೆಗೆ ಬಂದು ಮಾನಸಿಕ ಹಿಂಸೆ ನೀಡುವುದರ ಜತೆಗೆ ಕೆಲಸಕ್ಕೆ ಅಡ್ಡಿಪಡಿಸಿರುತ್ತಾರೆ ಎಂದು ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ.

ಪತ್ರಕರ್ತರ ಹೆಸರಿನಲ್ಲಿ ನಮ್ಮ ಶಾಲೆಗೆ ಬಂದು ನನಗೆ ಮನಬಂದಂತೆ ಮಾತನಾಡಿ ಮಾನಸಿಕವಾಗಿ ಹಿಂಸೆ ನೀಡಿದ್ದಲ್ಲದೇ. ಏರು ಧ್ವನಿಯಲ್ಲಿ ನಾವು ಮೀಡಿಯಾದವರು ನೀವು ಎಲ್ಲಿದ್ದರಿ ನಿಮ್ಮ ಜತೆ ಮಾತನಾಡುವುದು ಇದೆ ಎಂದು ಅವಾಜ್ ಹಾಕಿದ್ದಾರೆ. ಈ ಇಬ್ಬರ ವಿರುದ್ಧ ಕ್ರಮಕ್ಕೈಗೊಳ್ಳಲು ಹುಲಸೂರ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ.

-ಸುಧಾಕರ ಮಹೇಂದ್ರಕರ್, ಮುಖ್ಯ ಶಿಕ್ಷಕ

ನಾಗೂಬ್ ಮಂದಿರಕ್ಕೆ ಹರಿದು ಬಂದ ಭಕ್ತ ಸಾಗರ

ಕಮಲನಗರ: ತಾಲೂಕಿನ ಕೋರೆಕಲ್ ಗ್ರಾಮದ ನಾಗೂಬ್ ಮಂದಿರಕ್ಕೆ ಶ್ರಾವಣ ಮಾಸದ ನಿಮಿತ್ಯ ಅಪಾರ ನಂಬಿಕೆಯಿಟ್ಟ ಭಕ್ತ ಸಾಗರವೇ ಹರಿದು ಬಂದಿತು. ದಿನವಿಡಿ ವಿಶೇಷ ಪೂಜೆಗಳು ಹಲವು ಧಾರ್ಮಿಕ ಕಾರ್ಯಕ್ರಮಗಳು ನಿರಂತರವಾಗಿ ಜರುಗಿದವು.

ಭಕ್ತರು ವಿಶೇಷ ಹರಕೆಯಂತೆ ಪೂಜೆಗಳು ಅಭಿಷೇಕ್ ಮಾಡಿಸಿರುವುದು ಸಾಮಾನ್ಯವಾಗಿತ್ತು. ಭಕ್ತರು ಬೆಳಗ್ಗೆಯಿಂದ ದೇವಸ್ಥಾನದ ಕಡೆ ಹೆಜ್ಜೆ ಹಾಕಿದರು. ದರ್ಶನಕ್ಕಾಗಿ ಭಕ್ತರು ಸರತಿ ಸಾಲಿನಲ್ಲಿ ನಿಂತಿರುವುದು ಕಂಡು ಬಂದಿತು. ನಾಗೂಬ್ ದರ್ಶನ ಪಡೆಯಲು ದೇವಾಲಯ ಅವರಣದಲ್ಲಿ ಜನರಿಂದ ಕಿಕ್ಕಿರಿದು ತುಂಬಿತ್ತು.

ಪ್ರತಿ ವರ್ಷದಂತೆ ಈ ವರ್ಷವು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಿದ್ದಾರೆ ಎಂದು ಗ್ರಾಮಸ್ಥರಾದ ನಾಮದೇವ ಸಾವಕಾರ, ಮೋತೀರಾಮ ಬಿರಾದಾರ, ರಘುನಾಥ್ ಸ್ವಾಮಿ, ನಾಗನಾಥ, ಮೋಹನ, ದಯಾನಂದ ಹೊಳಗೆ, ಶೇಷೇರಾವ ಮಹಾರಾಜ್, ನಾಮದೇವ ಕೋಳಿ ತಿಳಿಸಿದರು, ಸೋಪಾನ ಮಹಾರಾಜ ಗೋಪಾಲ ಬಿರಾದಾರ. ಬಾಲಾಜಿ ಬಿರಾದಾರ. ದತ್ತು ಪಾಟೀಲ.ಗ್ರಾ.ಪಂ.ಸದಸ್ಯ ಶಿವ ಪ್ರಸಾದ್ ಬಿರಾದಾರ, ಚಂದ್ರಕಾಂತ ಸ್ವಾಮಿ ಅನ್ನದಾಸೊಹ ವ್ಯವಸ್ಥೆ ಕೈಗೊಂಡಿದರು.

ನಾಗೂಬ್ ಮಂದಿರಕ್ಕೆ ಶ್ರಾವಣ ಮಾಸದ ನಿಮಿತ್ಯ ವಿಶೇಷ ಪೂಜೆ, ಅಭಿಷೇಕ್ ಮಾಡುತ್ತಿರುವ ಭಕ್ತರು.

ಪಂಚಮಿ ಹಬ್ಬ ಸಂಭ್ರಮ

ನಗರ ಸೇರಿದಂತೆ ವಿವಿಧ ಗ್ರಾಮೀಣ ಭಾಗದ ಹಳ್ಳಿಗಳಲ್ಲಿ ಶ್ರಾವಣ ಮಾಸದ ಮೊದಲ ಹಬ್ಬವಾದ ನಾಗರ ಪಂಚಮಿಯನ್ನು ಶುಕ್ರವಾರ ಸಂಭ್ರಮ. ಸಡಗರದಿಂದ ಆಚರಿಸಲಾಯಿತು. ನಾಗರ ಪಂಚಮಿ ಪ್ರಯುಕ್ತ ಮಹಿಳೆಯರು ಮತ್ತು ಮಕ್ಕಳು ನಾನಾ ಕಡೆ ನಾಗರ ಮೂರ್ತಿಗೆ ಪೂಜೆ ಸಲ್ಲಿಸಿ, ಕೊಬ್ಬರಿ ಬಟ್ಟಲಿನಲ್ಲಿ ಹಾಲು ಎರೆದು ಭಕ್ತಿಯನ್ನು ಸಮರ್ಪಿಸಿದರು. ಇನ್ನೂ ಕೆಲವೆಡೆ ಮರಗಳ ಬಳಿಯಿರುವ ಹುತ್ತಕ್ಕೆ ಹಾಲೆರೆದು ನೈವೇದ್ಯಗಳು ಸಮರ್ಪಿಸಿದರು.

ಕ್ವಿಟ್ ಇಂಡಿಯಾ ಚಳವಳಿ ಸವಿ ನೆನಪು

ಹುಣಸಗಿ: ಬ್ರಿಟಿಷರ ವಿರುದ್ಧ ಹೋರಾಟ ಮಾಡಿದಂತಹ ಇಂತಹ ಹೋರಾಟಗಾರರ ಆದರ್ಶಗಳನ್ನು ಇಂದಿನ ಯುವ ಪೀಳಿಗೆ ಮಾದರಿಯಾಗಿ ಎಂದು ಜಿಲ್ಲಾಧಿಕಾರಿ ಡಾ. ಸುಶೀಲಾ ಬಿ. ಹೇಳಿದರು.

ಕ್ವಿಟ್ ಇಂಡಿಯಾ ಚಳುವಳಿಯ ವರ್ಷಾಚರಣೆಯ ನೆನಪಿಗಾಗಿ ತಾಲೂಕಿನ ಕೊಡೇಕಲ್ ಗ್ರಾಮದ ಸ್ವಾತಂತ್ರ್ಯ ಹೋರಾಟಗಾರ ಸಂಗಪ್ಪ ಮಂಟೆಯವರನ್ನು ಶುಕ್ರವಾರದಂದು ಕೊಡೇಕಲ್ ನಿವಾಸದಲ್ಲಿ ಜಿಲ್ಲಾಡಳಿತದಿಂದ ಸನ್ಮಾನಿಸಿ ಗೌರವಿಸಿ ಮಾತನಾಡಿದ ಅವರು, ದೇಶದ ಸ್ವತಂತ್ರ್ಯಕ್ಕಾಗಿ ಜರುಗಿದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಹಲವರು ತಮ್ಮ ಪ್ರಾಣವನ್ನು ಕಳೆದುಕೊಂಡು ಹುತಾತ್ಮರಾಗಿದ್ದಾರೆ ಎಂದು ಹೇಳಿದರು. ಜಿಲ್ಲೆಯಲ್ಲಿ ಒಟ್ಟು ನಾಲ್ವರು ಸ್ವಾತಂತ್ರ್ಯ ಹೋರಾಟಗಾರರಲ್ಲಿ ಈಗ ಕೇವಲ ಸಂಗಪ್ಪ ಮಂಟೆ ಅವರು ಮಾತ್ರ ನಮ್ಮ ನಡುವೆ ಇದ್ದಾರೆ ಹೋರಾಟದ ನೆನಪಿಗಾಗಿ ನಮ್ಮ ತಾಲೂಕಿನ ಹಿರಿಯರು ಸ್ವಾತಂತ್ರ್ಯ ಹೋರಾಟಗಾರರಾದ ಸಂಗಪ್ಪ ಮಂಟೆಯರವರನ್ನು ಸನ್ಮಾನಿಸಲು ಸರಕಾರ ತಿರ್ಮಾನಿಸಿದ್ದು, ಈ ಹಿನ್ನೆಲೆಯಲ್ಲಿ ನಾವು ಹಿರಿಯರಿಗೆ ಸನ್ಮಾನಿಸುವ ಮೂಲಕ ತಲುಪಿಸಿದ್ದು ಜಿಲ್ಲಾಡಳಿತ ಯಾವತ್ತು ಹೋರಾಟಗಾರರ ಹಿತ ಕಾಯಲು ಬದ್ಧವಾಗಿರುತ್ತದೆ ಎಂದು ಹೇಳಿದ ಅವರು ಹಿರಿಯರನ್ನು ಗೌರವಿಸುವ ದೊರೆತಿರುವುದು ನಮ್ಮ ಭಾಗ್ಯವೆಂದು ಹೇಳಿದರು. ಇದೇ ಸಂದರ್ಭದಲ್ಲಿ ನಂತರ ಅವರು ಮಂಟೆ ಅವರ ಕೈಮಗ್ಗ ಮತ್ತು ನೇಕಾರಿಕೆ ಕುರಿತಂತೆ ಚರ್ಚೆ ನಡೆಸಿದರು. ಈ ಸಮಯದಲ್ಲಿ ಹುಣಸಗಿ ತಹಶೀಲ್ದಾರ ಬಸಲಿಂಗಪ್ಪ ನಾಯ್ಕೋಡಿ, ಉಪ ತಹಸೀಲ್ದಾರ ಕಲ್ಲಪ್ಪ ಜಂಜಿಗಡ್ಡಿ, ಕಂದಾಯ ನಿರೀಕ್ಷಕ ಶಾಂತಗೌಡ, ಕೊಡೇಕಲ್ ಪಿಡಿಒ ಸಂಗಣ್ಣ ನಾಗಬೇನಾಳ, ಗ್ರಾಮಾಡಳಿತಾಧಿಕಾರಿ ವಿಜಯಲಕ್ಷ್ಮೀ, ಶೇಖಪ್ಪ ಹಾವೇರಿ, ರಮೇಶ ಬಿರಾದಾರ, ನಿಂಗು ಬಿರಾದಾರ ಇದ್ದರು.

ಕ್ವಿಟ್ ಇಂಡಿಯಾ ಚಳುವಳಿಯ ನೆನಪಿಗಾಗಿ ಕೊಡೇಕಲ್ ಸ್ವಾತಂತ್ರ್ಯ ಹೋರಾಟಗಾರ ಸಂಗಪ್ಪ ಮಂಟೆ ಅವರ ನಿವಾಸಕ್ಕೆ ಶುಕ್ರವಾರ ಜಿಲ್ಲಾಧಿಕಾರಿ ಸುಶೀಲಾ ಬಿ.ಭೇಟಿ ನೀಡಿ ಸಂಗಪ್ಪ ಮಂಟೆ ಅವರನ್ನು ಸನ್ಮಾನಿಸಿ ಗೌರವಿಸಿದರು.

ಮಂಟೆ ಕುಟುಂಬಸ್ಥರಿಂದ ಡಿಸಿ ಅವರಿಗೆ ಸನ್ಮಾನ:

ಕ್ವಿಟ್ ಇಂಡಿಯಾ ಚಳುವಳಿಯ ವರ್ಷಾಚರಣೆಯ ನೆನಪಿಗಾಗಿ ಕೊಡೇಕಲ್ ಗ್ರಾಮದ ಸ್ವಾತಂತ್ರ್ಯ ಹೋರಾಟಗಾರ ಸಂಗಪ್ಪ ಮಂಟೆಯವರ ಮನೆಗೆ ಆಗಮಿಸಿದ್ದ ಜಿಲ್ಲಾಧಿಕಾರಿ ಸುಶೀಲಾ.ಬಿ ಅವರಿಗೆ ಮಂಟೆ ಕುಟುಂಬದ ಮಹಿಳೆಯರಿಂದ ಶ್ರಾವಣ ಮಾಸ ಶುಕ್ರವಾರದಂದು ಆಗಮಿಸಿದ್ದರಿಂದ ಅರಿಶಿಣ ಕುಂಕುಮ ನೀಡಿ ಕೈಮಗ್ಗದಿಂದ ನೇಯ್ದ ಇಲಕಲ್ ರೇಷ್ಮೆ ಸೀರೆಯನ್ನು ನೀಡಿದಾಗ ನಯವಾಗಿ ಸೀರೆ ಬೇಡ ಎಂದ ಡಿಸಿ ಅವರಿಗೆ ಸಂಗಪ್ಪ ಮಂಟೆ

ಅಧ್ಯಕ್ಷ ಸ್ಥಾನಕ್ಕೆ ಮೂವರು ಪ್ರಬಲ ಪೈಪೋಟಿ

ಭೀಮನಗೌಡ ಆರ್ ಬಿರಾದಾರ ಹುಣಸಗಿ

ಪಟ್ಟಣ ಪಂಚಾಯತ ಚುನಾವಣೆ ಮುಗಿದು 8 ತಿಂಗಳು ಬಳಿಕ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಮೀಸಲು ಪ್ರಕಟವಾಗಿದ್ದು, ಅಧ್ಯಕ್ಷ ಪರಿಶಿಷ್ಟ ಜಾತಿ ಮೀಸಲಾಗಿದ್ದು, ಸ್ಪಷ್ಟ ಬಹುಮತ ಹೊಂದಿರುವ ಕೈ ಪಡೆಯಲ್ಲಿ ಅಕ್ಷಾಂಕಿಗಳ ದಂಡು ಹೆಚ್ಚಾಗಿದೆ.

ಗ್ರಾಮ ಪಂಚಾಯತಿಯಿಂದ ಪಟ್ಟಣ ಪಂಚಾಯತಿಗೆ ಮೇಲ್ದರ್ಜೆಗೇರಿದ ಮೊದಲ ಚುನಾವಣೆಯಲ್ಲಿ 16 ಸ್ಥಾನಗಳ ಪೈಕಿ 14 ಕಾಂಗ್ರೆಸ್ ಪಕ್ಷ ಗೆಲುವ ಪಾರಮ್ಯ ಮರೆದಿದರೆ ಎಂದು ಬಿಜೆಪಿ ಕೇವಲ ಎರಡು ಸ್ಥಾನ ಗೆದ್ದು ಮುಖಭಂಗ ಅನುಭವಿತ್ತು. ಇದೀಗ ಮೀಸಲಾತಿ ಪ್ರಕಟಗೊಂಡಿದ್ದು, ಕೈ ಪಡೆಯಲ್ಲಿ ಮೂವರು ಅಕ್ಷಾಂಕಿಗಳ ವರಿಷ್ಠರ ಮೇಲೆ ಒತ್ತಡ ಹಾಕುತ್ತಿದ್ದಾರೆ.

ಸದ್ಯ ಅಧ್ಯಕ್ಷ ಖುರ್ಚಿಗಾಗಿ ಪ.ಜಾತಿಯ 1 ನೇ ವಾರ್ಡಿನ ಸದಸ್ಯೆ ಭೀಮವ್ವ ತಿಪ್ಪಣ್ಣ ಕಡಿಮನಿ (ಮಾದಿಗ) ಹಾಗೂ 12 ವಾರ್ಡಿನ ಮರಲಿಂಗಪ್ಪ ನಾಟೇಕಾರ (ಚಲುವಾದಿ) ಮತ್ತು 16ನೇ ವಾರ್ಡಿನ ತಿಪ್ಪಣ್ಣ ರಾಠೋಡ (ಲಂಬಾಣಿ) ಇವರು ಪಕ್ಷದಲ್ಲಿನ ನಿಷ್ಠೆ ಹಾಗೂ ಸಕ್ರಿಯರಾಗಿ ಮಾಡಿದ ಕೆಲಸದ ಆಧಾರದ ಮೇಲೆ ಪ್ರಬಲ ಆಕಾಂಕ್ಷಿಗಳಾಗಿ ಪ್ರಯತ್ನ ಪಕ್ಷದ ವರಿಷ್ಠರಲ್ಲಿ ಲಾಭಿ ನಡೆಸಿದ್ದಾರೆಂಬದು ಕೇಳಿಬರುತ್ತಿದೆ.

ನೂತನ ಪಟ್ಟಣ ಪಂಚಾಯತ್ ಆಗಿದ್ದರಿಂದ ಮೊದಲ ಬಾರಿಗೆ ಅಧ್ಯಕ್ಷ ಗಾದಿಗೆ ಅವಕಾಶ ಕಲ್ಪಿಸಲಾಗಿದೆಯಾದರೂ ಮೂವರಲ್ಲಿ ಯಾರಿಗೆ ಅದೃಷ್ಟ ಪಕ್ಷದ ವರಿಷ್ಠರು, ಸ್ಥಳೀಯ ಮುಖಂಡರು ಕೃಪಾಕಟಾಕ್ಷ ನೀಡಲಿದ್ದಾರೆ ಕಾದು ನೋಡುವ ತಂತ್ರ ಅನುಸರಿಸುತ್ತಿದ್ದಾರೆ. ಅಲ್ಲದೆ ತಂಡೋಪವಾಗಿಯೂ ಸ್ಥಾನಗಿಟ್ಟಿಸಿಕೊಳ್ಳಲು ಪ್ರಭಾವಿ ಮುಖಂಡರಲ್ಲಿ ಮನವಿ ಮಾಡುತ್ತಿದ್ದಾರೆ ಎಂದು ಹೇಳಲಾಗುತ್ತದೆ.

ಈ ಮೂರು ಸಮುದಾಯ ತಮ್ಮ ತಮ್ಮ ಸಮುದಾಯದ ಮುಖಂಡರೊಡನೆ ಶಾಸಕ ರಾಜಾ ವೇಣುಗೋಪಾಲ ನಾಯಕ ಹಾಗೂ ಸ್ಥಳೀಯ ಕಾಂಗ್ರೆಸ್ ಮುಖಂಡರಾದ ಕೆಪಿಸಿಸಿ ಸದಸ್ಯ ಸಿದ್ದಣ್ಣ ಮಲಗಲದಿನ್ನಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರ ದಿಂಡಿನ, ಪ್ರಚಾರ ಸಮಿತಿ ಅಧ್ಯಕ್ಷ ಆರ್.ಎಂ ರೇವಡಿ ಸೇರಿದಂತೆ ಇನ್ನಿತರ ಕಾಂಗ್ರೆಸ್ ಮುಖಂಡರಿಗೆ ತಮ್ಮ ತಮ್ಮ ಸಮುದಾಯದ ಪ.ಪಂ ಸದಸ್ಯರಿಗೆ ಅಧ್ಯಕ್ಷ ಸ್ಥಾನ ನೀಡಲು ಒತ್ತಾಯ ಮಾಡುತ್ತಿದ್ದಾರೆ ಎನ್ನಲಾಗಿದೆ.

ದೇಶಕ್ಕೆ ಸ್ವಾತಂತ್ರ್ಯ ಬರುವ ಮುನ್ನ ಮಹಿಳೆ ಮುಖದ ಮೇಲೆ ಪರದೆ ಹಾಕಿಕೊಂಡಿದ್ದಳು. ರಾಜಕೀಯದಲ್ಲಿ ಸ್ಥಾನಮಾನ ಇರಲಿಲ್ಲ. ಕುಟುಂಬ ವ್ಯವಸ್ಥೆ, ವಿವಾಹ ಪದ್ಧತಿ ಆಕೆಯನ್ನು ಮನೆಯಲ್ಲಿ ಬಂಧಿಸಿತ್ತು. ಈಗ ಚೌಕಟ್ಟು ಮೀರಿ ಹೊರಗೆ ಬಂದಿದ್ದಾಳೆ. ಆದರೆ, ರಾಜಕೀಯದಲ್ಲಿ ಮಾತ್ರ ಸೂಕ್ತ ಸ್ಥಾನ ಸಿಕ್ಕಿಲ್ಲ. ರಾಜಕೀಯವಾಗಿ ನಾವು ಹಿಂದೆ ಇದ್ದೇವೆ. ಸದ್ಯ ಹುಣಸಗಿ ಪಟ್ಟಣ ಪಂಚಾಯತಿಗೆ ಅಧ್ಯಕ್ಷ ಗಾದೆಗೆ ಪರಿಶಿಷ್ಟ ಜಾತಿಗೆ ಮೀಸಲು ಪ್ರಕಟವಾಗಿದ್ದು ಮಹಿಳೆ ಸದಸ್ಯಗೆ ಅಧ್ಯಕ್ಷ ಸ್ಥಾನ ನೀಡಬೇಕು ಅದಕ್ಕಾಗಿ ಕಾಂಗ್ರೆಸ್ ಪಕ್ಷ ನನಗೆ ಮನ್ನಣೆ ನೀಡಲಿದೆ ಎಂದು ಪ.ಪಂ ಭೀಮವ್ವ ಕಡಿಮನಿ ಭರವಸೆ ಹೊಂದಿದ್ದಾಳೆ.

ಹಲವಾರು ವರ್ಷಗಳಿಂದ ದಲಿತ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಹಲವು ಜನಪರ ಕೆಲಸಗಳು ಹಾಗೂ ಹೋರಾಟಗಳು ಮಾಡಿದ್ದೇನೆ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ಸಾಕಷ್ಟು ದುಡಿದಿದ್ದೇನೆ ನನಗೆ ಅಧ್ಯಕ್ಷ ಸ್ಥಾನ ಸಿಗುವ ಭರವಸೆ ಇದೆ ಎಂದು ಮರಲಿಂಗಪ್ಪ ನಾಟೇಕಾರ ಪ.ಪಂ ಸದಸ್ಯ, ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪಿಎಸ್‌ಐ ಪ್ರಕರಣ: ಇನ್ನೂ ಕ್ರಮ ಕೈಗೊಂಡಿಲ್ಲ

ಯಾದಗಿರಿ: ರಾಜ್ಯ ರಾಜಕಾರಣದಲ್ಲಿ ಸಂಚಲನ ಮೂಡಿಸಿರುವ ಪಿಎಸ್‌ಐ ಪರಶುರಾಮ್ ಸಾವಿನ ಪ್ರಕರಣದ ಕುರಿತು ಈಗಾಗಲೇ ಸಿಐಡಿ ತಂಡ ತನಿಖೆ ನಡೆಸುತ್ತಿದೆ. ಆದರೆ, ಇದೇ ವಿಚಾರದಲ್ಲಿ ಚನ್ನಾರಡ್ಡಿ ವಿರುದ್ಧ ಜಾತಿ ನಿಂದನೆ ಕೇಸ್ ದಾಖಲಾದರೂ ಪೊಲೀಸರು ಯಾಕೆ ಇನ್ನೂ ವಿರುದ್ಧ ಕ್ರಮ ಕೈಗೊಂಡಿಲ್ಲ ಎಂಬ ಮಾತುಗಳು ಕೇಳಿಬರುತ್ತಿವೆ.

ಪಿಎಸ್‌ಐ ಪರಶುರಾಮ ಅವರ ಸಾವಿಗೆ ಯಾದಗಿರಿ ಕಾಂಗ್ರೆಸ್ ಶಾಸಕ ಚನ್ನಾರಡ್ಡಿ ಮತ್ತು ಪುತ್ರ ಪಂಪನಗೌಡ ಕಾರಣ ಎಂದು ಕುಟುಂಬಸ್ಥರು ಆರೋಪ ಮಾಡಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಶಾಸಕ ಚನ್ನಾರಡ್ಡಿ ಮತ್ತು ಅವರ ಪುತ್ರನ ವಿರುದ್ಧ ಜಾತಿ ನಿಂದನೆ ದೂರು ದಾಖಲಾಗಿದೆ. ಪ್ರಕರಣದಲ್ಲಿ ಶಾಸಕ ಚನ್ನಾರೆಡ್ಡಿ ಎ1 ಆರೋಪಿ ಆಗಿದ್ದಾರೆ.

ಅದಾಗ್ಯೂ ಕೂಡಾ ಅವರನ್ನು ಬಂಧಿಸಲು ವಿಳಂಬ ಧೋರಣೆ ತೋರುತ್ತಿದ್ದಾರೆ ಎಂದು ದಲಿತ ಮುಖಂಡರು ಆರೋಪಿಸುತ್ತಿದ್ದಾರೆ. ಜಾತಿನಿಂದನೆ ದೂರು ದಾಖಲಾಗಿದ್ದರೂ ಇನ್ನೂವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲವೇಕೆ ಎಂದು ಪೊಲೀಸರ ನಡೆ ಕುರಿತು ಅನುಮಾನ ವ್ಯಕ್ತಪಡಿಸುತ್ತಿದ್ದಾರೆ.

ಅಲ್ಲದೇ ಗುರುವಾರ ಮನೆ ಪರಿಶೀಲನೆ ನಡೆಸಿರುವ ಸಿಐಡಿ ಅಧಿಕಾರಿಗಳಿಗೆ ಸುಮಾರು 7.33 ಲಕ್ಷ ರು.ನಗದು ಹಣ ಹಾಗೂ ಶಾಸಕರ ಹೆಸರಿನ ಖಾಲಿ ಲೆಟರ್ ಹೆಡ್ ಪತ್ತೆಯಾಗಿದ್ದು, ಸಿಐಡಿ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಬಜರಂಗದಳದಿಂದ ನಾಗರ ಪಂಚಮಿ

ಬಸವಕಲ್ಯಾಣ: ತಾಲೂಕಿನಾದ್ಯಂತ ಶುಕ್ರವಾರ ನಾಗರಪಂಚಮಿ ಹಬ್ಬವನ್ನು ಅತ್ಯಂತ ಸಡಗರ ಸಂಭ್ರಮದಿಂದ ಆಚರಿಸಲಾಯಿತು. ನಗರದ ಕಾಳಿಗಲ್ಲಿಯ ಸಮೀಪ ನಾಗದೇವತೆಯ ಮೂರ್ತಿಗೆ ವಿಶ್ವ ಹಿಂದೂ ಪರಿಷತ್ ಬಜರಂಗದಳದ ಮುಖಂಡರು ನಾಗದೇವರಿಗೆ ವಿಷೇಶ ಪೂಜೆ ಸಲ್ಲಿಸಿದರು. ತ್ರಿಪೂರಾಂತನ ನಾಗಣ್ಣಕಟ್ಟೆ, ನಗರದ ಬನಶಂಕರಿಗಲ್ಲಿ ಹಾಗೂ ನಾರಾಯಣಪುರ, ಪ್ರತಾಪುರ, ಮಂಠಾಳ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಬೆಳಗ್ಗೆಯಿಂದಲೇ ಜನರು ಮನೆಯಲ್ಲಿ ಹಾಗೂ ವಿವಿಧ ದೇವಸ್ಥಾನಗಳಲ್ಲಿ ಪ್ರತಿಷ್ಠಾಪಿಸಿರುವ ನಾಗದೇವತೆಗಳ ಮೂರ್ತಿರ್ಗಳು, ಹಾವಿನ ಹುತ್ತಗಳು ಹಾಗೂ ಹಬ್ಬದ ನಿಮಿತ್ತ ಮನೆಯಲ್ಲಿಟ್ಟಿದ್ದ ಮಣ್ಣಿನ ನಾಗದೇವರಿಗೆ ಮನೆ ಮಂದಿ ಹಾಲೆರೆದು. ಶ್ರದ್ಧಾ ಭಕ್ತಿಯಿಂದ ಪೂಜೆ ಸಲ್ಲಿಸಿದರು. ಹಬ್ಬದ ಅಂಗವಾಗಿ, ಹೆಣ್ಣು ಮಕ್ಕಳು ಭುಲಾಯಿ ಪದಗಳು ಹಾಡಿ ಸಂಭ್ರಮ ಪಟ್ಟರು. ಮನೆಯಲ್ಲಿ ತಯಾರಿಸಿದ್ದ ಶೇಂಗಾ, ಪುತಾಣಿ,ರವೆ, ದಾನಿ, ಅಳ್ಳಿಟ್ಟು, ಎಳ್ಳು ಸೇರಿ ಇನ್ನಿತರ ಉಂಡಿಗಳನ್ನು ನೈವೇದ್ಯವಾಗಿ ಅರ್ಪಿಸಿದ ಬಳಿಕ ಮನೆಯ ಮಂದಿಯೆಲ್ಲ ಒಟ್ಟಿಗೆ ಕುಳಿತು ಭೋಜನ ಸವಿದರು. ವಿಶ್ವ ಹಿಂದೂ ಪರಿಷತ್ ಬಜರಂಗದಳ ಆಯೋಜಿಸಿರುವ ವಿಶೇಷ ಪೂಜೆಯಲ್ಲಿ ರೇಖಾ ಮೇತ್ರಸಕರ್, ಭಾಜಪಾದ ಮಹಿಳಾ ಮೋರ್ಚಾದ ನೂತನ ನಗರದ ಮಂಡಲದ ಅಧ್ಯಕ್ಷೆ ಸುರೇಖಾ ಅನ್ವಲೆ, ಗಂಗೋತ್ರಿ ವಾತಡೆ, ಸಂಗೀತಾ ವಾತಡೆ, ಲಕ್ಷ್ಮೀ ಗಣಚಾರಿ, ವಿಶ್ವ ಹಿಂದೂ ಪರಿಷತ್ ತಾಲೂಕು ಅಧ್ಯಕ್ಷ ಶ್ರೀಶೈಲ್ ವಾತಡೆ ಉಪಸ್ಥಿತರಿದ್ದರು.

ಬದುಕಿನ ಮೌಲಗಳ ಕಲಿಸುವ ಎನ್‌ಎಸ್‌ಎಸ್

ಶಹಾಪುರ: ಎನ್.ಎಸ್.ಎಸ್. ವಿಶೇಷ ಶಿಬಿರವು ವಿದ್ಯಾರ್ಥಿಗಳಿಗೆ ಪಠ್ಯದ ಜ್ಞಾನದ ಜತೆಗೆ ಮನುಷ್ಯನ ಸಾಮಾಜಿಕ ಬದುಕಿನ ಮೌಲ್ಯಗಳನ್ನು ಕಲಿಸುತ್ತದೆ. ಮತ್ತು ಸೇವಾ ಮನೋಭಾವನೆ, ಪರಸ್ಪರರನ್ನು ಅರ್ಥೈಸುವ, ಗೌರವಿಸುವ, ಸಮಸ್ಯೆಗಳಿಗೆ ಸ್ಪಂದಿಸುವ ಮನೋಭಾವನೆ ಬೆಳೆಸುತ್ತದೆ ಎಂದು ಜೇವರ್ಗಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಡಾ. ನಾಗರಡ್ಡಿ ಎಮ್. ಬೈರಡ್ಡಿ ಅಭಿಪ್ರಾಯ ವ್ಯಕ್ತಪಡಿಸಿದರು. ತಾಲೂಕಿನ ಶಖಾಪೂರ ಗ್ರಾಮದಲ್ಲಿ ಶಹಾಪುರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್.ಎಸ್.ಎಸ್. ಎ ಮತ್ತು ಬಿ ಘಟಕಗಳ ವತಿಯಿಂದ ಹಮ್ಮಿಕೊಂಡ ವಿಶೇಷ ಶಿಬಿರದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಮಹತ್ವ ಕುರಿತು ಉಪನ್ಯಾಸ ನೀಡಿದ ಅವರು ವಿದ್ಯಾರ್ಥಿಗಳಿಗೆ ಕಾಲೇಜಿನ ಕಲಿಕೆಯ ವಾತಾವರಣದಿಂದ ದೂರವಿರುವ ಗ್ರಾಮೀಣ ಪರಿಸರದಲ್ಲಿ 7 ದಿನ ಶಿಬಿರದ ಮೂಲಕ ಗ್ರಾಮೀಣ ಜನರ ಸಂಸ್ಕೃತಿ, ಸಮಸ್ಯೆಗಳು, ಗ್ರಾಮೀಣ ನೈರ್ಮಲ್ಯ ಮುಂತಾದ ವಿಷಯಗಳ ಬಗ್ಗೆ ತಿಳುವಳಿಕೆ ನೀಡಿದರು. ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ಡಾ. ಶಂಕ್ರಮ್ಮ ಎಮ್. ಪಾಟೀಲ ಅವರು ಎನ್.ಎಸ್.ಎಸ್. ಧ್ಯೇಯೋದ್ದೇಶಗಳು ಹಾಗೂ ಕಾರ್ಯಚಟುವಟಿಕೆಗಳ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ಅಧ್ಯಾಪಕರಾದ ಪ್ರೊ. ಸಿದ್ಧಪ್ಪ ದಿಗ್ಗಿ, ಪ್ರೊ. ಕಾಳಮ್ಮ ಎಚ್.ಎಸ್. ಪ್ರೊ. ಶೋಭಾ ಮಹಾದೇವಪ್ಪ, ಸುಧಾ ಬಂಗಾರಿ, ಪ್ರಭಾಕರ ಅಂಗಡಿ, ಬಸವರಾಜ ಕಡಗಂಚಿ, ಉದಯಕುಮಾರ ಟೋಣಪೆ ಮುಂತಾದವರು ಉಪಸ್ಥಿತರಿದ್ದರು.

ಶ್ರೀನುಲಿಯ ಚಂದಯ್ಯ ಜಯಂತಿ

ಯಾದಗಿರಿ: ಜಿಲ್ಲಾಡಳಿತ ವತಿಯಿಂದ ಶರಣ ಶ್ರೀನುಲಿಯ ಚಂದಯ್ಯ ಜಯಂತ್ಯೋತ್ಸವವನ್ನು ಜಿಲ್ಲೆಯಾದ್ಯಂತ ಇದೇ ಆಗಸ್ಟ್ 19 ರಂದು ವಿಜೃಂಭಣೆ ಹಾಗೂ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿ ಶರಣಬಸಪ್ಪ ಕೋಟೆಪ್ಪಗೊಳ ಅವರ ಅಧ್ಯಕ್ಷತೆಯಲ್ಲಿ ನಡೆದ ಶರಣ ನುಲಿಯ ಚಂದಯ್ಯನವರ ಜಯಂತಿ ಆಚರಣೆ ಕುರಿತ ಪೂರ್ವಭಾವಿ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ. ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ನಡೆಯುವ ಜಿಲ್ಲಾಮಟ್ಟದ ಶರಣ ಶ್ರೀ ನುಲಿಯಾ ಚಂದಯ್ಯ ಜಯಂತಿ ಆಚರಣೆಗೆ ಸಂಬಂಧಿಸಿದಂತೆ ಅಧಿಕಾರಿಗಳಿಗೆ ವಹಿಸಲಾದ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ, ಯಾವುದೇ ಲೋಪ ಆಗದಂತೆ ಜವಾಬ್ದಾರಿಯಿಂದ ನಿರ್ವಹಿಸಲು ಅವರು ಅಧಿಕಾರಿಗಳಿಗೆ ಸೂಚಿಸಿದರು. ಜಯಂತಿ ಆಚರಣೆ ಸಂದರ್ಭದಲ್ಲಿ ಶಿಷ್ಟಾಚಾರ ಪಾಲನೆ, ಶಿಷ್ಟಾಚಾರದಂತೆ ಅತಿಥಿ ಗಣ್ಯರನ್ನು, ನುರಿತ ಉಪನ್ಯಾಸಕರನ್ನು ಆಹ್ವಾನಿಸುವುದು ಸೇರಿದಂತೆ ಎಲ್ಲಾ ರೀತಿಯ ಸೌಕರ್ಯವನ್ನು ಯಾವುದೇ ತೊಂದರೆ ಬಾರದಂತೆ ನೋಡಿಕೊಳ್ಳಬೇಕು. ಅದೇ ರೀತಿ ವೇದಿಕೆ, ಕುಡಿಯುವ ನೀರು, ವಿದ್ಯುತ್, ಅಲಂಕಾರ, ಧ್ವನಿವರ್ಧಕ, ಸ್ವಚ್ಛತೆ ಮತ್ತು ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಅವರು ಸೂಚಿಸಿದರು.

ಸಮಾಚಾರ ಸಣ್ಣದಲ್ಲ

ದಿವ್ಯಾಂತರಂಗ ಬಿಡುಗಡೆ ಇಂದು

ಕಲಬುರಗಿ: ನಗರದ ಆರ್. ರಾಮಶಾಸ್ತ್ರಿ ರಚಿಸಿರುವ ದಿವ್ಯಾಂತರಂಗ ಕೃತಿಯ ಲೋಕಾರ್ಪಣೆ ಕಾರ್ಯಕ್ರಮ ಆ.10ರಂದು (ಶನಿವಾರ) ಬೆಳಗ್ಗೆ 11 ಗಂಟೆಗೆ ಸಂಗಮೇಶ್ವರ ನಗರದ ಯಾಜ್ಞವಲ್ಕ್ಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.



ಹಿರಿಯ ಸಾಹಿತಿ ಡಾ. ಸ್ವಾಮಿ ರಾವ ಕುಲಕರ್ಣಿ ಹಾಗೂ ಹಿರಿಯ ಸಂಸ್ಕೃತ ವಿದ್ವಾಂಸರಾದ ಡಾ. ಸುರೇಶ ಹೇರೂರ ಅವರು ಪುಸ್ತಕ ಬಿಡುಗಡೆಗೊಳಿಸುವರು. ಆರ್. ರಾಮಶಾಸ್ತ್ರಿ ಅವರ ಆಧ್ಯಾತ್ಮ ಚಿಂತನೆಯ ಲೇಖನಗಳ ಸಂಗ್ರಹವೇ ದಿವ್ಯಾಂತರಂಗ ಕೃತಿ. ಇದು ಆಧ್ಯಾತ್ಮಿಕ ಜಿಜ್ಞಾಸುಗಳಿಗೊಂದು ಮಾರ್ಗದರ್ಶಿ ಕೃತಿಯಾಗಿದೆ. ಇದೇ ಸಂದರ್ಭದಲ್ಲಿ ಲೇಖಕ ಆರ್. ರಾಮಶಾಸ್ತ್ರಿ ಅವರು 82 ವರ್ಷ ಪೂರೈಸಿದ ಪ್ರಯುಕ್ತ ಅವರ ಕುಟುಂಬ- ಪರಿವಾರದವರು 'ಸಹಸ್ರಚಂದ್ರ ದರ್ಶನ' ಹವನ ಹಮ್ಮಿಕೊಂಡಿದ್ದಾರೆ. ಸಾರ್ವಜನಿಕರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಸತೀಶ ಶಾಸ್ತ್ರಿ ಶೈಲೇಶ ಶಾಸ್ತ್ರಿ ಹಾಗೂ ಪುರುಷೋತ್ತಮ ಮೊಹರೆ ಕೋರಿದ್ದಾರೆ.

ವಿಪ್ರ ಪತ್ತಿನ ಸಹಕಾರ ಸಂಘದ ಸಭೆ ನಾಳೆ

ಕಲಬುರಗಿ: ನಗರದ ಬಿದ್ದಾಪುರ ಕಾಲೋನಿಯ ವಿಪ್ರ ಸಮುದಾಯ ಪತ್ತಿನ ಸಹಕಾರ ಸಂಘ'ದ ಸರ್ವ ಸದಸ್ಯರ 10ನೇ ವಾರ್ಷಿಕ ಮಹಾಸಭೆಯನ್ನು ಇದೇ ದಿ. 11ರಂದು (ಭಾನುವಾರ) ಕರೆಯಲಾಗಿದೆ. ಅಂದು ಸಂಜೆ 6 ಗಂಟೆಗೆ ಬಿದ್ದಾಪುರ ಕಾಲೋನಿಯ ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿ ಮಠದಲ್ಲಿ ಸಭೆ ನಡೆಯಲಿದೆ. ಸಂಘದ ಅಧ್ಯಕ್ಷ ರಾಘವೇಂದ್ರರಾವ ಕುಲಕರ್ಣಿ ನೀಲೂರ ಅಧ್ಯಕ್ಷತೆ ವಹಿಸುವರು. ಸಂಘದ ಪದಾಧಿಕಾರಿಗಳು, ಸರ್ವ ಸದಸ್ಯರು ಸಭೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಉಪಾಧ್ಯಕ್ಷ ಮುರಳೀಧರರಾವ್ ಎನ್. ಕುಲಕರ್ಣಿ ಹಾಗೂ ಕಾರ್ಯದರ್ಶಿ ಕಲ್ಯಾಣರಾವ ಕುಲಕರ್ಣಿ ಕೋರಿದ್ದಾರೆ.

ಶಿಕ್ಷಣ ಸಚಿವರ ಪ್ರವಾಸ ನಾಳೆ

ಕಲಬುರಗಿ: ರಾಜ್ಯದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲ ಅವರು ಬೆಂಗಳೂರಿನಿಂದ ವಿಮಾನದ ಮೂಲಕ ಆಗಸ್ಟ್ 11 ರಂದು ಭಾನುವಾರ ಬೆಳಗ್ಗೆ 9.20 ಗಂಟೆಗೆ ಕಲಬುರಗಿ ವಿಮಾನ ನಿಲ್ದಾಣಕ್ಕೆ ಆಗಮಿಸುವರು. ನಂತರ ಅಂದು ಬೆಳಗ್ಗೆ 9.30 ಗಂಟೆಗೆ ಕಲಬುರಗಿ ವಿಮಾನದ ನಿಲ್ದಾಣದಿಂದ ರಸ್ತೆ ಮೂಲಕ ಬೀದರ ಜಿಲ್ಲೆಯ ಭಾಲ್ಕಿಗೆ ಪ್ರಯಾಣ ಸಿ, ನಿಗದಿತ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ಮಧ್ಯಾಹ್ನ 3 ಗಂಟೆಗೆ ಬಾಲ್ಕಿಯಿಂದ ಮರಳಿ ಕಲಬುರಗಿಗೆ ಆಗಮಿಸಿ ವಾಸ್ತವ್ಯ ಮಾಡುವರು. ಆಗಸ್ಟ್ 12 ರಂದು ಸೋಮವಾರ ಬೆಳಗ್ಗೆ 10 ಗಂಟೆಗೆ ಕಲಬುರಗಿ ಜಯದೇವ ನೂತನ ಕಟ್ಟಡ ಕಾಮಗಾರಿ ವೀಕ್ಷಿಸಿ, ನಂತರ ಕಲಬುರಗಿಯಲ್ಲಿ ವಾಸ್ತವ್ಯ ಮಾಡುವರು. ಆಗಸ್ಟ್ 13 ರಂದು ಮಂಗಳವಾರ ಕಲಬುರಗಿ ಜಿಲ್ಲೆಯ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸಿ, ನಂತರ ಕಲಬುರಗಿಯಲ್ಲಿ ವಾಸ್ತವ್ಯ ಮಾಡುವರು.

ಪೂರ್ವಭಾವಿ ಸಭೆ ಆ 12 ರಂದು

ಕಲಬುರಗಿ: ಕಲಬುರಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2024-25ನೇ ಸಾಲಿಗೆ ಆಗಸ್ಟ್ 20 ರಂದು ಡಿ.ದೇವರಾಜ ಅರಸುರವರ 109ನೇ ಜನ್ಮದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿರುವ ಹಿನ್ನೆಲೆಯಲ್ಲಿ ಕಲಬುರಗಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇದೇ ಆಗಸ್ಟ್ 12 ರಂದು ಸಂಜೆ 4 ಗಂಟೆಗೆ ಪೂರ್ವಭಾವಿ ಸಭೆಯನ್ನು ನಡೆಯಲಿದೆ ಎಂದು ಕಲಬುರಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ. ಕಲಬುರಗಿ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳು, ವಿವಿಧ ಸಂಘ-ಸಂಸ್ಥೆಗಳ ಅಧ್ಯಕ್ಷರು ಮೇಲ್ಕಂಡ ನಿಗದಿಪಡಿಸಿದ ಸಮಯಕ್ಕೆ ಈ ಸಭೆಗೆ ಹಾಜರಾಗಿ ತಮ್ಮ ಸೂಕ್ತ ಸಲಹೆ-ಸೂಚನೆಗಳನ್ನು ನೀಡಬೇಕೆಂದು ಅವರು ತಿಳಿಸಿದ್ದಾರೆ.

ವಿ+ ಸೋಮವಾರ

{ಡಾ. ಪ್ರಭಾ ಮಲ್ಲಿಕಾರ್ಜುನ್ } ಸಂಸದೆ

ಕೇಂದ್ರ ಸರಕಾರವು ಅಪ್ಪರ್ ಭದ್ರಾಗೆ 5300 ಕೋಟಿ ಕೇಂದ್ರ ಸಹಾಯವನ್ನು ಮಂಜೂರು ಮಾಡಿರುವುದು ಸತ್ಯವೇ? ಯೋಜನೆಗಾಗಿ ಇದುವರೆಗೆ ಕರ್ನಾಟಕ ಸರಕಾರಕ್ಕೆ ಯಾವುದೇ ಹಣವನ್ನು ಬಿಡುಗಡೆ ಮಾಡಿದ್ದಾರೆಯೇ? ಅಪ್ಪರ್ ಭದ್ರಾ ಯೋಜನೆಯು ಪೂರ್ಣಗೊಳ್ಳುವ ನಿರೀಕ್ಷೆಯಿದೆ ಎಂದು ಕೇಂದ್ರ ಸರಕಾರಕ್ಕೆ ತಿಳಿದಿದೆಯೇ? ಯೋಜನೆಯನ್ನು ಯಾವ ಸಮಯದೊಳಗೆ ಪೂರ್ಣಗೊಳಿಸಲಾಗುವುದು?.

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಷತ್ತಿನ 47ನೇ ವಾರ್ಷಿಕ ಭಿತ್ತಿಪತ್ರ ಮಂಡನೆ, ಯೋಜನಾ ಪ್ರದರ್ಶನದ ಉದ್ಘಾಟನಾ ಸಮಾರಂಭ

ಸ್ಥಳೀಯ ಸಮಸ್ಯೆ ಪರಿಹರಿಸುವ ಸಂಶೋಧನೆ ಅಗತ್ಯ

ವಿಶ್ವವಾಣಿ ಸುದ್ದಿಮನೆ, ಕಲಬುರಗಿ

ಸ್ಥಳೀಯ ಸಮಸ್ಯೆಗಳ ಜತೆಗೆ ರಾಜ್ಯ ಹಾಗೂ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಕ್ರಿಯಾತ್ಮಕ ಯೋಜನೆಗಳನ್ನು ರೂಪಿಸಬೇಕು ಎಂದು ಕೆಎಸ್‌ಸಿಎಸ್‌ಟಿನ ಕಾರ್ಯದರ್ಶಿ ಪ್ರೊ. ಎಂ. ಅಶೋಕ್ ರಾಯಚೂರು ಅಭಿಮತಪಟ್ಟರು.

ಶುಕ್ರವಾರ ನಗರದ ಶರಣಬಸವ ವಿವಿಯ ಪೂಜ್ಯ ದೊಡ್ಡಪ್ಪ ಅಪ್ಪ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಷತ್ತ, ಭಾರತೀಯ ವಿಜ್ಞಾನ ಸಂಸ್ಥೆ ಹಾಗೂ ಶರಣಬಸವೇಶ್ವರ ವಿವಿ ಸಹಯೋಗದಲ್ಲಿ ನಡೆದ ಎರಡು ದಿನಗಳ ಕೆಎಸ್‌ಸಿಎಸ್‌ಟಿ 47ನೇ ವಾರ್ಷಿಕ ಭಿತ್ತಿಪತ್ರ ಮಂಡನೆ ಮತ್ತು ಯೋಜನಾ ಪ್ರದರ್ಶನ ಸಮ್ಮೇಳನಕ್ಕೆ ಚಾಲನೆ ನೀಡಿ ಮಾತನಾಡಿದರು.

ಕೆಎಸ್‌ಸಿಎಸ್‌ಟಿ ಎಲ್ಲಾ ಯೋಜನಾ ಪ್ರಸ್ತಾಪಗಳನ್ನು ಯಾವಾಗಲೂ ಉತ್ತೇಜಿಸಿ, ಬೆಂಬಲಿಸುತ್ತದೆ. ಮೂಲ ಸಮಸ್ಯೆಗಳಿಗೆ ಪರಿಹಾರಗಳನ್ನು ಒದಗಿಸುವಲ್ಲಿ ಹೆಚ್ಚಿನ ಮಹತ್ವವನ್ನು ನೀಡುತ್ತದೆ. ವಿದ್ಯಾರ್ಥಿಗಳು ವೈಜ್ಞಾನಿಕವಾಗಿ ಯೋಚಿಸುವ ಮೂಲಕ ಸಮಾಜಕ್ಕೆ ಏನನ್ನಾದರೂ ಮರಳಿ ನೀಡುವ ಜವಾಬ್ದಾರಿ ಹೊಂದಿರಬೇಕು. ಅದಕ್ಕಾಗಿ ಉದಯೋನ್ಮುಖ ತಂತ್ರಜ್ಞರು ಮತ್ತು ವಿಜ್ಞಾನಿಗಳಿಗೆ ಅವರ ವಿನೂತನ ಯೋಜನಾ ಕಾರ್ಯಗಳಿಗೆ ಎಸ್‌ಪಿಪಿ ಮತ್ತು ಕೆಎಸ್‌ಸಿಎಸ್‌ಟಿಯು ಸಹಾಯ ನೀಡುತ್ತದೆ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಎರಡು ದಿನಗಳ ಕೆಎಸ್‌ಸಿಎಸ್‌ಟಿ 47ನೇ ವಾರ್ಷಿಕ ಭಿತ್ತಿಪತ್ರ ಮಂಡನೆ ಮತ್ತು ಯೋಜನಾ ಪ್ರದರ್ಶನ ಸಮ್ಮೇಳನಕ್ಕೆ ಎಂ. ಅಶೋಕ್ ರಾಯಚೂರು ಚಾಲನೆ ನೀಡಿದರು.

ಇಂದು ಸಣ್ಣ ನಗರಗಳಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಸಂಶೋಧನಾ ಯೋಜನೆಗಳ ಅಗತ್ಯವಿದೆ. ದೊಡ್ಡ ನಗರಗಳಲ್ಲಿ ಘನತ್ಯಾಜ್ಯ ನಿರ್ವಹಣೆಯನ್ನು ಯೋಜಿಸಲಾಗಿದ್ದರೂ, ಈ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಕಂಡುಹಿಡಿಯುವುದು ದುಸ್ತರವಾಗಿದೆ ಮತ್ತು ಸಣ್ಣ ನಗರಗಳಲ್ಲಿ ಪರಿಸ್ಥಿತಿ ಇನ್ನೂ ಕೆಟ್ಟದಾಗಿದೆ. ತಾಲೂಕು ಮತ್ತು ನಗರ ಪ್ರದೇಶಗಳಲ್ಲಿ ಸುಸ್ಥಿರ ಜೀವನಕ್ಕಾಗಿ ಘನತ್ಯಾಜ್ಯ ನಿರ್ವಹಣೆಯ ಕುರಿತು ಹೆಚ್ಚಿನ ಸಂಶೋಧನಾ ಕಾರ್ಯಗಳ ಅಗತ್ಯವಿದೆ ಎಂದು ಒತ್ತಿ ಹೇಳಿದರು.

ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ ಮಾತನಾಡಿ, 47ನೇ ಸರಣಿ ವಿದ್ಯಾರ್ಥಿ ಯೋಜನೆ ಕಾರ್ಯಕ್ರಮ ಹಾಗೂ ರಾಜ್ಯಮಟ್ಟದ ಭಿತ್ತಿಪತ್ರ ಮಂಡನೆ ಮತ್ತು ಯೋಜನಾ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿ, ಈ ಭಾಗದ ಶೈಕ್ಷಣಿಕ ಸಬಲೀಕರಣಕ್ಕೆ ಶರಣಬಸವೇಶ್ವರ ಸಂಸ್ಥಾನ ಹಾಗೂ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕೊಡುಗೆಯನ್ನು ಸ್ಮರಿಸಿದರು. ಶರಣಬಸವೇಶ್ವರ ಸಂಸ್ಥಾನದ 8ನೇ ಮಹಾದಾಸೋಹ ಪೀಠಾಧಿಪತಿ ಪೂಜ್ಯ ಡಾ. ಶರಣಬಸವಪ್ಪ ಅಪ್ಪಾಜಿ ಅವರು ತಮ್ಮ ಅವಿರತ ಶ್ರಮದಿಂದ ಶಿಕ್ಷಣದಿಂದ ವಂಚಿತವಾಗಿದ್ದ ಕಲ್ಯಾಣ ಕರ್ನಾಟಕ ಪ್ರದೇಶವನ್ನು ಏಕಾಂಗಿಯಾಗಿ ಪ್ರಮುಖ ಶಿಕ್ಷಣ ಕೇಂದ್ರವನ್ನಾಗಿ ಪರಿವರ್ತಿಸಿರುವುದು ನಮಗೆಲ್ಲಾ ಹೆಮ್ಮೆಯ ವಿಷಯವೇ ಎಂದರು.

> ಮೂಲ ಅಂಶಗಳನ್ನು ಎಂಜಿನಿಯರಿಂಗ್‌ನೊಂದಿಗೆ ಸಂಯೋಜಿಸುವುದು ವಿಭಿನ್ನ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯಲು ಉತ್ಪಾದಕ ಸಂಶೋಧನೆ ಮತ್ತು ಯೋಜನೆಗಳಿಗೆ ಬಹಳ ಅನುಕೂಲವಾಗುತ್ತದೆ.
> - ಪ್ರೊ. ಅಶೋಕ್ ಎಂ ರಾಯಚೂರು, ಕಾರ್ಯದರ್ಶಿ

> ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಕನಿಷ್ಠ 6 ಯೋಜನೆಗಳನ್ನು ಮಾಡುವುದು ಕಡ್ಡಾಯವಾಗಿದ್ದು, ಅಂತಿಮ ವರ್ಷದಲ್ಲಿ ಮಾರುಕಟ್ಟೆ ಯೋಜನೆಯೊಂದಿಗೆ ವಿದ್ಯಾರ್ಥಿಗಳು ತಮ್ಮ ಯೋಜನೆಯನ್ನು ಪ್ರದರ್ಶಿಸುವುದು ಅವಶ್ಯಕವಾಗಿದೆ.
> - ಪ್ರೊ. ಅನಿಲ್ ಕುಮಾರ್ ಬಿಡವೆ, ಉಪಕುಲಪತಿ

ಶರಣಬಸವ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಅನಿಲ್‌ಕುಮಾರ್ ಬಿಡವೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದರು. ಕಾರ್ಯಕ್ರಮದಲ್ಲಿ ಕೆಎಸ್‌ಸಿಎಸ್‌ಟಿಯ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಯು. ಟಿ. ವಿಜಯ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಎಸ್. ಜಿ. ಡೊಳ್ಳೇಗೌಡರ್ ಸ್ವಾಗತಿಸಿದರು. ಡೈರೆಕ್ಟರ್ ಡಾ. ವಿ. ಡಿ. ಮೈತ್ರಿ, ಡೀನ್ ಡಾ. ಲಕ್ಷ್ಮೀ ಪಾಟೀಲ್ ಮಾಕಾ, ಕುಲಸಚಿವ (ಮೌಲ್ಯಮಾಪನ) ಡಾ. ಎಸ್. ಎಚ್. ಹೊನ್ನಳ್ಳಿ, ಹಣಕಾಸು ಅಧಿಕಾರಿ ಪ್ರೊ. ಕಿರಣ್ ಮಾಕಾ ಸೇರಿದಂತೆ ಇತರ ಪ್ರಮುಖರು ಉಪಸ್ಥಿತರಿದ್ದರು.

ತಾಂತ್ರಿಕ ದಾಖಲೆ, ಸಿಡಿ ಬಿಡುಗಡೆ

ಕಲಬುರಗಿಯ ಶರಣಬಸವ ವಿಶ್ವವಿದ್ಯಾಲಯದಲ್ಲಿ ನಡೆದ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಷತ್ತಿನ 47ನೇ ಸರಣಿ ಸಮ್ಮೇಳನದಲ್ಲಿ ವಿದ್ಯಾರ್ಥಿಗಳು ತಯ್ಯಾರಿಸಿದ ತಾಂತ್ರಿಕ ದಾಖಲೆ ಹಾಗೂ ಸಿಡಿಗಳನ್ನು ಬಿಡುಗಡೆಗೊಳಿಸಲಾಯಿತು. ಅಲ್ಲದೇ, ಎರಡು ದಿನಗಳ ಪ್ರಸ್ತುತಿಗಾಗಿ ರಾಜ್ಯದ ಬೆಂಗಳೂರು, ಮಂಗಳೂರು, ಮೈಸೂರು, ದಾವಣಗೆರೆ, ಶಿವಮೊಗ್ಗ ಹಾಗೂ ಕಲಬುರಗಿ ಸೇರಿ ಒಟ್ಟು 354 ಯೋಜನೆಗಳನ್ನು ವಿದ್ಯಾರ್ಥಿಗಳು ಪ್ರದರ್ಶನ ಮಾಡಿದರು. ಇದರಲ್ಲಿ ಪೋಸ್ಟರ್ ಪ್ರಸ್ತುತಿ 153 ಯೋಜನೆಗಳು ಮತ್ತು ಪ್ರದರ್ಶನಕ್ಕಾಗಿ ರಾಜ್ಯದ 14 ಎಂಜಿನಿಯರಿಂಗ್ ಸಂಸ್ಥೆಗಳನ್ನು ಒಳಗೊಂಡ 201 ಯೋಜನೆಗಳ ಪ್ರದರ್ಶನ ಈ ಎರಡು ದಿನದಲ್ಲಿ ನಡೆಯಲಿವೆ.

ಒಂಬತ್ತು ದಿನಗಳ ಕಾರ್ಯಕ್ರಮಕ್ಕೆ 2025ರ ಜ.29ರಂದು ಚಾಲನೆ

ಏಳನೇ ಭಾರತೀಯ ಸಂಸ್ಕೃತಿ ಉತ್ಸವಕ್ಕೆ ಸಜ್ಜು

ವಿಶ್ವವಾಣಿ ಸುದ್ದಿಮನೆ, ಕಲಬುರಗಿ

ಸೇಡಂನ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿಯ ಸ್ವರ್ಣ ಜಯಂತಿ ನಿಮಿತ್ತ ಜಿಲ್ಲೆಯಲ್ಲಿ 2025ರ ಜ.29ರಿಂದ ಫೆ.6ರವರೆಗೆ ರಾಷ್ಟ್ರಮಟ್ಟದ 7ನೇ ಭಾರತೀಯ ಸಂಸ್ಕೃತಿ ಉತ್ಸವ ಹಮ್ಮಿಕೊಳ್ಳಲಾಗುತ್ತಿದೆ ಎಂದು ವಿಕಾಸ ಅಕಾಡೆಮಿ ಸಂಯೋಜಕ ಬಸವರಾಜ ಪಾಟೀಲ್ ಸೇಡಂ ತಿಳಿಸಿದರು.

ನಗರದ ವಿಕಾಸ ಅಕಾಡೆಮಿ ಕಾರ್ಯಾಲಯದಲ್ಲಿ ಶುಕ್ರವಾರ ಮಾತನಾಡಿದ ಅವರು, ಸೇಡಂನ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ವಿಕಾಸ ಅಕಾಡೆಮಿ ಹಾಗೂ ಭಾರತೀಯ ವಿದ್ಯಾ ಕೇಂದ್ರ, ಹಾಗೂ ಸಂಘಗಳ ಸಹಯೋಗದಲ್ಲಿ ಜಿಲ್ಲೆಯ ಸೇಡಂ ತಾಲೂಕಿನ ಕಲಬುರಗಿ-ಸೇಡಂ ರಸ್ತೆಯ ಬೀರನಹಳ್ಳಿ ಸಮೀಪ 7ನೇ ಭಾರತೀಯ ಸಂಸ್ಕೃತಿ ಉತ್ಸವ ನಡೆಯಲಿದೆ ಎಂದು ಹೇಳಿದರು.

ಪ್ರಕೃತಿಯಿಂದ ಸಂಸ್ಕೃತಿಯಡೆಗೆ' ಚಿಂತನೆಯಲ್ಲಿ ಸುಮಾರು 9 ದಿನ ನಡೆಯುವ ಬೃಹತ್ ಕಾರ್ಯಕ್ರಮಕ್ಕೆ ಸುಮಾರು 240 ಎಕರೆ ಸ್ಥಳ ಗುರುತಿಸಲಾಗಿದೆ. ಸುಮಾರು 30 ಲಕ್ಷಕ್ಕೂ ಹೆಚ್ಚಿನ ಜನರು ಪಾಲ್ಗೊಳ್ಳುವ ನೀರಿಕ್ಷೆ ಹೊಂದಿದ್ದೇವೆ. ಮುಖ್ಯವಾಗಿ ಪ್ರಕೃತಿ ಕೇಂದ್ರಿತ ವಿಕಾಸ ಚಿಂತನೆಗಳ ರೂವಾರಿ ಕೆ.ಎನ್.ಗೋವಿಂದಾಚಾರ್ಯ ಕನಸಿನ ಈ ಉತ್ಸವವನ್ನು ಪೂಜ್ಯ ಸಿದ್ದೇಶ್ವರ ಸ್ವಾಮೀಜಿ, ಸ್ವದೇಶಿ ಚಳವಳಿಯ ಮೇರು ವ್ಯಕ್ತಿತ್ವ ರಾಜೀವ್ ದೀಕ್ಷಿತ್ ಅವರಿಗೆ ಸಮರ್ಪಣೆ ಮಾಡಲಾಗುತ್ತದೆ. ಈಗಾಗಲೇ ಆ ಕಡೆ ಈ ಉತ್ಸವ ನಡೆದಿದ್ದು, ಇದೀಗ ಏಳನೇ ಉತ್ಸವ ಕಲಬುರಗಿಯಲ್ಲಿ ನಡೆಯಲಿದೆ ಎಂದು ಹೇಳಿದರು.

ಉತ್ಸವದ ಭಾಗವಾಗಿ ನಡೆಯಲಿರುವ ಯೋಗ ಪ್ರದರ್ಶನ ಕಾರ್ಯಕ್ರಮದಲ್ಲಿ ಒಂದು ಲಕ್ಷ ಯೋಗ ಪಟುಗಳು ಭಾಗವಹಿಸಲಿದ್ದಾರೆ. ಈ ನಿಟ್ಟಿನಲ್ಲಿ ಕಳೆದ 9 ತಿಂಗಳಲ್ಲಿ 55 ಸಾವಿರ ಜನರಿಗೆ ಒಂದು ಪ್ರಶಿಕ್ಷಣ ನೀಡಲಾಗಿದೆ. ಡಿಸೆಂಬರ್‌ವರೆಗೆ ಒಂದು ಲಕ್ಷ ಗುರಿ ಮುಟ್ಟುವ ವಿಶ್ವಾಸವಿದೆ. ಆಗಸ್ಟ್-ಸೆಪ್ಟೆಂಬರ್‌ನಲ್ಲಿ ಸಮಗ್ರ ಕಲ್ಯಾಣ ಕರ್ನಾಟಕದ 52 ತಾಲೂಕು ಕೇಂದ್ರಗಳಲ್ಲಿ ಜಿಲ್ಲಾ ವಿಭಾಗ ಮಟ್ಟದಲ್ಲಿ 18 ಪ್ರಕಾರದ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ. ಇದರಲ್ಲಿ ಸುಮಾರು 50 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು, ಸಾಮಾಜಿಕ-ಸಾಂಸ್ಕೃತಿಕ ತಂಡಗಳು ಭಾಗವಹಿಸಲಿವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಭಾರತ ವಿಕಾಸ ಸಂಗಮದ ಅಖಿಲ ಭಾರತ ಸಂಯೋಜಕ ಮಾಧವರೆಡ್ಡಿ ಸೇರಿದಂತೆ ಇತರ ಪ್ರಮುಖರು ಉಪಸ್ಥಿತರಿದ್ದರು.

21 ವರ್ಷಗಳ ಸೇಡಂ ಯಾತ್ರೆ:

ವಿಕಾಸ ಅಕಾಡೆಮಿ ಕಾರ್ಯಾರಂಭ ಮಾಡಿದ ಕಳೆದ 21 ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶವನ್ನು ಕರ್ಮಭೂಮಿ ಮಾಡಿಕೊಂಡು ಈವರೆಗೆ ಸುಮಾರು ರೂ.220 ಕೋಟಿಗೂ ಅಧಿಕ ಪ್ರಮಾಣದ ಜನಹಿತ ಕಾರ್ಯಗಳನ್ನು ಯಶಸ್ವಿಯಾಗಿ ಕೈಗೊಳ್ಳಲಾಗಿದೆ ಎಂದು ಹಿರಿಯ ಚಿಂತಕ ಹಾಗೂ ಮಾಜಿ ರಾಜ್ಯಸಭಾ ಸದಸ್ಯ ಬಸವರಾಜ ಪಾಟೀಲ್ ಸೇಡಂ ನುಡಿದರು.

> ಒಂಬತ್ತು ದಿನಗಳ ಭಾರತೀಯ ಸಂಸ್ಕೃತಿ ಉತ್ಸವದ ಯಶಸ್ಸಿಗಾಗಿ ಆ.22ರಿಂದ ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳ ಎಲ್ಲ ತಾಲೂಕುಗಳಲ್ಲಿ 45 ದಿನಗಳ ಪ್ರವಾಸ ಕೈಗೊಳ್ಳಲಾಗುತ್ತಿದೆ. ಇದೊಂದು ಅಭೂತಪೂರ್ವ ಕಾರ್ಯಕ್ರಮವಾಗಿದೆ.
> - ಶ್ರೀ ಸದಾಶಿವ ಸ್ವಾಮೀಜಿ, ಅಧ್ಯಕ್ಷರು

ಕೇಂದ್ರ ಸಚಿವರು ಭಾಗಿ

ಜ.29ರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ಸವ ಉದ್ಘಾಟನೆ ಮಾಡಲಿದ್ದಾರೆ. ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಸೇರಿ ರಾಜ್ಯ ಸರಕಾರ ಹಲವು ಸಚಿವರು ಪಾಲ್ಗೊಳ್ಳಲಿದ್ದಾರೆ. ಮುಂದಿನ ದಿನಗಳ ಕಾರ್ಯಕ್ರಮಗಳಲ್ಲಿ 50ಕ್ಕೂ ಅಧಿಕ ಪದ್ಮಶ್ರೀ ಪುರಸ್ಕೃತರು, ಕೇಂದ್ರ ಸಚಿವ ನಿತಿನ್ ಗಡ್ಕರಿ, ಕೃಷಿ ಸಚಿವ ಶಿವರಾಜ ಸಿಂಗ್ ಚವ್ಹಾಣ, ಮನಸುಖ ಮಾಂಡವೀಯಾ, ಶೋಭಾ ಕರಂದ್ಲಾಜೆ ಹಾಗೂ ಈ ಹಿಂದಿನ ರಾಷ್ಟ್ರಪತಿ ರಾಮನಾಥ ಕೋವಿಂದ ಕೊನೆಯ ದಿನ ಪಾಲ್ಗೊಳ್ಳಲಿದ್ದಾರೆ ಎಂದು ಬಸವರಾಜ್ ಪಾಟೀಲ್ ಸೇಡಂ ಹೇಳಿದರು.

ಶಾರ್ಟ್ ಸರ್ಕ್ಯೂಟ್: 2 ಅಂಗಡಿ ಭಸ್ಮ

ಚಿತ್ತಾಪುರ: ಪಟ್ಟಣದ ಕಲಬುರಗಿ ರಸ್ತೆಯಲ್ಲಿರುವ ಜೆಸ್ಕಾಂ ಇಲಾಖೆಯ ಟಿಸಿ ರಿಪೇರಿ ಕೇಂದ್ರಕ್ಕೆ ಹಾಗೂ ಫಾರಂ ಬೈಟ್ ಅಗ್ರಿಕಲ್ಚರ್ ಮಶೀನರಿ ದಾಸ್ತಾನು ಗೋದಮಿನಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ತಗುಲಿ ಎರಡು ಅಂಗಡಿಗಳ ಸಾಮಗ್ರಿಗಳು ಸುಟ್ಟು ಕರಕಲಾಗಿವೆ.

ನವರಂಗ ಏಜೆನ್ಸಿ ಅವರು ವಿದ್ಯುತ್ ಸಂಪರ್ಕಕ್ಕೆ ಅಳವಡಿಸುವ ಟಿಸಿ ರಿಪೇರಿ ಸೆಂಟರ್‌ನಲ್ಲಿ ಸುಮಾರು 45 ಲಕ್ಷ ರು. ಮೌಲ್ಯದ ಸಾಮಗ್ರಿಗಳಾದ ಟಿಸಿ, ರಿಪೇರಿ ಕಿಟ್ಟು, ಆಯಿಲ್ ಸೇರಿದಂತೆ ಎಲ್ಲ ಸಾಮಗ್ರಿಗಳು ಸುಟ್ಟುಕರಕಲಾಗಿವೆ ಎಂದು ಟ್ರಾನ್ಸ್‌ಫಾರಂ ಮಾಲೀಕರು ತಿಳಿಸಿದ್ದಾರೆ.

ಪಕ್ಕದಲ್ಲಿರುವ ಫಾರಂ ಬೈಟ್ ಅಗ್ರಿಕಲ್ಚರ್ ಮಶೀನರಿ ದಾಸ್ತಾನು ಗೋದಾಮಿನಲ್ಲಿ ಚಿಕ್ಕ ಟ್ರ್ಯಾಕ್ಟರ್‌ಗಳು, ಬೆಳೆ ಕಟಿಂಗ್ ಮಷಿನ್‌ಗಳು, ಸ್ಪೇರ್ ಪಾರ್ಟ್'ಗಳು ಸೇರಿದಂತೆ ಸುಮಾರು 57 ಲಕ್ಷ ರು. ಮೌಲ್ಯದ ಸಾಮಗ್ರಿಗಳು ಸುಟ್ಟು ಕರಕಲಾಗಿವೆ ಎಂದು ಮಾಲೀಕ ಮಹ್ಮದ್ ಆರಿಫ್ ತಿಳಿಸಿದ್ದಾರೆ.

ಬೆಂಕಿ ತಗಲಿರುವ ಸುದ್ದಿ ತಿಳಿದ ತಕ್ಷಣ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಲು ಹರಸಾಹಸ ಪಟ್ಟರು. ನವರಂಗ ಏಜೆನ್ಸಿ ಮಾಲೀಕ ಅರುಣಕುಮಾರ ರೆಡ್ಡಿ ಹಾಗೂ ಮಹ್ಮದ್ ಆಸೀಫ್ ಈ ಕುರಿತು ಪೊಲೀಸರಿಗೆ ದೂರು ನೀಡಿದ್ದಾರೆ.

ಸ್ಥಳಕ್ಕೆ ಚಿತ್ತಾಪುರ ಪೊಲೀಸ್ ಠಾಣೆ ಸಿಪಿಐ ಚಂದ್ರಶೇಖರ ತಿಗಡಿ, ಕ್ರೈಂ ಪಿಎಸ್‌ಐ ಚಂದ್ರಮಪ್ಪ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ರೈತ ಸಂಘಟನೆಯ ತಾಲೂಕಾಧ್ಯಕ್ಷೆ ಅಶ್ವಿನಿ

ಜೇವರ್ಗಿ: ಕರ್ನಾಟಕ ರಾಜ್ಯ ರೈತ ಸಂಘಟನೆ ಮಹಿಳಾ ಘಟಕದ ತಾಲೂಕು ಅಧ್ಯಕ್ಷರಾಗಿ ಅಶ್ವಿನಿ ಜಿ ಬಾರಿಗಿಡ ಅವರನ್ನು ನಾಗರತ್ನ ವಿ.ಪಾಟೀಲ್ ಕರ್ನಾಟಕ ರಾಜ್ಯ ರೈತ ಸಂಘ ಮಹಿಳಾ ಘಟಕದ ರಾಜ್ಯ ಅಧ್ಯಕ್ಷರ ಸಮ್ಮುಖದಲ್ಲಿ ಆಯ್ಕೆ ಮಾಡಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ರಾಜ್ಯ ಅಧ್ಯಕ್ಷ ಹಾಗೂ ಕಲಬುರಗಿ ಜಿಲ್ಲಾ ಅಧ್ಯಕ್ಷರಾದ ಮಂಜುಳಾ ಭಜಂತ್ರಿ ಅವರು ಸಂಘಟನೆ ಸದಸ್ಯರ ಆಯ್ಕೆ ಮತ್ತು ಕುಂದುಕೋರತೆ ಸಭೆಯಲ್ಲಿ ಸದಸ್ಯರನ್ನು ಆಯ್ಕೆ ಜರುಗಿತು.

ಕರ್ನಾಟಕ ರಾಜ್ಯ ರೈತ ಸಂಘ ಮಹಿಳಾ ಘಟಕದ ರಾಜ್ಯ ಅಧ್ಯಕ್ಷೆ ನಾಗರತ್ನ ಪಾಟೀಲ ಮಾತನಾಡಿ, ರಾಜ್ಯದ ರಾಜಕೀಯ ನಾಯಕರು ರೈತರ ಮೇಲೆ ಆಣೆ ಮಾಡುತ್ತಾರೆ. ರೈತರ ಪುರಕವಾದ ಯಾವುದೇ ಯೋಜನೆ ಮಾಡದೇ ಹಿಂದಿನ ಎಲ್ಲಾ ಸರಕಾರಗಳು ರೈತರ ಬೆನ್ನಿಗೆ ಚುರಿ ಹಾಕುವ ಕೆಲಸ ಮಾಡುತ್ತಾರೆ ಎಂದು ಹರಿಹಯ್ದರು. ಈ ಸಂದರ್ಭದಲ್ಲಿ ಮಲ್ಕಣ್ಣ, ಶಹಪೂರ,ಬಾಬಾ ಪಟೇಲ್, ಶ್ರೀಶೈಲ ಎಸ್ , ಪರಶುರಾಮ ನಾಯಕ,ಶರಣಪ್ಪ, ಕುಮಾರ್ ಅಂಬಿಕಾ ಎಮ್ ಪಡದಹಳ್ಳಿ, ಶ್ರೀದೇವಿ ಎನ್ ಇಂಗಳೇಶ್ವರ ಇದ್ದರು.

ಪ್ರಾಥಮಿಕ ಶಾಲಾ ಶಿಕ್ಷಕರಿಗೆ ನ್ಯಾಯ ಕೊಡಿ

ಸೇಡಂ: ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸರಕಾರದ ಅವೈಜ್ಞಾನಿಕ ಕ್ರಮಗಳಿಂದಾಗಿ ಆಗುತ್ತಿರುವ ಅನ್ಯಾಯವನ್ನು ಕೂಡಲೇ ಸರಿಪಡಿಸಿ ನ್ಯಾಯ ಒದಗಿಸಬೇಕು ಎಂದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಬಸವರಾಜ ಸಾಗರ್ ಒತ್ತಾಯಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು ಮಾತನಾಡಿ, ಪ್ರಾಥಮಿಕ ಶಾಲಾ ಶಿಕ್ಷಕರನ್ನು ಈ ಮೊದಲು 1 ರಿಂದ 8 ನೇ ತರಗತಿ ಬೋಧನೆ ಮಾಡುವ ಶಿಕ್ಷಕರೆಂದು ಪರಿಗಣಿಸಲಾಗುತ್ತಿತ್ತು, ಪ್ರಸ್ತುತವಾಗಿ ಅವರನ್ನು 1 ರಿಂದ 5ನೇ ತರಗತಿ ಬೋಧನೆ ಮಾಡುವ ಶಿಕ್ಷಕರೆಂದು ಪರಿಗಣಿಸಿರುವುದು ನಮಗೆ ಮಾಡಿದ ಅನ್ಯಾಯ ಮತ್ತು ಅಪಮಾನವಾಗಿದೆ.

2017ರ ವೃಂಧ ಮತ್ತು ನೇಮಕಾತಿ ನಿಯಮಗಳು 2016 ಕ್ಕಿಂತ ಮುಂಚೆ ನೇಮಕವಾದ ಶಿಕ್ಷಕರಿಗೆ ಅನ್ವಯಿಸಬಾರದು. ಮೂಲತಃ 1 ರಿಂದ 7ನೇ ತರಗತಿಗೆ ನೇಮಕ ಹೊಂದಿರುವವರನ್ನು ಪಿ.ಎಸ್.ಟಿ.ಎಂದು ಪದನಾಮ ಮಾಡಿ, 1ರಿಂದ 5 ನೇ ತರಗತಿಗೆ ಹಿಂಬಡ್ತಿ ನೀಡಿದ್ದನ್ನು ಹಿಂದೆ ಪಡೆಯಬೇಕು ಎಂದು ಅಗ್ರಹಿಸಿದರು.

2016ಕ್ಕಿಂತ ಮೊದಲು ನೇಮಕವಾದ ಶಿಕ್ಷಕರನ್ನು ಎನ್‌ಸಿಟಿಈ ನಿಯಮಾವಳಿ ಪ್ರಕಾರ ಪದವಿ ವಿದ್ಯಾರ್ಹತೆಯನ್ನು ಹೊಂದಿದ ಎಲ್ಲಾ ಸೇವಾನಿರತ ಶಿಕ್ಷಕರನ್ನು ಜಿಪಿಟಿ ಶಿಕ್ಷಕರೆಂದು ಸೇವಾ ಜೇಷ್ಠತೆಯೊಂದಿಗೆ ಪುನರ್ ಪದನಾಮಕರಣ ಮಾಡಬೇಕು. ಪ್ರಾಥಮಿಕ ಶಾಲಾ ಶಿಕ್ಷರನ್ನು ಅವರ ಸೇವಾ ಜೇಷ್ಠತೆಯ ಆಧಾರದ ಮೇಲೆ ಪ್ರೌಢ ಶಾಲಾ ಶಿಕ್ಷಕರ ಹುದ್ದೆಗೆ ಬಡ್ತಿ ನೀಡಬೇಕು, ಅನೇಕ ಇಲಾಖೆಯಲ್ಲಿ ಹಂತ ಹಂತವಾಗಿ ಬಡ್ತಿ ನೀಡುವ ಪ್ರಕ್ರಿಯೆಯು ಜರುತ್ತದೆ ಆದರೆ ನಮ್ಮ ಇಲಾಖೆಯಲ್ಲಿ ಸಿಗುವ ಮುಖ್ಯೋಪಾಧ್ಯಾಯರ ಬಡ್ತಿಯನ್ನು ನ್ಯಾಯಾಲಯದಲ್ಲಿ ಪ್ರಕರಣ ಇರುವ ಕಾರಣದಿಂದಾಗಿ ಅರ್ಹ ಶಿಕ್ಷಕರು ಮುಖ್ಯೋಪಾಧ್ಯಾಯರ ಸ್ಥಾನದಿಂದ ವಂಚಿತರಾಗುತ್ತಿದ್ದಾರೆ. ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸರಕಾರ ಕೂಡಲೇ ನ್ಯಾಯ ಒದಗಿಸಿ ಕೊಡಬೇಕು ಎಂದು ಈ ಮೂಲಕ ಮನವಿ ಮಾಡುವುದಾಗಿ ಹೇಳಿದರು.

ಈ ವೇಳೆ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಉಪಾಧ್ಯಕ್ಷೆ ಅನ್ನಪೂರ್ಣ ಬಾನರ್, ಪ್ರದಾನ ಕಾರ್ಯದರ್ಶಿ ಶರಣು ಕಾಳೆರ್, ದೇವಿಂದ್ರ ದಿಗ್ಗಾಂವ, ರತ್ನಾಬಾಯಿ, ಸಂಘಟನಾ ಕಾರ್ಯದರ್ಶಿಗಳಾದ ಕಸ್ತೂರಿಬಾಯಿ, ಶ್ರೀನಿವಾಸ್ ಮ್ಯಾಕಲ್, ಕರ್‍ಯಾಧ್ಯಕ್ಷ ಹಣಮಂತ ಮೇತ್ರಿ, ಸದಸ್ಯರಾದ ಬಸವರಾಜ ಅಲ್ಲಂ, ಶಿವರಾಯ ಭೋವಿ, ವಿವೇಕಾನಂದ, ಗೋಪಾಲ ಸೇಡಂಕರ್ ಇದ್ದರು.

ಸುದ್ದಿಗೋಷ್ಠಿಯಲ್ಲಿ ಬಸವರಾಜ ಸಾಗರ್ ಮಾತನಾಡಿದರು.

ಬಾಂಗ್ಲಾ ಹಿಂದೂಗಳ ಮೇಲೆ ಹಲ್ಲೆ ಖಂಡನೀಯ

ಕಲಬುರಗಿ: ನೆರೆಯ ಬಾಂಗ್ಲಾದೇಶದಲ್ಲಿ ಹಿಂಸಾಚಾರ ಮತ್ತು ಕಾನೂನು ಸುವ್ಯವಸ್ಥೆ ದಾರಿತಪ್ಪಿದ್ದರಿಂದ ಅಲ್ಲಿಯ ಅರಾಜಕತಾವಾದಿಗಳು ಬಾಂಗ್ಲಾ ಅಲ್ಪಸಂಖ್ಯಾತರ ಮೇಲೆ ದಿನದಿಂದ ದಿನಕ್ಕೆ ಕಿರುಕುಳ ಹೆಚ್ಚಾಗುತ್ತಿರುವುದರಿಂದ ಕೇಂದ್ರ ಸರಕಾರ ಅಲ್ಲಿನ ಹಿಂದೂಗಳ ಸುರಕ್ಷತೆಯನ್ನು ಖಾತ್ರಿಪಡಿಸಿಕೊಳ್ಳಬೇಕು ಎಂದು ವಿಶ್ವ ಹಿಂದೂ ಪರಿಷತ್ತಿನ ಕರ್ನಾಟಕ ಪ್ರಾಂತದ ಅಧ್ಯಕ್ಷ ಶ್ರೀಯುತ ಲಿಂಗರಾಜ ಅಪ್ಪಾ ಆಗ್ರಹಿಸಿದರು.

ಶುಕ್ರವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಬಾಂಗ್ಲಾದಲ್ಲಿ ಭುಗಿಲೆದ್ದ ಹಿಂಸೆಯಿಂದ ಅಲ್ಲಿಯ ಚುನಾಯಿತ ಪ್ರಧಾನಿ ದೇಶವನ್ನು ತೊರೆದಿದ್ದು, ಅರಾಜಕತೆ ತಾಂಡವಾಡುತ್ತಿದೆ. ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ನಿಷ್ಕ್ರೀಯವಾಗಿದೆ. ಈ ಗೊಂದಲಮಯ ವಾತಾವರಣದಲ್ಲಿ ಅಲ್ಲಿನ ತೀವ್ರಗಾಮಿ ಜಿಹಾದಿ ಶಕ್ತಿಗಳು ಹಿಂದೂ ಸಮಾಜದ ಮೇಲೆ ದೊಡ್ಡ ಪ್ರಮಾಣದಲ್ಲಿ ಕಿರುಕುಳ ನೀಡುತ್ತಿದೆ ಎಂದು ಹೇಳಿದರು.

ಬಾಂಗ್ಲಾ ದೇಶದಲ್ಲಿನ ಹಲವು ಧಾರ್ಮಿಕ ಸ್ಥಳಗಳು, ವ್ಯಾಪಾರ ಸಂಸ್ಥೆಗಳು ಸೇರಿದಂತೆ ಹಿಂದೂ ಅಲ್ಪಸಂಖ್ಯಾತರ ಮನೆಗಳಿಗೆ ಹಾನಿಯುಂಟು ಮಾಡಲಾಗುತ್ತಿದ್ದು, ಬಾಂಗ್ಲಾದ ಪ್ರತಿ ಜಿಲ್ಲೆಯಲ್ಲಿ ಈ ರೀತಿಯ ಭೀಕರ ಕೃತ್ಯಗಳು ನಡೆದಿದ್ದು, ಕೂಡಲೇ ಕೇಂದ್ರ ಸರ್ಕಾರ ಅಲ್ಲಿನ ಅಲ್ಪಸಂಖ್ಯಾತ ಹಿಂದೂಗಳ ಸುರಕ್ಷತೆಯನ್ನು ಕಾಪಾಡಿಕೊಳ್ಳಬೇಕು ಎಂದು ಹೇಳಿದರು.

ಬಾಂಗ್ಲಾ ದೇಶದ ಅಲ್ಪಸಂಖ್ಯಾತ ಹಿಂದೂಗಳ ಸ್ಥಿತಿ ಕೆಟ್ಟಿದ್ದರಿಂದ ಅಲ್ಲಿನ ವಾತಾವರಣ ಹದಗೆಡುತ್ತಿದೆ. ಪರಿಸ್ಥಿತಿ ತುಂಬಾ ಆತಂಕಕಾರಿಯಾಗಿ ಪರಿಣಮಿಸಿದೆ.ಹೀಗಾಗಿ ಬಾಂಗ್ಲಾ ದೇಶದ ಅಲ್ಪಸಂಖ್ಯಾತ ಹಿಂದೂಗಳ ಸುರಕ್ಷತೆಗಾಗಿ ಮತ್ತು ಅವರ ಮಾನವ ಹಕ್ಕುಗಳ ಸಂರಕ್ಷಣೆಗಾಗಿ ಪರಿಣಾಮಕಾರಿಯಾದ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದ್ದು, ಭಾರತ ಸರಕಾರ ಕುರುಡರಂತೆ ಇರಬಾರದು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ವಿಶ್ವ ಹಿಂದೂ ಪರಿಷತ್ತಿನ ಪ್ರಾಂತ ಕಾರ್ಯದರ್ಶಿ ಶಿವಕುಮಾರ್ ಬೋಳಶೆಟ್ಟಿ, ಜಿಲ್ಲಾಧ್ಯಕ್ಷ ಶ್ರೀಮಂತ ನವಲದಿ, ಪ್ರಶಾಂತ್ ಗುಡ್ಡಾ, ಸತೀಶ್ ಮಾವುರ್ ಇದ್ದರು.

ಸುದ್ದಿಗೋಷ್ಠಿಯಲ್ಲಿ ಶ್ರೀಯುತ ಲಿಂಗರಾಜ ಅಪ್ಪಾ ಮಾತನಾಡಿದರು.

> ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ರಕ್ಷಣೆಗೆ ನಿರಾಶತರ ಕೇಂದ್ರ ಆರಂಭ ಮಾಡಲಾಗಿದೆ. ಎಲ್ಲಾ ರೀತಿಯಲ್ಲೂ ಸುರಕ್ಷತೆಯನ್ನು ನೀಡುವ ಕೆಲಸ ವಿಶ್ವ ಹಿಂದೂ ಪರಿಷತ್ತಿನ ವತಿಯಿಂದ ನಡೆಯುತ್ತಿದೆ.
> - ಶಿವಕುಮಾರ್ ಬೋಳಶೆಟ್ಟಿ, ವಿ.ಎಚ್.ಪಿ. ಪ್ರಾಂತ ಕಾರ್ಯದರ್ಶಿ

ಯುಜಿಸಿ ನಿಯಮದಂತೆ ವೇತನ ನೀಡಲು ಆಗ್ರಹ

ಕಲಬುರಗಿ: ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಯುಜಿಸಿ ನಿಯಮಾವಳಿಯಂತೆ ತಿಂಗಳಿಗೆ ಕನಿಷ್ಠ 50 ಸಾವಿರ ರೂ ವೇತನ ನೀಡಬೇಕು ಎಂದು ತರಗತಿಗಳನ್ನು ಬಹಿಷ್ಕರಿಸಿ ಅತಿಥಿ ಉಪನ್ಯಾಸಕರು ವಿಶ್ವವಿದ್ಯಾಲಯದ ಕಾರ್ಯಸೌಧದ ಎದುರು ಕುಲಪತಿಗಳು, ಕುಲಸಚಿವರ ವಿರುದ್ಧ ಘೋಷಣೆ ಕೂಗಿ ಬುಧವಾರ ಅನಿರ್ಧಿಷ್ಟಾವಧಿ ಸತ್ಯಾಗ್ರಹ ನಡೆಸಿದರು. ಪ್ರತಿ ವರ್ಷದಂತೆ ಈ ವರ್ಷವೂ ಯುಜಿಸಿ ನಿಯಮಾವಳಿ ಪ್ರಕಾರ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಯುಜಿಸಿ ನಿಯದಂತೆ ಗಂಟೆಗೆ 1500 ರಂತೆ ಗರಿಷ್ಠ ತಿಂಗಳಿಗೆ 50 ಸಾವಿರ ರೂ. ವೇತನ ನೀಡುತ್ತಿಲ್ಲ. ಪ್ರವೇಶ ಮತ್ತು ಪರೀಕ್ಷಾ ಪ್ರಕ್ರಿಯೆಯಲ್ಲಿಯೂ ದುಡಿಸಿಕೊಂಡು ವರ್ಷದ 12 ತಿಂಗಳು ವೇತನ ನೀಡದೆ ಕೇವಲ 6 ರಿಂದ 7 ತಿಂಗಳು ಮಾತ್ರವೇ ವೇತನ ನೀಡಲಾಗುತ್ತಿದೆ. ಉಳಿದ 5 ರಿಂದ 6 ತಿಗಳು ವೇತನವಿಲ್ಲದೆ ಅತಿಥಿ ಉಪನ್ಯಾಸಕರು ಬಾರಿ ಸಂಕಷ್ಟ ಎದುರಿಸುವ ಪರಿಸ್ಥಿತಿ ಎದುರಾಗಿದೆ.ಅತಿಥಿ ಉಪನ್ಯಾಸಕರು ಪ್ರತಿವರ್ಷ ನ್ಯಾತಯುತ ಬೇಡಿಕೆಗಳನ್ನು ಕುಲಪತಿ, ಕುಲಸಚಿವರು ಹಾಗೂ ಅಧಿಕಾರಿಗಳ ಮುಂದೆ ಮನವಿ ಮಾಡಿದರೆ ನಯವಾಗಿ ಮಾತನಾಡಿ ವಿಳಂಬ ನೀತಿ ಅನುಸರಿಸಿ ಅತಿಥಿ ಉಪನ್ಯಾಸಕರಿಗೆ ನಿರಂತರವಾಗಿ ಅನ್ಯಾಯ ಮಾಡುತ್ತಾ ಬಂದಿದ್ದಾರೆ. ಘಟಿಕೋತ್ಸವದಂದು ಕಪ್ಪು ಬಟ್ಟೆ ಪ್ರದರ್ಶಿಸಿ ರಾಜ್ಯಪಾಲರ ಎದುರು ನ್ಯಾಯ ಒದಗಿಸುವಂತೆ ಪ್ರತಿಭಟಿಸುತ್ತೇವೆ ಎಂದು ಅತಿಥಿ ಉಪನ್ಯಾಸಕರ ಸಂಘದ ಅಧ್ಯಕ್ಷ ಡಾ. ಅರುಣಕುಮಾರ ಕುರ್ನೆ ಎಚ್ಚರಿಸಿದರು.

ಸಾರಿಗೆ ಸಮಸ್ಯೆ ನಿಯಂತ್ರಣಕ್ಕೆ ಕಂಟ್ರೋಲ್ ರೂಂ ಸ್ಥಾಪನೆ

ಕಲಬುರಗಿ: ಕಲಬುರಗಿ ವಿಭಾಗ-2 ರ ವ್ಯಾಪ್ತಿಯಲ್ಲಿ ಬರುವ ಕಲಬುರಗಿ ಗ್ರಾಮೀಣ, ಕಲಬುರಗಿ ದಕ್ಷಿಣ, ಆಳಂದ, ಜೇವರ್ಗಿ, ಯಡ್ರಾಮಿ ಹಾಗೂ ಅಫಜಲಪೂರ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಸಾರ್ವಜನಿಕ ಪ್ರಯಾಣಿಕರ, ವಿದ್ಯಾರ್ಥಿಗಳು ಬಸ್ ಸಮಸ್ಯೆ ಹಾಗೂ ಮತ್ತಿತರ ಸಲಹೆ-ಸೂಚನೆಗಳನ್ನು ಪಡೆಯಲು ಸಂಸ್ಥೆಯಲ್ಲಿ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಲಾಗಿದೆ ಎಂದು ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಕಲಬುರಗಿ ವಿಭಾಗ-2ರ ವಿಭಾಗೀಯ ನಿಯಂತ್ರಣಾಧಿಕಾರಿಗಳು ತಿಳಿಸಿದ್ದಾರೆ. ಸಾರ್ವಜನಿಕ ಪ್ರಯಾಣಿಕರ, ವಿದ್ಯಾರ್ಥಿಗಳು ಬಸ್ ಸಮಸ್ಯೆ, ಸಾರಿಗೆ ಸೌಲಭ್ಯ, ಬಸ್ ನಿಲ್ದಾಣ ಸ್ವಚ್ಛತೆ ಸೇರಿದಂತೆ ಮತ್ತಿತರ ಸಾರಿಗೆ ಸಮಸ್ಯೆಗಳ ನಿವಾರಣೆಗಾಗಿ ಸಾರ್ವಜನಿಕರು ಸಾರಿಗೆ ಸಂಬಂಧಿಸಿದಂತೆ ಸಮಸ್ಯೆ / ಸಲಹೆ ಸೂಚನೆಗಳಿದ್ದಲ್ಲಿ ಸಂಸ್ಥೆಯ ನಿಯಂತ್ರಣಾ ಕೊಠಡಿಯ ದೂರವಾಣಿ ಸಂಖ್ಯೆ 6366423880 ಕರೆ ಮಾಡಿ ಪರಿಹಾರ ಕಂಡುಕೊಳ್ಳಬಹುದಾಗಿದೆ. ಇದಲ್ಲದೇ ಕಲಬುರಗಿ ವಿಭಾಗ-2 ರಿಂದ ಪ್ರತಿ ಮಾಹೆಯ ಹುಣ್ಣಿಮೆ, ಅಮವಾಸ್ಯೆ ದಿನಗಳಂದು ಜನದಟ್ಟಣೆಗನುಗುಣವಾಗಿ ಹೆಚ್ಚುವರಿ ಸಾರಿಗೆಗಳನ್ನು ಕಾಯ್ದಿರಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಸರಣಿ ರಜೆಗಳ ದಿನಗಳಂದು 45 ಕ್ಕಿಂತ ಹೆಚ್ಚಿನ ಪ್ರಯಾಣಿಕರಿದ್ದಲ್ಲಿ ಆಯಾ ತಾಲೂಕು ಹಾಗೂ ಕಲಬುರಗಿ ಜಿಲ್ಲಾ ಬಸ್ ನಿಲ್ದಾಣಗಳಿಂದ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು, ಸಾರ್ವಜನಿಕರು ಪ್ರಯಾಣಿಕರು ಇದರ ಸದುಪಯೋಗ ಪಡೆಯಬೇಕೆಂದು ಅವರು ತಿಳಿಸಿದ್ದಾರೆ.

ಅಲೆಮಾರಿ ಅಭಿವೃದ್ಧಿ : ಸಾಲ ಸೌಲಭ್ಯಕ್ಕೆ ಅರ್ಜಿ

ಕಲಬುರಗಿ: ಕರ್ನಾಟಕ ಅಲೆಮಾರಿ ಮತ್ತು ಅರೆ-ಅಲೆಮಾರಿ ಅಭಿವೃದ್ಧಿ ನಿಗಮದಿಂದ 2024-25ನೇ ಸಾಲಿಗೆ ಅನುಷ್ಠಾನಗೊಳಿಸುತ್ತಿರುವ ಈ ಕೆಳಕಂಡ ವಿವಿಧ ಯೋಜನೆಯಡಿ ಸಾಲ-ಸೌಲಭ್ಯ ಪಡೆಯಲು ಅರ್ಹ ಫಲಾನುಭವಿಗಳಿಂದ ಸೇವಾಸಿಂಧು ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಕರ್ನಾಟಕ ಅಲೆಮಾರಿ ಮತ್ತು ಅರೆ-ಅಲೆಮಾರಿ ಅಭಿವೃದ್ಧಿ ನಿಗಮದ ಕಲಬುರಗಿ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ. ಸ್ವಯಂ ಉದ್ಯೋಗ ವೈಯಕ್ತಿಕ ಸಾಲ ಯೋಜನೆ, ಗಂಗಾ ಕಲ್ಯಾಣ ನೀರಾವರಿ ಯೋಜನೆ, ಅರಿವು-ಶೈಕ್ಷಣಿಕ ಸಾಲ ಯೋಜನೆ, ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಸಾಲ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಸ್ವಯಂ ಉದ್ಯೋಗ ಸಾಲ ಯೋಜನೆ ಯೋಜನೆಗಳಡಿ ಅರ್ಜಿ ಸಲ್ಲಿಸಬಹುದಾಗಿದೆ. ಹಿಂದುಳಿದ ವರ್ಗಗಳ ಪ್ರವರ್ಗ-1ರ ಅಲೆಮಾರಿ ಮತ್ತು ಅರೆ-ಅಲೆಮಾರಿ ಜನಾಂಗಕ್ಕೆ ಫಲಾನುಭವಿಗಳ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ 2024ರ ಆ. 31 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್‌ಸೈಟ್‌ನ್ನು ಅಥವಾ ನಿಗಮದ ಸಹಾಯವಾಣಿ ಸಂಖ್ಯೆ 080-22374832 ಮತ್ತು 8050770004 ಅಥವಾ 8050770005 ಅಥವಾ ಕರ್ನಾಟಕ ಅಲೆಮಾರಿ ಮತ್ತು ಅರೆ-ಅಲೆಮಾರಿ ಅಭಿವೃದ್ಧಿ ನಿಗಮ ನಿಯಮಿತದ ಕಚೇರಿ ದೂರವಾಣಿ ಸಂಖ್ಯೆ 08472-278635 ಗೆ ಸಂಪರ್ಕಿಸಲು ಕೋರಲಾಗಿದೆ.

ಆಗಸ್ಟ್ 12 ರಂದು ಯುವ ದಿನಾಚರಣೆ

ಕಲಬುರಗಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಲಬುರಗಿ, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ ಬೆಂಗಳೂರು, ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ತಡೆಗಟ್ಟುವ ಘಟಕ ಭಾರತೀಯ ಕಲಬುರಗಿ ಎನ್.ಎಸ್.ಎಸ್. ಘಟಕ ಕಲಬುರಗಿ ಹಾಗೂ ನೂತನ ವಿದ್ಯಾಲಯ ಪದವಿ ಮಹಾವಿದ್ಯಾಲಯ ಇವುಗಳ ಸಂಯುಕ್ತಾಶ್ರಯದಲ್ಲಿ ಇದೇ ಆಗಸ್ಟ್ 12 ರಂದು ಬೆಳಗ್ಗೆ 10.30 ಗಂಟೆಗೆ ಕಲಬುರಗಿ ನೂತನ ವಿದ್ಯಾಲಯ ಪದವಿ ಮಹಾವಿದ್ಯಾಲಯದ ಸಭಾ ಕೋಣೆಯಲ್ಲಿ ಅಂತರರಾಷ್ಟ್ರೀಯ ಯುವ ದಿನಾಚರಣೆ ಹಾಗೂ ಎಎಚ್‌ಐವಿ/ ಏಡ್ಸ್ ಅರಿವಿನ ಮಾಸಾಚರಣೆ-2024ರ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಕಲಬುರಗಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀನಿವಾಸ್ ನವಲೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ಕಲಬುರಗಿ ಟ್ರಸ್ಟಿ ಹಾಗೂ ನೂತನ ವಿದ್ಯಾಲಯ ಸಂಸ್ಥೆಯ ಸದಸ್ಯ ಹಣಮಂತರಾವ್ ಕಣಹಾಳ ಕಾರ್ಯಕ್ರಮದ ಅಧ್ಯಕ್ಷತೆವಹಿಸುವರು. ಕಲಬುರಗಿ ವಿಭಾಗೀಯ ಜಂಟಿ ನಿರ್ದೇಶಕರ ಕಚೇರಿಯ ಜಂಟಿ ನಿರ್ದೇಶಕ ಡಾ. ಎ.ಎಸ್. ರುದ್ರವಾಡಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಕಾರ್ಯಕ್ರಮದಲ್ಲಿ ಕಲಬುರಗಿ ಜಿಲ್ಲಾ ಏಡ್ಸ್ ನಿಯಂತ್ರಣ ಘಟಕದ ಪ್ರಭಾರಿ ಜಿಲ್ಲಾ ಮೇಲ್ವಿಚಾರಕ ಮಲ್ಲಿಕಾರ್ಜುನ ಬಿರಾದಾರ ಅವರು ಉಪನ್ಯಾಸ ನೀಡುವರು.

ಸಮಾಚಾರ ಸಣ್ಣದಲ್ಲ

ಕಾರ್ಮಿಕನ ಕುಟುಂಬಕ್ಕೆ 18 ಲಕ್ಷ ರು. ಪರಿಹಾರ

ಬೆಳಗಾವಿ : ತಾಲ್ಲೂಕಿನ ನಾವಗೆ ಗ್ರಾಮದ ಸ್ನೇಹಂ ಟೇಪಿಂಗ್ ಸಲ್ಯೂಷನ್ಸ್ ಕಾರ್ಖಾನೆಯಲ್ಲಿ ಇತ್ತೀಚೆಗೆ ನಡೆದ ಅಗ್ನಿ ದುರಂತದಲ್ಲಿ ಮೃತಪಟ್ಟ ಕಾರ್ಮಿಕನ ಕುಟುಂಬಕ್ಕೆ ಕಾರ್ಖಾನೆ 18 ಲಕ್ಷ ರು. ಪರಿಹಾರ ನೀಡಿದೆ. ಕಾರ್ಮಿಕ ಯಲ್ಲಗೌಡ ಸಣ್ಣ ಯಲ್ಲಪ್ಪ ಗೌಂಡ್ಯಾಗೋಳ ಅವರ ತಂದೆ ಹಾಗೂ ತಾಯಿಯ ಹೆಸರಿನಲ್ಲಿ ತಲಾ 9 ಲಕ್ಷ ರೂಪಾಯಿ ಮೊತ್ತದ ಚೆಕ್ ಕಾರ್ಖಾನೆಯು ನೀಡಿದೆ. ಮೃತನ ಕುಟುಂಬಕ್ಕೆ ಶನಿವಾರ ಚೆಕ್ ನೀಡಲಾಗುವುದು ಎಂದು ಕಾರ್ಮಿಕ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಕಾರು ಪಲ್ಟಿ: 3 ಸಾವು

ನಾಗಮಂಗಲ: ತಾಲೂಕಿನ ಸಣಬ ಗ್ರಾಮದ ಬಳಿ ಬೆಂಗಳೂರು- ಮಂಗಳೂರು ಹೆದ್ದಾರಿಯಲ್ಲಿ ಕಾರು ಪಲ್ಟಿಯಾಗಿ ಮೂವರು ಮೃತಪಟ್ಟಿದ್ದಾರೆ. ಓರ್ವ ಮಹಿಳೆ ಸ್ಥಳದಲ್ಲೇ ಮೃತಪಟ್ಟಿದ್ದು, ಮತ್ತೊಬ್ಬ ಮಹಿಳೆ ಮತ್ತು ಹೆಣ್ಣು ಮಗು ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ. ಬೆಂಗಳೂರು ಕಡೆಯಿಂದ ಚನ್ನರಾಯಪಟ್ಟಣ ಕಡೆಗೆ ಚಲಿಸುತ್ತಿದ್ದ ಸ್ಯಾಂಟ್ರೋ ಕಾರು ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ. ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಸಾಣೇನಹಳ್ಳಿಯ ಬಿಂದು, ಕಾಳಮ್ಮ ಮತ್ತು ಚಾರ್ವಿ ಮೃತಪಟ್ಟವರು.

ಸಿಬಿಐ ತನಿಖೆಗೆ ಹಿಂಜರಿಕೆ ಏಕೆ?

ಸಿದ್ದರಾಮಯ್ಯಗೆ ಅಶೋಕ್ ಪ್ರಶ್ನೆ | ದೋಸ್ತಿಗಳ ಪಾದಯಾತ್ರೆ ಅಂತ್ಯ , ಇಂದು ಮೈಸೂರಿನಲ್ಲಿ ಸಮಾರೋಪ

ಮೈಸೂರು: ನೀವು ಶುದ್ಧ ಹಸ್ತವಾಗಿದ್ದರೆ, ಭ್ರಷ್ಟರಾಗಿಲ್ಲ ಅಂದರೆ ಯಾವ ಸಿಬಿಐ ಕೂಡ ನಿಮ್ಮನ್ನು ಏನೂ ಮಾಡಲಿಕ್ಕೆ ಆಗೋದಿಲ್ಲ. ನೀವು ತಪ್ಪು ಮಾಡಿಲ್ಲ ಅಂದ್ರೆ, ಸಿಬಿಐಗೆ ಯಾಕೆ ಹೆದರುತ್ತೀರಿ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್, ಸಿಎಂ ಸಿದ್ದರಾಮಯ್ಯ ಅವರನ್ನು ಮಾರ್ಮಿಕವಾಗಿ ಪ್ರಶ್ನಿಸಿದರು.

ಮೈಸೂರಿನಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ಅಶೋಕ್, ನನ್ನ ನಲವತ್ತು ವರ್ಷದ ರಾಜಕೀಯದಲ್ಲಿ ಶುದ್ಧವಾಗಿದ್ದೇನೆ ಎಂದು ಸಿದ್ದರಾಮಯ್ಯ ನೂರು ಸಲ ಹೇಳಿದ್ದಾರೆ. ಹಾಗಾದರೆ ನೀವು ಶುದ್ಧ ಹಸ್ತವಾಗಿದ್ದರೆ, ಭ್ರಷ್ಟರಾಗಿಲ್ಲ ಅಂದ್ರೆ, ಸಿಬಿಐಗೆ ಯಾಕೆ ಹೆದರುತ್ತೀರಿ ಎಂದು ವಾಗ್ದಾಳಿ ನಡೆಸಿದರು.

ರಾಜೀನಾಮೆ ನೀಡುವವರೆಗೂ ಹೋರಾಟ

ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡುವವರೆಗೂ ಬಿಜೆಪಿ-ಜೆಡಿಎಸ್ ಹೋರಾಟ ಮುಂದುವರಿಸಲಿದೆ ಎಂದ ಅವರು, ನಾನು ತಪ್ಪು ಮಾಡಿಲ್ಲ ಎನ್ನುವ ಕಾಂಗ್ರೆಸ್ ಸಮಾವೇಶ ಇಂದಿಗೆ ಮುಗಿದಿದೆ. ಆದರೆ ಬಿಜೆಪಿ ಮಾತ್ರ ಹೋರಾಟ ನಿಲ್ಲಿಸುವುದಿಲ್ಲ. ಮುಡಾ ಹಗರಣವನ್ನು ಸಿಬಿಐ ತನಿಖೆಗೆ ವಹಿಸಿ ಸಿಎಂ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ಕೊಡುವವರೆಗೂ ನೀಡುವವರೆಗೂ ನಾವು ಕೂಡ ಜಗ್ಗಲ್ಲ-ಬಗ್ಗಲ್ಲ ಎಂದರು.

ಯಾರೇ ಆದರೂ ಶಿಕ್ಷೆಯಾಗಲಿ

ನನ್ನ 40 ವರ್ಷದ ರಾಜಕೀಯ ಜೀವನ ಕ್ಲೀನ್, ಕ್ಲೀನ್, ಕ್ಲೀನ್...ಅಂತಿದ್ದಾರೆ. ನೀವ್ಯಾಕೇ ಕ್ಲೀನ್ ಅಂತ ಹೇಳಿ ಕೊಳ್ಳುತ್ತೀರಿ? ಜನ ನಿಮ್ಮನ್ನು ಕ್ಲೀನ್ ಅಂತ ಹೇಳಬೇಕು. ಅಷ್ಟೊಂದು ಕ್ಲೀನ್ ಆಗಿರುವ ನೀವು ಮುಡಾ ಹಗರಣವನ್ನು ಸಿಬಿಐಗೆ ವಹಿಸಲು ಏಕೇ ಹೆದರುತ್ತಿದ್ದೀರಾ? ನಾವು ಪಾದಯಾತ್ರೆ ಬರುವ ದಾರಿಯಲ್ಲಿ ಅಬ್ಬರದಿಂದ ಏಕೆ ಬರುತ್ತಿದ್ದೀರಾ? ಎಂದು ಅವರು, ಮುಡಾ 50:50 ಅನುಪಾತದ ಯೋಜನೆ ಬಿಜೆಪಿ ಅವಧಿಯಲ್ಲಿ ಜಾರಿಗೆ ಬಂದರೂ, ಬಸವರಾಜ ಬೊಮ್ಮಾಯಿ ಅವರು ಸಿದ್ದರಾಮಯ್ಯ ಅವರಿಗೆ ನಿವೇಶನ ಹಂಚಿಕೆ ಆದೇಶ ಮಾಡಿಲ್ಲ. ಹೀಗಾಗಿ ನಿವೇಶನ ಮಂಜೂರು ಮಾಡಿದವರು ಬಿಜೆಪಿ-ಜೆಡಿಎಸ್-ಕಾಂಗ್ರೆಸ್ ಯಾವ ಪಕ್ಷದವರೇ ಆಗಿದ್ದರೂ ಅವರಿಗೆ ಶಿಕ್ಷೆ ಆಗಲೇಬೇಕು ಎಂದು ಅಶೋಕ್ ಆಗ್ರಹಿಸಿದರು.

ಸರ್ಕಾರಕ್ಕೆ ಆಪತ್ತು: ವಾಲ್ಮೀಕಿ ನಿಗಮದಲ್ಲಿ 187 ಕೋಟಿ ರೂ.ಹಗರಣ ನಡೆದಿತ್ತು. ಆದರೆ ಹಗರಣದಲ್ಲಿ ನಮ್ಮ ಮಂತ್ರಿದು ತಪ್ಪು ಮಾಡಿಲ್ಲ ಅಂತ ಸಮರ್ಥಿಸುತ್ತಿದ್ದರು. ಸಿಬಿಐ-ಇಡಿ ಯಾವಾಗ ಹಗರಣದಲ್ಲಿ ತನಿಖೆಗೆ ಕೈಗೆತ್ತಿಕೊಂಡಾಗ ನಿಗಮದಲ್ಲಿ ಭ್ರಷ್ಟಾಚಾರ ಆಗಿದೆ ಎಂದು ಒಪ್ಪಿಕೊಂಡರು. ಈಗಾಗಲೇ ವಾಲ್ಮೀಕಿ ಹಗರಣದ ತನಿಖೆ ಒಂದು ಹಂತಕ್ಕೆ ಬಂದಿದ್ದು, ಬ್ಯಾಂಕ್ ಅಧಿಕಾರಿಗಳು ಸಿಬಿಐಗೆ ತನಿಖೆಗೆ ವಹಿಸಬೇಕೆಂದು ಆಗ್ರಹಿಸಿದ್ದಾರೆ. ಅದರಂತೆ ಈಗ ಸಿಬಿಐ ತನಿಖೆ ನಡೆಸುತ್ತಿದೆ. ಇದು ಸರ್ಕಾರಕ್ಕೆ ಆಪತ್ತು ತರಲಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾಜಿ ಡಿಸಿಎಂ ಡಾ. ಅಶ್ವತ್ಥ ನಾರಾಯಣ, ರಾಜ್ಯ ಎಸ್ಸಿ ಮೋರ್ಚಾದ ಅಧ್ಯಕ್ಷ ಛಲವಾದಿ ನಾರಾಯಣ, ಮಾಜಿ ಸಚಿವ ಅರವಿಂದ ಬೆಲ್ಲದ, ಶಾಸಕ ಟಿ.ಎಸ್. ಶ್ರೀವತ್ಸ, ರಾಜ್ಯ ಎಸ್ಸಿ ಮೋರ್ಚಾದ ಬಂಗಾರು ಹನುಮಂತ, ಮಾಜಿ ಮೇಯರ್ ಶಿವಕುಮಾರ್ ಇದ್ದರು.

ಮೈಸೂರಿಗೆ ಬಂದ ಪಾದಯಾತ್ರೆ: ರಾಜ್ಯ ಸರ್ಕಾರ ಹಾಗೂ ಸಿಎಂ ಸಿದ್ದರಾಮಯ್ಯ ವಿರುದ್ಧ ಬಿಜೆಪಿ-ಜೆಡಿಎಸ್ ಕೈಗೊಂಡಿರುವ ಮೈಸೂರು ಚಲೋ ಪಾದಯಾತ್ರೆ ಶುಕ್ರವಾರ ಮೈಸೂರಿಗೆ ಆಗಮಿಸಿತು. ಚನ್ನಪಟ್ಟಣ, ರಾಮನಗರ, ಮಂಡ್ಯ ಜಿಲ್ಲೆಗಳಲ್ಲಿ ಸಂಚರಿಸಿದ ಪಾದಯಾತ್ರೆ ಸಿಎಂ ಸಿದ್ದರಾಮಯ್ಯ ತವರಿಗೆ ಆಗಮಿಸಿದೆ. ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಮೈಸೂರಿಗೆ ಆಗಮಿಸಿದ ಪಾದಯಾತ್ರೆಗೆ ಸ್ಥಳೀಯ ಮುಖಂಡರು, ಕಾರ್ಯಕರ್ತರು ಅದ್ದೂರಿ ಸ್ವಾಗತ ನೀಡಿದರು.

ಈ ವೇಳೆ ಪಾದಯಾತ್ರೆ ಮೈಸೂರು ನಗರ ಪ್ರವೇಶಿಸುತ್ತಿದ್ದಂತೆ ನಿಖಿಲ್ ಕುಮಾರಸ್ವಾಮಿ, ರಸ್ತೆಯಲ್ಲಿ ತಲೆಭಾಗಿ ನಮಸ್ಕರಿಸಿದರೆ, ಕಾರ್ಯಕರ್ತರೊಂದಿಗೆ ಹಾಡೊಂದಕ್ಕೆ ಹೆಜ್ಜೆಹಾಕಿ ಗಮನ ಸೆಳೆದರು.

ಪಾದಯಾತ್ರೆ ಸಮಾಪ್ತಿ

ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಸಿದ್ದರಾಮಯ್ಯ ವಿರುದ್ಧ ನಡೆಸುತ್ತಿರುವ ಮೈಸೂರು ಚಲೋ ಪಾದಯಾತ್ರೆ ಆ.10ರಂದು ಅಂತ್ಯಗೊಳ್ಳಲಿದೆ. ಪಾದಯಾತ್ರೆ ಹಿನ್ನೆಲೆಯಲ್ಲಿ ಶನಿವಾರ ಬೆಳಗ್ಗೆ 11ಕ್ಕೆ ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದ್ದು, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ, ಪ್ರತಿಪಕ್ಷ ನಾಯಕ ಆರ್. ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸ್ಥಳೀಯ ಶಾಸಕರಾದ ಜಿ.ಟಿ. ದೇವೇಗೌಡ, ಜಿ.ಡಿ. ಹರೀಶ್ ಗೌಡ, ಟಿ.ಎಸ್. ಶ್ರೀವತ್ಸ, ಮಾಜಿ ಸಚಿವರಾದ ಸಾ.ರಾ.ಮಹೇಶ್, ಅಶ್ವತ್ಥನಾರಾಯಣ ಹಾಗೂ ಸಾವಿರಾರು ಕಾರ್ಯಕರ್ತರು ಭಾಗವಹಿಸಲಿದ್ದಾರೆ.

ಯಾರು ನಿವೃತ್ತಿ.. ಮುಂದೆ ಗೊತ್ತಾಗುತ್ತದೆ

ಮೈಸೂರು: ಯಾರು ನಿವೃತ್ತಿಯಾಗುತ್ತಾರೆ, ಏನು ಆಗುತ್ತಾರೆ ಅಂತಾ ಮುಂದೆ ಗೊತ್ತಾಗುತ್ತದೆ. ನಿವೃತ್ತಿ ಪಡೆಯುವಾಗ ಇನ್ನೊಬ್ಬರ ಬಗ್ಗೆ ಹೇಳೋದು ಸ್ವಾಭಾವಿಕ. ಸಿದ್ದರಾಮಯ್ಯ ಮನಬಂದಂತೆ ಮಾತಾಡುತ್ತಿದ್ದು, ಮಾತಾಡಲಿ ಎಂದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ವಾಗ್ದಾಳಿ ನಡೆಸಿದ್ದಾರೆ.

ಜೆಪಿ, ಜೆಡಿಎಸ್ ಪಾದಯಾತ್ರೆಗೆ ಭಾಗಿಯಾಗಲು ಮೈಸೂರಿಗೆ ಆಗಮಿಸಿ ಚಾಮುಂಡೇಶ್ವರಿ ದರ್ಶನ ಪಡೆದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ನನ್ನ ನಿವೃತ್ತಿ ಬಗ್ಗೆ ಮಾತನಾಡಿದ್ದು, ಕೋರ್ಟ್ ನಲ್ಲಿ ಪೋಕ್ಸೋ ಕೇಸ್‌ನ ತೀರ್ಮಾನ ಹೊರ ಬಂದಾಗ ಬಂದಾಗ ಎಲ್ಲಾ ಬಹಿರಂಗವಾಗುತ್ತೆ. ಅಲ್ಲಿಯವರೆಗೂ ಏನು ಮಾತನಾಡಲ್ಲ. ಅದಾದ ಬಳಿಕ ಸಿದ್ದರಾಮಯ್ಯಗೆ ಉತ್ತರ ಸಿಗುತ್ತೆ. ಸಿದ್ದರಾಮಯ್ಯ ಹತಾಶೆಯ ಮನೋಭಾವದಲ್ಲಿ ಇರೋದನ್ನು ಜನರೇ ತೀರ್ಮಾನ ಮಾಡಲಿದ್ದು, ನಾನು ತಪ್ಪು ಮಾಡಿಲ್ಲ ಎಂದಿರುವ ಅವರು, ಆದರೆ ತಮ್ಮ ಪತ್ನಿಗೆ ಬೆಲೆಬಾಳುವ ಸೈಟ್ ಕೊಟ್ಟಿದ್ದಾರೆ ಎಂದರು.



ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ವಾಗ್ದಾಳಿ

ಮೂರು ಲಕ್ಷಕ್ಕೂ ಅಧಿಕ ಜನ ಬೃಹತ್ ಸಮಾವೇಶದಲ್ಲಿ ಭಾಗವಹಿಸಲಿದ್ದು, ಪಾದಯಾತ್ರೆಗೆ ಜನರಿಂದ ಉತ್ತಮ ಪ್ರತಿಕ್ರಿಯೆ ಸಿಗುತ್ತಿದ್ದು, ಭ್ರಷ್ಟ ಸರಕಾರ ಕಿತ್ತೊಗೆಯಲು ಪಾದಯಾತ್ರೆ ಮಾಡುತ್ತಿದ್ದು, ಸರಕಾರದ ವಿರುದ್ಧ ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ ಎಂದರು.

ಸಿದ್ದರಾಮಯ್ಯ ಶಕ್ತಿ ಪ್ರದರ್ಶನ

← ಮೊದಲಪುಟದಿಂದ

ಮೈಸೂರಿನಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ, ಸಚಿವ ಸಂಪುಟದ ಬಹುತೇಕ ಸಚಿವರು, ಶಾಸಕರು, ಪರಿಷತ್ ಸದಸ್ಯರು ಸೇರಿದಂತೆ ಕಾಂಗ್ರೆಸ್ ಪ್ರಮುಖರು ಭಾಗವಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಬ್ಯಾಟ್ ಬೀಸಿದರು. ಕಾಂಗ್ರೆಸ್‌ನಲ್ಲಿ ಬಣ ರಾಜಕೀಯಗಳಿವೆ ಎನ್ನುವ ಆರೋಪಗಳಿಗೆಲ್ಲ ಉತ್ತರದ ರೀತಿಯಲ್ಲಿ ಕಾಂಗ್ರೆಸ್ ನಾಯಕರು ಒಂದೇ ಧ್ವನಿಯಲ್ಲಿ ದೋಸ್ತಿಗಳ ವಿರುದ್ಧ ಮುಗಿಬೀಳುವ ಮೂಲಕ ಎಲ್ಲ ಗೊಂದಲಗಳಿಗೆ ತೆರೆ ಎಳೆದರು.

ಸಮಾವೇಶದಲ್ಲಿ ಪಾಲ್ಗೊಂಡ ಕೈ ನಾಯಕರು, ಬಿಜೆಪಿ-ಜೆಡಿಎಸ್ ನಾಯಕರ ವಿರುದ್ಧ ಸತತ ನಾಲ್ಕೂವರೆ ಗಂಟೆಗಳ ಒಬ್ಬರಾದ ನಂತರ ಮತ್ತೊಬ್ಬರು ತೀವ್ರವಾಗಿ ಹರಿಹಾಯ್ದರು. ತಮ್ಮ ಮಾತಿನುದ್ದಕ್ಕೂ ರಾಜ್ಯ ಸರಕಾರ ಮತ್ತು ಸಿಎಂ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸುವ ನಿಟ್ಟಿನಲ್ಲಿ ಪಾದಯಾತ್ರೆ ಮೂಲಕ ಹೋರಾಟ ನಡೆಸುತ್ತಿರುವ ಬಿಜೆಪಿ-ಜೆಡಿಎಸ್ ದೋಸ್ತಿ ನಾಯಕರ ವಿರುದ್ಧ ಕಿಡಿಕಾರಿದರು.

ವೇದಿಕೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಸಚಿವರಾದ ಡಾ.ಜಿ.ಪರಮೇಶ್ವರ್, ಪ್ರಿಯಾಂಕ್ ಖರ್ಗೆ, ದಿನೇಶ್ ಗುಂಡೂರಾವ್, ಬೈರತಿ ಸುರೇಶ್, ಸಂತೋಷ ಲಾಡ್, ಟಿ.ಬಿ.ಜಯಚಂದ್ರ, ಮುನಿಯಪ್ಪ, ಎಚ್.ಸಿ.ಮಹಾದೇವಪ್ಪ, ಜಾರ್ಜ್, ಬೋಸರಾಜು, ಕೆ.ವೆಂಕಟೇಶ್, ಜಮೀರ್ ಅಹ್ಮದ್, ಈಶ್ವರ ಖಂಡ್ರೆ, ಡಾ.ಎಂ.ಸಿ.ಸುಧಾಕರ್, ರಾಜಣ್ಣ, ಶರಣಪ್ರಕಾಶ್ ಪಾಟೀಲ್, ಎಂ.ಬಿ.ಪಾಟೀಲ್, ಸತೀಶ್ ಜಾರಕಿಹೋಳಿ, ಬಿ.ಕೆ.ಹರಿಪ್ರಸಾದ್, ರಾಮಲಿಂಗಾರೆಡ್ಡಿ, ಲಕ್ಷ್ಮೀ ಹೆಬ್ಬಾಳ್ಕರ್, ಕೃಷ್ಣಬೈರೇಗೌಡ ಸೇರಿದಂತೆ ಸಚಿವರು, ಶಾಸಕರು, ಪರಿಷತ್ ಸದಸ್ಯರು ಹಾಗೂ ಪಕ್ಷದ ಪದಾಧಿಕಾರಿಗಳಿದ್ದರು.

ಸಿಎಂ ಮಾತಿನ ಸಾರಾಂಶ?

- ನಾನು ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿರುವುದು ಬಿಜೆಪಿ-ಜೆಡಿಎಸ್ ಹೊಟ್ಟೆ ಉರಿಗೆ ಕಾರಣ
- 40 ವರ್ಷದ ಸಾರ್ವಜನಿಕ ಬದುಕು ತೆರೆದ ಪುಸ್ತಕದಂತಿದೆ; ದುಡ್ಡು ಮಾಡುವುದಿದ್ದರೆ, ಯಾವಾಗಲೋ ಮಾಡಬಹುದಿತ್ತು.
- ದೇಶದಲ್ಲಿ ಕೋಮುವಾದಿ, ಜಾತಿವಾದಿ, ಪಾಳೆಗಾರಿಕೆ ಪ್ರವೃತ್ತಿಯಿರುವವರನ್ನು ರಾಜಕೀಯದಿಂದ ಓಡಿಸಬೇಕಿದೆ
- ಬಿಜೆಪಿ-ಜೆಡಿಎಸ್ ಎಷ್ಟೇ ಪಾದಯಾತ್ರೆ ಮಾಡಿದರೂ ನಾನು ಜಗ್ಗುವುದಿಲ್ಲ. ಬಗ್ಗುವುದಿಲ್ಲ
- ಜನರ ಆಶೀರ್ವಾದ ಇರುವವರೆಗೂ ಯಾರೂ ನನ್ನನ್ನು ಮುಟ್ಟಲು ಸಾಧ್ಯವಿಲ್ಲ; ಕೊನೆಯವರೆಗೆ ಹೋರಾಡುತ್ತೇನೆ
- ಇತ್ತೀಚಿನವರೆಗೂ ಮೈಸೂರಿನಲ್ಲಿ ಮನೆಯಿರಲಿಲ್ಲ. ಈಗ ಕಟ್ಟುತ್ತಿದ್ದೇನೆ. ಎರಡು ಮನೆ ಕಟ್ಟಿದ್ದರೂ, ಸಾಲ ತೀರಿಸಲು ಮಾರಿದ್ದೆ.
- ನನ್ನ ಪತ್ನಿಗೆ ಮುಡಾ ಜಾಗ ನೀಡಿದೆ. ಇದರಲ್ಲಿ ನನ್ನ ಪಾತ್ರವಿಲ್ಲ; ನಮ್ಮಿಂದ ಪಡೆದ ಜಾಗಕ್ಕೂ ಕೊಟ್ಟ ಜಾಗಕ್ಕೂ ಬಹಳ ವ್ಯತ್ಯಾಸ ಇದೆ. ಆದರೂ ನಾವು ಕೇಳಲು ಹೋಗಿಲ್ಲ.
- ಬಿಜೆಪಿ, ಜೆಡಿಎಸ್ ಕಪಟ ಉದ್ದೇಶದಿಂದ ಎಷ್ಟೇ ಪಾದಯಾತ್ರೆ ನಡೆಸಿದರೂ ನಾನು ಹೆದರುವುದಿಲ್ಲ
- ರಾಜಭವನವನ್ನು ದುರುಪಯೋಗಪಡಿಸಿಕೊಂಡು ನನ್ನ ವಿರುದ್ಧ ಷಡ್ಯಂತ್ರ ನಡೆಸುತ್ತಿದ್ದಾರೆ
- ಈ ಷಡ್ಯಂತ್ರದಲ್ಲಿ ಕುಮಾರಸ್ವಾಮಿ, ಯಡಿಯೂರಪ್ಪ, ವಿಜಯೇಂದ್ರ, ಆರ್.ಅಶೋಕ ಸೇರಿದ್ದಾರೆ.

ದಸರಾ: 21ರಂದು ಗಜಪಯಣ

ಮೈಸೂರು: ವಿಶ್ವ ವಿಖ್ಯಾತ ದಸರಾ ಜಂಬೂಸವಾರಿಯಲ್ಲಿ ಪ್ರಧಾನ ಆಕರ್ಷಣೆಯಾದ ಆನೆಗಳನ್ನು ಸಾಂಪ್ರದಾಯಿಕವಾಗಿ ಕಾಡಿನಿಂದ ನಾಡಿಗೆ ಬೀಳ್ಕೊಡಲು ಆ.21ರಂದು ವೀರನಹೊಸಳ್ಳಿಯಲ್ಲಿ ವಿಧ್ಯುಕ್ತವಾಗಿ ಗಜಪಯಣ ಆಯೋಜಿಸಲಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಮೈಸೂರು ಮೃಗಾಲಯದಲ್ಲಿ ಸಂದರ್ಶಕರ ಅನುಕೂಲಕ್ಕಾಗಿ ಲಗ್ಗೇಜು ಕೊಠಡಿ ಮತ್ತು ಹುಲಿ ಮನೆಯ ವೀಕ್ಷಣಾ ಗ್ಯಾಲರಿ ಉದ್ಘಾಟಿಸಿ ಮಾತನಾಡಿದ ಅವರು, 21ರಂದು ಗಜಪಯಣದ ದಿನ 9 ಆನೆಗಳಿಗೆ ಪೂಜೆ ಸಲ್ಲಿಸುವ ಮೂಲಕ ವಿಧ್ಯುಕ್ತವಾಗಿ ಪೂಜಿಸಿ ಗಜಪಯಣಕ್ಕೆ ನಾಂದಿ ಹಾಡಲಾಗುವುದು. ನಂತರ ಎರಡನೇ ಹಂತದಲ್ಲಿ 5 ಆನೆಗಳು ಬರಲಿದ್ದು, 4 ಆನೆಗಳನ್ನು ತುರ್ತು ಮೀಸಲಿಟ್ಟುಕೊಳ್ಳಲಾಗುವುದು ಎಂದು ತಿಳಿಸಿದರು.

12ರಂದು ಮುಖ್ಯಮಂತ್ರಿ ಸಭೆ: ಸೋಮವಾರ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ -ಜಿಕೆವಿಕೆ ಆವರಣದಲ್ಲಿ ವಿಶ್ವ ಆನೆ ದಿನದಂದು ಮಾನವ - ಆನೆ ಸಂಘರ್ಷ ನಿರ್ವಹಣೆ ಕುರಿತಂತೆ ಅಂತಾರಾಷ್ಟ್ರೀಯ ಸಮಾವೇಶ ನಡೆಸಲಾಗುತ್ತಿದೆ. ಅಂದು ಮಧ್ಯಾಹ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆಯಲಿರುವ ಉನ್ನತಮಟ್ಟದ ಸಭೆಯಲ್ಲಿ ಆನೆಗಳ ಕುರಿತು ಚರ್ಚಿಸಲಾಗುವುದು ಮತ್ತು ಗಜಪಯಣದ ಆಹ್ವಾನ ಪತ್ರಿಕೆ ಬಿಡುಗಡೆ ಮಾಡಲಾಗುವುದು ಎಂದು ಸಚಿವ ಖಂಡ್ರೆ ತಿಳಿಸಿದರು.

ವನ್ಯಮೃಗ ರಕ್ಷಣಾ ಕೇಂದ್ರ: ಮೈಸೂರು ಹೊರವಲಯದ ಕೂರ್ಗಳ್ಳಿಯಲ್ಲಿ ನಾಲ್ಕು ವನ್ಯಜೀವಿ ರಕ್ಷಣಾ ವಿಭಾಗಗಳಿದ್ದು, ಇತ್ತೀಚೆಗೆ ಮತ್ತೆ 2 ವಿಭಾಗಕ್ಕೆ ಅನುಮೋದನೆ ನೀಡಲಾಗಿದೆ. ಇಲ್ಲಿ ಗಾಯಗೊಂಡ ಅಥವಾ ಗ್ರಾಮಕ್ಕೆ ನುಗ್ಗಿ ಮಾನವ - ವನ್ಯಜೀವಿ ಸಂಘರ್ಷಕ್ಕೆ ಕಾರಣವಾಗಿ ಸೆರೆ ಹಿಡಿದ 8 ಹುಲಿ ಅಥವಾ ಚಿರತೆಗಳನ್ನು ಇಲ್ಲಿ ಸಂರಕ್ಷಿಸಬಹುದು. ಇದರ ಜತೆಗೆ ಕಾಡಿನಲ್ಲಿ ತಾಯಿಯಿಂದ ಬೇರ್ಪಟ್ಟ ಆನೆ ಮರಿಗಳನ್ನು ಪೋಷಿಸಲು ಕೂರ್ಗಳ್ಳಿಯಲ್ಲಿ ಪುನರ್ವಸತಿ ಕೇಂದ್ರ ಸ್ಥಾಪಿಸಲಾಗಿದ್ದು, 2 ಆನೆ ಮರಿ ಮತ್ತು 3 ದೊಡ್ಡ ಆನೆಗಳಿದ್ದು, ಇವುಗಳಿಗಾಗಿಯೇ ವಿಶೇಷವಾಗಿ ಈಜುಕೊಳ ವಿನ್ಯಾಸಗೊಳಿಸಲಾಗಿದೆ ಎಂದರು.

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಂ.ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 25536567/26096832/910/854 ಫ್ಯಾಕ್ಸ್: 080-25536105
ಇ-ಮೇಲ್: purchase@kmf.coop
ಸಂಖ್ಯೆ:ಕಹಾಮ/ಖರೀದಿ/ಟೆಂಡರ್-675/2024-25 ದಿ.08.08.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(KMF/2024-25/IND0876)

ಕರ್ನಾಟಕ ಹಾಲು ಮಹಾಮಂಡಳ ಬೆಂಗಳೂರು ವತಿಯಿಂದ ಕಹಾಮದ ಮಾತೃ ಡೇರಿ, ಯಲಹಂಕ ಘಟಕಕ್ಕೆ ಅವಶ್ಯಕವಿರುವ ವಿವಿಧ ಪ್ಯಾಕಿಂಗ್ ಸಾಮಗ್ರಿಗಳು/ದಿನ ಬಳಕೆ ವಸ್ತುಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಟೆಂಡರ್ ದಾಖಲಾತಿಯುನ್ನು E-Proc ವೆಬ್‌ಸೈಟ್ https://kppp.karnataka.gov.in ನಲ್ಲಿ download ಮಾಡಿಕೊಳ್ಳಬಹುದಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಮೇಲ್ಕಾಣಿಸಿದ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ, ಸಹಾಯವಾಣಿ ಸಂ.8046010000/ 8068948777.
ಟೆಂಡರ್ ಶುರುವಾಗುವ ದಿನಾಂಕ - 09.08.2024, ಪೂರ್ವಬಾವಿ ಸಭೆ - 12.08.2024 ಬೆಳಿಗ್ಗೆ 11.00 ಗಂಟೆಗೆ, ಟೆಂಡರ್ ಅಪ್‌ಲೋಡಿಂಗ್ ಮಾಡಲು ಕಡೆಯ ದಿನಾಂಕ - 19.08.2024 ಸಂಜೆ 5.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ - 21.08.2024 ಬೆಳಿಗ್ಗೆ 11.30 ಗಂಟೆಗೆ, ವಾಣಿಜ್ಯ ಬಿಡ್ ತೆರೆಯುವ ದಿನಾಂಕ - ತಾಂತ್ರಿಕ ಟೆಂಡರ್ ವಿಶ್ಲೇಷಣೆಯ ನಂತರ.
ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು-570 001. ದೂರವಾಣಿ: +91-0821-2520512
ಇಮೇಲ್: mmcrimysore@yahoo.com, ವೆಬ್‌ಸೈಟ್: www.mmcri.karnataka.gov.in
ಸಂಖ್ಯೆ: ಸರಬ/ವಿವ/391/2023-24 ದಿನಾಂಕ: 05.08.2024
ಅಲ್ಪಾವಧಿ ಮರು ಟೆಂಡರ್ ಅಧಿಸೂಚನೆ
ವಿಷಯ : ಈ ವಿದ್ಯಾಲಯದ ಆಡಳಿತ ವ್ಯಾಪ್ತಿಯಲ್ಲಿರುವ ಟ್ರಾಮಾಕೇರ್ ಸೆಂಟರ್ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಶುಶ್ರೂಷಾಧಿಕಾರಿ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಅಲ್ಪಾವಧಿ ಮರು ಟೆಂಡರ್ ಅಹ್ವಾನಿಸಿರುವ ಬಗ್ಗೆ.
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 - ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಆಡಳಿತ ವ್ಯಾಪ್ತಿಯಲ್ಲಿರುವ ಟ್ರಾಮಾಕೇರ್ ಸೆಂಟರ್ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಒಂದು ವರ್ಷದ ಅವಧಿಗೆ ಶುಶ್ರೂಷಾಧಿಕಾರಿ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಒದಗಿಸಲು ನೋಂದಾಯಿತ ಅಥವಾ ಮಾನ್ಯತೆ ಪಡೆದ ಸಂಸ್ಥೆಗಳಿಂದ ಅಲ್ಪಾವಧಿ ಮರು ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯುನ್ನು ಇ-ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಮೂಲಕ ದಿನಾಂಕ 09.08.2024 ರಿಂದ ಪಡೆಯಬಹುದಾಗಿದ್ದು, ದಿನಾಂಕ 23.08.2024 ರಂದು ಅಪರಾಹ್ನ 5.00 ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.
ಸಹಿ/- ನಿರ್ದೇಶಕರು ಮತ್ತು ಡೀನ್,
ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು
DIPR/MYS/KAVITA/398/2024-25

ಕರ್ನಾಟಕ ಸರ್ಕಾರ
ಪಟ್ಟಣ ಪಂಚಾಯತ ಕಾರ್ಯಾಲಯ, ನಾಲತವಾಡ
ವೆಬ್‌ಸೈಟ್: www.nalatawadtown.gov.in
ಇ-ಮೇಲ್: itstaff_ulb_nalatwad@yahoo.co.in
ಕ್ರ.ಸಂ:ಪ.ಪಂ.ನಾ/ಎಸ್.ಬಿ.ಎಮ್/ಇ.ಟೆಂ.ಪ್ರ/2023-24 ದಿನಾಂಕ:08.08.2024
ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಈ ಪ್ರಕಟಣೆಯ ಮೂಲಕ ಯಾವತ್ತೂ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಮೂರನೇ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಸನ್ 2023-24 ನೇ ಸಾಲಿನ ಸ್ವಚ್ಛ ಭಾರತ ಮಿಷನ್ ಯೋಜನೆಯ ಅಡಿಯಲ್ಲಿ, ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಗೊಳ್ಳಲು, ಐಟಂವಾರು ಟೆಂಡರ್ ಆಹ್ವಾನಿಸಲಾಗಿದ್ದು, ಅರ್ಹ ಗುತ್ತಿಗೆದಾರರು/ ಪೂರೈಕೆದಾರರು ಈ ಕೆಳಕಂಡ ವೇಳಾ ಪಟ್ಟಿಯಂತೆ ಈ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ K.W-1/2/3 ರ ನಮೂನೆಯಲ್ಲಿ ತಮ್ಮ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದ್ದು ಹಾಗೂ ಹೆಚ್ಚಿನ ವಿವರಗಳಿಗಾಗಿ ಕಾಮಗಾರಿ ವಿಭಾಗದಲ್ಲಿ ಮಾಹಿತಿಯನ್ನು ಪಡೆದುಕೊಳ್ಳಬಹುದು.
1) DMA/2024-25/BD/WORK_INDENT25032,
2) DMA/2024-25/OW/WORK_INDENT20993,
ಸೂಚನೆಗಳು: ಕೆ.ಪಿ.ಪಿ ಪೋರ್ಟಲ್ ಮೂಲಕ ದಾಖಲೆಗಾಗಿ ಇಲಾಖಾ ವೆಬ್‌ಸೈಟ್ https://kppp.karnataka.gov.in ಮೂಲಕ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವದು.
1) ಕೆ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 29.08.2024 ರ ಸಂಜೆ 4.30 ಗಂಟೆಯವರೆಗೆ.
2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30.08.2024 ಸಾಯಂಕಾಲ 5.00 ಗಂಟೆಗೆ.
3)ಆರ್ಥಿಕ ಬಿಡ್ ತೆರೆಯುವ ದಿನಾಂಕ:31.08.2024 ಸಾಯಂಕಾಲ 4.30 ಗಂಟೆಗೆ.
ಹೆಚ್ಚಿನ ವಿವರಗಳಿಗಾಗಿ ಪಟ್ಟಣ ಪಂಚಾಯತ ಕಾರ್ಯಾಲಯ ಹಾಗೂ ವೆಬ್‌ಸೈಟ್‌ನಲ್ಲಿ ಮಾಹಿತಿಯನ್ನು ಪಡೆಯಬಹುದು. http://eproc.karnataka.gov.in
ಸಹಿ/- ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ನಾಲತವಾಡ
ಸಹಿ/- ಆಡಳಿತಾಧಿಕಾರಿಗಳು ಪಟ್ಟಣ ಪಂಚಾಯತ ನಾಲತವಾಡ
ವಾಸಾಸಂಇ/ವಿಜಯಪುರ/169/ಕೆಎಸ್‌ಎಂಸಿಎ/2024-25

ಜಂಟಿ ಕೃಷಿ ನಿರ್ದೇಶಕರ ಕಾರ್ಯಾಲಯ, ತುಮಕೂರು ಜಿಲ್ಲೆ, ತುಮಕೂರು
(ಜಿಲ್ಲಾ ಪಂಚಾಯತ್, ತುಮಕೂರು)
ಸಂ:ಜ.ಕೃ.ನಿ/ತ/ಆ-2/ಮ.ಆ.ಕೇ-ಸಿ/ಟೆಂಡರ್/24-25 ದಿ: 06.08.2024
ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
2024-25ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯ ಮಣ್ಣು ಆರೋಗ್ಯ ಕೇಂದ್ರಕ್ಕೆ ಸಿಬ್ಬಂದಿ ಒದಗಿಸಲು ಅಲ್ಪಾವಧಿ ಟೆಂಡರ್‌ಗಳನ್ನು ಕರೆಯಲಾಗಿದೆ.
e-Procurement ಪ್ರಕಾರಗಳಂತೆ (NEFT, OTC, Credit card, Debit card) ರೂ.27018/- (ರೂ ಇಪ್ಪತ್ತೇಳು ಸಾವಿರದ ಹದಿನೆಂಡು ರೂಗಳು ಮಾತ್ರ) ಇ.ಎಂ.ಡಿ. ಮುಂಗಡ ಹಣವನ್ನು ಸಲ್ಲಿಸಬಹುದಾಗಿದೆ. ಪೂರೈಸಬೇಕಾದ ಸಿಬ್ಬಂದಿ ಹಾಗು ಟೆಂಡರ್‌ಗೆ ಸಂಬಂಧಿಸಿದ ಇತರ ಷರತ್ತುಗಳನ್ನು ಮತ್ತು ವಿವರಗಳನ್ನು ಅರ್ಜಿ ನಮೂನೆಯೊಂದಿಗೆ ಲಗತ್ತಿಸಲಾಗಿದ್ದು, ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯ ದೂರವಾಣಿ ಸಂಖ್ಯೆ: 0816-2278474 ಕ್ಕೆ ಕರೆ ಮಾಡಿ ಪಡೆಯಬಹುದಾಗಿದೆ.
ಆನ್‌ಲೈನ್ ನಲ್ಲಿ ಟೆಂಡರ್ ಪ್ರಕಟಿಸುವ ದಿನಾಂಕ: 06.08.2024. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 21.08.2024 ಸಂಜೆ 4.00 ಗಂಟೆ. ಟೆಂಡರ್ ತೆರೆಯುವ ದಿನಾಂಕ: 23.08.2024 ಬೆ. 11.00 ಗಂಟೆ
ಸಹಿ/- ಜಂಟಿ ಕೃಷಿ ನಿರ್ದೇಶಕರು, ತುಮಕೂರು ಜಿಲ್ಲೆ ತುಮಕೂರು
DIPR/TUM/220/KSMCA/2024-25

KARNATAKA STATE POLICE HOUSING AND INFRASTRUCTURE DEVELOPMENT CORPORATION LTD.
59, Richmond road, (Gen K.S. Thimmaiah Road) Bengaluru-25.
(A Government of Karnataka Undertaking)
Phone: 080-25584102/25594893
e-mail eecontractksphc@gmail.com, Website: www.ksphc.org
No. EE/KSPH&IDCL/CNT/TND/07/2024-25/176 Date: 09.08.2024
SHORT TERM NOTICE INVITING TENDER
KSPH & IDCL invites online tender as per KTPP 2000 Act & as per Standard Tender Document through KPPP **https://kppp.karnataka.gov.in** for the Project Management Consultancy Services (PMC) for the work of **Construction of CC Roads and Drains at Hosadurga & Hiriyur Taluka's in Chitradurga District.**
The Interested Consultants / Firms who are having Specific Experience in Project Monitoring Services and having required infrastructure as well as financial capabilities to undertake such services, may participate in the tendering process. The details such as Tender fee, EMD, Tender documents etc., are available on KPPP from **09.08.2024** onwards.
"KSPH & IDCL reserves the right to accept or reject any or all bids without assigning any reasons."
Note: Henceforth any changes / modifications in the tender will be updated only on KPPP.
Sd/-
Executive Engineer-Contracts
DIPR/CP/RO1387/AAPL/2024-25

ಪುರಸಭಾ ಕಾರ್ಯಲಯ, ಮದ್ದೂರು- 571428
Email : itstaff_ulb_maddur@yahoo.com
website : www.maddurtown.mrc.gov.in
ದೂ : 08232-232600/236222 ಫ್ಯಾಕ್ಸ್ : 08232-233021
ನಂ: ಪುಸಮ/ಪ.ಅ/ಟೆಂಡರ್-12/2024-25
ದಿನಾಂಕ:07-08-2024
ಇ-ಪ್ರೆಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
15ನೇ ಹಣಕಾಸು ಹಾಗೂ ಪುರಸಭಾ ಅನುದಾನದಲ್ಲಿ ಮದ್ದೂರು ಪುರಸಭೆಯ ಆರೋಗ್ಯ ವಿಭಾಗದಲ್ಲಿ ಈ ಕೆಳಕಂಡ ಕಾಮಗಾರಿ/ಸೇವೆಯನ್ನು ಒದಗಿಸಲು ಆಸಕ್ತ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದೆ.
ಕ್ರ.ಸಂ : 01. ಕಾಮಗಾರಿ ಹೆಸರು : **ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಫೈರ್ ಹೈಡ್ರಂಟ್ ಅಳವಡಿಸಿ ಚಾಲನೆಗೊಳಿಸುವುದು.** ಅಂದಾಜು ಮೊತ್ತ (ಲಕ್ಷಗಳಲ್ಲಿ) : **4.40**. ಇ.ಎಂ.ಡಿ ಮೊತ್ತ : **ರೂ.11,000/-**. ಇಂಡೆಂಟ್ ಸಂಖ್ಯೆ : **DMA/2024-25/OW/WORK_INDENT25433.**
ಕ್ರ.ಸಂ : 02. ಕಾಮಗಾರಿ ಹೆಸರು : **ಸ್ವಚ್ಛತಾ ಕಾರ್ಮಿಕರಿಗೆ ಬೆಳಗಿನ ಉಪಹಾರವನ್ನು ಪೂರೈಸುವುದು (ದ್ವಿಲಕೋಟೆ ಪದ್ಧತಿ)**. ಅಂದಾಜು ಮೊತ್ತ (ಲಕ್ಷಗಳಲ್ಲಿ) : **11.31**. ಇ.ಎಂ.ಡಿ ಮೊತ್ತ : **ರೂ.28,275/-**. ಇಂಡೆಂಟ್ ಸಂಖ್ಯೆ : **DMA/2024-25/SE3245**
ಇ-ಪ್ರೆಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **23.08.2024ರ ಸಂಜೆ 5.30 ಗಂಟೆಯೊಳಗೆ** ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ತೆರೆಯುವ **ದಿನಾಂಕ:27.08.2024 ರಂದು ಬೆಳಿಗ್ಗೆ 12:30 ಗಂಟೆಗೆ** ರಂದು ಹೆಚ್ಚಿನ ಮಾಹಿತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ನಲ್ಲಿ ಹಾಗೂ ಕಛೇರಿ ವೇಳೆಯಲ್ಲಿ ಆರೋಗ್ಯ ಶಾಖೆಯಲ್ಲಿ ಪಡೆಯಬಹುದಾಗಿದೆ.
ಸಹಿ/-ಮುಖ್ಯಾಧಿಕಾರಿ,
ಪುರಸಭೆ-ಮದ್ದೂರು
ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/238/2024-25

ಜಿಗಣಿ ಪುರಸಭಾ ಕಾರ್ಯಾಲಯ
ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ - 560105.
ದೂರವಾಣಿ ಸಂಖ್ಯೆ : 080-27825780, 080-29760400, Email :- itstaff_ulb_jigani@yahoo.com
ಜಿ.ಪು/ಆ.ಶಾ/ಟೆ.ಪ್ರ/ಸಿ.ಆರ್/03/2023-24 ದಿನಾಂಕ: 09.08.2024
ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ)
ಮುಖ್ಯಾಧಿಕಾರಿ, ಪುರಸಭೆ, ಜಿಗಣಿರವರಿಂದ ಕರ್ನಾಟಕ ಪಾರದರ್ಶಕತೆ ಅಧಿನಿಯಮ 1999 & 2000 ರ ಪ್ರಕಾರ ಪುರಸಭಾ ನಿಧಿಯಡಿಯಲ್ಲಿ ಈ ಕೆಳಕಂಡ ವಿವರಗಳಂತೆ ಟೆಂಡರ್ ಕರೆಯಲಾಗಿರುತ್ತದೆ.
1. Indent no. DMA/2024-25/SE3387
2. Indent no. DMA/2023-24/SE2252/CALL-3
ತಾಂತ್ರಿಕವಾಗಿ ಅರ್ಹತೆ ಹೊಂದಿರುವ ಇಚ್ಛೆಯುಳ್ಳ ಗುತ್ತಿಗೆದಾರರು/ ಸರಬರಾಜುದಾರರು ಕೆಪಿಪಿಪಿ ಪೋರ್ಟಲ್‌ನ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಆರೋಗ್ಯ ಶಾಖೆಯಿಂದ ಮತ್ತು ಕಛೇರಿ ವೆಬ್‌ಸೈಟ್ http://www.jiganitown.mrc.gov.in/ ನಲ್ಲಿ ಪಡೆಯಬಹುದಾಗಿರುತ್ತದೆ. ಕೆಪಿಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 26.08.2024ರ 16:30 ಘಂಟೆವರೆಗೆ. ಬಿಡ್ ತೆರೆಯುವ ದಿನಾಂಕ: 27.08.2024ರ 17.00 ಘಂಟೆಗೆ.
ಸಹಿ/-
ಮುಖ್ಯಾಧಿಕಾರಿಗಳು ಪುರಸಭೆ ಜಿಗಣಿ
ವಾಸಾಸಂಇ/ವಾ.ಪ್ರ/1376/ಎಸ್‌ಎಸ್‌ಸಿ/2024-25

ಪುರಸಭೆ ಕಾರ್ಯಾಲಯ ಆಳಂದ ಜಿ: ಕಲಬುರಗಿ
ಇ-ಮೇಲ್: ka.aland.tmc@gmail.com, ವೆಬ್‌ಸೈಟ್: www.alandatown.mrc.gov.in
No.TMC Aland/SFC & 15TH FIN/2023-24 Date : 08-08-2024
:: ಟೆಂಡರ್ ಪ್ರಕಟಣೆ-(ಈ-ಪ್ರೊಕ್ಯುರ್‌ಮೆಂಟ್ ಮುಖಾಂತರ) ::
ಮುಖ್ಯಾಧಿಕಾರಿಗಳು ಪುರಸಭೆ ಆಳಂದ ಇವರಿಂದ 2023-24ನೇ ಸಾಲಿನ 15ನೇ ಹಣಕಾಸು ಮುಕ್ತ ಅನುದಾನ ಮತ್ತು 15ನೇ ಹಣಕಾಸು ನಿರ್ಭಂದಿತ ಅನುದಾನ ಹಾಗೂ 2023-24ನೇ ಸಾಲಿನ ಎಸ್.ಎಫ್.ಸಿ. ಕ್ಯಾಪಿಟಲ್/ ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ಯೋಜನೆ ಅನುದಾನದ ಅಡಿಯಲ್ಲಿ ವಿವಿಧ ಕಾಮಗಾರಿಗಳ ಕರ್ನಾಟಕ ಪಾರದರ್ಶಕ ನಿಯಮದಂತೆ (ಕೆ.ಟಿ.ಪಿ.ಪಿ-2000) ರನ್ವಯ Standared Bid Document ಟೆಂಡರ ಕರೆಯಲಾಗಿದ್ದು, ಲೋಕೊಪಯೋಗಿ ಇಲಾಖೆಯಲ್ಲಿ ನೊಂದಾಯಿತ ನವಿಕರಿಸಿದ ಅರ್ಹ ಆಸಕ್ತಿಯುಳ್ಳಿ ಗುತ್ತಿಗೆದಾರರು / ಉತ್ಪಾದಕರು / ಅಧಿಕೃತ ಸರಬರಾಜುದರರು ತಮ್ಮ ಮೂಲ ಪ್ರಮಾಣ ಪತ್ರದ ಪ್ರತಿ ಹಾಗೂ ಇತರೆ ಸೂಕ್ತ ದಾಖಲಾತಿಗಳೊಂದಿಗೆ https://kppp.karnataka.gov.in ಅನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ **23-08-2024 ರ 5.30 ಗಂಟೆ** ಒಳಗಾಗಿ ಸಲ್ಲಿಸಲು ಕೋರಲಾಗಿದೆ.
1) ಕಾಮಗಾರಿ/ ಸರಕು/ಸೇವೆಯ ವಿವರ: DMA/2024-25/WS/WORK_INDENT25656- Oth, DMA/2024-25/OW/WORK_INDENT25379-ST, DMA/2024-25/OW/WORK_INDENT25337-Oth, DMA/2024-25/OW/WORK_INDENT25253-SC, DMA/2024-25/HL/WORK_INDENT25226-Oth, 2) ಅನುದಾನದ ವಿವರ: 2023-24ನೇ ಸಾಲಿನ 15ನೇ ಹಣಕಾಸು ಮುಕ್ತ ಅನುದಾನ ಮತ್ತು 15ನೇ ಹಣಕಾಸು ನಿರ್ಭಂದಿತ ಅನುದಾನ ಹಾಗೂ 2023-24ನೇ ಸಾಲಿನ ಎಸ್.ಎಫ್.ಸಿ ಕ್ಯಾಪಿಟಲ್/ ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ಯೋಜನೆ ಅನುದಾನ, 3) ಕಾಮಗಾರಿ, ಸರಕು/ಸೇವೆಯ ಅಂದಾಜು ಮೊತ್ತ: **ಕನಿಷ್ಠ ರೂ : 2.80 ಲಕ್ಷಗಳು ಗರಿಷ್ಠ ರೂ : 83.60 ಲಕ್ಷಗಳು**, 4) ಗುತ್ತಿಗೆದಾರರ ಅರ್ಹತೆ ವಿವರ: ನೋಂದಾಯಿತ ಅರ್ಹ ಗುತ್ತಿಗೆದಾರರು, 5) ಟೆಂಡರ್ ಫಾರಂಗಾಗಿ ಆನ್-ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **23.08.2024 ರಂದು ಸಾ. 5.30 ಗಂಟೆ,** 6) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **26.08.2024 ರಂದು ಬೆ. 11.00 ಗಂಟೆಗೆ,** 7) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: **28.08.2024 ರಂದು ಬೆ. 11.00 ಗಂಟೆಗೆ,** 8) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ, ಕಛೇರಿಯ ವಿಳಾಸ, ದೂರವಾಣಿ ಸಂ.: ಪುರಸಭೆ ಕಾರ್ಯಾಲಯ ಆಳಂದ ಜಿ: ಕಲಬುರಗಿ, 9) ಅಂತರ್ಜಾಲ ತಾಣದ ವಿಳಾಸ: www.alandatown.mrc.gov.in
ಸಹಿ/- ಆಡಳಿತಾಧಿಕಾರಿಗಳು ಪುರಸಭೆ ಆಳಂದ
ಸಹಿ/- ಮುಖ್ಯಾಧಿಕಾರಿ ಪುರಸಭೆ ಆಳಂದ
ವಾ.ಸಾ.ಸಂ.ಇ/ಕಲಬುರಗಿ/313/ಕೆ.ಎಸ್.ಎಂ.ಸಿ.ಎ/2024-25

ತವರಲ್ಲಿ ಸಿದ್ದರಾಮಯ್ಯ ಬೆಂಬಲಕ್ಕೆ ನಿಂತ ಕೈಪಡೆ

ಜನಾಂದೋಲನದಲ್ಲಿ ಒಂದೂವರೆ ಲಕ್ಷಕ್ಕೂ ಹೆಚ್ಚು ಜನ ಭಾಗಿ । ಬಿಜೆಪಿ-ಜೆಡಿಎಸ್ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದ ಸಿದ್ದು, ಡಿಕೆಶಿ

ನಾನ್ಯಾವ ತಪ್ಪೂ ಮಾಡಿಲ್ಲ; ಪಾದಯಾತ್ರೆಗೆ ಜಗ್ಗಲ್ಲ, ಬಗ್ಗಲ್ಲ, ನನ್ನ ಬೆಂಬಲಕ್ಕೆ ಜನರಿರುವ ತನಕ ಯಾರೇನೂ ಮಾಡಲಾಗಲ್ಲ: ಮುಖ್ಯಮಂತ್ರಿ

ವಿಶ್ವವಾಣಿ ಸುದ್ದಿಮನೆ ಮೈಸೂರು

ಮುಡಾ ಪ್ರಕರಣವನ್ನು ಮುಂದಿಟ್ಟುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತವರು ಜಿಲ್ಲೆಯಲ್ಲಿಯೇ ಇರಿಸು-ಮುರುಸು ಮಾಡಬೇಕೆಂಬ ಬಿಜೆಪಿ-ಜೆಡಿಎಸ್ ತಂತ್ರಕ್ಕೆ ತದ್ವಿರುದ್ಧ ಎನ್ನುವ ರೀತಿಯಲ್ಲಿ ಮೈಸೂರಿನಲ್ಲಿ ಸಿದ್ದರಾಮಯ್ಯ ತಮ್ಮ ಶಕ್ತಿ ಪ್ರದರ್ಶನ ಮಾಡಿದ್ದು, ಸುಮಾರು ಒಂದುವರೆ ಲಕ್ಷಕ್ಕೂ ಹೆಚ್ಚು ಮಂದಿಯನ್ನು ಸೇರಿಸಿ ದೋಸ್ತಿಗಳ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಶುಕ್ರವಾರ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಜನಾಂದೋಲನ ರ‍್ಯಾಲಿಯ ಸಮಾರೋಪ ಸಮಾರಂಭದಲ್ಲಿ, ಮುಡಾ, ವಾಲ್ಮೀಕಿ ಹಗರಣದಲ್ಲಿ ಇಕ್ಕಟ್ಟಿಗೆ ಸಿಲುಕಿಸಲು ಮುಂದಾಗಿದ್ದ ಬಿಜೆಪಿ-ಜೆಡಿಎಸ್ ನಾಯಕರ ಅವಧಿಯಲ್ಲಿನ ಭ್ರಷ್ಟಾಚಾರದ ಬಗ್ಗೆ ಕಾಂಗ್ರೆಸ್ ನಾಯಕರು ಧ್ವನಿ ಎತ್ತಿದ್ದಾರೆ. ಅದರಲ್ಲಿಯೂ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವಾಗ್ದಾಳಿಯನ್ನೇ ನಡೆಸಿ, ದಾಖಲೆಗಳ ಸಮೇತ ಆರೋಪಗಳನ್ನು ಹೊರಿಸಿದ್ದಾರೆ.

ಕಾನೂನಾತ್ಮಕವಾಗಿಯೇ ತಮ್ಮ ಪತ್ನಿಗೆ ನಿವೇಶನಗಳು ಹಂಚಿಕೆಯಾಗಿವೆ ಎನ್ನುವ ಮಾತುಗಳನ್ನು ಆಡಿದ ಸಿದ್ದರಾಮಯ್ಯ ಅವರು, 40 ವರ್ಷಗಳ ಕಾಲ ರಾಜಕೀಯ ಜೀವನದಲ್ಲಿದ್ದರೂ ಎಂದಿಗೂ ಭ್ರಷ್ಟಾಚಾರ ನಡೆಸಿಲ್ಲ. ನಡೆಸಿದ್ದರೆ, ಮೈಸೂರಿನಲ್ಲಿ ಕಟ್ಟಿದ್ದ ಎರಡು ಮನೆಗಳನ್ನು ಮಾರುವ ಸ್ಥಿತಿ ಬರುತ್ತಿರಲಿಲ್ಲ ಎನ್ನುವ ಮೂಲಕ ತಮ್ಮದು ತೆರೆದ ಪುಸ್ತಕ ಎನ್ನುವ ಮಾತುಗಳನ್ನು ಆಡಿದರು.

ಮನುವಾದಿಗಳಿಗೆ ಅಧಿಕಾರ ಸಿಕ್ಕರೆ ಸಹಿಸಲ್ಲ

ಒಂದು ಗಂಟೆ ಕಾಲ ಮಾತನಾಡಿದ ಸಿದ್ದರಾಮಯ್ಯ ಅವರು, ಬಿಜೆಪಿ ಹಾಗೂ ಜೆಡಿಎಸ್ ವಿರುದ್ಧ ವಾಗ್ದಾಳಿ ನಡೆಸಿದರು. ಈ ವೇಳೆ ಮಾತನಾಡಿದ ಸಿದ್ದರಾಮಯ್ಯ ಅವರು, ಮನುವಾದಿ ಹಾಗೂ ಜಾತಿವಾದಿಗಳು ಎಂದಿಗೂ ಶೋಷಿತರು ಅಧಿಕಾರ ನಡೆಸುವುದನ್ನು ಸಹಿಸುವುದಿಲ್ಲ. ಕೇಂದ್ರ ಸರಕಾರದ ದ್ವೇಷ ರಾಜಕಾರಣ, ಚುನಾಯಿತ ಸರ್ಕಾರಗಳನ್ನು ಉರುಳಿಸುವ ಬಿಜೆಪಿ , ಜೆಡಿಎಸ್‌ನ ತಂತ್ರ ಫಲಿಸುವುದಿಲ್ಲ ಎಂದು ವಾಗ್ದಾಳಿ ನಡೆಸಿದರು.

ಬಿಜೆಪಿ-ಜೆಡಿಎಸ್ ಎಷ್ಟೇ ಪಾದಯಾತ್ರೆ ಮಾಡಿದರೂ ನಾನು ಜಗ್ಗುವುದಿಲ್ಲ. ಬಗ್ಗುವುದಿಲ್ಲ. ಬಡವರು, ಅಲ್ಪಸಂಖ್ಯಾತರು, ದಲಿತರು, ರೈತರಿಗೆ ನ್ಯಾಯ ಸಿಗಬೇಕೆಂದು ನಾನು ಹೋರಾಟ ಮಾಡಿದ್ದು, ಬದುಕಿರುವವರೆಗೂ ಹೋರಾಟ ಮಾಡುತ್ತೇನೆ. ದೇವರಾಜ ಅರಸು ಅವರ ನಂತರ ಐದು ವರ್ಷಗಳ ಅಧಿಕಾರ ಪೂರ್ಣಗೊಳಿಸಿ, ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದರೆ ಅದರೂ ನಾನು ಮಾತ್ರ. ಆದ್ದರಿಂದ ಬಿಜೆಪಿ-ಜೆಡಿಎಸ್ ಅವರಿಗೆ ಹೊಟ್ಟೆ ಉರಿ ಎಂದು ಟೀಕಿಸಿದರು.

ನಿಮ್ಮ (ಜನರ) ಆಶೀರ್ವಾದ ಇರುವವರೆಗೂ ಯಾರೂ ಸಹ ನನ್ನನ್ನು ಮುಟ್ಟಲು ಸಾಧ್ಯವಿಲ್ಲ. ಬಿಜೆಪಿ-ಜೆಡಿಎಸ್‌ನವರು ನನ್ನನ್ನು ಹಾಗೂ ನಮ್ಮ ಸರಕಾರ ಅಲುಗಾಡಿಸಲು ಎಷ್ಟೇ ಪ್ರಯತ್ನ ನಡೆಸಿದರೂ, ನಿಮ್ಮ ಆಶೀರ್ವಾದ, ಪ್ರೀತಿ, ಅಭಿಮಾನ ಇರುವವರೆಗೂ ನನ್ನನಾಗಲಿ, ಸರ್ಕಾರವನ್ನಾಗಲಿ ಅಲುಗಾಡಿಸಲು ಆಗಲ್ಲ. ನೀವೆಲ್ಲರೂ ನನ್ನ ಪರವಾಗಿ ಯೋಧರಂತೆ ಹೋರಾಡುತ್ತೀರಾ ಎಂಬ ನಂಬಿಕೆ ನನಗಿದೆ ಎಂದರು.

ವಾಲ್ಮೀಕಿ ಹಗರಣಕ್ಕೂ ನನಗೂ ಸಂಬಂಧವಿಲ್ಲ

ವಾಲ್ಮೀಕಿ ನಿಗಮ ವಿಚಾರದಲ್ಲಿ ನನ್ನನ್ನು ರಾಜಕೀಯವಾಗಿ ಸಿಲುಕಿಸಲು ಪ್ರಯತ್ನ ಮಾಡಿದರು. ಆದರೆ, ಏನೂ ಮಾಡಲು ಆಗಲಿಲ್ಲ. ಹಗರಣಕ್ಕೂ ಹಣಕಾಸು ಸಚಿವ ಸ್ಥಾನಕ್ಕೂ ಸಂಬಂಧವೇ ಇಲ್ಲ. 84.63ಕೋಟಿ ಹಗರಣ ಆಗಿದೆ. ಅದಕ್ಕೆ ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ಶಾಮೀಲಾಗಿದ್ದಾರೆ ಎಂದು ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. 56 ಕೋಟಿ ಜಪ್ತಿಯಾಗಿದೆ. ಎಸ್‌ಐಟಿ ತನಿಖೆ ನಡೆಸಿದೆ. ಅದು ವಿಫಲವಾದ ಬಳಿಕ ಇದೀಗ ಮುಡಾ ಹಗರಣ ಎಂದು ಹೇಳುತ್ತಾರೆ. ಅದು ಹಗರಣವೇ ಅಲ್ಲ, ಆದರೂ ಹಗರಣ ಹಗರಣ ಎಂದು ಬೊಬ್ಬೆ ಇಡಲು ಶುರು ಮಾಡಿದ್ದಾರೆ. ಅಲ್ಲಿ ನಾನು ಯಾವುದೇ ತಪ್ಪು ಮಾಡಿಲ್ಲ. ಪತ್ರ ಇಲ್ಲ, ಆದೇಶ ಮಾಡಿಲ್ಲ, ಶಿಫಾರಸು ಮಾಡಿಲ್ಲ. ಆದರೂ, ಯಡಿಯೂರಪ್ಪ, ಅಶೋಕ, ವಿಜಯೇಂದ್ರ, ಕುಮಾರಸ್ವಾಮಿ ರಾಜೀನಾಮೆ ಕೇಳಿದ್ದಾರೆ. ಇವರಿಗೆ ಯಾವ ನೈತಿಕತೆ ಇದೆ ಎಂದು ಪ್ರಶ್ನಿಸಿದರು.

ರಾಜಕೀಯದಿಂದ ಓಡಿಸಬೇಕು

ಪ್ರಸ್ತುತ ಸಂದರ್ಭದಲ್ಲಿ ನಮ್ಮ ನಾಡು, ದೇಶದಲ್ಲಿ ಕೋಮುವಾದಿಗಳನ್ನು, ಜಾತಿವಾದಿಗಳನ್ನು, ಪಾಳೆಗಾರಿಕೆ ಪ್ರವೃತ್ತಿ ಇರುವವರನ್ನು ರಾಜಕೀಯದಿಂದ ಓಡಿಸಬೇಕಾದ ಅನಿವಾರ್ಯತೆ ಇದೆ. ಮನುವಾದಿಗಳು, ಜಾತಿವಾದಿಗಳು ಹಾಗೂ ಪಾಳೆಗಾರಿಕೆ ಪ್ರವೃತ್ತಿ ಇರುವವರು ಶೋಷಿತರು ಅಧಿಕಾರ ಮಾಡುವುದನ್ನು ಸಹಿಸುವುದಿಲ್ಲ. ಈ ಹಿಂದೆ ದೇವರಾಜ ಅರಸು, ಎಸ್. ಬಂಗಾರಪ್ಪ, ಎಂ. ವೀರಪ್ಪ ಮೊಯಿಲಿ ಅವರುಗಳಿಗೂ ಇದೇ ರೀತಿ ಆಗಿತ್ತು ಎಂದರು.

ಕಳೆದ 40 ವರ್ಷದಲ್ಲಿ ನನ್ನ ಮೇಲೆ ಯಾವುದೇ ಕಪ್ಪು ಚುಕ್ಕೆ ಇಲ್ಲ, ನನ್ನ ರಾಜಕೀಯ ಜೀವನ ತೆರೆದ ಪುಸ್ತಕ, ಇಷ್ಟೆಲ್ಲಾ ಅಧಿಕಾರ ಸಿಕ್ಕರೂ ಆಸ್ತಿ ಮಾಡುವ ವ್ಯಾಮೋಹ ನನಗೆ ಮತ್ತು ನನ್ನ ಕುಟುಂಬಕ್ಕೆ ಬಂದಿಲ್ಲ. ನನ್ನ ಪತ್ನಿ ಎಂದಿಗೂ ಸಾರ್ವಜನಿಕ ಸಭೆಗಳಿಗೆ ಬಂದಿಲ್ಲ, ನಾನು ಮಂತ್ರಿ, ಡಿಸಿಎಂ, ಸಿಎಂ ಆದರೂ, ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೂ ಬಂದಿಲ್ಲ.

- ಸಿದ್ದರಾಮಯ್ಯ ಮುಖ್ಯಮಂತ್ರಿ

ಯಾವುದೇ ಕಪ್ಪು ಚುಕ್ಕೆ ಇಲ್ಲ

ನನ್ನ 40 ವರ್ಷಗಳ ರಾಜಕೀಯದಲ್ಲಿ ನನ್ನ ಮೇಲೆ ಯಾವುದೇ ಕಪ್ಪುಚುಕ್ಕೆ ಇಲ್ಲ, ನನ್ನ ರಾಜಕೀಯ ಜೀವನ ತೆರೆದ ಪುಸ್ತಕವಿದ್ದಂತೆ. ನಾಲ್ಕು ದಶಕದಿಂದ ರಾಜಕೀಯದಲ್ಲಿರುವ ನಾನು 1984ಕ್ಕೆ ಮೊದಲ ಶಾಸಕನಾದ ದಿನದಿಂದ ಇಂದಿನವರೆಗೂ ಅನೇಕ ಖಾತೆಗಳನ್ನು ನಿಭಾಯಿಸುವ ಅವಕಾಶ ಲಭಿಸಿದೆ. ಆದರೆ, ನಿಮ್ಮೆಲ್ಲರ ಆಶೀರ್ವಾದಿಂದ ನಾಲ್ಕು ದಶಕಗಳ ರಾಜಕೀಯದಲ್ಲಿ ಮುಂಚೂಣಿಯಲ್ಲಿರುವ ಅವಕಾಶ ನೀಡಿದ್ದೀರಿ. ನಾನು ಮಂತ್ರಿಯಾಗಿ, 2 ಬಾರಿ ಡಿಸಿಎಂ ಹಾಗೂ 2 ಬಾರಿ ಸಿಎಂ ಆಗಿ ಕೆಲಸ ಮಾಡಿದ್ದೇನೆ. ಇದುವರೆಗೂ ನಾನು ತಪ್ಪು ಮಾಡಿಲ್ಲ, ಮಾಡುವುದೂ ಇಲ್ಲ ಎಂದು ಭರವಸೆ ನೀಡಿದರು.

ಶೂನ್ಯದಿಂದ ರಾಜಕೀಯಕ್ಕೆ ಬಂದವನು ನಾನು

ನಾನು ಝೀರೋದಿಂದ ರಾಜಕೀಯ ಪ್ರಾರಂಭ ಮಾಡಿದ್ದು, 1983ರ ಚುನಾವಣೆಯಲ್ಲಿ ಠೇವಣಿ ಹಣ ಕಟ್ಟಲು ಒಂದು ರುಪಾಯಿ ಸಹ ಇರಲಿಲ್ಲ. ಕೋರ್ಟಿನಲ್ಲಿ ಲಾಯರ್ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಜನರು ನನ್ನನ್ನು ಚುನಾವಣೆಗೆ ನಿಲ್ಲಿಸಿದರು. ಆಗ 250 ರು. ಠೇವಣಿ ಕೂಡ ಕೋರ್ಟ್‌ನಲ್ಲಿ ಕೆಲಸ ಮಾಡುತ್ತಿದ್ದ ಆನಂದ್ ಎಂಬಾತ ಕಟ್ಟಿದ. ಆ ನಂತರದಲ್ಲಿ ಜನರೇ ಹಣ ನೀಡಿ ಚುನಾವಣೆಯಲ್ಲಿ ಗೆಲ್ಲಿಸಿದರು. ಅಂದು ಚುನಾವಣೆಗೆ ಒಟ್ಟು 63,000 ರು. ಖರ್ಚಾಗಿತ್ತು. ನಮ್ಮ ತಂದೆ ಶ್ರೀಮಂತ ಅಲ್ಲ, ಹೊಟ್ಟೆಬಟ್ಟೆಗೆ ನೇರವಾಗಿದ್ದ ಕುಟುಂಬ. ಹೀಗಾಗಿ ರಾಜಕೀಯಕ್ಕೆ ಬರಬೇಡ ಎಂದು ನಮ್ಮ ತಂದೆ ಹೇಳುತ್ತಿದ್ದರು. ತಾಲೂಕು ಬೋರ್ಡ್ ಚುನಾವಣೆಗೆ ನಿಲ್ಲಬೇಕೆಂದು ಒಪ್ಪಿಗೆ ಪಡೆಯಲು ಹೋದಾಗ ನಮ್ಮ ಅಪ್ಪ ಬೇಡ ಎಂದಿದ್ದರು. ಆದರೆ, ನೀವೇನೂ ಹಣ ಕೊಡಬೇಡಿ ಎಂದು ಹೇಳಿದ್ದೆ, ಆಗಲೂ ಒಪ್ಪಿರಲಿಲ್ಲ. ಬಳಿಕ ಊರಿನವರನ್ನೆಲ್ಲಾ ಪಂಚಾಯಿತಿ ಸೇರಿಸಿ, ಎಲ್ಲರೂ ಒಪ್ಪಿದ ಮೇಲೆ ಸ್ಪರ್ಧೆ ಮಾಡಿದೆ. ಹೀಗೆ 1983ರಿಂದ ಈವರೆಗಿನ ನನ್ನ 9 ಚುನಾವಣೆಗಳನ್ನು ಜನರೇ ಗೆಲ್ಲಿಸಿದ್ದು, ನಾನು ಮನೆಯಿಂದ 1 ರೂಪಾಯಿ ಸಹ ತಂದು ಖರ್ಚುಮಾಡಿಲ್ಲ ಎಂದು ತಮ್ಮ ಜೀವನದ ಪ್ರತಿ ಹಂತವನ್ನೂ ತೆರೆದಿಟ್ಟರು.



ಆಸ್ತಿ ಮಾಡುವ ವ್ಯಾಮೋಹವಿಲ್ಲ

ನನ್ನ ನಾಲ್ಕು ದಶಕಗಳ ರಾಜಕೀಯ ಜೀವನದಲ್ಲಿ 15 ಬಜೆಟ್ ಮಂಡಿಸಿದ್ದು, 12-13 ವರ್ಷ ಹಣಕಾಸು ಸಚಿವನಾಗಿದ್ದೆ. ನನಗೆ ಹಣದ ವ್ಯಾಮೋಹವಿದ್ದಿದ್ದರೆ ಕೋಟಿಗಟ್ಟಲೆ ಮಾಡಬಹುದಿತ್ತು. ಇತ್ತೀಚಿನವರೆಗೂ ನನಗೆ ಮೈಸೂರಿನಲ್ಲಿ ಮನೆ ಇರಲಿಲ್ಲ, ಈಗ ಕಟ್ಟುತ್ತಿದ್ದೇನೆ. ಈ ಹಿಂದೆ ಎರಡು ಮನೆ ಕಟ್ಟಿದ್ದರೂ, ಸಾಲ ತೀರಿಸಲು ಮಾರಾಟ ಮಾಡಿದೆ. ನನಗೆ ಸಮಾಜದ ಬಡವರ ಪರವಾಗಿ, ಶೋಷಿತರ ಪರವಾಗಿ ಶಕ್ತಿ ಕೊಟ್ಟು ಮುಖ್ಯವಾಹಿನಿಗೆ ತರಬೇಕೆಂಬ ಹಂಬಲ ಬಿಟ್ಟರೆ, ಆಸ್ತಿ, ಜಮೀನು ಮಾಡುವ, ಕಟ್ಟಡ ಕಟ್ಟುವ ಯಾವ ವ್ಯಾಮೋಹವೂ ಇಲ್ಲ ಎಂದರು.

ಸಿದ್ದರಾಮಯ್ಯ ಹೇಳಿದ್ದೇನು?

- ದೇವೇಗೌಡ ಮತ್ತು ಕುಮಾರಸ್ವಾಮಿ 20-20 ತಿಂಗಳ ಒಪ್ಪಂದಕ್ಕೆ ತಿಲಾಂಜಲಿ ಇಟ್ಟರು. ಬೇರೆಯವರು ಅಧಿಕಾರದಲ್ಲಿದ್ದರೆ ಅವರಿಗೆ ಸಹಿಸಲಾಗಲ್ಲ. ಅವರಿಗೆ ಬೇಕಿರುವುದು ಅವರ ಕುಟುಂಬ ಮಾತ್ರ. ಕೇಂದ್ರದೊಂದಿಗೆ ಸೇರಿ ಸರಕಾರ ದುರ್ಬಲಗೊಳಿಸುವ ದುಷ್ಟ ಪ್ರಯತ್ನ ನಡೆದಿದೆ.
- ಯಡಿಯೂರಪ್ಪ ಅವರಿಗೆ ನಾಚಿಕೆ ಆಗಬೇಕು. ಅವರಿಗೆ 82 ವರ್ಷ. ಈ ವಯಸ್ಸಿನಲ್ಲಿ ಪೋಕ್ಸೋ ಕೇಸಿನಲ್ಲಿ ಸಿಕ್ಕಿಕೊಂಡಿದ್ದಾರೆ. 18-20 ಕೇಸಿನಲ್ಲಿ ಸಿಲುಕಿದ್ದಾರೆ. ವಿಜಯೇಂದ್ರ ಅನೇಕ ಹಗರಣದಲ್ಲಿ ಇದ್ದಾರೆ. ಯತ್ನಾಳ್ ಅವರೇ ಈ ಬಗ್ಗೆ ಹೇಳಿದ್ದಾರೆ. 20 ಸಾವಿರ ಕೋಟಿ ಲೂಟಿ ಹೊಡೆದಿದ್ದಾರೆ.
- ಜಂತಕಲ್ಲು ಪ್ರಕರಣ ಮರೆತುಬಿಟ್ಟರಾ ಕುಮಾರಸ್ವಾಮಿ. ಅಶೋಕ ಭೂಕಬಳಿಕೆ ಮಾಡಿದ್ದಾರೆ. ಸುಪ್ರೀಂ ಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದಾರೆ. ಇವರು ನನ್ನ ರಾಜೀನಾಮೆ ಕೇಳಲು ಯಾವ ಹಕ್ಕಿದೆ.
- ನಾನೆಂದೂ ದ್ವೇಷದ ರಾಜಕೀಯ ಮಾಡಿಲ್ಲ; ಮಾಡಿದ್ದರೆ ಇವರೆಲ್ಲರೂ ಜೈಲಿಗೆ ಹೋಗಬೇಕಾಗುತ್ತದೆ. ಅವರುಗಳಿಂದ ರಾಜಭವನವನ್ನು ದುರುಪಯೋಗಪಡಿಸಿಕೊಳ್ಳುವ ಪ್ರಯತ್ನ ನಡೆದಿದೆ.
- ನನ್ನ ಪತ್ನಿಗೆ ಮುಡಾ ಜಾಗ ನೀಡಿದೆ. ಇದರಲ್ಲಿ ನನ್ನ ಪಾತ್ರ ಇಲ್ಲ. ನಮ್ಮಿಂದ ಪಡೆದ ಜಾಗಕ್ಕೂ ಕೊಟ್ಟ ಜಾಗಕ್ಕೂ ಬಹಳ ವ್ಯತ್ಯಾಸ ಇದೆ. ಶೇ.50ರಷ್ಟು ಜಾಗ ನೀಡಿಲ್ಲ. ನಾನು ಸಿಎಂ ಆಗಿರುವ ತನಕ ಜಾಗ ನೀಡದಂತೆ ನಾನೇ ಹೇಳಿದ್ದೆ. ಅನಂತರ ಮುಡಾದವರೇ ಕೊಟ್ಟಿದ್ದಾರೆ. ಬಡವರ ಪರ ನಾನು ಮಾಡಿದ ಕೆಲಸ ಸಹಿಸಲಾರದೆ ಈ ವಿಚಾರ ಮುಂದೆ ತಂದಿದ್ದಾರೆ.



ಎಲ್ಲೆಡೆ ಜನಸಾಗರ

ಮೈಸೂರಿನಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್ ಜನಾಂದೋಲನ ಸಮಾವೇಶಕ್ಕೆ ಜನಸಾಗರವೇ ಹರಿದುಬಂದಿತ್ತು. ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಸಮಾವೇಶಕ್ಕೆ ಆಗಮಿಸುವವರಿಗಾಗಿ ಸರ್ಕಾರಿ ಹಾಗೂ ಖಾಸಗಿ ಬಸ್ ವ್ಯವಸ್ಥೆ ಕಲ್ಪಿಸಲಾಗಿತ್ತು. ಸಮಾವೇಶ ಹಿನ್ನೆಲೆಯಲ್ಲಿ ಮಹಾರಾಜ ಕಾಲೇಜು ಮೈದಾನದ ಆಸುಪಾಸಿನಲ್ಲಿ ವಾಹನಗಳ ಸಂಚಾರಕ್ಕೆ ಸಂಪೂರ್ಣ ನಿರ್ಬಂಧ ಹೇರಲಾಗಿತ್ತಲ್ಲದೆ, ಬ್ಯಾರಿಕೇಡ್ ಅಳವಡಿಸುವ ಮೂಲಕ ವಾಹನಗಳ ಸಂಚಾರವನ್ನು ನಿಲ್ಲಿಸಲಾಗಿತ್ತು. ಮೈಸೂರು, ಮಂಡ್ಯ, ಕೊಡಗು, ಚಾಮರಾಜನಗರ, ಹಾಸನ, ರಾಮನಗರ ಸಹಿತ ನಾನಾ ಭಾಗಗಳಿಂದ ಒಂದು ಲಕ್ಷಕ್ಕೂ ಹೆಚ್ಚು ಕಾರ್ಯಕರ್ತರು ಮತ್ತು ಜನರು ಭಾಗವಹಿಸಿದ್ದರು. ಪ್ರತಿ ಶಾಸಕರು 20 ಸಾವಿರ ಜನರನ್ನು ಕರೆತರುವಂತೆ ಟಾಸ್ಕ್ ನೀಡಿದ್ದ ಹಿನ್ನೆಲೆ ಹಳೇ ಮೈಸೂರು ಭಾಗದ ಜಿಲ್ಲೆಗಳ ಪ್ರತಿ ತಾಲೂಕಿನಿಂದ ನೂರಾರು ಸಾರಿಗೆ ಬಸ್‌ಗಳಲ್ಲಿ ಸಮಾವೇಶಕ್ಕೆ ಜನರು ಹರಿದು ಬಂದರು. ಇವರ ಜತೆಗೆ ಉತ್ತರ ಕರ್ನಾಟಕದ ಹಾವೇರಿ, ದಾವಣಗೆರೆ, ಕೊಪ್ಪಳ, ಗದಗ ಸೇರಿದಂತೆ ಚಿಕ್ಕಬಳ್ಳಾಪುರದಿಂದ ಸಾವಿರಾರು ಜನರು ತಮ್ಮ ನೆಚ್ಚಿನ ನಾಯಕ ಸಿದ್ದರಾಮಯ್ಯ ಅವರನ್ನು ನೋಡಲು ಆಗಮಿಸಿದ್ದರು.

ದೋಸ್ತಿ ರಾಂಗ್ ಟರ್ನ್ ವಿಡಿಯೊ ಪ್ರದರ್ಶನ

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾಷಣ ಮಾಡುವ ವೇಳೆ ಬಿಜೆಪಿ-ಜೆಡಿಎಸ್ ನಾಯಕರು ಈ ಹಿಂದೆ ಪರಸ್ಪರ ವಾಕ್ಸಮರ ನಡೆಸಿದ ವಿಡಿಯೊ ತುಣುಕುಗಳನ್ನು ಪ್ರದರ್ಶಿಸಲಾಯಿತು. ಸಮಾವೇಶದಲ್ಲಿ ಅಳವಡಿಸಲಾಗಿದ್ದ 30ಕ್ಕೂ ಹೆಚ್ಚು ಎಲ್‌ಇಡಿ ಪರದೆಯಲ್ಲಿ ದೋಸ್ತಿ ರಾಂಗ್ ಟರ್ನ್ ಶೀರ್ಷಿಕೆಯಡಿ ಈ ಹಿಂದೆ ಜೆಡಿಎಸ್ ಮತ್ತು ಬಿಜೆಪಿ ನಾಯಕರು ಪರಸ್ಪರ ಬೈದಾಡಿಕೊಂಡಿರುವ ವಿಡಿಯೊ ಬಿತ್ತರಿಸಲಾಯಿತು. ಮೊದಲಿಗೆ ಎಚ್.ಡಿ. ಕುಮಾರಸ್ವಾಮಿ ಪಾದಯಾತ್ರೆ ಉದ್ಘಾಟನೆಗೆ ಪ್ರೀತಂಗೌಡರನ್ನು ಆಹ್ವಾನಿಸಿದ್ದಕ್ಕೆ ಸಿಡಿಮಿಡಿಗೊಂಡು ಆಕ್ರೋಶಭರಿತರಾಗಿ ಮಾತನಾಡಿದ ವಿಡಿಯೊ ಬಿತ್ತರಿಸಲಾಯಿತು. ಬಳಿಕ ಎಚ್.ಡಿ. ದೇವೇಗೌಡ ಬಿ.ಎಸ್. ಯಡಿಯೂರಪ್ಪ ಅವರಿಗೆ ಈ ಹಿಂದೆ ಬಾಯಿಗೆ ಬಂದಂತೆ ಬೈದ ವಿಡಿಯೊ, ಯಡಿಯೂರಪ್ಪ ಸದನದಲ್ಲಿ ಜೆಡಿಎಸ್ ವಿರುದ್ಧ ಮಾತನಾಡಿದ್ದು, ಬಿಎಸ್‌ವೈ ಮತ್ತು ವಿಜಯೇಂದ್ರ ಬಗ್ಗೆ ಬಿಜೆಪಿ ನಾಯಕ ಬಸನಗೌಡ ಪಾಟೀಲ್ ಯತ್ನಾಳ್ ಕಿಡಿಕಾರಿದ ವಿಡಿಯೋ, ಮಾಜಿ ಸಿ.ಪಿ. ಯೋಗೇಶ್ವರ್ ಅವರು ಕುಮಾರಸ್ವಾಮಿ ವಿರುದ್ಧ ಮಾತನಾಡಿರುವುದು, ಎಚ್‌ಡಿಕೆ ಮತ್ತು ಮಾಜಿ ಸಚಿವ ಅಶ್ವತ್ಥನಾರಾಯಣ ಪರಸ್ಪರ ಆರೋಪ ಮಾಡಿಕೊಡಿರುವ ವಿಡಿಯೊಗಳನ್ನು ಬಿತ್ತರಿಸಲಾಯಿತು.

ಪುಸ್ತಕ ಬಿಡುಗಡೆ

ಮುಡಾ ವಿಚಾರದಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ಪಾದಯಾತ್ರೆ ನಡೆಸುತ್ತಿರುವ ದೋಸ್ತಿ ಪಕ್ಷಗಳ ನಾಯಕರ ಆರೋಪಕ್ಕೆ ತಿರುಗೇಟು ನೀಡಿದ ಕಾಂಗ್ರೆಸ್ ನಾಯಕರು, ಮುಡಾ ಹಗರಣ ಕುರಿತಾದ ಪುಸ್ತಕವನ್ನು ಬಿಡುಗಡೆ ಮಾಡಿದರು. ಶಾಸಕ ಪೊನ್ನಣ್ಣ ಸಂಪಾದಕತ್ವದಲ್ಲಿ ಹೊರತಂದಿರುವ ಪುಸ್ತಕ ಇದಾಗಿದ್ದು, ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ಪಾತ್ರ ಇಲ್ಲ ಎಂಬ ಸಾರಾಂಶ ಹೊಂದಿದೆ ಎಂದು ಹೇಳಲಾಗಿದೆ.

ಸಿದ್ದರಾಮಯ್ಯ ಬೆನ್ನಿಗೆ ನಾವೆಲ್ಲ ನಿಲ್ಲುತ್ತೇವೆ । ನಿವೇಶನ ಹಂಚಿಕೆಯಲ್ಲಿ ತಪ್ಪಾಗಿದ್ದರೆ, ಯಾರ ಅವಧಿಯಲ್ಲಾಗಿದೆ? । ನಮ್ಮ ಸರಕಾರವನ್ನು 10 ವರ್ಷ ಮುಟ್ಟಲಾಗುವುದಿಲ್ಲ

ದೋಸ್ತಿಗಳ ಭ್ರಷ್ಟಾಚಾರ ಬಯಲಿಗೆಳೆಯುವೆ : ಡಿಕೆಶಿ

ವಿಶ್ವವಾಣಿ ಸುದ್ದಿಮನೆ ಮೈಸೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮುಡಾ ಅಕ್ರಮ ಆರೋಪ ಹೋರಿಸುತ್ತಿರುವ ಬಿಜೆಪಿ-ಜೆಡಿಎಸ್‌ನವರ ಜಾತಕ ಬಿಚ್ಚಿಡುತ್ತೇವೆ. ಕುಮಾರಸ್ವಾಮಿ ಅವಧಿಯಲ್ಲಾಗಿರುವ ಡಿನೋಟಿಫಿಕೇಶನ್ ಪ್ರಕರಣಗಳಿವೆ. ಆ ಎಲ್ಲವನ್ನು ಹೊರಗೆ ತರುತ್ತೇನೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಾಗ್ದಾಳಿ ನಡೆಸಿದ್ದಾರೆ.

ಕಾಂಗ್ರೆಸ್ ವತಿಯಿಂದ ಶುಕ್ರವಾರ ಹಮ್ಮಿಕೊಂಡಿದ್ದ ಜನಾಂದೋಲನಾ ಯಾತ್ರೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಕುಮಾರಸ್ವಾಮಿ ವಿರುದ್ಧ ಸುಮಾರು 50 ಡಿನೋಟಿಫಿಕೇಶನ್ ಪ್ರಕರಣಗಳಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಎಲ್ಲವನ್ನೂ ಹೊರಗೆ ತರುತ್ತೇನೆ. ಬಹಳ ಕ್ಲೀನ್ ಸ್ವಾಮಿಯಂತೆ. ನನಗೆ ಅವರ ವಿಚಾರ ಗೊತ್ತಿರಲಿಲ್ಲ. ಕುಮಾರಸ್ವಾಮಿ ಅವರ ಪ್ರಕರಣದಲ್ಲಿ ವಿಚಾರಣೆ ನಡೆಸಲು ಲೋಕಾಯುಕ್ತದವರು ರಾಜ್ಯಪಾಲರಿಗೂ ಪತ್ರ ಬರೆದಿದ್ದಾರಂತೆ. ಆದರೆ ಕುಮಾರಸ್ವಾಮಿ ಯೂಟರ್ನ್ ಮಾಡಿಕೊಂಡು ಈಗ ಬಿಜೆಪಿ ಮೊರೆಹೋಗಿದ್ದಾರೆ ಎಂದು ಕಟುಟೀಕೆ ಮಾಡಿದರು.

ಮುಡಾ ವಿಚಾರದಲ್ಲಿ ಅಕ್ರಮ ಏನು ನಡೆದಿದೆ? ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಸಹೋದರ ಖರೀದಿಸಿದ ಜಮೀನನ್ನು ಅರಿಶಿನ ಕುಂಕುಮಕ್ಕೆ ಉಡುಗೊರೆಯಾಗಿ ನೀಡಿದ್ದರು. ಆ ಜಮೀನನ್ನು ಮುಡಾದವರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡ ಪರಿಣಾಮ ಅವರು ಪರಿಹಾರ ಅರ್ಜಿ ಹಾಕಿದರು. ನನ್ನಂತಹವನಾಗಿದ್ದರೆ ಶೇ.100ರಷ್ಟು ಪರಿಹಾರ ನೀಡಿ ಎಂದು ಹೋರಾಟ ಮಾಡುತ್ತಿದ್ದೆ. ಆದರೆ, ಪಾರ್ವತಿ ಅವರು ಮುಡಾದವರು 50:50 ಅನುಪಾತದಲ್ಲಿ ಪರಿಹಾರ ಪಡೆಯಲು ಒಪ್ಪಿದರು. ಅವರು ಪರಿಹಾರದ ಅರ್ಜಿ ಹಾಕುವಾಗ ಇಂತಹುದೇ ಜಾಗದಲ್ಲಿ ಪರಿಹಾರ ನೀಡಿ ಎಂದು ಕೇಳಿಲ್ಲ. ಮುಡಾದವರು ತಮ್ಮ ತಪ್ಪಿನ ಅರಿವಾಗಿ ಪಾರ್ವತಿ ಅವರಿಗೆ 14 ನಿವೇಶನ ಹಂಚಿಕೆ ಮಾಡಿದ್ದಾರೆ. ಇದರಲ್ಲಿ ತಪ್ಪೇನಿದೆ? ಸಿದ್ದರಾಮಯ್ಯ ಅವರು ತಮ್ಮ ಪತ್ನಿಗೆ ನಿವೇಶನ ನೀಡಿ ಎಂದು ಒತ್ತಡ ಹಾಕಿದ್ದಾರಾ? ಆದೇಶ ಮಾಡಿದ್ದಾರಾ? ಅಧಿಕಾರ ದುರುಪಯೋಗ ಮಾಡಿದ್ದಾರಾ? ಇಲ್ಲ. ಆದರೂ ಇದನ್ನು ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಏಕೆ ಅಕ್ರಮ ಎಂದು ಕರೆಯುತ್ತಿದ್ದಾರೆ ಎಂದು ಉಪಮುಖ್ಯಮಂತ್ರಿ ಪ್ರಶ್ನಿಸಿದರು.

ಯಾರ ಅವಧಿಯಲ್ಲಿ ನಿವೇಶನ ಕೊಟ್ಟಿರೋದು? ಇದು ತಪ್ಪಾಗಿದ್ದರೆ, ಈ ನಿವೇಶನಗಳನ್ನು ಯಾರ ಕಾಲದಲ್ಲಿ ಕೊಟ್ಟರು? ಬಿಜೆಪಿ ಸರಕಾರದಲ್ಲಿ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದಾಗ ಈ ಪರಿಹಾರ ನಿವೇಶನ ನೀಡಲಾಗಿದೆಯೇ ಹೊರತು, ಸಿದ್ದರಾಮಯ್ಯ ಹಾಗೂ ಬೈರತಿ ಸುರೇಶ್ ಅವರು ಅಧಿಕಾರದಲ್ಲಿದ್ದಾಗಲ್ಲ. ಬಿಜೆಪಿ ನಾಯಕರ ತಟ್ಟೆಯಲ್ಲಿ ಹೆಗ್ಗಣಗಳಿವೆ. ಸಿದ್ದರಾಮಯ್ಯ ಅವರು ಬಿಜೆಪಿ ಆಡಳಿತ ಅವಧಿಯಲ್ಲಿ ನಡೆದ 25 ಹಗರಣಗಳ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಭೋವಿ ನಿಗಮ, ಬಿಟ್ ಕಾಯಿನ್, ಯಡಿಯೂರಪ್ಪ ಹಗರಣ, ಪಿಎಸ್ ಐ ನೇಮಕಾತಿ ಹಗರಣ ಸೇರಿದಂತೆ ಅನೇಕ ಹಗರಣಗಳಿವೆ ಎಂದು ಎಚ್ಚರಿಕೆ ನೀಡಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ಸಿದ್ದರಾಮಯ್ಯ ಅವರ ಬೆನ್ನಿಗೆ ನಿಲ್ಲುತ್ತೇವೆ. ರಾಜ್ಯದ ಜನ ಅವರ ಪರವಾಗಿದ್ದಾರೆ. ನೀವು ಅವರನ್ನು ಏನೂ ಮಾಡಲು ಸಾಧ್ಯವಿಲ್ಲ. ನಾವು ನುಡಿದಂತೆ ನಡೆದು ಐದು ಗ್ಯಾರಂಟಿ ಯೋಜನೆ ನೀಡಿದ್ದೇವೆ. ಮುಂದೆಯೂ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ತರಲು ಹೋರಾಟ ಮಾಡುತ್ತೇವೆ. ಕಾಂಗ್ರೆಸ್ ಪಕ್ಷದ ಹಳೆ ಯೋಜನೆಗಳನ್ನು ಹೇಗೆ ತೆಗೆದುಹೊಕಲು ಸಾಧ್ಯವಾಗಿಲ್ಲವೋ, ಅದೇ ರೀತಿ ಗ್ಯಾರಂಟಿ ಯೋಜನೆಗಳನ್ನು ತೆಗೆಯಲು ಸಾಧ್ಯವಿಲ್ಲ ಎಂದು ಹೇಳಿದರು.

ಸಿಎಂ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರು ಎಂದೂ ಅಧಿಕಾರ ದುರ್ಬಳಕೆ ಮಾಡಿಕೊಂಡವರಲ್ಲ. ದೇವಾಲಯಕ್ಕೆ ಹೋದರೂ ಸರದಿ ಸಾಲಿನಲ್ಲಿ ನಿಂತವರು. ನಮ್ಮ ಕುಟುಂಬದವರು ನಮ್ಮ ಜತೆ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದಾರೆ. ಆದರೆ ಸಿದ್ದರಾಮಯ್ಯನವರ ಪತ್ನಿ ಎಂದಿಗೂ ಸಾರ್ವಜನಿಕವಾಗಿ ಕಾಣಿಸಿಕೊಂಡವರಲ್ಲ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆದಾಗಲೂ ಅವರು ಕಾಣಿಸಿಕೊಳ್ಳಲಿಲ್ಲ. ಅಂತಹ ಮಹಿಳೆಯ ಬಗ್ಗೆ ಅಧಿಕಾರ ದುರುಪಯೋಗದ ಆರೋಪ ಮಾಡುತ್ತೀರಲ್ಲಾ, ಇದು ಸಾಧ್ಯವಿಲ್ಲ. ನಿಮ್ಮ ಈ ಪಾಪವನ್ನು ಮುಖ್ಯಮಂತ್ರಿಗಳು ಹಾಗೂ ಪಾರ್ವತಿ ಅವರು ಕ್ಷಮಿಸಿದರೂ ಬೆಟ್ಟದ ಮೇಲಿರುವ ತಾಯಿ ಚಾಮುಂಡೇಶ್ವರಿ ಕ್ಷಮಿಸುವುದಿಲ್ಲ ಎಂದು ಡಿಕೆಶಿ ಪ್ರತಿಪಕ್ಷಗಳಿಗೆ ಎಚ್ಚರಿಕೆ ಕೊಟ್ಟರು.



ಕಾಂಗ್ರೆಸ್ ಅಲ್ಲಾಡಿಸಲು ಸಾಧ್ಯವಿಲ್ಲ

ಮಿಸ್ಟರ್ ಅಶೋಕ್, ಮಿಸ್ಟರ್ ವಿಜಯೇಂದ್ರ ನೀವು ಆಪರೇಷನ್ ಕಮಲದ ಮೂಲಕ ಈ ಹಿಂದೆ ಅನೇಕ ಸರಕಾರ ತೆಗೆದಿದ್ದೀರಿ. ಮಿಸ್ಟರ್ ಕುಮಾರಸ್ವಾಮಿ, ನಿನ್ನ ಮುಖಂಡತ್ವದಲ್ಲಿ ಕೇವಲ 19 ಸೀಟುಗಳನ್ನು ಮಾತ್ರ ಗೆದ್ದಿದ್ದೀರಿ. ಈ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ 136 ಸೀಟು ಗೆದ್ದಿದೆ. ಬ್ರಿಟಿಷರು 200 ವರ್ಷ ಆಳಿದರೂ ಈ ಕಾಂಗ್ರೆಸ್ ಅಳಿಸಲು ಆಗಲಿಲ್ಲ. ಬಡವರ ಶಕ್ತಿಯಿಂದ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಪಕ್ಷವನ್ನು ನೀನು ಎರಡು ಜನ್ಮ ಎತ್ತಿಬಂದರೂ ಅಳಿಸಲು ಸಾಧ್ಯವಿಲ್ಲ. ನೀನು ಏನೇ ಕುತಂತ್ರ ಮಾಡಿದರೂ ಕಾಂಗ್ರೆಸ್ ಅಳಿಸಲು ಸಾಧ್ಯವಿಲ್ಲ ಎಂದು ಏಕವಚನದಲ್ಲಿ ಹರಿಹಾಯ್ದರು. ವಿಜಯೇಂದ್ರ, ಅಶೋಕ್, ಕುಮಾರಸ್ವಾಮಿ ನಿಮಗೆ ಸಿದ್ದರಾಮಯ್ಯನವರ ರಾಜೀನಾಮೆ ಬೇಕಾ? ಮಾಧ್ಯಮಗಳು ನನ್ನನ್ನು ಬಂಡೆ ಎಂದರು. ಕಲ್ಲು ಪ್ರಕೃತಿ, ಕಡಿದರೆ ಆಕೃತಿ, ಪೂಜಿಸಿದರೆ ಸಂಸ್ಕೃತಿ. ಈ ಬಂಡೆ ಸಿದ್ದರಾಮಯ್ಯ ಅವರೊಂದಿಗಿದೆ. ಈ ಬಂಡೆ ಜತೆ 135 ಶಾಸಕರೂ ಇದ್ದಾರೆ. ಕೋಟ್ಯಂತರ ಜನ ಸಿದ್ದರಾಮಯ್ಯನವರ ಜತೆಗಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಳ್ಳಿ. ಹೀಗಾಗಿ ನಿಮ್ಮಿಂದ ಏನೂ ಮಾಡಲು ಸಾಧ್ಯವಿಲ್ಲ ಎಂದು ಎಚ್ಚರಿಕೆ ನೀಡಿದರು.

2023ರಲ್ಲಿ ರಾಜ್ಯದ ಜನರು ನಮಗೆ ಶೇ.43ರಷ್ಟು ಮತ ನೀಡಿದ್ದಾರೆ, ಲೋಕಸಭೆಯಲ್ಲಿ ಶೇ.45ರಷ್ಟು ಮತ ನೀಡಿದ್ದಾರೆ. 1 ಸೀಟು ಹೊಂದಿದ್ದ ನಾವು 9 ಸೀಟು ಗೆದ್ದಿದ್ದೇವೆ. ಜನರ ತೀರ್ಪನ್ನು ನಾವು ಒಪ್ಪುತ್ತೇವೆ. ಈ ಸರಕಾರವನ್ನು ಮುಂದಿನ 10 ತಿಂಗಳಲ್ಲಿ ಅಲ್ಲಾಡಿಸಬಹುದು ಎಂಬುದು ನಿಮ್ಮ ಭ್ರಮೆ. ಯಾವುದೇ ಕಾರಣಕ್ಕೂ ಇದು ಸಾಧ್ಯವಿಲ್ಲ. ಮುಂದಿನ 10 ತಿಂಗಳಲ್ಲ, 10 ವರ್ಷ ಈ ಸರಕಾರವನ್ನು ಮುಟ್ಟಲು ಸಾಧ್ಯವಿಲ್ಲ.

- ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಡಿಕೆ ಮಾತಿನ ಪ್ರಮುಖಾಂಶ

- ವಿಜಯೇಂದ್ರ ನಿಮ್ಮ ತಂದೆ ಎರಡು ಸಾರಿ ರಾಜೀನಾಮೆ ಕೊಟ್ಟದ್ದೇಕೆ..? ನೀನು ಮೈಸೂರಿಗೆ ಬಂದು ಸಭೆ ಮಾಡುವಾಗ ಲಕ್ಷ್ಮೀ ವಿಲಾಸ್ ಬ್ಯಾಂಕ್‌ನಿಂದ ವಿದೇಶಕ್ಕೆ ಆರ್‌ಟಿಜಿಎಸ್ ಮಾಡಿದ್ದೇಕೆ ಎಂದು ಉತ್ತರ ಕೊಡು.
- ಕುಮಾರಸ್ವಾಮಿ ಅವರು ಜೆಡಿಎಸ್‌ನಲ್ಲಿ ಯಾರನ್ನೂ ಬೆಳೆಯಲು ಬಿಡಲಿಲ್ಲ. ಡಿಸಿಎಂ ಆಗಿದ್ದ ಸಿದ್ದರಾಮಯ್ಯ ಅವರನ್ನು ಬಿಡಲಿಲ್ಲ. ದೇವೇಗೌಡರು ಪ್ರಧಾನಿಯಾಗಿದ್ದಾಗ ಅವರ ಪಕ್ಷದಲ್ಲಿ 17 ಸಂಸದರಿದ್ದರು. ಆದರೀಗ ಅಲ್ಲಿ ಒಬ್ಬರೂ ಇಲ್ಲ
- ತಮ್ಮ ಮಕ್ಕಳಿಗೆ ರಾಜಕೀಯ ದಾರಿ ಮಾಡಿಕೊಡಲು ಕುಮಾರಸ್ವಾಮಿ ಅವರು ಜೆಡಿಎಸ್ ನಾಯಕರನ್ನು ಪಕ್ಷದಿಂದ ಹೊರಹಾಕಿದ್ದಾರೆ. ಇದು ಜನತಾದಳದ ಇತಿಹಾಸ.
- ಕುಮಾರಸ್ವಾಮಿ ತನ್ನ ಮಗನಿಗೆ ರಾಜಕೀಯ ಸ್ಥಾನಮಾನ ಸಿಗುತ್ತಿಲ್ಲ ಎಂದು ಅಣ್ಣನ ಮಗನ ವಿರುದ್ಧವೇ ಪಿತೂರಿ ಮಾಡಿ ಅವನ ಮೇಲೂ ಕೇಸ್ ದಾಖಲಾಗುವಂತೆ ಮಾಡಿದ್ದಾರೆ. ಅಂತಹವರು ಸಿದ್ದರಾಮಯ್ಯ ಹಾಗೂ ನನ್ನನ್ನು ಬಿಡುತ್ತಾರಾ?
- ಮೊದಲಿಗೆ ಪೆನ್‌ಡ್ರೈವ್ ಪ್ರಕರಣದಲ್ಲಿ ನನ್ನ ಮೇಲೆ ಆರೋಪ ಮಾಡಿದರು. ನಂತರ ಪ್ರೀತಂಗೌಡನ ಮೇಲೆ ಆರೋಪ ಮಾಡಿದ್ದಾರೆ. ಈ ಹಿಂದೆ ಯಡಿಯೂರಪ್ಪಗೆ ಅಧಿಕಾರ ನೀಡದೆ ಬೆನ್ನಿಗೆ ಚೂರಿ ಹಾಕಿದವರು ಯಾರು?
- ಒಬಿಸಿ ನಾಯಕ ಎರಡನೇ ಬಾರಿಗೆ ಮುಖ್ಯಮಂತ್ರಿ ಆಗಿರುವುದನ್ನು ಸಹಿಸಲಾಗದೆ ದೋಸ್ತಿಗಳು ಅವರ ವಿರುದ್ಧ ಸಂಚು ರೂಪಿಸುತ್ತಿದ್ದಾರೆ.

ಸಂಪಾದಕೀಯ

ದೊಡ್ಡವರ ಒತ್ತುವರಿಯೂ ತೆರವಾಗಲಿ

ಕೇರಳದ ವಯನಾಡು ದುರಂತ, ಶಿರೂರು ಮತ್ತು ಶಿರಾಡಿಯಲ್ಲಿನ ಭೂ ಕುಸಿತ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಅರಣ್ಯ ಇಲಾಖೆ ರಾಜ್ಯದ ಪಶ್ಚಿಮಘಟ್ಟ ಪ್ರದೇಶಗಳ ಅರಣ್ಯ ಪ್ರದೇಶಗಳಲ್ಲಿ ಒತ್ತುವರಿ ತೆರವಿಗೆ ಮುಂದಾಗಿದೆ. ಅರಣ್ಯ ಒತ್ತುವರಿ, ಅಕ್ರಮ ತೋಟಗಳು, ಅನಧಿಕೃತ ರೆಸಾರ್ಟ್‌ಗಳು ಮತ್ತು ಇತರ ನಿರ್ಮಾಣಗಳ ತೆರವು ಕಾರ್ಯಕ್ಕೆ ಕಾರ್ಯಪಡೆ ರಚಿಸಲಾಗಿದೆ. ಅರಣ್ಯ ಸಚಿವ ಈಶ್ವರ್ ಖಂಡ್ರೆ ನೀಡಿದ ಮಾಹಿತಿ ಪ್ರಕಾರ 24 ಗಂಟೆಯಲ್ಲಿ ಚಿಕ್ಕಮಗಳೂರು ಅರಣ್ಯ ವ್ಯಾಪ್ತಿಯಲ್ಲಿ ಈಗಾಗಲೇ ಸುಮಾರು 39 ಎಕರೆ ಒತ್ತುವರಿಯನ್ನು ತೆರವು ಮಾಡಲಾಗಿದೆ. ಪಶ್ಚಿಮಘಟ್ಟ ಪ್ರದೇಶಗಳ ಅರಣ್ಯ ಒತ್ತುವರಿ ಮತ್ತು ಅನಧಿಕೃತ ನಿರ್ಮಾಣಗಳ ತೆರವಿಗೆ 2023ರಲ್ಲೇ ಅರಣ್ಯ ಇಲಾಖೆ ಟಿಪ್ಪಣಿ ಹೊರಡಿಸಿತ್ತು. ಆದರೆ, ಕಾರ್ಯಪಡೆ ರಚನೆಯಾಗಿರಲಿಲ್ಲ. ಈ ಬಾರಿಯ ಭಾರೀ ಮಳೆಯಲ್ಲಿ ಶಿರಾಡಿ, ಚಾರ್ಮಾಡಿ ಘಾಟ್‌ಗಳು, ಶಿರೂರು, ಸಕಲೇಶಪುರ ಸೇರಿದಂತೆ ವಿವಿದೆಡೆ ಭೂಕುಸಿತ ಸಂಭವಿಸಿದೆ. ಇದರಿಂದ ಎಚ್ಚೆತ್ತುಕೊಂಡಿರುವ ಸರಕಾರ ರಾಜ್ಯದ 10 ಜಿಲ್ಲೆಗಳ ವ್ಯಾಪ್ತಿಯ ಪಶ್ಚಿಮಘಟ್ಟ ಮತ್ತು ಇತರ ಘಟ್ಟ ಪ್ರದೇಶಗಳಲ್ಲಿನ ಒತ್ತುವರಿಯನ್ನು ತೆರವು ಮಾಡಲು ಸೂಚಿಸಿದೆ. ಅರಣ್ಯ ಸಚಿವರು ನೀಡಿದ ಮಾಹಿತಿ ಪ್ರಕಾರ 24 ಗಂಟೆಯಲ್ಲಿ ನೂತನ ಕಾರ್ಯಪಡೆ 31 ಎಕರೆ ಅರಣ್ಯ ಒತ್ತುವರಿ ತೆರವು ಮಾಡಿದೆ. ರಾಜ್ಯ ಸರಕಾರ 2015ಕ್ಕೆ ಮುನ್ನ ಜೀವನೋಪಾಯಕ್ಕಾಗಿ ಅರಣ್ಯ ಭೂಮಿ ಒತ್ತುವರಿ ಮಾಡಿರುವವರ ಪಟ್ಟಾ ಭೂಮಿ ಮತ್ತು ಒತ್ತುವರಿ ಭೂಮಿ ಎರಡೂ ಸೇರಿ 3 ಎಕರೆ ಮೀರದಿದ್ದರೆ ಅಂತಹ ಒತ್ತುವರಿ ತೆರವು ಮಾಡುವುದಿಲ್ಲ ಎಂದು ಹೇಳಿದೆ. ಅದೇ ರೀತಿ ಅರಣ್ಯ ಹಕ್ಕು ಕಾಯಿದೆಯಡಿ ಈಗಾಗಲೇ ಅರ್ಜಿ ಸಲ್ಲಿಸಿರುವವರ ಯಾವುದೇ ಮನೆ, ಜಮೀನು ತೆರವು ಮಾಡುವುದಿಲ್ಲ ಎಂದೂ ಸ್ಪಷ್ಟಪಡಿಸಿದೆ. ಆದರೆ ಒತ್ತುವರಿ ಸಾಬೀತಾದ ಪ್ರಕರಣಗಳನ್ನು ತಕ್ಷಣ ತೆರವುಗೊಳಿಸಬೇಕು, ನ್ಯಾಯಾಲಯದಲ್ಲಿರುವ ಪ್ರಕರಣಗಳ ತ್ವರಿತ ಇತ್ಯರ್ಥಕ್ಕೆ ವಾರದಲ್ಲಿ ಎರಡು ದಿನ ಮೀಸಲಿಡಬೇಕು ಎಂದು ಅಧಿಕಾರಿಗಳಿಗೆ ಸಚಿವ ಈಶ್ವರ್ ಖಂಡ್ರೆ ಸೂಚನೆ ನೀಡಿದ್ದಾರೆ. ಸರಕಾರದ ಈ ನಿರ್ಧಾರ ಸ್ವಾಗತಾರ್ಹ. ಆದರೆ ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ದಟ್ಟ ಅರಣ್ಯದೊಳಗೆ ನೂರಾರು ಎಕರೆ ಎಸ್ಟೇಟ್ ಮಾಡಿಕೊಂಡವರು ಸುಪ್ರೀಂಕೋರ್ಟ್ ತನಕ ಕಾನೂನು ಹೋರಾಟ ಮಾಡಿ ತಮ್ಮ ಜಮೀನು ಉಳಿಸಿಕೊಂಡಿದ್ದಾರೆ. ಸರಕಾರದ ಇಂಥವರನ್ನೂ ಒಕ್ಕಲೆಬ್ಬಿಸಿ ಎಲ್ಲರಿಗೂ ಸ್ಪಷ್ಟ ಸಂದೇಶ ಸಾರಬೇಕು. ನಾಗರಹೊಳೆ, ಬಂಡೀಪುರದಲ್ಲಿ ಎಸ್ಟೇಟ್ ದಂಧೆ ನಡೆಸುತ್ತಿರುವ ಅನ್ಯ ರಾಜ್ಯಗಳ ದುಡ್ಡಿನ ಕುಳಗಳನ್ನು ನಿಯಂತ್ರಿಸಲು ಕಾನೂನು ರೂಪಿಸಬೇಕು. ಆಗ ಮಾತ್ರ ಸರಕಾರ ಮತ್ತು ಕಾನೂನು ಎಲ್ಲರಿಗೂ ಒಂದೇ ಎಂಬ ಸಂದೇಶ ರವಾನಿಸಲು ಸಾಧ್ಯ.

ಸೊಂಪಾದಕೀಯ

ಬಿರಿಯಾನಿ ಅಂದ್ರೆ ಹೆದರೋ ಪರಿಸ್ಥಿತಿ!

ನಮ್ಮ ದೇಶದಲ್ಲಿ ಬಿರಿಯಾನಿ ಪ್ರಿಯರಿಗೇನು ಕಮ್ಮಿಯಿಲ್ಲ. ವೆಜ್ ಬಿರಿಯಾನಿ, ನಾನ್-ವೆಜ್ ಬಿರಿಯಾನಿ, ನಾನಾ ವೆರೈಟಿಯ ಬಿರಿಯಾನಿ.. ದೇವನೊಬ್ಬ ನಾಮ ಹಲವು ಎನ್ನುವ ರೀತಿಯಲ್ಲಿ 'ಬಿರಿಯಾನಿ ಒಂದೇ, ಹೆಸರು ಹಲವು' ಎನ್ನುವ ರೀತಿಯಲ್ಲಿ ದೇಶದಲ್ಲಿ ಬಿರಿಯಾನಿಗಳು ಲಭ್ಯವಿದೆ. ಕೇವಲ ವೆಜ್, ನಾನ್ ವೆಜ್ ಅಷ್ಟೇ ಅಲ್ಲದೇ ಊರಿಗೊಂದು ಬಿರಿಯಾನಿಯ ವಿಶೇಷತೆಗಳಿವೆ ಎಂದರೆ ನಂಬಲೇಬೇಕು. ಆದರೆ ಕಳೆದ ವಾರ ಈ ನಾನ್‌ವೆಜ್ ಬಿರಿಯಾನಿ ಪ್ರಿಯರಿಗೆ ಬರ ಸಿಡಿಲಿನಂತಹ ಒಂದು ಸುದ್ದಿ ಬಂದಿತ್ತು. ಅದೇನೆಂದರೆ, ಬೆಂಗಳೂರಿನ ಹಲವು ಭಾಗದಲ್ಲಿ ಮಟನ್ ಬದಲಿಗೆ 'ಬೌ-ಬೌ' ಮಾಂಸ ಅಂದರೆ ನಾಯಿ ಮಾಂಸ ರವಾನೆಯಾಗುತ್ತಿದೆ ಎಂದು. ಬಾಲವನ್ನು ನೋಡಿ, ನಾಯಿ ಎಂದರೂ ಬಳಿಕ ಅದು ಕುರಿ ಮಾಂಸ ಎನ್ನುವುದು ಸಾಬೀತಾಗಿದೆ. ಆದರೆ ಈ ನಾಯಿ ಮಾಂಸದ ಪ್ರಕರಣದಿಂದ ಅದು ಕುರಿ ಮಾಂಸವೆಂದು ಹೇಳುವ ತನಕ ಬೆಂಗಳೂರಲ್ಲಿ ಬಿರಿಯಾನಿ ಅಂದರೆ, ಒಂತರಾ ನೋಡ್ತಾ ಇದ್ದರು. 'ಇವತ್ತು ಬಿರಿಯಾನಿ ಸ್ಪೆಷಲ್' ಅಂದ್ರೆ ಓಡಿ ಹೋಗುತ್ತಿದ್ದವರೆಲ್ಲ ಯಾವ ಮಾಂಸ? ಮಟನ್ ಬಿರಿಯಾನಿ ಅಂದ್ರೆ, ಅದು ನಿಜವಾದ ಕುರಿ ಮಾಂಸ ತಾನೇ ಅಂತ ನಾಯಿ ತರ ಮೂಸಿ ನೋಡೋ ಪರಿಸ್ಥಿತಿ ಎದುರಾಗಿತ್ತು. ಇನ್ನು ಕೆಲವು ಹೋಟೆಲ್‌ಗೆ ಸ್ನೇಹಿತರೊಂದಿಗೆ ಹೋದ ಅನೇಕರು, ವೇಟರ್ ಹತ್ರ 'ಅಣ್ಣಾ ನಿಜ ಹೇಳು ಬಿರಿಯಾನಿಯಲ್ಲಿ ಸಿಗುತ್ತಿರೋ ಪೀಸ್, ಮೊದಲಿಗೆ ಕುರಿಯಾಗಿತ್ತು ತಾನೇ?' ಎಂದ ಕೇಳಿದ್ದೆ ಕೇಳಿದ್ದು. ಈ ಎಲ್ಲದರ ಹೊರತಾಗಿ ಕೊನೆಗೆ ಸಿಕ್ಕಿದ್ದು ರೈಲ್ಲಲ್ಲಿ ಬಂದಿದ್ದು ಕುರಿ ಮಾಂಸವೇ. ಆದರೆ ರಾಜಸ್ಥಾನದಲ್ಲಿರೋ ಕುರಿಗಳಿಗೆ ಬಾಲ ಸ್ವಲ್ಪ ದೊಡ್ಡದು. ಅದಕ್ಕೆ ನಾಯಿಯಂತೆ ಕಾಣುತ್ತಿವೆ ಎಂದು ಅಧಿಕಾರಿಗಳು ಸಮಜಾಯಿಷಿ ನೀಡಿದ್ದಾರೆ. ಇದಕ್ಕೆ ಹೇಳೋದು, ಯಾರ‍್ಯಾರಿಗೆ ಎಷ್ಟೆಷ್ಟು ಇರಬೇಕು ಅಷ್ಟೇ ಇರಬೇಕು. ಅದಕ್ಕಿಂತ ಜಾಸ್ತಿ ಆದ್ರೆ ಹೀಂಗೆಲ್ಲ ಸಮಸ್ಯೆ ಆಗುತ್ತೆ ಅನ್ನೋದು.

ಸಂಪಾದಕರ ಸದ್ಯಶೋಧನೆ

ಹೀಗಿದ್ದರು ಬುದ್ಧದೇವ ಭಟ್ಟಾಚಾರ್ಯ

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಯ ನಿಧನರಾದ ಸುದ್ದಿಯ ವರದಿಗಳನ್ನು ಎಲ್ಲ ಕನ್ನಡ ಮತ್ತು ಇಂಗ್ಲಿಷ್ ಪತ್ರಿಕೆಗಳಲ್ಲಿ ಓದುತ್ತಿದ್ದೆ. ಎಲ್ಲ ಪತ್ರಿಕೆಗಳನ್ನು ಓದಿದ ಬಳಿಕ, ಕೋಲ್ಕೊತಾದಿಂದ ಪ್ರಕಟವಾಗುವ ಪತ್ರಿಕೆಯನ್ನು ಓದದಿದ್ದರೆ ಹೇಗೆ ಎಂದೆನಿಸಿತು. 'ದಿ ಟೆಲಿಗ್ರಾಫ್' ಪತ್ರಿಕೆಯನ್ನು ಓದಿದ ನಂತರವೇ ಸಮಾಧಾನವಾಗಿದ್ದು. Buddhadeb Bhattacharjee, Bengal's last Communist Chief Minister, departs at 80 : THE MARQUEZ MARXIST ಎಂಬ ಎಂಟು ಕಾಲಂ ಶೀರ್ಷಿಕೆಯಲ್ಲಿ, ಇಡೀ ಮುಖಪುಟವನ್ನು ಆ ಸುದ್ದಿಗೆ ಮೀಸಲು ಇಟ್ಟಿತ್ತು. ಅದಲ್ಲದೇ, ಒಳಗಡೆ ಮೂರು ಪೂರ್ಣ ಪುಟಗಳಲ್ಲಿ ಬುದ್ಧದೇವ ನಿಧನ ಸುದ್ದಿಯನ್ನು ಪ್ರಕಟಿಸಿತ್ತು. ಕೋಲ್ಕೊತಾ ಪ್ರೆಸ್ ಕ್ಲಬ್‌ನಲ್ಲಿ ಬುದ್ಧದೇವ ಮಾತಾಡುತ್ತಿರುವ ಫೋಟೋವನ್ನು ಮುಖಪುಟದಲ್ಲಿ ಆರು ಕಾಲಂನಲ್ಲಿ ಪ್ರಕಟಿಸಿತ್ತು. ಅವರ ಹಿಂಬದಿಗೆ ಸಾಹಿತಿ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್ ಜತೆಗಿರುವ ಚಿತ್ರವಿತ್ತು. ಈ ಚಿತ್ರದಿಂದಾಗಿ ಲೀಡ್ ಹೆಡ್ ಲೈನ್ (THE MARQUEZ MARXIST)ಗೆ ಮತ್ತಷ್ಟು ಕಳೆ ಬಂದಿತ್ತು. ಬುದ್ಧದೇವ ಅವರು ಮಾರ್ಕ್ವೆಜ್ ಸಾಹಿತ್ಯಗಳ ಬಹುದೊಡ್ಡ ಅಭಿಮಾನಿಯಾಗಿದ್ದರು ಮತ್ತು ಅವರ ಕೃತಿಗಳನ್ನು ಬಂಗಾಳಿ ಭಾಷೆಗೆ ಅನುವಾದಿಸಿದ್ದರು. ಜಗತ್ತಿನ ಪ್ರಮುಖ ಸಾಹಿತಿ, ಬರಹಗಾರರು, ಚಿಂತಕರ ಕೃತಿಗಳು ಬಿಡುಗಡೆಯಾದರೆ ಅದು ಅವರ ಟೇಬಲ್ ಮೇಲೆ ಇರುತ್ತಿತ್ತು. ಆ ಕೃತಿಯನ್ನು ವಿಮರ್ಶಿಸುವಷ್ಟು ಅವರು ಟಿಪ್ಪಣಿಗಳನ್ನು ಮಾಡಿಕೊಳ್ಳುತ್ತಿದ್ದರು. ಒಮ್ಮೆ ಸಿಪಿಎಂ ಮಾಜಿ ಜನರಲ್ ಸೆಕ್ರೆಟರಿ ಪ್ರಕಾಶ್ ಕಾರಟ್ ಅವರೊಂದಿಗೆ ಲೋಕಾಭಿರಾಮ ಚರ್ಚಿಸುವಾಗ ಬುದ್ಧದೇವ, 'ನೀವು ಸಾರಾಮಗೋ (ಪೂರ್ಣ ಹೆಸರು ಜೋಸಾರಾಮಗೋ. 1998ರಲ್ಲಿ ನೊಬೆಲ್ ಪ್ರಶಸ್ತಿಗೆ ಭಾಜನರಾದ ಪೋರ್ಚುಗೀಸ್ ಸಾಹಿತಿ) ಬರೆದ Blindness ಎಂಬ ಕಾದಂಬರಿಯನ್ನು ಓದಿದ್ದೀರಾ?' ಎಂದು ಕೇಳಿದರಂತೆ. ಅದಕ್ಕೆ ಕಾರಟ್, 'ಇಲ್ಲ' ಎಂದು ಹೇಳಿದರಂತೆ. 'ಕಾರಟ್ ಅವರೇ, ನೀವು ಕಾದಂಬರಿಯನ್ನು ಓದಲೇಬೇಕು. ಕೆಲವು ಕೃತಿಗಳು ಬದುಕಿನ ಬಗ್ಗೆ ನಮಗಿರುವ ಗ್ರಹಿಕೆಗಳನ್ನು ಬದಲಿಸುತ್ತವೆ' ಎಂದು ಬುದ್ಧದೇವ ಹೇಳಿದರಂತೆ. 'ಉತ್ತಮ ಪುಸ್ತಕ ಮತ್ತು ಒಳ್ಳೆಯ ಸಿನಿಮಾಗಳ ಬಗ್ಗೆ ಬುದ್ಧದೇವ ನಮಗೆ ಸದಾ ಹೇಳುತ್ತಿದ್ದರು. ಅವರು ಯಾವತ್ತೂ ಈ ವಿಷಯಗಳಲ್ಲಿ ಅಪ್ಡೇಟ್ ಆಗಿರುತ್ತಿದ್ದರು. ಅವರು ಯಾವಾಗ, ಹೇಗೆ ಸಮಯ ಹೊಂದಿಸಿಕೊಳ್ಳುತ್ತಿದ್ದರೋ ಏನೋ, ನಮಗಂತೂ ಆ ಮನುಷ್ಯನ ಈ ಗುಣ, ಹವ್ಯಾಸ ವಿಸ್ಮಯ ಹುಟ್ಟಿಸುತ್ತಿತ್ತು' ಎಂದು ಕಾರಟ್ ಅನೇಕರ ಮುಂದೆ ಹೇಳಿದ್ದುಂಟು. ಕೋಲ್ಕೊತಾಕ್ಕೆ ಬೇರೆ ದೇಶಗಳ ಪ್ರಧಾನಿ, ರಾಷ್ಟ್ರಾಧ್ಯಕ್ಷರು ಬಂದಾಗ ರವೀಂದ್ರನಾಥ ಟ್ಯಾಗೋರ್ ವಾಸವಾಗಿದ್ದ ನಿವಾಸಕ್ಕೆ ಭೇಟಿ ನೀಡುತ್ತಿದ್ದುದು ಸಾಮಾನ್ಯವಾಗಿತ್ತು. ಆ ಸಂದರ್ಭಗಳಲ್ಲಿ ಸ್ವತಃ ಬುದ್ಧದೇವ ಅವರು, ಗಣ್ಯರಿಗೆ ಟ್ಯಾಗೋರ್ ವ್ಯಕ್ತಿತ್ವ, ವಿಚಾರ ಮತ್ತು ಕೃತಿಗಳ ಬಗ್ಗೆ ವಿವರಿಸುತ್ತಿದ್ದರು. ಮಹಾತ್ಮ ಗಾಂಧಿ ಅವರ ಮೊಮ್ಮಗ ಮತ್ತು ಪಶ್ಚಿಮ ಬಂಗಾಳ ರಾಜ್ಯಪಾಲರಾಗಿದ್ದ ಗೋಪಾಲಕೃಷ್ಣ ಗಾಂಧಿ, ಬುದ್ಧದೇವರನ್ನು Interpreter of Tagore to Presidents ಎಂದು ಕರೆದಿದ್ದಾರೆ. ಸುಮಾರು ಆರು ವರ್ಷಗಳ ಹಿಂದೆ, ಪ್ರಸಿದ್ಧ ಕಮ್ಯುನಿಸ್ಟ್ ನಾಯಕ ಮತ್ತು ವೆನೆಜುವೆಲಾ ಅಧ್ಯಕ್ಷ ಹ್ಯೂಗೋ ಚಾವೆಜ್ ಭಾರತಕ್ಕೆ ಭೇಟಿ ನೀಡಿದಾಗ, ಕೋಲ್ಕೊತಾಕ್ಕೆ ಆಗಮಿಸಿದ್ದರು. ಆ ಸಂದರ್ಭದಲ್ಲಿ ಕೋಲ್ಕೊತಾದಲ್ಲಿ ಏರ್ಪಡಿಸಿದ್ದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಚಾವೆಜ್ ಮಾತಾಡುತ್ತಾ, ಸ್ಪ್ಯಾನಿಷ್ ಭಾಷೆಯಲ್ಲಿ ಟ್ಯಾಗೋರ್ ಅವರ ಕವನವನ್ನು ಪ್ರಸ್ತಾಪಿಸಿದರು. ಚಾವೆಜ್ ಭಾಷಣವನ್ನು ಬಂಗಾಳಿಗೆ ತರ್ಜುಮೆ ಮಾಡುತ್ತಿದ್ದ ಅನುವಾದಕ ಅಥವಾ ದುಭಾಷಿಗೆ ಅದನ್ನು ಹೇಗೆ ವ್ಯಾಖ್ಯಾನಿಸಬೇಕು ಎಂಬುದು ತಿಳಿಯದೇ ಚಡಪಡಿಸುತ್ತಿದ್ದ. ಚಾವೆಜ್ ಹೇಳುವುದಕ್ಕೂ, ಅನುವಾದಕ ತರ್ಜುಮೆ ಮಾಡುವುದಕ್ಕೂ ತಾಳಮೇಳ ಇರಲಿಲ್ಲ. ಇನ್ನು ಸುಮ್ಮನಿದ್ದರೆ ಆಭಾಸವಾಗಬಹುದು ಎಂದು ಭಾವಿಸಿದ ಬುದ್ಧದೇವ ವೇದಿಕೆಯಿಂದ ಎದ್ದು, ಚಾವೆಜ್ ಕಿವಿಯಲ್ಲಿ ಏನೋ ಅಂತರಂಗ ಮಾಡಿ, ಅನುವಾದಕನಿಂದ ಮೈಕ್ ತೆಗೆದುಕೊಂಡು, ಆ ಕವನವನ್ನು ಬಂಗಾಳಿಗೆ ಸ್ಪಷ್ಟವಾಗಿ ಮತ್ತು ಸರಿಯಾಗಿ ಅನುವಾದಿಸಿದರು. ಇದನ್ನು ಕೇಳಿದ ಜನಸಾಗರ ಜೋರಾಗಿ ಚಪ್ಪಾಳೆ ತಟ್ಟಿ ಪ್ರಶಂಸೆ ವ್ಯಕ್ತಪಡಿಸಿತು. ಇದರಿಂದ ಪ್ರೇರಿತರಾದ ಚಾವೆಜ್ ಸ್ಪ್ಯಾನಿಷ್‌ನಲ್ಲಿ ಟ್ಯಾಗೋರರ ಮತ್ತೆರಡು ಕವನಗಳನ್ನು ಹೇಳಿದರು. ಈ ದಿನಗಳಲ್ಲಿ ಸಾಹಿತ್ಯ, ಸಂಗೀತ, ಸಿನಿಮಾ, ಕಲೆ, ನೃತ್ಯಗಳಲ್ಲಿ ಆಸಕ್ತಿಯಿರುವ ಇಂಥ ರಾಜಕಾರಣಿಗಳು ಬಹಳ ಅಪರೂಪ.

ಅಂಬಾನಿಯನ್ನು ಮೀರಿಸಿದ ವಕ್ಫ್ ಮಂಡಳಿ!

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

ವಕ್ಫ್ ಕಾಯಿದೆಯನ್ನು ನೆಹರು ಪ್ರಧಾನಮಂತ್ರಿಯಾಗಿದ್ದ ಕಾಲದಲ್ಲಿ ಕಾಂಗ್ರೆಸ್ ಸರಕಾರದ ಅವಧಿಯಲ್ಲಿ 1954ರಲ್ಲಿ ಸಂಸತ್ತು ಅಂಗೀಕರಿಸಿತ್ತು. ನಂತರ ಅದನ್ನು ರದ್ದುಗೊಳಿಸಿ, 1995ರಲ್ಲಿ ನೂತನ ವಕ್ಫ್ ಕಾಯಿದೆಯನ್ನು ಮತ್ತೊಮ್ಮೆ ಕಾಂಗ್ರೆಸ್ ಅವಧಿಯಲ್ಲಿ ಸಂಸತ್ತಿನಲ್ಲಿ ಅಂಗೀಕರಿಸಲಾಯಿತು. ನೂತನ ಕಾಯಿದೆಯ ಮೂಲಕ ವಕ್ಫ್ ಮಂಡಳಿಗಳಿಗೆ ಮತ್ತಷ್ಟು ಅಧಿಕಾರವನ್ನು ನೀಡಲಾಯಿತು, 2013ರಲ್ಲಿ ಈ ಕಾಯಿದೆಯನ್ನು ಮತ್ತಷ್ಟು ತಿದ್ದುಪಡಿ ಮಾಡಿ, ವಕ್ಫ್ ಮಂಡಳಿಗಳಿಗೆ ಸಿಕ್ಕ ಸಿಕ್ಕ ಆಸ್ತಿಗಳ ಮೇಲೆ ಹಕ್ಕು ಸಾಧಿಸಲು ಅನಿಯಮಿತ ಅಧಿಕಾರವನ್ನು ನೀಡಲಾಯಿತು. ವಿಪರ್ಯಾಸವೆಂದರೆ ವಕ್ಫ್ ಮಂಡಳಿ ಹಕ್ಕು ಸಾಧಿಸುವ ಆಸ್ತಿಗಳ ವಿಚಾರವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದಿಲ್ಲ, ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಮಾರ್ಚ್ 2014ರಂದು, ಲೋಕಸಭೆ ಚುನಾವಣೆ ಪ್ರಾರಂಭವಾಗುವ ಕೆಲವೇ ದಿನಗಳ ಮೊದಲು, ದೆಹಲಿಯ 123 ಪ್ರಮುಖ ಆಸ್ತಿಗಳನ್ನು ದೆಹಲಿ ವಕ್ಫ್ ಮಂಡಳಿಗೆ ಉಡುಗೊರೆಯಾಗಿ ನೀಡಲಾಗಿತ್ತು. ಈ ಕರಾಳ ಕಾನೂನಿಂದ ದೇಶದಲ್ಲಿ ಇಲ್ಲಿಯವರೆಗೆ ಹಿಂದೂಗಳ ಸಾವಿರಾರು ಎಕರೆ ಭೂಮಿ ಪರರ ಪಾಲಾಗಿದೆ. 2022ರಲ್ಲಿ ತಮಿಳುನಾಡು ವಕ್ಫ್ ಮಂಡಳಿಯು 1500 ವರ್ಷಗಳಷ್ಟು ಹಳೆಯದಾದ ಹಿಂದೂ ದೇವಾಲಯ ಸೇರಿದಂತೆ, ತಮಿಳುನಾಡಿನ ಆರು ಗ್ರಾಮಗಳನ್ನು ವಕ್ಫ್ ಆಸ್ತಿ ಎಂದು ಘೋಷಿಸಿತ್ತು. ಗುಜರಾತ್ ವಕ್ಫ್ ಮಂಡಳಿ 'ಸೂರತ್' ನಗರಪಾಲಿಕೆಯ ಕಟ್ಟಡ ತನಗೆ ಸೇರಬೇಕೆಂದು ಹೇಳಿತ್ತು. ಕಂದಾಯ ಇಲಾಖೆಯಲ್ಲಿನ ಕಡತಗಳಲ್ಲಿ ಯಾರ ಹೆಸರೂ ಇಲ್ಲದ ಕಾರಣ, ಹಿಂದೆ ಮೊಘಲರ ಕಾಲದಲ್ಲಿ ಆ ಜಾಗವು ಹಜ್ ಯಾತ್ರಿಗಳ ವಿಶ್ರಾಂತಿ ಸ್ಥಳವಾಗಿತ್ತಂತೆ. ಬ್ರಿಟಿಷರ ಆಡಳಿತದಲ್ಲಿ ಆ ಜಾಗವು ಬ್ರಿಟಿಷ್ ಸರಕಾರದ ವಶಕ್ಕೆ ಹೋಯಿತು. ಸ್ವಾತಂತ್ರ್ಯ ನಂತರ ಆ ಜಾಗವು ಭಾರತ ಸರಕಾರಕ್ಕೆ ಸೇರಿತ್ತು. ತದನಂತರ ಕಂದಾಯ ಇಲಾಖೆಯ ದಾಖಲೆಗಳು ತಿದ್ದುಪಡಿಯಾಗದ ಕಾರಣ, ಮೊಘಲರ ಕಾಲದಲ್ಲಿ ಆ ಜಾಗ 'ವಕ್ಫ್' ಆದ ಕಾರಣ, ಷರಿಯಾ ಕಾನೂನಿನಲ್ಲಿ ವಕ್ಫ್ ಮಂಡಳಿಗೆ ಸೇರಬೇಕೆಂದು ಹೇಳಲಾಯಿತು. ಗುಜರಾತ್ ವಕ್ಫ್ ಮಂಡಳಿ ಹೈಕೋರ್ಟ್‌ನಲ್ಲಿ, ದ್ವಾರಕದಲ್ಲಿರುವ ದ್ವೀಪಗಳು ತನಗೆ ಸೇರಬೇಕೆಂದು ಅರ್ಜಿ ಹಾಕಿತ್ತು. ಅರ್ಜಿಯನ್ನು ತಿರಸ್ಕರಿಸಿದ ನ್ಯಾಯಾಲಯ ಕೃಷ್ಣ ನಗರದಲ್ಲಿನ ದ್ವೀಪಕ್ಕೂ, ವಕ್ಫ್ ಮಂಡಳಿಗೂ ಎಲ್ಲಿಯ ಸಂಬಂಧವೆಂದು ಛೀಮಾರಿ ಹಾಕಿತ್ತು.

ಸರಳವಾಗಿ ಹೇಳುವುದಾದರೆ, ವಕ್ಫ್ ಮಂಡಳಿಯು ಧರ್ಮದ ಹೆಸರಿನಲ್ಲಿ ಆಸ್ತಿಗಳನ್ನು ಪಡೆಯಲು ಅನಿಯಮಿತ ಅಧಿಕಾರವನ್ನು ಹೊಂದಿದೆ. ಇಸ್ಲಾಮಿನ ಪ್ರಕಾರ ಆಸ್ತಿಯೊಂದು ಒಮ್ಮೆ ವಕ್ಫ್‌ನ ಪಾಲಾದರೆ ಅದು ಅಲ್ಲಾಹುವಿನ ಆಸ್ತಿ ಎಂದರ್ಥ. ಷರಿಯಾ ಕಾನೂನಿನ ಪ್ರಕಾರ ಒಮ್ಮೆ ಅಲ್ಲಾಹುವಿಗೆ ನೀಡಿದ ಆಸ್ತಿಯನ್ನು ವಾಪಾಸ್ ಕೇಳುವಂತಿಲ್ಲ. ಆ ಜಾಗದಲ್ಲಿ ಕೇವಲ ಪ್ರಾರ್ಥನೆ ಅಥವಾ ಸೇವಾ ಚಟುವಟಿಕೆಗಳನ್ನಷ್ಟೇ ಮಾಡಬಹುದು. ವಕ್ಫ್‌ನ ಇತಿಹಾಸ ಇಂದು ನೆನ್ನೆಯದಲ್ಲ, ದೆಹಲಿಯ ಸುಲ್ತಾನರ ಕಾಲದಿಂದ ಶುರುವಾದಂತಹ ಪದ್ಧತಿಯಿದು. ಅಂದಿನ ಸುಲ್ತಾನರು ಎರಡು ಹಳ್ಳಿಗಳನ್ನು ಜಾಮಿಯಾ ಮಸೀದಿಗೆಂದು ನೀಡಿರುತ್ತಾರೆ. ಅಲ್ಲಿಂದ ಮುಂದೆ ಆಳಿದ ದೆಹಲಿಯ ಸುಲ್ತಾನರು ತಮ್ಮ ಅವಧಿಯಲ್ಲಿ ಹಲವು ಜಾಗಗಳನ್ನು ವಕ್ಫ್ ಹೆಸರಿನಲ್ಲಿ ನೀಡಿದರು. 19ನೇ ಶತಮಾನದಲ್ಲಿ ಬ್ರಿಟಿಷರ ಅವಧಿಯಲ್ಲಿ ವಕ್ಫ್ ಆಸ್ತಿಯ ವಿವಾದವೊಂದು ಲಂಡನ್‌ನ ನ್ಯಾಯಾಲಯದಲ್ಲಿ ವಿಚಾರಣೆಗೆಂದು ಬಂದಾಗ ನಾಲ್ವರು ಬ್ರಿಟಿಷ್ ನ್ಯಾಯಾಧೀಶರು ವಕ್ಫ್ ಅನ್ನು ವಿನಾಶಕಾರಿ ಅಂಶವೆಂದು ಹೇಳಿದ್ದರು. ಆದರೆ ಬ್ರಿಟಿಷ್ ನ್ಯಾಯಾಧೀಶರ ಆದೇಶವನ್ನು ಮುಸಲ್ಮಾನರು ಒಪ್ಪಲಿಲ್ಲ.

ಅಖಂಡ ಭಾರತ ವಿಭಜನೆಯ ನಂತರ ಪಾಕಿಸ್ತಾನದಿಂದ ಭಾರತಕ್ಕೆ ಬಂದ ಹಿಂದೂಗಳ ಆಸ್ತಿಗಳನ್ನು ಅಲ್ಲಿನ ಮುಸ್ಲಿಮರು ಮತ್ತು ಪಾಕಿಸ್ತಾನ ಸರಕಾರ ಆಕ್ರಮಿಸಿಕೊಂಡಿದೆ. ಆದರೆ ಭಾರತದಿಂದ ಪಾಕಿಸ್ತಾನಕ್ಕೆ ಹೋದ ಮುಸ್ಲಿಮರ ಭೂಮಿಯನ್ನು ಅಂದಿನ ಭಾರತ ಸರಕಾರ ವಕ್ಫ್ ಬೋರ್ಡ್‌ಗಳಿಗೆ ನೀಡಿತು. ಅದರ ನಂತರ 1954 ರಲ್ಲಿ ವಕ್ಫ್ ಬೋರ್ಡ್ ಕಾಯಿದೆಯನ್ನು ಜಾರಿಗೆ ತರಲಾಯಿತು. ಆದರೆ 1995ರಲ್ಲಿ ವಕ್ಫ್ ಕಾಯಿದೆಯನ್ನು ಬದಲಾಯಿಸುವ ಮೂಲಕ ವಕ್ಫ್ ಮಂಡಳಿಗಳಿಗೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಅನಿಯಮಿತ ಹಕ್ಕುಗಳನ್ನು ನೀಡಲಾಯಿತು. ಈ ತಿದ್ದುಪಡಿಯ ನಂತರ ದೇಶದಲ್ಲಿ ಅತ್ಯಂತ ವೇಗವಾಗಿ ವಕ್ಫ್ ಮಂಡಳಿಯ ಆಸ್ತಿ ಹೆಚ್ಚಾಗುತ್ತಾ ಹೋಯಿತು. ವಕ್ಫ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಆಫ್ ಇಂಡಿಯಾದ ಅಂಕಿಅಂಶಗಳ ಪ್ರಕಾರ, ಪ್ರಸ್ತುತ ವಕ್ಫ್ ಬೋರ್ಡ್‌ಗಳು ಹೊಂದಿರುವ ಒಟ್ಟು 8,54,509 ಆಸ್ತಿಗಳು ಎಂಟು ಲಕ್ಷ ಎಕರೆಗೂ ಹೆಚ್ಚಿನ ಭೂಮಿಯಲ್ಲಿ ಹರಡಿಕೊಂಡಿವೆ. ಭಾರತೀಯ ಸೇನೆ ಮತ್ತು ಭಾರತೀಯ ರೈಲ್ವೇಗಳ ನಂತರ ಅತಿ ಹೆಚ್ಚಿನ ಭೂಮಿ ವಕ್ಫ್ ಮಂಡಳಿಗಳ ಬಳಿ ಇದೆ ಎಂದು ತಿಳಿದರೆ ನಿಮಗೆ ಆಶ್ಚರ್ಯವಾಗುತ್ತದೆ.

2009ರಲ್ಲಿ ವಕ್ಫ್ ಮಂಡಳಿಯ ಆಸ್ತಿಗಳು ನಾಲ್ಕು ಲಕ್ಷ ಎಕರೆ ಪ್ರದೇಶದಲ್ಲಿ ದೇಶದಾದ್ಯಂತ ಹರಡಿಕೊಂಡಿತ್ತು, ಅದು 2022ರ ವೇಳೆಗೆ ದುಪ್ಪಟ್ಟಾಗಿದೆ. ವಕ್ಫ್ ಮಂಡಳಿಯು ದೇಶದ ಯಾವುದೇ ಮೂಲೆಯಲ್ಲಿ ಸ್ಮಶಾನದ ಗಡಿ ಗೋಡೆಯನ್ನು ನಿರ್ಮಾಣ ಮಾಡಿದರೂ, ಅದರ ಸುತ್ತಲಿನ ಭೂಮಿಯನ್ನು ತನ್ನ ಆಸ್ತಿ ಎಂದು ಪರಿಗಣಿಸುತ್ತದೆ. ಅಂತೆಯೇ ಅಕ್ರಮ ಮಂದಿರ ಮತ್ತು ಮಸೀದಿಗಳನ್ನು ಕ್ರಮೇಣ ವಕ್ಫ್ ಮಂಡಳಿಯು ತಮ್ಮ ಆಸ್ತಿ ಎಂದು ಘೋಷಿಸಿಕೊಂಡಿರುವ ಹಲವು ಉದಾಹರಣೆಗಳಿವೆ. 1995ರ ವಕ್ಫ್ ಕಾಯಿದೆ ಸೆಕ್ಷನ್ 3 ಪ್ರಕಾರ, ವಕ್ಫ್ ಮಂಡಳಿ ಭೂಮಿಯೊಂದು ಮುಸಲ್ಮಾನರಿಗೆ ಸೇರಿದ್ದು ಎಂದು 'ಯೋಚಿಸದರೆ'ಸಾಕು. ಅದು ವಕ್ಫ್‌ನ ಆಸ್ತಿ ಎಂದು ಪರಿಗಣಿಸಬಹುದು. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ವಕ್ಫ್ ಮಂಡಳಿ ಕೇವಲ 'ಯೋಚಿಸಿದರೆ' ಸಾಕು, ಅದರ ಮಾಲೀಕತ್ವವನ್ನು ಸಾಬೀತುಪಡಿಸಲು ಪುರಾವೆ ನೀಡಬೇಕಾದ ಅಗತ್ಯವಿಲ್ಲ. ನಿಮ್ಮ ಆಸ್ತಿ ನಿಮ್ಮದಲ್ಲ, ಮಂಡಳಿಯದ್ದು ಎಂದು ವಕ್ಫ್ ತೀರ್ಮಾನಿಸಿದರೆ, ನೀವು ನ್ಯಾಯಾಲಯದ ಮೊರೆ ಹೋಗುವಂತಿಲ್ಲ. ಕೇವಲ ವಕ್ಫ್ ಕಾಯಿದೆಯಡಿಯಲ್ಲಿರುವ ಟ್ರಿಬ್ಯೂನಲ್ ನ್ಯಾಯಾಲಯವನ್ನು ಮಾತ್ರ ಸಂಪರ್ಕಿಸಬಹುದು.

ವಕ್ಫ್ ಕಾಯಿದೆಯ ಸೆಕ್ಷನ್ 85 ರ ಪ್ರಕಾರ ಇದು ನಿಮ್ಮ ಸ್ವಂತ ಭೂಮಿ ಎಂದು ವಕ್ಫ್ ಬೋರ್ಡ್ ಟ್ರಿಬ್ಯೂನಲ್ ಅನ್ನು ನೀವು ತೃಪ್ತಿಪಡಿಸಲು ಸಾಧ್ಯವಾಗದಿದ್ದರೆ, ನಂತರ ನೀವು ಭೂಮಿಯನ್ನು ಖಾಲಿ ಮಾಡುವಂತೆ ಆದೇಶಿಸಲಾಗುವುದು. ನ್ಯಾಯಮಂಡಳಿಯ ತೀರ್ಮಾನ ಅಂತಿಮವಾಗಿರುತ್ತದೆ. ವಕ್ಫ್ ನ್ಯಾಯಮಂಡಳಿಯ ತೀರ್ಪನ್ನು ನ್ಯಾಯಾಲಯಗಳು ಬದಲಾಯಿಸಲು ಸಾಧ್ಯವಿಲ್ಲ. ವಕ್ಫ್ ಕಾಯಿದೆಯ ಸೆಕ್ಷನ್ 40 ಹೇಳುವಂತೆ ವಕ್ಫ್ ಮಂಡಳಿಯು ವ್ಯಕ್ತಿಯೊಬ್ಬನ ಭೂಮಿಯ ಮೇಲಿನ ಹಕ್ಕನ್ನು ಸಲ್ಲಿಸಿದಾಗ, ಅದನ್ನು ಸಾಬೀತುಪಡಿಸುವುದು ವಕ್ಫ್ ಮಂಡಳಿಯ ಜವಾಬ್ದಾರಿಯಲ್ಲ, ಆದರೆ ಭೂಮಿಯ ನಿಜವಾದ ಮಾಲೀಕ ಅದನ್ನು ಸಾಬೀತುಪಡಿಸಬೇಕು. ಭಾರತದಂತಹ ಜಾತ್ಯತೀತ ರಾಷ್ಟ್ರದಲ್ಲಿ ವಕ್ಫ್ ಕಾಯಿದೆಯಂತಹ ಧಾರ್ಮಿಕ ಕಾನೂನನ್ನು ಯಾಕೆ ಜಾರಿಗೆ ತರಲಾಯಿತು? ಹಿಂದೂಗಳು, ಕ್ರಿಶ್ಚಿಯನ್ನರು ಮತ್ತು ಸಿಖ್ಖರಿಗೆ ಇಂತಹ ಕಾಯಿದೆ ಯಾಕಿಲ್ಲ? ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಇದ್ದ ಧಾರ್ಮಿಕ ಸ್ಥಳಗಳನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳುವುದಾಗಿ 1991ರಲ್ಲಿ ಪೂಜಾ ಸ್ಥಳಗಳ ಕಾಯಿದೆಯನ್ನು ರೂಪಿಸಲಾಯಿತು. ಆದರೆ ಅದೇ ಸಮಯದಲ್ಲಿ,1995 ರಲ್ಲಿ ವಕ್ಫ್ ಕಾಯಿದೆ ಜಾರಿಗೆ ಬಂದಿತು, ಇದು ದೇಶಾದ್ಯಂತ ವಕ್ಫ್ ಮಂಡಳಿಗೆ ಯಾವುದೇ ಆಸ್ತಿಯ ಮೇಲೆ ತನ್ನ ಹಕ್ಕುಗಳನ್ನು ಪಡೆಯಲು ಹಕ್ಕನ್ನು ನೀಡುತ್ತದೆ. ಇದರ ವಿರುದ್ಧ ನೊಂದವರು ದೇಶದ ಯಾವುದೇ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವಂತಿಲ್ಲ. ಮುಸ್ಲಿಂ ರಾಷ್ಟ್ರಗಳಾದ ಟರ್ಕಿ, ಲಿಬಿಯಾ, ಈಜಿಪ್ಟ್, ಸುಡಾನ್, ಲೆಬನಾನ್, ಸಿರಿಯಾ, ಜೋರ್ಡಾನ್ ಮತ್ತು ಇರಾಕ್‌ನಲ್ಲಿ ವಕ್ಫ್ ಬೋರ್ಡ್ ಅಥವಾ ವಕ್ಫ್ ಕಾನೂನು ಜಾರಿಯಲ್ಲಿಲ್ಲ.

ಷರಿಯಾ ಕಾನೂನಿನನ್ವಯ ಜಾರಿಗೆ ತಂದಿರುವ ಈ ಕಾಯಿದೆಯ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಬೇಕಿದೆ ? ಅಲ್ಪಸಂಖ್ಯಾತರ ಕಲ್ಯಾಣದ ಹೆಸರಿನಲ್ಲಿ ಬಹುಸಂಖ್ಯಾತ ದೇವಸ್ಥಾನಗಳ ಬಳಿ ಇಲ್ಲದಷ್ಟು ಆಸ್ತಿ ಇಂದು ವಕ್ಫ್ ಮಂಡಳಿಯ ಬಳಿ ಇದೆ. ಅಲ್ಪಸಂಖ್ಯಾತರು ಭಾರತದಲ್ಲಿ ಸುರಕ್ಷಿತವಾಗಿಲ್ಲವೆಂದು ಪುಂಗಿ ಊದುವ ಜಾತ್ಯತೀತವಾದಿಗಳು ನಿದ್ದೆ ಮಾಡುತ್ತಿದ್ದಾರೆ. ಎಡಚರರಿಗೆ ಜೈನರು, ಪಾರ್ಸಿಗಳು, ಸಿಖ್ಖರು ಅಲ್ಪಸಂಖ್ಯಾತರಾಗಿ ಕಾಣುವುದಿಲ್ಲ. ಕೇವಲ ಮುಸಲ್ಮಾನರು ಮಾತ್ರ ಅಲ್ಪಸಂಖ್ಯಾತರಾಗಿ ಕಾಣುತ್ತಾರೆ. ಜೈನರಿಗೆ ಇಲ್ಲದ ವಿಶೇಷ ಸವಲತ್ತುಗಳು ಮುಸಲ್ಮಾನರಿಗೆ ಮಾತ್ರ ಯಾಕೆ? ಪಾರ್ಸಿಗಳಿಗೆ, ಸಿಖ್ಖರಿಗೆ ಇಲ್ಲದ ವಕ್ಫ್ ಮಾದರಿಯ ಮಂಡಳಿ ಕೇವಲ ಮುಸಲ್ಮಾನರಿಗೆ ಯಾಕೆ ? ದೇಶದಲ್ಲಿ ಅತಿ ಹೆಚ್ಚು ಮುಸಲ್ಮಾನರಿರುವ ಕೇಂದ್ರಾಡಳಿತ ಪ್ರದೇಶ ಜಮ್ಮು ಮತ್ತು ಕಾಶ್ಮೀರಕ್ಕೆ ವಕ್ಫ್ ಕಾಯಿದೆ ಅನ್ವಯವಾಗುವುದಿಲ್ಲ. ಕಾಶ್ಮೀರದಲ್ಲಿ ಸರಕಾರಿ ಜಾಗಗಳನ್ನು ಅಕ್ರಮ ಸಕ್ರಮ ಮಾಡಲು 'ರೋಷಿನಿ ಕಾಯಿದೆ'ಯನ್ನು ಜಾರಿಗೆ ತಂದು ಮತ್ತಷ್ಟು ಅಕ್ರಮಗಳನ್ನು ಮಾಡಲಾಗಿತ್ತು. ಸಂವಿಧಾನದ 370 ನೇ ವಿಧಿಯ ಮೂಲಕ ತಮ್ಮದೇ ವಿಶೇಷ ಸಂವಿಧಾನ ದಡಿಯಲ್ಲಿ ಅಧಿಕಾರ ನಡೆಸುಕೊಂಡು ಬಂದಂತಹ ಅಬ್ದುಲ್ಲಾ ಹಾಗೂ ಮುಫ್ತಿಯ ಸಂತಾನ ಸಾವಿರಾರು ಹೆಕ್ಟೇರು ಸರಕಾರಿ ಭೂ ಭಾಗವನ್ನು ಕೊಳ್ಳೆಹೊಡೆದು ಅಲ್ಲಿನ ಬಡವರನ್ನು ಹೊರ ಜಗತ್ತಿಗೆ ಬರಲು ಬಿಡದೇ ಭಾರತದ ವಿರುದ್ಧ ಸದಾ ಕತ್ತಿ ಮಸೆಯುವಂತೆ ಮಾಡಿದ್ದರು. ಭಾರತದಲ್ಲಿ ಅಂದಾಜು 20 ಕೋಟಿ ಜನಸಂಖ್ಯೆ ಇರುವ ಮುಸಲ್ಮಾನರನ್ನು ಅಲ್ಪಸಂಖ್ಯಾತರೆಂದು ಕರೆಯಲು ಸಾಧ್ಯವಿಲ್ಲ. ಅವರನ್ನು ಕೇವಲ ಮತ ಬ್ಯಾಂಕಿಗಾಗಿ ಕಾಂಗ್ರೆಸ್ ಮತ್ತು ಇತರ ಪ್ರಾದೇಶಿಕ ಪಕ್ಷಗಳು ಬಳಸಿಕೊಳ್ಳುತ್ತಾ ಬಂದಿವೆ. ಅವರನ್ನು ಓಲೈಸುವ ಸಲುವಾಗಿ ವಕ್ಫ್ ಕಾಯಿದೆಯನ್ನು ಜಾರಿಗೆ ತಂದು ಕಾಲ ಕಾಲಕ್ಕೆ ಬದಲಾಯಿಸುತ್ತಾ ಬಂದಿದ್ದಾರೆ. ಮುಸಲ್ಮಾನರನ್ನು ಅಲ್ಪಸಂಖ್ಯಾತರೆಂದು ಕರೆದು ಅವರಿಗೆ ಪ್ರತ್ಯೇಕವಾಗಿ ಸರಕಾರದಿಂದ ಯೋಜನೆಗಳನ್ನು ಜಾರಿಗೆ ತರುವುದರೊಂದಿಗೆ ವಕ್ಫ್‌ನಂತಹ ಕಾಯಿದೆಯ ಮೂಲಕ ಲಕ್ಷಾಂತರ ಕೋಟಿ ಆಸ್ತಿಯನ್ನು ಮಂಡಳಿಗೆ ಸೇರುವಂತೆ ಮಾಡಲಾಗಿದೆ. ಜಗತ್ತಿನ ಶ್ರೀಮಂತರ ಪಟ್ಟಿಯಲ್ಲಿರುವ ಅಂಬಾನಿ ಮತ್ತು ಅದಾನಿಯನ್ನೂ ಮೀರಿಸಿದ ಆಸ್ತಿ, ವಕ್ಫ್ ಮಂಡಳಿಯ ಬಳಿಯಿದೆ. ಅಂದಾಜು ಎಂಟು ಲಕ್ಷ ಕೋಟಿಗೂ ಅಧಿಕ ಮೌಲ್ಯದ ಆಸ್ತಿಯನ್ನು ಹೊಂದಿರುವ ಇಸ್ಲಾಂ ಧರ್ಮವನ್ನು ಭಾರತದ ಶ್ರೀಮಂತ ಧರ್ಮವೆನ್ನಬೇಕು. ಈ ಮಟ್ಟದ ಆಸ್ತಿ ಇದ್ದರೂ ಸಹ ಮುಸಲ್ಮಾನರನ್ನು ಯಾಕೆ ಹಿಂದುಳಿದವರೆಂದು ಕರೆಯಬೇಕು? ವಕ್ಫ್ ಮಂಡಳಿಯ ಬಳಿ ಇರುವ ಆಸ್ತಿಯನ್ನು ಬಡ ಮುಸಲ್ಮಾನರಿಗೆ ಹಂಚಲು ವಕ್ಫ್ ಮಂಡಳಿ ಯಾಕೆ ಯೋಚಿಸುತ್ತಿಲ್ಲ? ಅಂಬಾನಿ ಮತ್ತು ಅದಾನಿಯ ಹೆಸರೇಳಿದರೆ ಮಾತ್ರ ನಿದ್ದೆ ಬರುವ ಕಾಂಗ್ರೆಸ್ಸಿನ ರಾಹುಲ್ ಗಾಂಧಿ, ದೇಶದ ಶ್ರೀಮಂತ ಮಂಡಳಿಯ ಬಗ್ಗೆ ಮಾತ್ರ ಮಾತನಾಡುವುದಿಲ್ಲ.

ಅತಂತ್ರತೆಯಲ್ಲಿ ಬಾಂಗ್ಲಾ: ಯೂನಸ್ ಆಶಾಕಿರಣ

ಅಭಿಮತ

ಎಸ್.ಜಿ.ಹೆಗಡೆ
vveditoped@gmail.com

ಸರ್ವ ಸ್ವತಂತ್ರ ದೇಶವೊಂದು ಇಷ್ಟು ಬೇಗನೆ ಹೀಗೆ ಅತಂತ್ರವಾಗಬಹುದು ಎಂಬುದನ್ನು ಯಾರಾದರೂ ಊಹಿಸಲು ಸಾಧ್ಯವೇ? ಅಂತಹ ಘಟನೆಗಳು ಬಾಂಗ್ಲಾದೇಶದಲ್ಲಿ ಇತ್ತೀಚೆಗೆ ನಡೆದು ಹೋಗಿವೆ. ಅಲ್ಲಿ ಇತ್ತೀಚೆ ನಿರ್ಮಾಣವಾದ ಅರಾಜಕತೆ ಮತ್ತು ದಂಗೆಯ ಘಟನೆಗಳು ಬೆಚ್ಚಿ ಬೀಳಿಸುವಂತಿವೆ. ಕಳೆದ ಜನವರಿಯಲ್ಲಷ್ಟೇ ಆಯ್ಕೆಯಾಗಿ ಆಡಳಿತದಲ್ಲಿದ್ದ ಸರಕಾರವು ಬುಡ ಮೇಲಾಗಿ ಹೋಗಿದೆ. ಚುನಾವಣೆಯಲ್ಲಿ ಪ್ರಚಂಡ ಬಹುಮತದಿಂದ ಆಯ್ಕೆಯಾದ ಪ್ರಧಾನಮಂತ್ರಿ ಪದತ್ಯಾಗ ಮಾಡಿ ಅನಿರೀಕ್ಷಿತವಾಗಿ ದೇಶವನ್ನೇ ತೊರೆದು ಹೋಗಿದ್ದಾರೆ.

ಪ್ರಧಾನಮಂತ್ರಿ ದೇಶಬಿಟ್ಟು ಹೋದಂತೆ ಅವರ ನಿವಾಸವನ್ನು ಸುತ್ತುವರಿದ ಚಳವಳಿಗಾರರು ಪ್ರಧಾನ ಮಂತ್ರಿಯ ಅಧಿಕೃತ ನಿವಾಸದೊಳಗೆ ನುಗ್ಗಿ ದೊಂಬರಾಟ ನಡೆಸಿ ಕೈಗೆ ಸಿಕ್ಕಿದ್ದನ್ನೆಲ್ಲ ದೋಚಿ ಹೋಗಿದ್ದಾರೆ. ಎಲ್ಲೆಡೆ ಲೂಟಿ, ಕೊಲೆ, ದೊಂಬಿ, ವಿಧ್ವಂಸಕ ಕೃತ್ಯ ನಡೆದಿವೆ. ಕಾನೂನು ಸುವ್ಯವಸ್ಥೆ ಕಾಪಾಡುವ ವ್ಯವಸ್ಥೆಯೇ ಕುಸಿದುಬಿದ್ದು ಪೊಲೀಸರೇ ಠಾಣೆ ಬಿಟ್ಟು ಓಡಿಹೋಗಿದ್ದಾರೆ. ಹೀಗಾಗಿ ಅರಾಜಕತೆಯು ವಿಕೋಪಕ್ಕೆ ತಲುಪಿ ಹಿಂಸಾಚಾರ ಮಿತಿ ಮೀರಿ ಹೋಯಿತು. ಕಳೆದ ಕೆಲವೇ ದಿನಗಳಲ್ಲಿ ಐನೂರಕ್ಕೂ ಹೆಚ್ಚು ಜನರ ಕೊಲೆಯಾಗಿದೆ. ಮನೆ ಬಿಟ್ಟು ಹೊರಟವರು ನಿರಾಶ್ರಿತರ ರೂಪಿನಲ್ಲಿ ಭಾರತದ ಗಡಿಯಲ್ಲಿ ಬೀಡು ಬಿಟ್ಟು ಭಾರತ ಪ್ರವೇಶಕ್ಕೆ ಅನುಮತಿ ಕೋರಿದ್ದಾರೆ. ಆಡಳಿತದಲ್ಲಿದ್ದ ಅವಾಮಿ ಲೀಗಿನ ಅನೇಕ ಮುಖಂಡರ ಶವ ಪತ್ತೆಯಾಗಿವೆ. ಆ ಪೈಕಿ ಒಬ್ಬರ ದೇಹವನ್ನು ಸೇತುವೆಯೊಂದಕ್ಕೆ ನೇತು ಹಾಕಲಾಗಿದೆ. ವಿಧ್ವಂಸಕ ಕೃತ್ಯಕ್ಕೆ ಹೆದರಿ ಭಾರಿ ಪ್ರಮಾಣದಲ್ಲಿ ಜನರು ವಲಸೆ ಹೊರಟಿದ್ದಾರೆ. ಲೂಟಿಯ ಕಾರಣಗಳಿಂದಾಗಿ ಬ್ಯಾಂಕು, ಅಂಗಡಿಗಳು, ಉದ್ಯೋಗ ಸಂಸ್ಥೆಗಳು ಮುಚ್ಚಲ್ಪಟ್ಟವು. ಲೂಟಿಕಾರರ, ಹಿಂಸಾಕೋರರ ವಶದಲ್ಲಿ ಸಾಮಾಜಿಕ ವ್ಯವಸ್ಥೆಯು ಸಿಲುಕಿದಾಗ ಏನೆಲ್ಲ ಅನಾಚಾರ ನಡೆಯಬವುದೋ ಅವೆಲ್ಲವೂ ಅಲ್ಲಿ ನಡೆದು ಹೋಗಿವೆ. ಇಷ್ಟೆಲ್ಲ ದುರ್ಘಟನೆಗಳು ಅಷ್ಟು ಶೀಘ್ರದಲ್ಲಿ ನಡೆದುಹೋದಾಗ ಅಂತಾರಾಷ್ಟ್ರೀಯ ಸಮುದಾಯವು ಮೂಕ ಪ್ರೇಕ್ಷಕನಾಗಿರಬೇಕಾಗಿ ನೋಡುವ ಸ್ಥಿತಿ ಬಂತು.

ಇಂತಹುದೇ ಅರಾಜಕ ಸ್ಥಿತಿ ಎರಡು ವರ್ಷಗಳ ಹಿಂದೆ ಶ್ರೀಲಂಕಾದಲ್ಲಿ ನಡೆದಿತ್ತು. ಅಲ್ಲಿಯೂ ಅಧ್ಯಕ್ಷರು ದೇಶ ಬಿಟ್ಟು ಪಲಾಯನವಾಗಿದ್ದರು. ದಂಗೆಕೋರರರು ಅಧ್ಯಕ್ಷನಿವಾಸದಲ್ಲಿ ನುಗ್ಗಿ ವಿಪರೀತ ದಾಂಧಲೆ ನಡೆಸಿದ್ದರು. ಪ್ರತಿಭಟನೆಯು ಹಿಂಸಾ ರೂಪು ತಳೆದಿದ್ದರೂ ಬಾಂಗ್ಲಾದಷ್ಟು ಉದ್ರೇಕ ಸ್ಥಿತಿ ತಲುಪಿರಲಿಲ್ಲ. ಶ್ರೀಲಂಕಾದ ದಂಗೆಗೆ ದೇಶ ಆರ್ಥಿಕವಾಗಿ ದಿವಾಳಿಯಾದದ್ದು ಕಾರಣವಾಗಿದ್ದರೆ ಬಾಂಗ್ಲಾದ ಅತಂತ್ರತೆಗೆ ವಿದ್ಯಾರ್ಥಿಗಳು ವಿರೋಧಿಸಿದ ಮೀಸಲಾತಿ ಚಳುವಳಿಯು ಕಾರಣವಾಗಿದೆ. 1971ರಲ್ಲಿ ಬಾಂಗ್ಲಾ ಸ್ವತಂತ್ರ ದೇಶವಾದಾಗ ಸ್ವಾತಂತ್ರ ಹೋರಾಟದಲ್ಲಿ ಭಾಗಿಯಾದವರ ಕುಟುಂಬ ಮತ್ತು ಸಂಬಂಧಿಗಳಿಗೆ ಸರಕಾರಿ ನೌಕರಿಗಳಲ್ಲಿ 30 ಪ್ರತಿಶತ (ಒಟ್ಟೂ 56 ಪ್ರತಿಶತ ಮೀಸಲಾತಿಯಲ್ಲಿ)ಘೋಷಿಸಲ್ಪಟ್ಟಿದ್ದು ಮೀಸಲಾತಿಯು ಸುಮಾರು 41 ವರ್ಷ ನಡೆದು ಬಂದಿತ್ತು. ಎಷ್ಟೋ ವರ್ಷಗಳ ನಂತರವೂ ಸ್ವತಂತ್ರ ಹೋರಾಟದ ಹೆಸರಿನಲ್ಲಿ ಇನ್ನೂ ಯಾರೋ ಲಾಭ ಗಿಟ್ಟಿಸಿ ನಡೆದಿದ್ದರು. ಈ ವಿಚಾರವು ಅತೃಪ್ತಿಗೆ ಕಾರಣವಾಗಿದ್ದರೂ ಸಹನೆಯ ಕಟ್ಟೆಯೊಡೆದು ಉಗ್ರರೂಪ ತಾಳಿದ್ದು ಇತ್ತೀಚೆಗೆ. ಈ ನಡುವೆ ಅಲ್ಲಿನ ಸುಪ್ರೀಂ ನ್ಯಾಯಾಲಯವು ಮೀಸಲಾತಿಯನ್ನು ರದ್ದುಗೊಳಿಸಿ ಕೇವಲ ಐದು ಪ್ರತಿಶತಕ್ಕೆ ಇಳಿಸಿದ್ದರೂ ನಡುವೆ ನಡೆದ ಆಂದೋಲನದಲ್ಲಿ ಅನೇಕರು ಸರಕಾರದ ಕ್ರಮದಿಂದ ಪ್ರಾಣ ಕಳೆದುಕೊಳ್ಳುವಂತಾಗಿದ್ದು ಆಂದೋಲನವು ಶೇಖ್ ಹಸೀನಾ ಸರಕಾರದ ವಿರುದ್ಧ ತೀವ್ರ ರೂಪಿನಲ್ಲಿ ಭುಗಿಲೇಳುವಂತಾಯಿತು. ಚಳವಳಿ ಹತ್ತಿಕ್ಕಲು ಮತ್ತೆ ಹಸೀನಾ ಸರಕಾರವು ಸುರಕ್ಷಾ ಪಡೆಗಳನ್ನು ಬಳಸಿದ ಕಾರಣವಾಗಿ ಆಗಸ್ಟ್ 4ರಂದು 99 ಆಂದೋಲನಕಾರರು ಅಸು ನೀಗಿದ್ದು ಪರಿಸ್ಥಿತಿ ಬೆಂಕಿಯ ಕೆಂಡವಾಗಿ ಪರಿಣಮಿಸಿತು.

ಬಾಂಗ್ಲಾದೇಶ ಈ ಸ್ಥಿತಿ ತಲುಪಿದ್ದು ನಿಜಕ್ಕೂ ಶೋಚನೀಯ. ನಮ್ಮ ದೇಶಕ್ಕಂತೂ ಅನಪೇಕ್ಷಿತ. ಭಾರತವು ಬಾಂಗ್ಲಾಕ್ಕೆ ಪಿತೃ ಸಮಾನ. ಭಾರತವು ಬಾಂಗ್ಲಾದ ಮುಕ್ತಿಯ ದಿಶೆಯಲ್ಲಿ ಅಂದು ಅಲ್ಲಿನ ಮುಕ್ತಿ ಬಹಿನಿಗೆ ಬೆಂಬಲ ನೀಡಿ ಹೋರಾಡದಿದ್ದರೆ ಇನ್ನೆಷ್ಟು ವರ್ಷಗಳ ಆಂದೋಲನ, ಹೋರಾಟ, ರಕ್ತಪಾತದಲ್ಲಿ ಬಾಂಗ್ಲಾ ಜನತೆ ತೊಳಲಾಡಬೇಕಿತ್ತೋ. ಭಾರತವು ಹೋರಾಟದಲ್ಲಿ ಪ್ರವೇಶಿಸುವ ಮೊದಲೇ ಸುಮಾರು ಇಪ್ಪತ್ತು ವರ್ಷಗಳ ದೀರ್ಘ ಕಾಲದ ದಂಗೆ, ಆಂತರಿಕ ಯುದ್ಧ, ಹೋರಾಟದಲ್ಲಿ ಬಾಂಗ್ಲಾ ತೊಡಗಿ ಆಗಿತ್ತು. ಅದೆಷ್ಟೋ ಲಕ್ಷ ಬಂಗಾಳಿ ಪ್ರಜೆಗಳು ಅಲ್ಲಿನ ಸೇನೆಯ ಹತ್ಯೆಗೆ ಒಳಗಾಗಿದ್ದರು. ಅಸಂಖ್ಯಾತ ಮಹಿಳೆಯರು ಅತ್ಯಾಚಾರಕ್ಕೆ ತುತ್ತಾಗಿದ್ದರು. ಪೂರ್ವ ಪಾಕಿಸ್ತಾನವೆಂಬ ಹೆಸರಲ್ಲಿ ಪಾಕಿಸ್ತಾನದ ತೆಕ್ಕೆಯಲ್ಲಿ ತೊಳಲಾಡಿದ್ದ ದೇಶವು ಮುಕ್ತಿ ಪಡೆದು ಬಾಂಗ್ಲಾ ಉದಯಿಸಿದ್ದು ಒಂದು ಅವಿರತ ಹೋರಾಟದ ರೋಚಕ ಕಥೆ.

ಬಾಂಗ್ಲಾಕ್ಕೆ ಸ್ವಾತಂತ್ರ್ಯ ಸಿಕ್ಕ ದಿನಗಳು ನಮಗೂ ಅಷ್ಟೇ ರೋಮಾಂಚಕವಾಗಿದ್ದವು! ಭಾರತ ಸರಕಾರವು ನೆರೆಯ ದೇಶವೊಂದನ್ನು ಸ್ವತಂತ್ರಗೊಳಿಸಲು ಮುಂದಾದ ದಿಟ್ಟ ದಿನಗಳು. ಮನೆ ಮನೆಗಳಲ್ಲಿ ರೇಡಿಯೋ ವಾರ್ತೆಗಳನ್ನು ಕೇಳಲು ಸುತ್ತಮುತ್ತಲಿನ ಜನ ಸೇರಿದ್ದರು. ಮಾಣಿಕ್ ಷಾ ನೇತೃತ್ವದ ಭಾರತ ಸೇನೆಯ ಸಾಹಸ ತಿಳಿದು ಪುಳಕಿತರಾಗಿದ್ದರು. ಮೈಲು ಗಟ್ಟಲೆ ದೂರ ನಡೆದು ದಿನಪತ್ರಿಕೆ ಓದಿದ್ದರು. ಎರಡನೇ ವಿಶ್ವಯುದ್ಧದ ನಂತರ ಅತಿ ಹೆಚ್ಚು ಸೈನಿಕರು ಶಸ್ತ್ರತೊರೆದು ಶರಣಾಗತರಾಗಿದ್ದು ಬಂಗಾಲ ವಿಮೋಚನೆಯ ಸಂದರ್ಭದಲ್ಲಿ ಭಾರತೀಯ ಸೇನೆಗೆ. ಅಂತೂ ಪೂರ್ವ ಪಾಕಿಸ್ತಾನವು ಮುಕ್ತಿ ಪಡೆದು ಬಾಂಗ್ಲಾ ದೇಶವಾದಾಗ ನಮ್ಮಲ್ಲಿ ಹಬ್ಬದ ವಾತಾವರಣವಿತ್ತೆಂಬ ಸಂಗತಿ ಸದಾ ನನಪಿನಲ್ಲಿ ಉಳಿದಿದೆ.

ಮುಕ್ತಿ ಸಿಕ್ಕ 53 ವರ್ಷಗಳಲ್ಲೇ ಮತ್ತೆ ಬಾಂಗ್ಲಾದೇಶ ಈ ಪ್ರಮಾಣದ ಅರಾಜಕತೆಗೆ ಈಡಾಗಿದ್ದು ದುರದೃಷ್ಟಕರ. ನಿಜವಾದ ಸಂಗತಿಯೆಂದರೆ ಪ್ರತ್ಯೇಕ ರಾಷ್ಟ್ರವಾದ ಮೇಲೂ ಬಾಂಗ್ಲಾದಲ್ಲಿ ಆಗಾಗ ಬೇರೆ ಬೇರೆ ವಿಚಾರಗಳಿಂದ ಉನ್ನತವಾದ ಚಳುವಳಿಗಳು, ದಂಗೆ ಪ್ರತಿರೋಧಗಳು ನಡೆಯುತ್ತಲೇ ಇವೆ. ನಾಲ್ಕು ಸಾರಿ ಸೇನಾಕ್ರಾಂತಿಯಾಗಿದೆ. ಇಬ್ಬರು ರಾಷ್ಟ್ರಾಧ್ಯಕ್ಷರು ಕೊಲೆಗೀಡಾಗಿದ್ದರೆ. ಆಗಾಗ ಅಲ್ಲಿ ಆಂತರಿಕ ಘರ್ಷಣೆಗಳು ಒಂದಿಲ್ಲೊಂದು ಕಾರಣಗಳಿಂದ ನಡೆದೇ ಇದೆ. ಅಲ್ಲಿನ ಕ್ಲಿಷ್ಟ ಸಾಮಾಜಿಕ ಸ್ವರೂಪವೇ ಅದಕ್ಕೆ ಮುಖ್ಯ ಕಾರಣವೆನ್ನಬೇಕು. ಇಸ್ಲಾಮಿಕ್ ಮೂಲಭೂತವಾದಿಗಳು, ಮುಸ್ಲಿಮರಲ್ಲಿಯೇ ಬೇರೆ ಬೇರೆ ತಂಡಗಳು, ಭಾರತ ಮೂಲದ ಮುಸ್ಲಿಮರು, ಬಂಗಾಲಿಗರು ಮತ್ತು ಬಿಹಾರ್ ಮತ್ತಿತರ ಉತ್ತರ ಭಾರತದ ಹತ್ತಿರದ ವಲಯದಿಂದ ಬಂದು ವಾಸವಾದವರು ಹೀಗೆ ಪ್ರವೃತ್ತಿಯಲ್ಲಿ ಅನೇಕ ರೀತಿಯಿಂದ ವಿರೋಧವಾದವಾದ ಗುಣಗಳಿಂದ ತುಂಬಿರುವ ಸಮಾಜವು ಸಣ್ಣ ಪುಟ್ಟ ತಪ್ಪುಗಳನ್ನೂ ದೊಡ್ಡದಾಗಿಸಿ ರೊಚ್ಚಿಗೇಳುವ ಮನಸ್ಥಿತಿಯಿಂದ ಸ್ವಾತಂತ್ರಾನಂತರದಲ್ಲಿ ಹೊರಬರಲೇ ಇಲ್ಲ.

ಹಾಗೆಂದ ಮಾತ್ರಕ್ಕೆ ಬಾಂಗ್ಲಾ ಸಾಧಿಸಿದ ಅಭಿವೃದ್ಧಿಯನ್ನು ಅಲ್ಲಗಳೆಯುವಂತಿಲ್ಲ, ಶ್ರೀಲಂಕಾದಲ್ಲಿ ಅರಾಜಕತೆಯಾಗಿದ್ದು ಆರ್ಥಿಕ ದಿವಾಳಿತನದಿಂದ. ಸಾಮಾನ್ಯವಾಗಿ ಸಮಾಜದಲ್ಲಿ ಇಷ್ಟೆಲ್ಲ ಮಟ್ಟಿಗಿನ ಪರಿಸ್ಥಿತಿ ಉದ್ಭವವಾಗುವುದು ಆರ್ಥಿಕ ಸಮಸ್ಯೆಯ ಮೂಲದಿಂದ. ಬಾಂಗ್ಲಾದಲ್ಲಿನ ಅರಾಜಕತೆ ಆರ್ಥಿಕ ಸಮಸ್ಯೆಯ ಮೂಲದ್ದಲ್ಲ. ಸ್ವತಂತ್ರವಾದ ಸಂದರ್ಭದಲ್ಲಿ ಬಾಂಗ್ಲಾ ಕಡು ಬಡ ದೇಶಗಲ್ಲಿ ಒಂದಾಗಿದ್ದು ನಿಜವಾದರೂ ಶೇಖ್ ಹಸೀನಾ ದೀರ್ಘ ಆಡಳಿತಾವಧಿಯಲ್ಲಿ ಬಾಂಗ್ಲಾದ ಆರ್ಥಿಕತೆ ಸಾಕಷ್ಟು ಸುಧಾರಿಸುತ್ತ ಬಂದಿದೆ. ಶೇಕಡಾ 6ರಷ್ಟು ಜಿಡಿಪಿ ಪ್ರಗತಿ ಸಾಧಿಸಿದೆ. ಬಾಂಗ್ಲಾದೇಶಕ್ಕೆ ಅಂತಾರಾಷ್ಟ್ರೀಯ ನಿಧಿ ಸಹಾಯವೂ ದೊಡ್ಡ ಪ್ರಮಾಣದಲ್ಲಿ ಸಿಗುತ್ತಿದೆ.ಪದತ್ಯಾಗ ಮಾಡಿ ಇತ್ತೀಚೆ ಭಾರತಕ್ಕೆ ಬಂದು ಉಳಿದಿರುವ ಶೇಖ್ ಹಸೀನಾ ಅವರ ಆಡಳಿತವು ಬಾಂಗ್ಲಾದ ಉನ್ನತಿಗೆ ಕಾರಣವಾಗಿದ್ದರಲ್ಲಿ ಎರಡು ಮಾತಿಲ್ಲ.

ಬಾಂಗ್ಲಾದೇಶದ ಒಳ ಜಗಳದ ಇತಿಹಾಸದ ನಡುವೆ ಅಲ್ಲಿಗೆ ಬರುವ ಪ್ರವಾಸಿಗರಿಗೆ, ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿ ಬಂದವರಿಗೆ ಅಂತಹ ಭಯದ ವಾತಾವರಣವಿರಲಿಲ್ಲವೆಂದೇ ಹೇಳಬೇಕು. ನಾನೂ ಹಲವು ಸಾರಿ ಕೆಲಸದ ನಿಮಿತ್ತ ಢಾಕಾಗೆ ಹೋಗಿದ್ದೆ, ವಾರಗಟ್ಟಲೆ ಉಳಿದಿದ್ದೆ. ಬೀದಿಯ ಬದಿಗಿರುವ ಸಾಮಾನ್ಯ ಖಾನಾವಳಿಗಳಲ್ಲಿ ಊಟ ಮಾಡಿದ್ದೆ. ವಿಶೇಷ ಸವಲತ್ತಿನ ಕಾರಣಗಳಿಂದ ಅಲ್ಲಿ ಅನೇಕ ಬಹುರಾಷ್ಟ್ರೀಯ ಔಷಧಿ ಸಂಸ್ಥೆಗಳು ಮತ್ತಿತರ ವ್ಯಾಪಾರೀ ಸಂಘಟನೆಗಳು ನೆಲೆಯೂರಿ ಕಾರ್ಯಭಾರ ಮಾಡುತ್ತಿವೆ. ಭಾರತದಿಂದ ಸಾಕಷ್ಟು ಸಂಖ್ಯೆಯಲ್ಲಿ ಯಾತ್ರಿಕರು ಅಲ್ಲಿ ಬರುತ್ತಾರೆ. ದೊಡ್ಡ ಪ್ರಮಾಣದಲ್ಲಿ ವ್ಯಾಪಾರೀ ಸಂಬಂಧವಿದೆ. ನವರಾತ್ರಿಯ ಸಮಯದಲ್ಲಿ ಒಮ್ಮೆನಾನು ಅಲ್ಲಿದ್ದಾಗ ಪ್ರಸಿದ್ಧ ಢಾಕೇಶ್ವರಿ ಮಂದಿರ ಮತ್ತು ಕಾಳಿಕಾದೇವಿ ಮಂದಿರಕ್ಕೆ ಹೋಗಿದ್ದೆ. ಅಲ್ಲಿ ಅನೇಕ ಹಿಂದೂ ಮಂದಿರಗಳು, ಸಂಸ್ಥೆಗಳು ಶಾಂತಿಪೂರ್ವಕವಾಗಿ ನಡೆದು ಬಂದಿವೆ. ಢಾಕಾ ಹೆಸರು ಬಂದಿದ್ದು ಢಾಕೇಶ್ವರಿ ಹೆಸರಿನಿಂದಲೇ ಎನ್ನಲಾಗಿದೆ! ಧಾರ್ಮಿಕ ಒಡನಾಟದ ವಿಚಾರದಲ್ಲಿ ಪರಸ್ಪರ ಗೌರವ, ಪ್ರೀತ್ಯಾದರಗಳಿಂದ ಬದುಕಿರುವ ಸಮಾಜದಲ್ಲಿ ಇತ್ತೀಚೆ ನಡೆದ ಕೋಮು ಘಟನೆಗಳು ವಿಷಾದನೀಯ.

ಸ್ವಾತಂತ್ರ್ಯಾನಂತರ ಬಾಂಗ್ಲಾದಲ್ಲಿ ಆಗಾಗ ನಡೆದು ಬಂದ ದಂಗೆಗಳಿಗೆ ಧಾರ್ಮಿಕ ಕಾರಣಗಳಿಗಿಂತ ಉಳಿದ ಸ್ಥಳೀಯ ಸಂಗತಿಗಳೇ ಕಾರಣವಾಗಿದ್ದ ಪ್ರಸಂಗಗಳೇ ಹೆಚ್ಚು ಅಂದರೆ ತಪ್ಪಲ್ಲ. ಮುಖ್ಯವಾಗಿ ಎಲ್ಲ ಸಂಗತಿಗಳನ್ನೂ ರಾಜಕೀಯವಾಗಿ ಬಳಸಿ ಉನ್ಮಾದಕ್ಕೆ ಒಯ್ಯಲು ಹವಣಿಸುತ್ತಿದ್ದ ವಿರೋಧಿ ಪಕ್ಷ ಮತ್ತು ವಿರೋಧಿ ಗುಂಪು. ಅಂತಹ ವಿರೋಧಿ ಶಕ್ತಿಯನ್ನು ಮೆಟ್ಟಿ ನಿಂತು ಸಾಕಷ್ಟು ಯಶಸ್ವಿಯಾಗಿ ಪ್ರಗತಿಪರ ಆಡಳಿತ ನೀಡಿದ್ದ ಶೇಖ್ ಹಸೀನಾ ಪಕ್ಷ ಇನ್ನೊಂದೆಡೆ. ಶೇಖ್ ಹಸೀನಾರನ್ನು ಪದಚ್ಯುತಿಗೊಳಿಸಿ ಅಸ್ಥಿರತೆಯನ್ನು ನಿರ್ಮಿಸುವತ್ತ ವಿರೋಧಿ ಶಕ್ತಿಗಳಿಗೆ ಕುಮ್ಮಕ್ಕು ನೀಡಿರುವ ಕುರಿತು ಹೇಳಲಾದ ಚೀನಾ ಮತ್ತು ಪಾಕಿಸ್ತಾನದ ಕೈವಾಡ. ಕಳೆದ ಕೆಲ ಕಾಲದಿಂದ ಅಮೆರಿಕದ ಜತೆಯೂ ಶೇಖ್ ಹಸೀನಾ ಬಾಂಧವ್ಯ ಅಷ್ಟೊಂದು ಸರಿಯಾಗಿರಲಿಲ್ಲ ಎನ್ನುವ ಮಾತೂ ಇದೆ. ಈ ಕುರಿತು ಇಬ್ಬಗೆಯ ಅಸಮಾಧಾನ ಆಗಾಗ ಪ್ರಕಟವಾಗಿದ್ದಿದೆ.

ಭಾರೀ ಗೊಂದಲಕ್ಕೀಡಾಗಿರುವ ಬಾಂಗ್ಲಾದಲ್ಲಿ ಇದೀಗ ಮಧ್ಯಂತರ ಸರಕಾರದ ಮುಖ್ಯಸ್ಥರಾಗಿ ನೋಬಲ್ ಶಾಂತಿ ಪ್ರಶಸ್ತಿ ಪುರಸ್ಕೃತ ಪ್ರೊ. ಮೊಹಮ್ಮದ್ ಯೂನುಸ್ ಸರ್ವ ಸಮ್ಮತಿಯಿಂದ ಪ್ರಮಾಣವಚ ಸ್ವೀಕರಿಸಿರುವುದು ಸ್ವಾಗತಾರ್ಹ. ನೊಬೆಲ್ ಶಾಂತಿ ವಿಜೇತ ಯೂನುಸ್ ಅವರ ಮಾರ್ಗದರ್ಶನದಲ್ಲಿ ದೇಶದಲ್ಲಿ ಶಾಂತಿ, ಸದ್ಭಾವ ಸದಾ ನೆಲೆಸುವಂತಾಗಿ ಪ್ರಗತಿ ಪಥದತ್ತ ದೇಶ ಸಾಗಲಿ ಎಂಬುದು ಎಲ್ಲರ ಹಾರೈಕೆ. ಭಾರತದ ಹಿತಾಸಕ್ತಿಯಿಂದ ಬಾಂಗ್ಲಾದಲ್ಲಿ ಶಾಂತಿಯುತ, ಪ್ರಗತಿಪರ ಸ್ನೇಹಪರ ಪ್ರಜಾಪ್ರಭುತ್ವ ಮತ್ತೆ ಸ್ಥಾಪನೆಯಾಗುವುದು ಅತ್ಯಂತ ಮಹತ್ವದ ವಿಚಾರ.

(ಲೇಖಕರು: ಹವ್ಯಾಸಿ ಬರಹಗಾರರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಆಘಾತಕ್ಕೆ ಕೊನೆ ಎಲ್ಲಿ?

ಮನುಷ್ಯನ ಮಿತಿ ಮೀರಿದ ದಾಹದಿಂದ ನಿಸರ್ಗದ ಮೇಲಿನ ಉಂಟಾದ ಪ್ರಹಾರವು ಪರಿಸರ ಸಮತೋಲನವನ್ನೇ ಅಲ್ಲಾಡಿಸಿಬಿಟ್ಟಿದೆ. ಆಡಳಿತದ ಚುಕ್ಕಾಣಿ ಹಿಡಿದ ನಾಯಕರು ತಮ್ಮ ಸ್ವಾರ್ಥ ಸಾಧನೆಯಲ್ಲಿ ಮಗ್ನರು. ಅಧಿಕಾರಿಗಳು, ಹಣದಾಹಿ ವ್ಯಾಪಾರಿಗಳ ವಿಷ ವರ್ತುಲದಲ್ಲಿ ಇಡೀ ವ್ಯವಸ್ಥೆಯೇ ವಿಲವಿಲ ಒದ್ದಾಡುತ್ತಿದೆ. ವರ್ಷದಿಂದ ವರ್ಷಕ್ಕೆ ಪ್ರಕೃತಿ ವಿಕೋಪಗಳು ಹೆಚ್ಚಾಗುತ್ತಲೇ ಇವೆ. ಇದರ ಪರಿಣಾಮವಾಗಿ ಜನರ ಬದುಕು ದಿಕ್ಕು ದೆಶೆ ಕಳೆದುಕೊಂಡು ಅನಾಥವಾಗಿದೆ. ವಿಪರ್ಯಾಸವೆಂದರೆ ಇಂತಹ ಅನಾಹುತಗಳಲ್ಲಿ ಸಿಲುಕುವವರು ದುಡಿಯುವ ವರ್ಗದ ಸಾಮಾನ್ಯ ಜನರು. ಕಷ್ಟ ಪಟ್ಟು ಕಟ್ಟಿಕೊಂಡ ಬದುಕು ಕಣ್ಣ ಮುಂದೆ ಕರಗಿಹೋಗುವ ಪರಿ ನಿಜಕ್ಕೂ ಭಯಾನಕ.

ಎಲ್ಲೋ ಒಂದು ಕಡೆ ಇಂತಹ ದುರಂತಗಳು ಸಂಭವಿಸಿದಾಗ, ನಾವು ಒಂದೆರಡು ದಿನ ಆ ಜನಗಳ ಬಗ್ಗೆ ಅನುಕಂಪ ಪಡುತ್ತೇವೆ. ನಂತರ ನಮ್ಮ ದೈನಂದಿನ ಜಂಜಾಟದಲ್ಲಿ ಮುಳುಗಿ ಹೋಗುತ್ತೇವೆ. ಆದರೆ ಒಮ್ಮೆ ಯೋಚಿಸಿ, ತನ್ನ ಕುಟುಂಬದ ಸದಸ್ಯರನ್ನು ಕಳೆದುಕೊಂಡು, ಇರುವ ಸೂರೂ ನಾಶವಾಗಿ ಉಟ್ಟ ಬಟ್ಟೆಯಲ್ಲಿ ನಿಲ್ಲುವ ಆ ಮಾನಸಿಕ ಸ್ಥಿತಿ ಹೇಗಿರಬಹುದು? ಸಣ್ಣ ಪುಟ್ಟ ತೊಡಕುಗಳಿಗೆ ಗೊಣಗುವ ನಾವು, ಇಂತಹ ನೈಸರ್ಗಿಕ ವಿಪ್ಲವದ ಹೊಡೆತಕ್ಕೆ ಸಿಲುಕುವ ಪರಿಸ್ಥಿತಿಯನ್ನು ಊಹಿಸಲು ಶಕ್ಯರೇ? ಪಾಪ ಆ ಬಡಪಾಯಿಗಳ ಜೀವನ ಮುಂದೆ ಹೇಗೆ ಸಾಗೀತು? ಅವರ ಬಗೆಗೆ ನಮ್ಮ ಮನದಲ್ಲಿ ಒಂದು ಪ್ರಾರ್ಥನೆ ಇರಲಿ. ಏಕೆಂದರೆ ಸಿಡಿಲು ಬೇರೆ ಯಾರಿಗೋ ಹೊಡೆದಾಗ, ಅದು ಬರಿ ಬೆಳಕು, ಆದರೆ ಅದು ನಮಗೇ ಬಡಿದಾಗ ಅಂಧಕಾರ! ಇಂದಿನ ಕಲುಷಿತ ಸಾಮಾಜಿಕ ವ್ಯವಸ್ಥೆಯಲ್ಲಿ ನೈಸರ್ಗಿಕ ವಿಪತ್ತು ನಮ್ಮ ಕಾಲ ಕೆಳಗೆ ಆಗುವ ಸಾಧ್ಯತೆ ಬಹಳ ಹೆಚ್ಚು, ಆ ಪರಿವೆ ನಮಗಿದ್ದರೆ ನೊಂದ ಹತಭಾಗ್ಯರ ಕಡೆ ಕನಿಕರ ತಾನಾಗಿಯೇ ಹುಟ್ಟುತ್ತದೆ.

ಈ ರೀತಿಯ ನಿಸರ್ಗದ ಹೊಡೆತಗಳು ಇನ್ನೂ ಹೆಚ್ಚಾಗುತ್ತಲೇ ಹೋಗುತ್ತವೆ. ಕಾರಣ ಇಷ್ಟೇ,ಪರಿಸರದ ಅಸಮತೋಲನಕ್ಕೆ ಮೂಲರಾದ ಪ್ರಜಾ ನಾಯಕರು, ಭ್ರಷ್ಟ ಅಧಿಕಾರಿಗಳು, ಕಾಳಸಂತೆಕೋರರು ಸುಖವಾಗಿಯೇ ಇರುತ್ತಾರೆ. ಎರಡು ದಿನ ಮೊಸಳೆ ಕಣ್ಣೀರು ಸುರಿಸಿ ತಮ್ಮ ಎಂದಿನ ದುರಾಚಾರದಲ್ಲಿ ತೊಡಗುತ್ತಾರೆ. ಜನಸಾಮಾನ್ಯರ ಜೀವನದ ದಯನೀಯ ಪರಿಸ್ಥಿತಿ ಹಾಗೆಯೇ ಸಾಗುತ್ತದೆ. ದೇಶದ ಎಲ್ಲ ಮಹಾನಗರ, ಹಳ್ಳಿಗಳು ಹೀಗೆ ಎಲ್ಲೆಡೆ ಜೀವನ ಮಟ್ಟ ಸೋಮಾರಿತನದ ಸೌಲಭ್ಯಗಳನ್ನು ಒದಗಿಸುವುದರಲ್ಲಿ ಮಾತ್ರ ಸುಧಾರಣೆ ಕಂಡಿದೆ. ಆದರೆ ನಮ್ಮ ಇರುವಿಕೆಗೆ ಕಾರಣವಾದ ಮರ, ಗಿಡಗಳು, ಕಾಡು ಬೆಟ್ಟಗಳು, ಕೆರೆ ಕೊಳ್ಳಗಳ ನಾಶ ಅವ್ಯಾಹತವಾಗಿ ನಡೆದಿದೆ. ಈ ಸೃಷ್ಟಿಯು ನಮ್ಮಿಂದ ಏನೂ ನಿರೀಕ್ಷೆ ಮಾಡದೇ ಎಲ್ಲ ಸಂಪನ್ಮೂಲಗಳನ್ನು ನಮಗೆ ಕೊಟ್ಟಿದೆ. ಆದರೆ ಅದನ್ನು ಉಳಿಸಿಕೊಳ್ಳುವ ಪ್ರಯತ್ನ ನಮ್ಮಲ್ಲಿ ಇಲ್ಲ, ಅದು ಸುಧಾರಿಸುವ ಲಕ್ಷಣಗಳೂ ಇಲ್ಲ. ಹಾಗಾಗಿ ಜನ ಸಾಮಾನ್ಯರು ಬಂದದ್ದೆಲ್ಲವನ್ನು ಅನುಭವಿಸುತ್ತ ಬದುಕು ಕಳೆಯಬೇಕಾಗಿದೆ.

-ವಿದ್ಯಾ ಶಂಕರ ಶರ್ಮ

ಎಲ್ಲ ಕ್ರೀಡೆಗೂ ಬೇಕು ಪ್ರೋತ್ಸಾಹ

ಭಾರತ 140 ಕೋಟಿಗೂ ಹೆಚ್ಚು ಜನ ಸಂಖ್ಯೆಯೊಂದಿಗೆ ಪ್ರಪಂಚದಲ್ಲೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರವಾಗಿದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಇಷ್ಟು ಕೋಟಿ ಜನಸಂಖ್ಯೆ ಇದ್ದರೂ ಜಾಗತಿಕ ಮಟ್ಟದ ಕ್ರೀಡಾಕೂಟವಾದ ಒಲಿಂಪಿಕ್ಸ್‌ನಲ್ಲಿ ಹಿಂದಿನಿಂದಲೂ ಹೇಳಿಕೊಳ್ಳುವ ಮಟ್ಟಿಗೆ ಸಾಧನೆ ಮಾಡಿಲ್ಲ. ಸದ್ಯ ನಡೆಯುತ್ತಿರುವ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನಮ್ಮ ದೇಶದ ಕ್ರೀಡಾಪಟುಗಳು ಪದಕ ಬೇಟೆಯಲ್ಲಿ ಹಿಂದೆ ಬಿದ್ದಿದ್ದಾರೆ. ಇದಕ್ಕೆ ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಸಮಯ ಇದಾಗಿದೆ. ದೇಶದಲ್ಲಿ ಕ್ರೀಡೆ ಎಂದರೆ ಕ್ರಿಕೆಟ್ ಮಾತ್ರ ಎಂಬಂತಾಗಿದೆ. ಇಲ್ಲಿ ಕ್ರಿಕೆಟ್‌ಗೆ ನೀಡುವ ಪ್ರಮುಖ್ಯತೆ ಇತರೆ ಯಾವುದೇ ಕ್ರೀಡೆಗೆ ಇಲ್ಲದಿರುವುದು ದುರಾದೃಷ್ಟಕರ ಸಂಗತಿ. ಸದ್ಯ ಕ್ರಿಕೆಟ್ ಹುಚ್ಚಿನಿಂದ ಹೊರ ಬಂದು ಮೊದಲು ಇಲ್ಲಿ ಬೇರೆ ಕ್ರೀಡೆಗಳು ಇವೆ ಎಂಬುದನ್ನು ಗುರುತಿಸಬೇಕು. ಕೇಂದ್ರ ಮತ್ತು ರಾಜ್ಯ ಸರಕಾರಗಳು ಎಲ್ಲ ಕ್ರೀಡೆಗಳನ್ನು ಪ್ರೋತ್ಸಾಹಿಸಲು ಹೆಚ್ಚು ಹಣ ವ್ಯಯಿಸಬೇಕಾಗಿದೆ. ಉಚಿತ ಕ್ರೀಡಾ ಶಿಕ್ಷಣ, ಕ್ರೀಡಾಪಟುಗಳಿಗೆ ಹೆಚ್ಚು ಪ್ರಮಾಣದಲ್ಲಿ ಕ್ರೀಡಾ ವಿದ್ಯಾರ್ಥಿ ವೇತನ ನೀಡುವುದು. ಎಲ್ಲ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ದೈಹಿಕ ಶಿಕ್ಷಕರನ್ನು ನೇಮಿಸುವುದು, ಕ್ರೀಡಾ ಕೋರ್ಸ್‌ಗಳನ್ನು ಪ್ರಾರಂಭಿಸುವುದು, ಕ್ರೀಡಾಪಟುಗಳಿಗೆ ಉಚಿತ ವಸತಿ, ಆಹಾರ ಸೇರಿದಂತೆ ಅಗತ್ಯ ಸೌಕರ್ಯಗಳು ಒದಗಿಸಬೇಕು. ಒಲಿಂಪಿಕ್ಸ್‌ನಲ್ಲಿ ಅತಿ ಹೆಚ್ಚು ಪದಕಗಳಿಸುವ ದೇಶಗಳಲ್ಲಿ ಕ್ರೀಡೆಗಳಿಗೆ, ಕ್ರೀಡಾಪಟುಗಳಿಗೆ ಹೇಗೆ ಬೆಂಬಲ ನೀಡುತ್ತೀವೆ, ಪದಕಗಳಿಸಲು ಅವರು ಅನುಸರಿಸುತ್ತಿರುವ ಮಾರ್ಗಗಳ ಬಗ್ಗೆ ಅಧ್ಯಯನ ನಡೆಸಿ ಅವುಗಳಲ್ಲಿ ಸೂಕ್ತವಾದವುಗಳನ್ನು ನಮ್ಮ ದೇಶದಲ್ಲಿ ಅಳವಡಿಸಿಕೊಳ್ಳಬೇಕು. ಸದ್ಯ ಪದಕ ಗೆದ್ದರವರಿಗೆ ಸರಕಾರಗಳು ಸೇರಿದಂತೆ ಇತರರು ಕೋಟ್ಯಂತರ ರುಪಾಯಿ ಬಹುಮಾನ ಘೋಷಿಸಿರುವುದು ಸ್ವಾಗತ, ಇದೆ ಪ್ರೋತ್ಸಾಹವನ್ನು ಮೊದಲೇ ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ನೀಡಿದ್ದರೆ ಇನ್ನಷ್ಟು ಪದಕ ಸಿಗುತ್ತಿದ್ದವು. ಇನ್ನಾದರೂ ಈ ಬಗ್ಗೆ ಯೋಚಿಸಿದರೆ ಮಾತ್ರ ಜನಸಂಖ್ಯೆಯಲ್ಲಿ ನಂಬರ್ ಒನ್ ಸ್ಥಾನ ಪಡೆದಂತೆ ಒಲಿಂಪಿಕ್ಸ್‌ನಲ್ಲಿಯೂ ಮುಂದೊಂದು ದಿನ ಅಗ್ರ ಸ್ಥಾನ ಪಡೆಯಲು ಸಾಧ್ಯವಾಗಲಿದೆ.

-ಚನ್ನಕೇಶವ ಜಿ.ಕೆ ತರೀಕೆರೆ

ರಾಜಕೀಯದ ಲೆಕ್ಕಾಚಾರವೇ?

ಒಲಿಂಪಿಕ್ಸ್ ಕುಸ್ತಿ ಸ್ಪರ್ಧೆಯಲ್ಲಿ ಭಾರತದ ಮಹಿಳಾ ಕುಸ್ತಿಪಟು ವಿನೇಶ್ ಫೋಗಟ್ ಫೈನಲ್ ಪ್ರವೇಶಿಸಿದ ಬಳಿಕ ನೂರು ಗ್ರಾಂ ತೂಕ ಹೆಚ್ಚಳದ ಕಾರಣಕ್ಕೆ ಅವರನ್ನು ಅನರ್ಹಗೊಳಿಸಿರುವ ಸಂಗತಿ ಭಾರತೀಯರಲ್ಲಿ ಆಕ್ರೋಶ ಹಾಗೂ ನೋವಿಗೆ ಕಾರಣವಾಗಿದೆ. ಇದರ ಕುರಿತಾಗಿ ಕೇಂದ್ರ ಕ್ರೀಡಾ ಮಂತ್ರಿಗಳು ಭಾರತದ ಒಲಿಂಪಿಕ್ಸ್ ಸಮಿತಿಯು ತಕ್ಷಣವೇ ತೆಗೆದುಕೊಂಡ ಕ್ರಮಗಳ ಕುರಿತಾಗಿ ಸಂಸತ್ತಿನಲ್ಲಿ ಮಾಹಿತಿ ನೀಡಿದ್ದು ಸ್ವಾಗತಾರ್ಹ. ಆದರೆ ಮುಂದುವರಿದು ಆಕೆಗಾಗಿ ಕೇಂದ್ರ ಸರಕಾರ ಇದುವರೆಗೂ ಖರ್ಚು ಮಾಡಿರುವ ಕ್ರೀಡಾನಿಧಿಯ ಲೆಕ್ಕಾಚಾರವನ್ನು ಒಡವಾಡೆ ಮಾಡಿದ್ದು ಕೇಂದ್ರ ಕ್ರೀಡಾ ಸಚಿವರ ಕೀಳು ಮಟ್ಟದ ರಾಜಕೀಯ ಮನಸ್ಥಿತಿಗೆ ಸಾಕ್ಷಿಯಾಯಿತು. ಇಡೀ ದೇಶವೇ ಅಘಾತಕ್ಕೆ ಒಳಗಾಗಿರುವಾಗ ಈ ರೀತಿಯ ಲೆಕ್ಕಾಚಾರದ ರಾಜಕೀಯ ಶೋಭೆ ತರಲಾರದು. ಕ್ರೀಡಾಪಡುಗಳು ಯಾರು ಹಣ ಸಂಪಾದನೆಗಾಗಿ ಕ್ರೀಡೆಯಲ್ಲಿ ಭಾಗವಹಿಸುವುದಿಲ್ಲ, ಹಾಗೇನಾದರೂ ಇದ್ದರೆ ಪದಕ ಗೆಲ್ಲಲು ಸೆಮಿಫೈನಲ್ಸ್‌ನಲ್ಲಿ ವಿಶ್ವದ ನಂಬರ್ ಒನ್ ಸ್ಪರ್ಧಿಯನ್ನು ಸೋಲಿಸಲು ಅಷ್ಟೆಲ್ಲಾ ಪರಿಶ್ರಮ ಪಡಿಬೇಕಿತ್ತೇ? ಕ್ರೀಡಾಪಟುಗಳಿಗಾಗಿ ಸರಕಾರ ಅನುದಾನ ನೀಡುವುದು ಕ್ರೀಡಾಪಟುಗಳ ಮೇಲೆ ಮಾಡುತ್ತಿರುವ ಉಪಕಾರವಲ್ಲ ತಾನೇ? ಅದು ಪ್ರತಿಯೊಂದು ಸರಕಾರದ ಕರ್ತವ್ಯ. ಇದನ್ನು ತಮ್ಮ ಸಾಧನೆ ಎಂಬಂತೆ ಹೇಳಿಕೊಳ್ಳುವುದನ್ನು ಮೊದಲು ಬಿಡಬೇಕು. 140ಕೋಟಿ ಇರುವ ದೇಶದಲ್ಲಿ ಕ್ರೀಡೆಗಾಗಿ ಎಷ್ಟರ ಮಟ್ಟಿಗೆ ಪ್ರೋತ್ಸಾಹವಿದೆ ಎಂಬ ಸತ್ಯ ಎಲ್ಲರಿಗೂ ತಿಳಿದಿದೆ. ಇನ್ನೂ ಮುಂದೆಯಾದರೂ ಸಚಿವರು ಜವಾಬ್ದಾರಿಯುತ ಹೇಳಿಕೆ ನೀಡಲಿ.

-ಸುರೇಂದ್ರ ಪೈ ಭಟ್ಕಳ

ಓದುಗರ ಓಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಎಸ್.ರಮೇಶ್ ಬಳಗಲಿ, ಕಿರಗಂದೂರು, ಮಂಡ್ಯ**
ಭಟ್ರೇ, ಹಾಲನ್ನು ಲೀಟರಿನಿಂದಲೂ, ಬಟ್ಟೆಗಳನ್ನು ಮೀಟರಿನಿಂದಲೂ ಅಳೆಯುತ್ತಾರೆ. ಪಾದಯಾತ್ರೆಯನ್ನು?
- ಕಿಲೋಮೀಟರ್‌ನಿಂದ!

- **ಶ್ರೀನಿವಾಸ ರಾಘವೇಂದ್ರ, ಮೈಸೂರು**
ಭಟ್ರೇ, ಕಳೆದ ಬಾರಿ ದಸರಾ ಉದ್ಘಾಟನೆಗೆ 'ಹಂಸ' ಹಾರಿಬಂದಿತ್ತು. ಈ ಬಾರಿ?
- ಗಾನ ಕೋಗಿಲೆ (ಸಾಧು ಕೋಕಿಲ) ನಿರೀಕ್ಷೆ ಇಟ್ಟುಕೊಂಡಿದ್ದಾರಂತೆ!

- **ಚಂದ್ರಶೇಖರ ಜಗಾರೂ, (ಇಮೇಲ್ ಮೂಲಕ)**
ಭಟ್ರೇ, ಈ ದಿನಮಾನದ ದೊಡ್ಡ ಜೋಕ್ ಯಾವುದು?
- ಮೋದಿ ಪ್ರಧಾನಿಯಾದ್ರೆ ದೇಶ ಬಿಡ್ತೀನಿ ಎಂದವರು ಮೋದಿಗೆ ಜೈ ಎಂದಿದ್ದು!

- **ಪ್ರಶಾಂತ ಅಂಗಡಿ, ಧಾರವಾಡ**
ಭಟ್ರೇ, ಐವತ್ತು ವರ್ಷವಾದವರು ಲವ್ ಮಾಡಿ ಮದುವೆಯಾಗಬಹುದಾ?
- ತೊಂಬತ್ತು ವರ್ಷವಾದರೂ ಹಾಗೆ ಮದುವೆಯಾಗಬಹುದು!

- **ನಾಗೇಶ ಶೆಟ್ಟಿ, ಶಿರಸಿ**
ಭಟ್ರೇ, ವಯಸ್ಸಾದರೂ ಬುದ್ಧಿ ಬರುವುದಿಲ್ಲವಲ್ಲ?
- ವಯಸ್ಸಾದರೆ ಕೆಲವರಿಗೆ ಬುದ್ಧಿ ಹೋಗುತ್ತದೆ!

- **ರಾಮೇಗೌಡ ಕೆ., ಮಂಡ್ಯ**
ಭಟ್ರೇ, ಸಿದ್ದರಾಮಯ್ಯನವರು ಭೂಮಿ ಕಬಳಿಸಿದ್ದಾರೆ ಅಂದ್ರೆ ನಂಬಲು ಆಗ್ತಾ ಇಲ್ಲ, ಏಕೆ?
- ಇನ್ನು ಕೆಲವರು ನಾನು ಕುಳಿಸಿಲ್ಲ ಅಂದ್ರೂ ನಂಬಲು ಆಗುವುದಿಲ್ಲ!

- **ವಿ.ಪಿ.ರೋಹಿತ್ ಮೂರ್ತಿ, ಬೆಂಗಳೂರು**
ಭಟ್ರೇ, ಮನುಷ್ಯ ಹುಟ್ಟಿದರೂ ಖರ್ಚು, ಸತ್ತರೂ ಖರ್ಚು, ಬದುಕಿದರೂ ಖರ್ಚು ಅಲ್ಲವಾ?
- ಹುಟ್ಟಿಸಲೇಕೂಡದು ಎಂದು ತೀರ್ಮಾನಿಸಿದರೂ ಖರ್ಚು!

- **ಸತೀಶ್ ಚಿಣ್ಣದ, ಹುಬ್ಬಳ್ಳಿ**
ಭಟ್ರೇ, ನಾನು ನಡೆದು ಬಂದರೆ ಭೂಮಿಯೇ ಸಪಾಟು ಆಗುತ್ತದೆ ಅಂತಾರಲ್ಲ ಇಲ್ಲೇಕೆ?
- ನಾನು ಬಂದ್ರೆ ಚಿಟಿಪಿ ಥರಾ ಎಂದು ಹೇಳಿದರೆ ಚೆನ್ನಾಗಿರುವುದಿಲ್ಲವಲ್ಲ!

- **ಮುಳ್ಳೂರು ರಾಘು, ಮುಳ್ಳೂರು**
ಭಟ್ರೇ, ನೀವು ಆರ್.ಆರ್.ನಗರದ ಶೆಡ್ಡಿಗೆ ಹೋಗಿದ್ರಾ?
- ಕುಂಟಾಬಿಲ್ಲೆ ಆಡೋಣ ಅಂದ ಶೆಟ್ರು ಕೈಗೆ ಸಿಗ್ತಿಲ್ಲ!

ತಲತಲಾಂತರದಿಂದ ತಿನ್ನುತ್ತಿದ್ದ ತುಪ್ಪ ಈಗ ತಿಂದರೆ ತಪ್ಪಾ?

ತುಪ್ಪವು ನಮ್ಮ ಪಚನಶಕ್ತಿಯನ್ನು ಹೆಚ್ಚಿಸುತ್ತದೆ. ತುಪ್ಪವಿಲ್ಲದೆ ಹೇಗೆ ದೀಪ ಉರಿಯುವುದಿಲ್ಲವೋ ಹಾಗೆಯೇ ನಮ್ಮ ಜಾಠರಾಗ್ನಿಯ ಕಾರ್ಯಕ್ಷಮತೆಗೆ ತುಪ್ಪ ಅತ್ಯವಶ್ಯಕ. ತುಪ್ಪವು ವಾತ-ಪಿತ್ತಗಳನ್ನು ಶಮನ ಮಾಡಿ ದೇಹಕ್ಕೆ ತಂಪನ್ನೆರೆಯುತ್ತದೆ. ಸ್ವರವನ್ನು, ಕಾಂತಿಯನ್ನು ಹೆಚ್ಚಿಸುತ್ತದೆ. ತುಪ್ಪವು ಬುದ್ಧಿಶಕ್ತಿಯನ್ನು, ಸ್ಮರಣಶಕ್ತಿಯನ್ನು ಅಧಿಕಮಾಡುತ್ತದೆ. ತುಪ್ಪವು ನೇರವಾಗಿ ಮಿದುಳನ್ನು ಪ್ರವೇಶಿಸಿ ಇಡೀ ನರಮಂಡಲವನ್ನು ಪೋಷಿಸುತ್ತದೆ.

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
vveditoped@gmail.com

ಒಂದು ಸಂಶೋಧನೆಯ ಪ್ರಕಾರ ತುಪ್ಪದ ಬಳಕೆಯಿಂದ obesity, cholesterol, heart blocks, heart attacks, hypertension, PCOD, Jaundice ಮುಂತಾದ ಆರೋಗ್ಯ ಸಮಸ್ಯೆಗಳು ಕಂಡುಬರುತ್ತದೆ. ಮತ್ತೊಂದು ಸಂಶೋಧನೆಯು ತುಪ್ಪವನ್ನು ಶ್ಲಾಘಿಸುತ್ತಾ ಹೇಳುತ್ತದೆ- 'ತುಪ್ಪದ ಸೇವನೆಯಿಂದ Lifespan ಹೆಚ್ಚುತ್ತದೆ, cancer ಬರಲ್ಲ, heart muscles ಬಲಿಷ್ಠವಾಗುತ್ತವೆ, ಜೀರ್ಣಿಸುತ್ತದೆ, Anxiety - depression ದೂರವಾಗುತ್ತದೆ, Hormonal issues/ infertility ನಿವಾರಣೆಯಾಗುತ್ತದೆ ಎಂದು. ಈ ಎರಡೂ ಸಂಶೋಧನೆಗಳು ಮಾತನಾಡುತ್ತಿರುವುದು ಅದೇ ತುಪ್ಪದ ಬಗ್ಗೆ, ಹಾಗಾದರೆ ವ್ಯತ್ಯಾಸ ಎಲ್ಲಾಯಿತು? ಮೇಲೆ ಹೇಳಿದ ಎರಡು ಸಂಶೋಧನೆಗಳಲ್ಲಿ ವ್ಯತ್ಯಾಸವಾಗಿದ್ದು, ಉಪಯೋಗದಲ್ಲಿ ಇರಬೇಕಾದ ವಿವೇಚನೆ ಇಲ್ಲದಿರುವುದರಿಂದ. ಹೌದು ಸ್ನೇಹಿತರೆ, ಇವತ್ತಿನ ಆರೋಗ್ಯದ ಸಮಸ್ಯೆಗಳಿಗೆ ಕಾರಣ ತುಪ್ಪ ಎನ್ನುವ ಬದಲು ಅದರ ಉಪಯೋಗದಲ್ಲಿರಬೇಕಾದ ಹಿತ-ಮಿತ, ಸರಿ-ತಪ್ಪು ವಿಧಾನಗಳ ವಿವೇಚನೆಯ ಅಭಾವವೆನ್ನಬಹುದು. ಹರಿತವಾದ ಕತ್ತಿಯೊಂದು ತರಕಾರಿ ಕತ್ತರಿಸಲು ಉಪಯೋಗವಾದರೆ ಹಾಗೆ ಬೇರೆಯವರನ್ನು ಕೊಲ್ಲುವುದಕ್ಕೂ ಉಪಯೋಗವಾಗಬಹುದು. ಇಲ್ಲಿ ಇರುತ್ತ ಸಾಧನ ಕತ್ತಿಯಾದರೂ ವಾಸ್ತವವಾಗಿ ಕತ್ತಿ ಕಾರಣವಲ್ಲ, ಅದನ್ನು ಅಲ್ಲಿ ತಪ್ಪಾಗಿ ಬಳಸಿದ ಮಾನವನ ಅವಿವೇಕವೇ ಕಾರಣ. ಇದೇ ರೀತಿ ದೇಹದ ಸ್ವಾಸ್ಥ್ಯಕ್ಕಾಗಿ, ಶಾರೀರಿಕ ವರ್ಧನೆಗಾಗಿ, ಮಾನೋವಿಕಾಸಕ್ಕಾಗಿ, ಬುದ್ಧಿಯ ಬೆಳವಣಿಗೆಗಾಗಿ ತುಪ್ಪದ ಉಪಯೋಗ ಅತ್ಯಂತ ಅವಶ್ಯಕವೆಂದರೆ, ಎಷ್ಟೋ ಬಾರಿ ತುಪ್ಪದ ತಪ್ಪು ಉಪಯೋಗದಿಂದ ಆರೋಗ್ಯದ ಸಮಸ್ಯೆ ಕಂಡು ಬರುವುದು ನಿಜ. ಹಾಗಾದರೆ ಏನು ಮಾಡಬೇಕು? ತುಪ್ಪ ತಿನ್ನುವುದನ್ನು ನಿಲ್ಲಿಸಿಬಿಡಬೇಕಾ ಅನ್ನುವ ಸಂದಿಗ್ಧತೆ ಎಲ್ಲರನ್ನೂ ಕಾಡುತ್ತಾ ಇರಬಹುದು. ಇಂತಹ ಸಂದಿಗ್ಧ ಪರಿಸ್ಥಿತಿಯಿಂದ ಬಹಳ ಪ್ರೀತಿಯಿಂದ, ಸ್ನೇಹದಿಂದ ಆಯುರ್ವೇದವು ನಮ್ಮನ್ನೆಲ್ಲ ಪಾರು ಮಾಡುತ್ತದೆ. ಆಹಾರವಾದಂತೆ ಯಾವ ಉಪಾಯದಿಂದ ತುಪ್ಪವನ್ನು ಬಳಸಬೇಕು ಎಂಬ ವಿವೇಚನೆಯನ್ನು ನಮ್ಮೆಲ್ಲರಿಗೂ ಧಾರೆಯೆರೆದಿದೆ. ಬನ್ನಿ, ತುಪ್ಪವನ್ನು ತಪ್ಪಾಗದಂತೆ ಹೇಗೆ ಬಳಸಬೇಕೆಂಬ ಅಂತ ವಿವೇಚನೆಯ ಮೂಲಕ ತಿಳಿದುಕೊಳ್ಳುವ ಪುಟ್ಟ ಪ್ರಯತ್ನ ಮಾಡೋಣ.

ಆಹಾರವು ಸುಖಕರ, ಆರೋಗ್ಯಕರ ಬದುಕಿಗೆ ಬೇಕಾದ ಅವಿಭಾಜ್ಯ ಅಂಗ ಎಂಬುದು ನಿರ್ವಿವಾದ. ನಮ್ಮ ರೋಗ ಮತ್ತು ಆರೋಗ್ಯ- ಎರಡಕ್ಕೂ ನಾವು ಸೇವಿಸುವ ಆಹಾರವೇ ಕಾರಣ. ಆದ್ದರಿಂದ, ಸ್ವಾಸ್ಥ್ಯ ರಕ್ಷಣೆಯಲ್ಲಿ ಆಹಾರದ ಬಗ್ಗೆ ತಿಳುವಳಿಕೆ ಬಹಳ ಪ್ರಮುಖವಾದದ್ದು. ಯಾವ ಆಹಾರವನ್ನು ಸೇವಿಸಬೇಕು? ಹೇಗೆ? ಎಷ್ಟು? ಯಾವಾಗ? ಎನ್ನುವ ವಿಚಾರಗಳನ್ನು ಆಯುರ್ವೇದ ಸವಿವರವಾಗಿ ತಿಳಿಸಿಕೊಟ್ಟಿದೆ. ಈ ಆಹಾರವಿಜ್ಞಾನದ ತಿಳುವಳಿಕೆ ಇಲ್ಲದೆ ಆರೋಗ್ಯದ ರಕ್ಷಣೆ ಮತ್ತು ವರ್ಧನೆ ಅಸಾಧ್ಯ. ಆಹಾರ ಸೇವನಾ ನಿಯಮದಲ್ಲಿ ಬರುವ ಬಹಳ ಮುಖ್ಯವಾದ ನಿಯಮವೆಂದರೆ 'ಸ್ನಿಗ್ಧಂ ಅಶ್ನೀಯಾತ್' - ಅಂದರೆ ನಾವು ಸದಾ ಜಿಡ್ಡಿನಿಂದ ಕೂಡಿರುವ/ತಯಾರಿಸಿರುವ ಆಹಾರವನ್ನು ಮಾತ್ರ ಸೇವಿಸಬೇಕು ಎಂದರ್ಥ.

ಹಾಗಾದರೆ, ಆಯುರ್ವೇದದಲ್ಲಿ ಈ ಜಿಡ್ಡಿನ ಪದಾರ್ಥಗಳಿಗೆ ಯಾಕೆ ಅಷ್ಟೊಂದು ಮಹತ್ವವಿದೆ ಎಂಬ ವಿಷಯವನ್ನು ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯವಾಗುತ್ತದೆ. ಆಯುರ್ವೇದದಲ್ಲಿ ಹೆಚ್ಚಾಗಿ ಎಲ್ಲಾ ಜಿಡ್ಡಿನ ಪದಾರ್ಥಗಳನ್ನು 'ಸ್ನೇಹ' ಎಂದು ಕರೆದಿದ್ದಾರೆ. ಅರೇ, ಸಂಸ್ಕೃತದಲ್ಲಿ 'ಸ್ನೇಹ' ಅಂದರೆ 'ಬಂಧನ' ಅಂತ ಅರ್ಥ ಬರುತ್ತದೆ ಅಲ್ಲವೇ. ಆದರೆ ಜಿಡ್ಡಿನ ಪದಾರ್ಥಗಳಿಗೆ ಸ್ನೇಹ ಅಂತ ಯಾಕೆ ಕರೆದಿದ್ದಾರೆ? ಅದರಲ್ಲೇ ಇರುವುದು ಬಹಳ ಸ್ವಾರಸ್ಯಕರವಾದ ವಿಷಯ. ಸಂಸ್ಕೃತದಲ್ಲಿ ಸ್ನೇಹ ಎಂದರೆ ಪರಸ್ಪರ ಒಪ್ಪಿಗೆಯ ಬಂಧನ ಎಂದರ್ಥ. ಯಾವ ಪದಾರ್ಥವು ಎರಡು ಅಥವ ಅನೇಕ ವಸ್ತುಗಳಲ್ಲಿ ಪರಸ್ಪರ ಒಪ್ಪಿಗೆಯ ಒಕ್ಕೂಟವನ್ನು ಹಿಡಿದಿಡುತ್ತದೆಯೋ ಅದುವೇ ಸ್ನೇಹ. ನಮ್ಮ ಜೀವವೂ ಸಹ ಒಂದು ಸುಂದರವಾದ ಒಕ್ಕೂಟ. ಶರೀರ-ಇಂದ್ರಿಯ-ಮನಸ್ಸು-ಆತ್ಮ, ಈ ನಾಲ್ಕರ ಒಕ್ಕೂಟ. ಈ ಒಕ್ಕೂಟದಲ್ಲಿ ಬಿರುಕುಂಟಾದರೆ ಅದುವೇ ರೋಗ. ಈ ಬಿರುಕು ಬೆಳೆದು ಒಕ್ಕೂಟ ನಾಶವಾದರೆ ಅದುವೇ ಮರಣ. ಹಾಗಾದರೆ, ಈ ನಾಲ್ಕು ಪದಾರ್ಥಗಳ ಒಕ್ಕೂಟವನ್ನು ಒಟ್ಟಿಗೆ ಸೇರಿಸಿ ಬಂಧಿಸಿ, ಭದ್ರವಾಗಿ, ಗಟ್ಟಿಯಾಗಿ ಇರುವ ಹಾಗೆ ಮಾಡುವುದು ಯಾರು? ಅದೇ ಸ್ನೇಹ ದ್ರವ್ಯಗಳ ಕೆಲಸ. ಹೌದು! ಚಿಕ್ಕ ಚಿಕ್ಕ ಅಣುಗಳಿಂದ ಹಿಡಿದು ದೊಡ್ಡ ದೊಡ್ಡ ಅವಯವಗಳವರೆಗೂ ಎಲ್ಲವನ್ನೂ ಒಂದು ವ್ಯವಸ್ಥಿತ ರೀತಿಯಲ್ಲಿ ಒಗ್ಗೂಡಿಸುವ ವಸ್ತುವೆ ಸ್ನೇಹ/ ಜಿಡ್ಡಿನ ಪದಾರ್ಥ. ಜಿಡ್ಡಿನ ಪದಾರ್ಥಗಳಿಲ್ಲದೆ ನಮ್ಮ ಉಳಿವು ಅಸಾಧ್ಯ. ಸ್ನೇಹ ಪದಾರ್ಥಗಳಿಂದಲೇ ನಮ್ಮ ಆಯುವಿನ ಒಕ್ಕೂಟದಲ್ಲಿ ಬಂಧನ ಸಾಧ್ಯ. ಸ್ನೇಹ ಪದಾರ್ಥಗಳಿಂದಲೇ ನಮ್ಮ ಆಯಸ್ಸು. ಈ ಕಾರಣದಿಂದಲೇ ಆಯುರ್ವೇದವು ಜಿಡ್ಡಿನ ಪದಾರ್ಥಗಳಿಗೆ ಅತ್ಯಂತ ಮಹತ್ವ ನೀಡಿದೆ. ಆಯುರ್ವೇದವು ಕೇವಲ ನಾಲ್ಕು ಪದಾರ್ಥಗಳನ್ನು ಮಾತ್ರ ಸ್ನೇಹ ದ್ರವ್ಯಗಳೆಂದು ಗುರುತಿಸಿದೆ - ತುಪ್ಪ, ತೈಲ (ಎಣ್ಣೆ), ವಸಾ(ಚರ್ಬಿ) ಮತ್ತು ಮಜ್ಜಾ (ಮೂಳೆಗಳಲ್ಲಿರುವ ಸ್ನೇಹ).

ನಮ್ಮ ಆಯಸ್ಸನ್ನು ಗಟ್ಟಿ ಮಾಡುವ ಈ ಪ್ರಮುಖ ನಾಲ್ಕು ಸ್ನೇಹಗಳಲ್ಲಿ ತುಪ್ಪವು ಅತ್ಯಂತ ಪ್ರಶಸ್ತವಾದದ್ದು ಎಂಬುದು ಎಲ್ಲ ಆಯುರ್ವೇದ ಶಾಸ್ತ್ರಜ್ಞರ ಅಭಿಮತ. ತುಪ್ಪವು ಆಬಾಲವೃದ್ಧರಲ್ಲೂ ಉಪಯುಕ್ತ. ಆರೋಗ್ಯವಂತರ ಆರೋಗ್ಯ ರಕ್ಷಣೆಯಲ್ಲಿ ಹಾಗೂ ರೋಗಿಗಳ ರೋಗ ನಿವಾರಣೆಯಲ್ಲೂ ಇದರ ಪಾತ್ರ ಗಣನೀಯವಾದದ್ದು. ಹಾಗಾಗಿಯೇ ಈ ಅಮೃತ ಪ್ರಾಯವಾದ ತುಪ್ಪದ ಬಗ್ಗೆ ಸರಿಯಾಗಿ ತಿಳಿಯುವುದು, ತಿಳಿದುಕೊಂಡು ಉಪಯೋಗಿಸುವುದು ಅತ್ಯವಶ್ಯಕ. ತುಪ್ಪದ ಬಗ್ಗೆ ಶಾಸ್ತ್ರದಲ್ಲಿ 'ದೇವಾನಾಂ ಆಜ್ಯಮಾಹಾರಮ್' ಅಂತ ಹೇಳಿದ್ದಾರೆ. ಅಂದರೆ ತುಪ್ಪವು ದೇವತೆಗಳ ಆಹಾರವು ಎಂದರ್ಥ. ಇದು ಮಾನವನಿಗೆ ಮಾತ್ರವಲ್ಲದೆ ದೇವತೆಗಳ ಬದುಕಿಗೂ ಅತ್ಯಗತ್ಯ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದಲೇ ತುಪ್ಪಕ್ಕೆ ಅಮೃತಾ ಎಂಬ ಹೆಸರು ಅನ್ವರ್ಥವಾಗಿದೆ. ತುಪ್ಪವು ಜೀವನದ ಘಟಕಗಳಾದ ಶರೀರದ ಪೋಷಣೆಗೂ, ಇಂದ್ರಿಯಗಳ ಬಲಕ್ಕೂ, ಅಷ್ಟೇ ಅಲ್ಲದೆ ಮನಸ್ಸಿನ ಸ್ವಾಸ್ಥ್ಯ ಹಾಗೂ ಪ್ರಸನ್ನತೆಗೂ ಬೇಕಾದ ಅತಿ ಮುಖ್ಯವಾದ ಪದಾರ್ಥ. ಮಾನಸಿಕ ಖಾಯಿಲೆಗಳಿರುವ ಹಲವಾರು ರೋಗಿಗಳ historyಕೇಳಿದಾಗ ಅವರಿಗೆ ತುಪ್ಪ ತಿನ್ನುವ ಅಭ್ಯಾಸವೇ ಇಲ್ಲದಾಗಿರುತ್ತದೆ. ಹೀಗಾಗಿ, ಮನಸ್ಸಿಗೆ ಪೋಷಣೆ ಸಿಗದೆ ಅದು ಬಹಳ ಬೇಗ ಖಿನ್ನತೆಗೆ/ ಮಾನಸಿಕ ವ್ಯಾಧಿಗಳಿಗೆ ತುತ್ತಾಗುತ್ತದೆ. ಇಂತಹ ಸ್ಥಿತಿಯಲ್ಲಿ ತುಪ್ಪದಿಂದ ತಯಾರಿಸಿದ ಔಷಧಿಗಳನ್ನು ಕೊಟ್ಟಾಗ ಬಹಳ ಬೇಗ ಗುಣಮುಖರಾಗುವುದನ್ನು ನಾವು ಕಂಡಿದ್ದೇವೆ.

ಬೇರೆ ಆಹಾರ ದ್ರವ್ಯಗಳು ಜೀವ ಘಟಕಗಳ ಪ್ರತ್ಯೇಕ ಪೋಷಣೆಗೆ ಮಾತ್ರ ಕಾರಣವಾದರೆ, ತುಪ್ಪವು ನಮ್ಮ ಜೀವದ ಎಲ್ಲಾ ಘಟಕಗಳ ಪರಿಪೂರ್ಣ ಪೋಷಣೆಯನ್ನು ಮಾಡುತ್ತದೆ. ಹಾಗಾಗಿ ತುಪ್ಪವು ನಮ್ಮ superhero.ಈ superheroನಲ್ಲಿ ಇರುವ ಔಷಧೀಯ ಗುಣಗಳ ಬಗ್ಗೆ ಸ್ವಲ್ಪ ಗಮನಹರಿಸೋಣ. ಸಂಸ್ಕೃತದಲ್ಲಿ ತುಪ್ಪಕ್ಕೆ ಬೇರೆ ಬೇರೆ ಹೆಸರುಗಳಿವೆ. ಒಂದೊಂದು ಹೆಸರು ತುಪ್ಪದ ಒಂದೊಂದು ಗುಣವನ್ನು/ ಕಾರ್ಯವನ್ನು ಸೂಚಿಸುತ್ತದೆ. ತುಪ್ಪಕ್ಕೆ ಘೃತ ಎಂದು ಹೇಳುತ್ತಾರೆ- ಅಂದರೆ ಜೀವಕೋಶಗಳಿಗೆ ಜೀವ ತುಂಬುವಂಥದ್ದು (fuel) ಅಥವಾ ಜೀವ ಕೋಶಗಳಿಗೆ ಅಂಟಿದ ಕೊಳೆಯನ್ನು ತೆಗೆದು (detoxify)ಅವುಗಳನ್ನು ಪ್ರಜ್ವಲಿಸುವಂತೆ ಮಾಡುವಂಥದ್ದು ಎಂದರ್ಥ. ತುಪ್ಪಕ್ಕಿರುವ ಮತ್ತೊಂದು ಹೆಸರು ಆಜ್ಯ- ಜೀವಕೋಶಗಳ ಕಾರ್ಯಗಳನ್ನು ಸರಿಯಾಗಿ ವ್ಯಕ್ತಪಡಿಸುವಂಥದ್ದು. ಉದಾಹರಣೆಗೆ ಕಣ್ಣಿನ ದೃಷ್ಟಿಯನ್ನು ಉತ್ತಮವಾಗಿಸುವುದು. ತುಪ್ಪಕ್ಕಿರುವ ಇನ್ನೊಂದು ನಾಮ - ಸರ್ಪಿ - ದೇಹದಲ್ಲಿ ಚುರುಕಾಗಿ ಕಾರ್ಯ ನಿರ್ವಹಿಸುವಂಥದ್ದು. Ghee acts as a catalyst for many chemical processes in the body.

ಅಮೃತಾ ತುಪ್ಪದ ಅನ್ವರ್ಥ -ಜೀವಕೋಶಗಳ ನಾಶವನ್ನು ತಡೆಯುವಂಥದ್ದು ಎಂದರ್ಥ. It arrests ageing to become the best anti-ageing agent. ಮುಪ್ಪನ್ನು ತಡೆಯುತ್ತದೆ.

ಈ ಹೆಸರುಗಳಲ್ಲದೆ ತುಪ್ಪದ ಇನ್ನಿತರ ಗುಣ ಧರ್ಮಗಳ ಬಗ್ಗೆ ತಿಳಿಯೋಣ. ತುಪ್ಪವು ನಮ್ಮ ಪಚನಶಕ್ತಿಯನ್ನು ಹೆಚ್ಚಿಸುತ್ತದೆ. ತುಪ್ಪವಿಲ್ಲದೆ ಹೇಗೆ ದೀಪ ಉರಿಯುವುದಿಲ್ಲವೋ ಹಾಗೆಯೇ ನಮ್ಮ ಜಾಠರಾಗ್ನಿಯ ಕಾರ್ಯಕ್ಷಮತೆಗೆ ತುಪ್ಪ ಅತ್ಯವಶ್ಯಕ. ತುಪ್ಪವು ವಾತ-ಪಿತ್ತಗಳನ್ನು ಶಮನ ಮಾಡಿ ದೇಹಕ್ಕೆ ತಂಪನ್ನೆರೆಯುತ್ತದೆ. ಸ್ವರವನ್ನು, ಕಾಂತಿಯನ್ನು ಹೆಚ್ಚಿಸುತ್ತದೆ. ತುಪ್ಪವು ಬುದ್ಧಿಶಕ್ತಿಯನ್ನು, ಸ್ಮರಣಶಕ್ತಿಯನ್ನು ಅಧಿಕಮಾಡುತ್ತದೆ. ತುಪ್ಪವು ನೇರವಾಗಿ ಮಿದುಳನ್ನು ಪ್ರವೇಶಿಸಿ ಇಡೀ ನರಮಂಡಲವನ್ನು ಪೋಷಿಸುತ್ತದೆ. ತುಪ್ಪದ ವಿನಃ ಬೇರೆ ಯಾವ ದ್ರವ್ಯಕ್ಕೂ ಈ ಸಾಮರ್ಥ್ಯವಿಲ್ಲ. ತುಪ್ಪವು ಮನಸ್ಸನ್ನು ಪೋಷಿಸಿ ಸತ್ತ್ವಗುಣವನ್ನು ವೃದ್ಧಿ ಮಾಡುತ್ತದೆ. ಉನ್ಮಾದ - ಅಪಸ್ಮಾರಗಳನ್ನು ಪ್ರಶಮನ ಮಾಡಲು ಲಾಭಕಾರಿ. ಎಲ್ಲ ಇಂದ್ರಿಯಗಳಿಗೆ ಪುಷ್ಟಿ ನೀಡಿ ವಿಶೇಷವಾಗಿ ದೃಷ್ಟಿಶಕ್ತಿಯನ್ನು ಚುರುಕುಗೊಳಿಸುತ್ತದೆ. ತುಪ್ಪವು ಉತ್ತಮ ರಸಾಯನವೂ ಹೌದು. ಮುಪ್ಪಿನ ಲಕ್ಷಣಗಳನ್ನು ನಿಧಾನಗೊಳಿಸುತ್ತದೆ. ತುಪ್ಪವು ದೇಹದಲ್ಲಿನ ರಸಧಾತುವನ್ನು ಹೆಚ್ಚಿಸಿ, ದೇಹಕ್ಕೆ ಪುಷ್ಟಿಯನ್ನು ನೀಡಿ ಚರ್ಮಕ್ಕೆ ಹಾಗೂ ಕೂದಲಿಗೆ ಕಾಂತಿಯನ್ನು ನೀಡುತ್ತದೆ. ಅಂತೆಯೇ, ಶುಕ್ರಧಾತುವನ್ನು ವೃದ್ಧಿಸಿ ಉತ್ತಮ ಪ್ರಜೆಯನ್ನು ನೀಡುತ್ತದೆ. It boosts fertility and reproductive health.ತುಪ್ಪವು ಓಜಸ್ಸನ್ನು ಅಧಿಕ ಮಾಡಿ ದೇಹದ ಬಲ, ವ್ಯಾಧಿಕ್ಷಮತ್ವ ಹಾಗೂ ಆಯಸ್ಸನ್ನು ಹೆಚ್ಚಳ ಮಾಡುತ್ತದೆ. Best for immunity building!ಮೂಳೆ-ಸಂಧಿಗಳನ್ನು ಗಟ್ಟಿ ಮಾಡಿ ಕೇಶರಾಶಿಯನ್ನು ಹೇರಳಗೊಳಿಸುತ್ತದೆ. ಶಸ್ತ್ರಾಘಾತ ಅಥವ ಶಸ್ತ್ರಕರ್ಮಗಳ ಚಿಕಿತ್ಸೆಯಲ್ಲಿ ಹಾಗೂ ನಂತರ ಇದರ ಪ್ರಯೋಗ ಮತ್ತು ಪರಿಣಾಮ ಗಮನಾರ್ಹ. ಬಾಣಂತನದಲ್ಲಂತೂ ತುಪ್ಪದ ಮಹತ್ವವನ್ನು ವಿವರಿಸುವ ಅಗತ್ಯವೇ ಇಲ್ಲ.

ತುಪ್ಪವು ರಕ್ತನಾಳಗಳನ್ನು ಸ್ವಚ್ಛವಾಗಿರಿಸಿ ಹೃದಯವನ್ನು ಆರೋಗ್ಯಕರವಾಗಿ ಇಡುತ್ತದೆ. ಇದು ನಾಲಿಗೆಗೂ ಸಿಹಿ ಹಾಗೂ ಜೀರ್ಣದ ನಂತರದ ಪರಿಣಾಮವೂ ಸಿಹಿಯಾಗಿರುವುದರಿಂದ ಧಾತುಗಳ ಉತ್ಪತ್ತಿ, ಏರುಪೇರುಗಳ ಸರಿಪಡಿಕೆ ಹಾಗೂ ವಿಕೃತಿಗಳ ಪ್ರಶಮನಕ್ಕೆ ಸಹಾಯಕಾರಿ. It helps in tissue building and repair. ತುಪ್ಪವು ಶೀತ ವೀರ್ಯವಾದ್ದರಿಂದ ವ್ಯಾಧಿಯಿಂದ ಆಗುವ ಉದ್ರೇಕತೆಯನ್ನು ನಿಯಂತ್ರಿಸುತ್ತದೆ, ಅಂತೆಯೇ ಮಾನಸಿಕ ಉದ್ರೇಕತೆಯನ್ನು ಸಹ ಕಡಿಮೆ ಮಾಡುತ್ತದೆ. ತುಪ್ಪದ ಮತ್ತೊಂದು ಅಂಶವೆಂದರೆ ಇದು ಒಂದು ವಿಷಹರ ದ್ರವ್ಯ. ನಾವು ಪ್ರತಿನಿತ್ಯ ಬಳಸುವ ಆಹಾರ ಎಷ್ಟೋ ಬಾರಿ ವಿರುದ್ಧ ಗುಣವುಳ್ಳ ವಸ್ತುಗಳಿಂದ ಕೂಡಿದ್ದು ವಿಷವಾಗಿ ಸಂಭವಿಸುವ ಸಾಧ್ಯತೆ ಇದೆ. ಅಲ್ಲದೆ ಇಂದಿನ ಕೆಮಿಕಲ್ ಕಾಲದಲ್ಲಿ ವಿಷಮಯ ಪದಾರ್ಥಗಳು ನಮಗೆ ತಿಳಿದೋ ತಿಳಿಯದೆಯೋ ಎಷ್ಟೋ ಬಾರಿ ನಮ್ಮ ದೇಹವನ್ನು ಪ್ರವೇಶಿಸುತ್ತದೆ. ಉದಾಹರಣೆಗೆ pesticides, chemical fertilizers ಇತ್ಯಾದಿ. ತುಪ್ಪವು ವಿಷಹ ದ್ರವ್ಯವಾಗಿರುವುದರಿಂದ ಈ ಎಲ್ಲ ವಿಷಗಳ ಪರಿಣಾಮವನ್ನು ನಿವಾರಿಸಿ ಪ್ರಾಣರಕ್ಷಣೆ ಮಾಡುತ್ತದೆ. It acts as an antidote to toxins.

ಒಟ್ಟಾರೆ ಸ್ವಾಸ್ಥ್ಯಮಯವಾದ, ನೂರು ವರುಷದ ತುಂಬು ಜೀವನವನ್ನು ನಡೆಸುವುದಕ್ಕೆ ನಮಗೆ ಅಗತ್ಯವಿರುವ ಅತಿ ಮುಖ್ಯವಾದ ವಸ್ತುವೆಂದರೆ ತುಪ್ಪ. ಹಾಗಾಗಿ, ಇದನ್ನು ನಮ್ಮ ದಿನನಿತ್ಯದ ಆಹಾರದಲ್ಲಿ ಅಳವಡಿಸಿಕೊಳ್ಳುವುದು ಅತ್ಯಾವಶ್ಯಕ. ಸ್ನೇಹಿತರೆ, ನೆನಪಿಟ್ಟುಕೊಳ್ಳಿ ಬೇರೆ ಬೇರೆ ಪ್ರಾಣಿಗಳ ಹಾಲಿನಂತೆ ಬೇರೆ ಬೇರೆ ಪ್ರಾಣಿಗಳ ತುಪ್ಪವೂ ಬೇರೆ ಬೇರೆ ಗುಣವುಳ್ಳದ್ದಾಗಿರುತ್ತದೆ. ವಸ್ತುತಃ, ಈ ಮೇಲೆ ನಾನು ಹೇಳಿದ ತುಪ್ಪದ ಗುಣಗಳು ವಿಶೇಷವಾಗಿ ಅನ್ವಯವಾಗುವುದು ಹಸುವಿನ ತುಪ್ಪಕ್ಕೆ ಮಾತ್ರ. ಹಾಗಾಗಿ ದಿನ ನಿತ್ಯದ ಬಳಕೆಗೆ ಹಸುವಿನ ತುಪ್ಪ ಬಹಳ ಉತ್ತಮವಾದದ್ದು.

ಹಾಗಾದರೆ, ಸ್ವಾಸ್ಥ್ಯ ಸಾಧನೆಗೆ ಈ ತುಪ್ಪವನ್ನು ಹೇಗೆ ಬಳಸಬೇಕು ಎಂದು ತಿಳಿದುಕೊಳ್ಳುವುದು ಮುಖ್ಯವಾಗುತ್ತದೆ. 1.ತುಪ್ಪವನ್ನು ನಮಗೆ ಹಸಿವೆ ಇದ್ದಾಗ ಮಾತ್ರ ಆಹಾರದಲ್ಲಿ ಬಳಸಬೇಕು. 2. ನಮ್ಮ ಜೀರ್ಣಶಕ್ತಿಗೆ ಅನುಗುಣವಾಗಿ ತುಪ್ಪದ ಬಳಕೆಯ ಪ್ರಮಾಣವನ್ನು ನಾವೇ ನಿರ್ಧರಿಸಿಕೊಂಡು ಬಳಸಬೇಕು. ಅಂದರೆ ನಾವು ಬೆಳಗ್ಗಿನ ಉಪಹಾರದಲ್ಲಿ ತೆಗೆದುಕೊಂಡ ತುಪ್ಪವು ಯಾವುದೇ ಸಮಸ್ಯೆ ಇಲ್ಲದೆ ನಮ್ಮ ಮಧ್ಯಾಹ್ನದ ಆಹಾರಕಾಲದ ಒಳಗೆ ಸಂಪೂರ್ಣವಾಗಿ ಜೀರ್ಣವಾಗಿ ಮತ್ತೆ ಚೆನ್ನಾಗಿ ಹಸಿವೆಯಾಗಬೇಕು. ಇದು ನಮಗೆ ಸರಿಯಾದ ತುಪ್ಪದ ಪ್ರಮಾಣವಾಗುತ್ತದೆ. 3.ತುಪ್ಪವನ್ನು ಸದಾ ಕರಗಿಸಿಯೇ ಬಳಸಬೇಕು. ಫ್ರಿಡ್ಜ್‌ನಲ್ಲಿ ಇಟ್ಟು ಗಟ್ಟಿಯಾದ ತುಪ್ಪದ ಬಳಕೆ ನಿಷಿದ್ಧ. 4.ಯಾವಾಗಲೂ ಬಿಸಿಯಾದ ಆಹಾರದ ಜೊತೆ ಮಾತ್ರ ತುಪ್ಪವನ್ನು ಬಳಸಬೇಕು. 5.ತುಪ್ಪದ ಆಹಾರದ ಸೇವನೆಯ ಜೊತೆ ಸದಾ ಬಿಸಿ ನೀರನ್ನು ಸೇವಿಸಬೇಕು. ತುಪ್ಪದಿಂದ ತಯಾರಿಸಿದ ಆಹಾರವನ್ನು ಸೇವಿಸಿ ತಣ್ಣೀರು/ಜ್ಯೂಸ್/ಕೋಲ್ಡ್ ಡ್ರಿಂಕ್ಸ್/ಐಸ್ ಕ್ರೀಮ್ ಬಳಕೆಯಿಂದ ತೊಂದರೆ ತಪ್ಪಿದ್ದಲ್ಲ. 6.ತುಪ್ಪದ ಸೇವನೆಯಲ್ಲಿದ್ದಾಗ ವ್ಯಾಯಾಮವನ್ನು ಮಾಡಲೇಬೇಕು.

ಹೀಗೆ, ನಾನು ಹೇಳಿದ ರೀತಿಯಲ್ಲಿ ತುಪ್ಪವನ್ನು ಸೇವಿಸಿದಾಗ, ತುಪ್ಪ ಅಮೃತವಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಹಾಗಾದರೆ, ತುಪ್ಪ ತಿಂದರೆ ದಪ್ಪ ಆಗೋದಿಲ್ಲವಾ ಅನ್ನುವ ಪ್ರಶ್ನೆಗೆ ನಾನು ಕೊಡುವ ಉತ್ತರವೇನೆಂದರೆ - ವ್ಯಾಯಾಮ, ದೇಹದ ಶ್ರಮ, ಜೀರ್ಣಶಕ್ತಿ ಮುಂತಾದವುಗಳನ್ನು ಗಮನಿಸದೇ ಸೇವಿಸಿದ ತುಪ್ಪವು ಅಥವಾ ವ್ಯಾಯಾಮಾದಿಗಳನ್ನು ಮಾಡದಿದ್ದಾಗ ಸೇವಿಸುದ ತುಪ್ಪವು ಸಂಪೂರ್ಣವಾಗಿ ಜೀರ್ಣಗೊಂಡು ಮಾರ್ಪಾಡಾಗದೆ ಸ್ಥೌಲ್ಯ ರೋಗವನ್ನು ಹಾಗೂ ದೇಹದಲ್ಲಿ ಹೆಚ್ಚಿನ ಮೇದಸ್ಸನ್ನು ಉಂಟುಮಾಡುವ ಸಂಭವ ಹೆಚ್ಚು. ಇದಕ್ಕೆ ತುಪ್ಪ ಕಾರಣವಲ್ಲ, ನಮ್ಮ ಕ್ರಮ ರಹಿತ ಉಪಯೋಗವೇ ಕಾರಣ. ಸ್ನೇಹಿತರೆ, ಆಯುರ್ವೇದ ಗ್ರಂಥಗಳು ಉಲ್ಲೇಖಿಸುವ ಮತ್ತು ನಮ್ಮ ಹಿಂದಿನ ತಲೆಮಾರಿನ ಹಿರಿಯರು ಜೀವನದಲ್ಲಿ ಎಂದಿಗೂ ಉನ್ನತವಾದ, ಅಮೃತದಂತಹ ಸ್ಥಾನದಲ್ಲಿ ಇರಿಸಲ್ಪಟ್ಟು, ಸೇವಿಸಲ್ಪಟ್ಟ ತುಪ್ಪವು ಮತ್ತೆ ನಮ್ಮ ಬದುಕಿನಲ್ಲಿ ವಿವೇಚನಾಪೂರ್ವಕವಾಗಿ ಬಳಕೆಯಾಗಿ ನಮಗೆ ಆಯುರಾರೋಗ್ಯವನ್ನು ಕೊಟ್ಟು ಕಾಪಾಡಲಿ ಎಂದು ಆಶಿಸುತ್ತಾ, ತುಪ್ಪ ಬಳಸುವುದಕ್ಕೆ ಭಯ ಬೇಡ ಎಂದು ಪ್ರೇರೇಪಿಸುತ್ತಾ ಈ ಲೇಖನವನ್ನು ಇಲ್ಲಿಗೆ ಸಂಪನ್ನಗೊಳಿಸುತ್ತೇನೆ.

ಚಿನ್ನದ ಪದಕ ಗೆಲ್ಲದಿದ್ದರೂ ಚಿನ್ನದ ಹುಡುಗಿಯಾದಳು!

ಆಟ-ಪಾಠ
ಮರಿಲಿಂಗಗೌಡ ಮಾಲಿಪಾಟೀಲ್
vveditoped@gmail.com

ಪ್ಯಾರಿಸ್ ಒಲಿಂಪಿಕ್ಸ್‌ನ ಪದಕ ಪಟ್ಟಿಯಲ್ಲಿ ಭಾರತದ ಹೆಸರಿನ ಮುಂದೆ ಕೇವಲ 3 ಕಂಚಿನ ಪದಕಗಳು ಎನ್ನುವ ನಿರಾಸೆಯ ಕಾರ್ಮೋಡದ ನಡುವೆ ವಿನೇಶ್ ಫೋಗಟ್ ಎಂಬ ಭರವಸೆಯ ಹೊಂಗಿರಣ ಕಾಣಿಸಿಕೊಂಡಿತ್ತು. ಆರಂಭಿಕ ಪಂದ್ಯದಲ್ಲಿ ಜಪಾನ್‌ನ ಯುಯಿ ಸುಸಾಕಿ ವಿರುದ್ಧ, ಕ್ವಾರ್ಟರ್ ಫೈನಲ್‌ನಲ್ಲಿ ಯುರೋಪಿಯನ್ ಮಾಜಿ ಚಾಂಪಿಯನ್ ಉಕ್ರೇನಿನ ಓಕ್ಸಾನಾ ಅವರನ್ನು, ಸೆಮಿಫೈನಲ್‌ನಲ್ಲಿ ಕ್ಯೂಬಾದ ಯೂಸ್ನೇಯಿಲ್ ಗುಜ್ಮನ್‌ರನ್ನು ಸೋಲಿಸಿ ವಿನೇಶ್ ಫೋಗಟ್ ಫೈನಲ್‌ಗೆ ಹೆಜ್ಜೆ ಇರಿಸಿದ್ದರು. ಚಿನ್ನದ ಪದಕ ಸಿಗುವ ಭರವಸೆ ಇತ್ತು. ಬೆಳ್ಳಿ ಖಚಿತವಿತ್ತು.

ಆದರೆ... ಸೆಮಿಫೈನಲ್ ಸ್ಪರ್ಧೆಯನ್ನು ಮುಗಿಸಿದ ಆ ಸಂಜೆ ತನ್ನ ದೇಹತೂಕ ಹೆಚ್ಚಾಗಿರುವುದು ವಿನೇಶ್‌ಗೆ ತಿಳಿಯುತ್ತದೆ. ಅದನ್ನು ಇಳಿಸಲು ಇನ್ನಿಲ್ಲದ ಕಸರತ್ತು ನಡೆಯಿತು. ಇಡೀ ರಾತ್ರಿ ನಿದ್ರೆ ಮಾಡಲಿಲ್ಲ. ಸ್ಕಿಪ್ಪಿಂಗ್, ರನ್ನಿಂಗ್, ಸೈಕ್ಲಿಂಗ್ ಎಕ್ಸರ್‌ಸೈಸ್ ಮಾಡಿದರು, ಸ್ಟೀಮ್ ಬಾತ್ ಮೂಲಕ ಬೆವರು ಹರಿಸಿದರು, ಯಾವ ಆಹಾರವನ್ನೂ ಸೇವಿಸಲಿಲ್ಲ, ಕೂದಲು ಕತ್ತರಿಸಿಕೊಂಡರು, ಕೊನೆಗೆ ದೇಹದಿಂದ ರಕ್ತವನ್ನೂ ತೆಗೆಯಲಾಯಿತು. ಏನೆಲ್ಲ ಮಾಡಿದರೂ ಬುಧವಾರ ತೂಕ ಪರೀಕ್ಷೆ ಮಾಡುವ ವೇಳೆಗೆ 100 ಗ್ರಾಂ ಅಧಿಕ ತೂಕ ಉಳಿದೇ ಉಳಿಯಿತು. ಒಲಿಂಪಿಕ್ಸ್ ನಿಯಮದ ಪ್ರಕಾರ ಫೋಗಟ್ ಅನರ್ಹರಾಗುತ್ತಾರೆ. ಯಾರಿಗೆ 2ನೇ ಸ್ಥಾನ ಆಗಲೇ ಒಲಿದಿತ್ತೋ, ಪ್ರಥಮ ಸ್ಥಾನದ ಸಾಧ್ಯತೆಗಳಿತ್ತೋ, ಅವರು ಅಂತಾರಾಷ್ಟ್ರೀಯ ಕುಸ್ತಿ ನಿಯಮಗಳ ಪ್ರಕಾರ ಅಂತಿಮ ಸ್ಥಾನಕ್ಕೆ ಕುಸಿಯುತ್ತಾರೆ.

ಕೋಟ್ಯಂತರ ಭಾರತೀಯ ಕ್ರೀಡಾಭಿಮಾನಿಗಳ ಹೃದಯ ಆಗಲೇ ಜರ್ಝರಿತವಾಗಿತ್ತು. ಇದನ್ನು ಆಕೆ ಹೇಗೆ ಸ್ವೀಕರಿಸಬೇಕು?

ಅಮ್ಮ, ಕುಸ್ತಿ ಗೆದ್ದಿದ್ದೆ ನಾನು ಸೋತಿದ್ದೇನೆ. ನಿನ್ನ ಕನಸುಗಳು ಮತ್ತು ನನ್ನ ಧ್ಯೇಯ ನುಚ್ಚುನೂರಾಗಿದೆ. ಇನ್ನೂ ನನ್ನ ಶಕ್ತಿ ಉಳಿದಿಲ್ಲ ಎನ್ನುವ ಭಾವುಕ ಪೋಸ್ಟ್ ಹಾಕಿ ಕುಸ್ತಿಗೆ ಗುಡ್‌ಬೈ ಹೇಳಿದ್ದಾರೆ.

140 ಕೋಟಿ ಜನಸಂಖ್ಯೆಯ ಭಾರತದಿಂದ ಪ್ಯಾರಿಸ್ ಒಲಿಂಪಿಕ್ಸ್‌ಗೆ ಹೋಗಿರುವ ಸ್ಪರ್ಧಾಳುಗಳ ಸಂಖ್ಯೆ 117. ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿದ್ದೇ ಬದುಕಿನ ದೊಡ್ಡ ಸಾಧನೆ. ಫೈನಲ್‌ಗೆ ತಲುಪಿದ್ದು ಅಚ್ಚಳಿಯದ ಸಾಧನೆ. ಎಲ್ಲ ಸಾಧ್ಯತೆಗಳಿದ್ದೂ ಅನರ್ಹರಾದದ್ದು ದುರಂತವಷ್ಟೇ ಹೊರತು ಅದು ವಿನೇಶ್‌ರ ಸೋಲಲ್ಲ. ಹೀಗಾಗಿ ಚಿನ್ನ ಗೆಲ್ಲದಿದ್ದರೂ ಭಾರತದ ಚಿನ್ನದ ಹುಡುಗಿಯಾಗಿಯೇ ಉಳಿದವರು ಫೋಗಟ್.

ವಿನೇಶ್‌ಗೆ ಕಾಡಿದ್ದು ಅಪ್ಪಟ ದುರದೃಷ್ಟ ಅಷ್ಟೇ. ಆದರೆ ಇದರ ಹಿಂದೆ ಸಣ್ಣ ನಿರ್ಲಕ್ಷ್ಯವಿತ್ತೇ ಹೊರತು ಯಾರದೋ ಕೈವಾಡವಿದೆ ಎನ್ನುತ್ತಾ ಪ್ರಕರಣವನ್ನು ರಾಜಕೀಯಗೊಳಿಸುವುದು ಎಷ್ಟು ಸರಿ? ಒಂದೇ ದಿನದಲ್ಲಿ ಸತತ ಮೂರು ಪಂದ್ಯಗಳನ್ನು ಆಡುವ ಅನಿವಾರ್ಯತೆಯಿಂದ ಬಳಲಿದ್ದ ವಿನೇಶ್ ಸೆಮಿಫೈನಲ್ ಗೆದ್ದ ಬಳಿಕ (ಮೈಮರೆತು?) ಸೇವಿಸಿದ ಆಹಾರವೇ ಅವರಿಗೆ ಮುಳುವಾಗಿರಬಹುದು ದೇನೊ? ಇದಕ್ಕೆ ವಿನೇಶ್ ಫೋಗಟ್ ಮತ್ತು ಅವರ ಕೋಚ್ ಸೇರಿದಂತೆ ಸಹಾಯಕ ಸಿಬ್ಬಂದಿಗಳೂ ನೇರ ಹೊಣೆಗಾರರು. ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಸ್ಪರ್ಧೆಗಳಿಗೆ ಕಠಿಣ ನಿಯಮಗಳಿರುತ್ತವೆ. ಇಂತಹ ನಿಯಮಗಳಿಂದ ಯಾರಿಗೂ ರಿಯಾಯಿತಿ ಇಲ್ಲ. ಸ್ಪರ್ಧಿಸುವ ಪ್ರತಿಯೊಬ್ಬ ಕ್ರೀಡಾಳುಗಳಿಗೂ ಇದರ ಅರಿವಿರುತ್ತದೆ, ಇರಲೇಬೇಕು. ಮೂರು ಬಾರಿ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ ವಿನೇಶ್‌ಗೂ ಅವರ ಸಹಾಯಕ ಸಿಬ್ಬಂದಿಗೂ ಇದರ ಇರಿವಿಲ್ಲ ಎನ್ನುವ ಮಾತನ್ನು ಅರಗಿಸಿಕೊಳ್ಳುವುದು ಸಾಧ್ಯವಿಲ್ಲ. ಬದುಕಿನಲ್ಲಿ ಕೆಲವೊಂದು ಬಾರಿ ಹಾಗಾಗುತ್ತದೆ, ಈ ಬಾರಿಯೂ ಅಂಥ ಆಂಟಿ ಕ್ಲೈಮ್ಯಾಕ್ಸ್ ಒಂದು ನಡೆದಿದೆ ಅಷ್ಟೇ, ಅದನ್ನು ಒಪ್ಪುವುದು ಅನಿವಾರ್ಯ.

ಷಡ್ಯಂತ್ರ ಎಂಬ ಬಾಲಿಷವಾದ

ಕೇವಲ ಒಂದು ವರ್ಷದ ಹಿಂದೆ ಸಾಕ್ಷಿ ಮಲಿಕ್, ಭಜರಂಗ ಪುನಿಯಾ ಮುಂತಾದವರು ಭಾರತೀಯ ಕುಸ್ತಿ ಒಕ್ಕೂಟದ ಅಂದಿನ ಅಧ್ಯಕ್ಷ ಬ್ರಿಜ್‌ಭೂಷಣ್‌ಸಿಂಗ್ ವಿರುದ್ಧ ನಡೆಸಿದ ಪ್ರತಿಭಟನೆಯಲ್ಲಿ ವಿನೇಶ್ ಫೋಗಟ್ ಅವರೂ ಕಾಣಿಸಿಕೊಂಡಿದ್ದರು. ಸಂಸದರೂ ಆಗಿದ್ದ ಬ್ರಿಜ್ ಭೂಷಣ್ ಮಹಿಳಾ ಕುಸ್ತಿ ಪಟುಗಳ ಮೇಲೆ ನಡೆಸಿದ್ದಾರೆ ಎನ್ನಲಾದ ಲೈಂಗಿಕ ಹಗರಣಗಳ ವಿರುದ್ಧ ನಡೆದ ಪ್ರತಿಭಟನೆಯಾಗಿತ್ತು ಅದು. ತಿಂಗಳುಗಳ ಕಾಲ ನಡೆದ ಪ್ರತಿಭಟನೆಯ ಸಂದರ್ಭದಲ್ಲಿ ದೇಶದ ಹಲವಾರು ಕ್ರೀಡಾಪಟುಗಳು ಇವರ ಬೆನ್ನಿಗೆ ನಿಂತಿದ್ದರು. ಪ್ರತಿಭಟನೆಯನ್ನು ನಿಲ್ಲಿಸುವ ಪ್ರಯತ್ನದಲ್ಲಿ ಪೊಲೀಸರಿಂದ ಲಾಠಿಚಾರ್ಜ್ ಸಹ ನಡೆದಿತ್ತು. ಕಡೆಗೂ ಬ್ರಿಜ್‌ಭೂಷಣ್ ಸಿಂಗ್ ಭಾರತೀಯ ಕುಸ್ತಿ ಒಕ್ಕೂಟದ ತನ್ನ ಸ್ಥಾನವನ್ನು ಕಳೆದುಕೊಳ್ಳುವಂತೆ ಮಾಡುವಲ್ಲಿ ಆ ಪ್ರತಿಭಟನೆ ಯಶಸ್ವಿಯಾಗಿತ್ತು.

ಇದರ ಪರಿಣಾಮವಾಗಿ ವಿನೇಶ್‌ರ ವಿರುದ್ಧ ಈಗ ಷಡ್ಯಂತ್ರ ನಡೆದಿದೆ ಎನ್ನುವ ಅರ್ಥದಲ್ಲಿ ಕೆಲವರು ಬಾಲಿಷ ಮಾತುಗಳನ್ನಾಡುತ್ತಿದ್ದರೆ. ಪ್ರತಿಭಟಟನೆಯ ವಿರುದ್ಧ ಭಾರತದ ಉಚ್ಚ ಅಧಿಕಾರದಲ್ಲಿರುವ ಯಾರಾದರೂ ಸೇಡು ತೀರಿಸಿಕೊಳ್ಳಲು ಬಯಸಿದ್ದರು ಎಂದಾದರೆ ವಿನೇಶ್ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳದಂತೆ ತಡೆಯಬಹುದಿತ್ತು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಷಡ್ಯಂತ್ರ ಮಾಡುವುದಕ್ಕಿಂತ ರಾಷ್ಟ್ರೀಯ ಮಟ್ಟದಲ್ಲಿ ಷಡ್ಯಂತ್ರ ಮಾಡುವುದೇ ಸುಲಭವಲ್ಲವೆ? ಪ್ರತಿಭಟನೆಯ ಬಳಿಕವೂ ವಿನೇಶ್ ಭಾರತವನ್ನು ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವುದು ಸಾಧ್ಯವಾಯಿತು. ವಿನೇಶ್ ಫೈನಲ್‌ಗೆ ಬಂದಾಗ ಭಾರತದ ಎಲ್ಲರೂ ಸಂಭ್ರಮಿಸಿದ್ದರು. ವಿನೇಶ್ ಅನರ್ಹರಾದ ಸುದ್ದಿ ತಿಳಿದ ತಕ್ಷಣ ಖುದ್ದು ಭಾರತದ ಪ್ರಧಾನಿ ನರೇಂದ್ರ ಮೋದಿಯವರೇ ಭಾರತೀಯ ಒಲಿಂಪಿಕ್ಸ್ ಅಧ್ಯಕ್ಷೆ ಪಿ.ಟಿ.ಉಷಾರೊಂದಿಗೆ ಮಾತನಾಡಿದ್ದಾರೆ. ಪರ್ಯಾಯ ಸಾಧ್ಯತೆಗಳ ಬಗೆಗೆ ಚರ್ಚೆ ನಡೆಸಿದ್ದರು. ಅಂತಿಮವಾಗಿ ಜಂಟಿ ಬೆಳ್ಳಿ ಪದಕವನ್ನಾದರೂ ನೀಡುವಂತೆ ಒಲಿಂಪಿಕ್ ಸಮಿತಿಯ ಮುಂದೆ ಮನವಿ ಸಲ್ಲಿಸಲಾಗಿದೆ. ಈ ವಿಷಯದಲ್ಲಿ ಕೋರ್ಟ್ ಆಫ್ ಆರ್ಬಿಟ್ರೇಷನ್ ಫಾರ್ ಸ್ಪೋರ್ಟ್ಸ್ (ಸಿ.ಎ.ಎಸ್) ಪರಿಶೀಲನೆ ನಡೆಸಲಿದೆ. ಆ ರೀತಿ ಭಾರತದ ಆಡಳಿತ ಸೂತ್ರ ಹಿಡಿದವರು ವಿನೇಶ್‌ರನ್ನು ಎಲ್ಲ ಹಂತದಲ್ಲಿಯೂ ಬೆಂಬಲಿಸಿದ್ದಾರೆ.

ಸ್ಪರ್ಧೆಯ ನಡುವೆ ದೇಹದ ತೂಕ ಹೆಚ್ಚಾಗುವ ಸಮಸ್ಯೆಯನ್ನು ವಿನೇಶ್ ಒಬ್ಬರೇ ಎದುರಿಸಿದವರಲ್ಲ. ಇಟಲಿಯ ಇಮ್ಯಾನ್ಯುಯೆಲ್ ಲಿಯುಜಿ 50 ಕೆಜಿ ವಿಭಾಗದಲ್ಲಿ ಮೊದಲ ದಿನವೇ 50 ಗ್ರಾಂ ಅಧಿಕ ತೂಕವಿದ್ದಾರೆ ಎನ್ನುವ ಕಾರಣಕ್ಕೆ 16ರ ಮಟ್ಟದಲ್ಲಿ ಹೊರ ಬಿದ್ದಿದ್ದರು. ಇದೇ ಸಮಸ್ಯೆಯನ್ನು ತಾನೂ ಎದುರಿಸಿದ್ದಾಗಿ ಮೇರಿ ಕೋಂ ಹೇಳಿಕೊಂಡಿದ್ದರು.

ಎಲ್ಲವೂ ಸರಿಯಾಗಿಯೇ ನಡೆದು ಚಿನ್ನದ ಪದಕ ಗೆದ್ದಿದ್ದರೆ ಚೆನ್ನಾಗಿತ್ತು. ಆದರೆ ಬದುಕಿನಲ್ಲಿ ನಡೆಯುವ ದುರಂತವನ್ನು ಒಪ್ಪಿಕೊಳ್ಳಲೇಬೇಕು. ನಿರಾಶೆಯಿಂದಲೇ ಕುಸ್ತಿ ಬದುಕಿಗೆ ವಿನೇಶ್ ವಿದಾಯ ಹೇಳಿದ್ದಾರೆ. ಹಾಗೆಂದು ಅಲ್ಲಿಗೇ ಬದುಕು ಮುಗಿದಿಲ್ಲ. ವಿನಶ್‌ರಿಗೆ ಪದಕ ಗೆದ್ದಾಗ ಬರುವ ಕೋಟಿ ಕೋಟಿ ಹಣ ಬರದಿರಬಹುದು. ಆದರೆ ಹಣವೇ ಎಲ್ಲವೂ ಅಲ್ಲವಲ್ಲ! ಭವಿಷ್ಯದಲ್ಲಿ ವಿನೇಶ್ ಕೋಚಿಂಗ್ ಮಾಡಬಹುದು, ವಿನೇಶ್‌ರನ್ನು ನೋಡಿ ಸ್ಫೂರ್ತಿಗೊಳ್ಳುವ ಯುವಪ್ರತಿಭೆಗಳು ವಿನೇಶ್‌ರ ಅಡಿಯಲ್ಲಿ ಪಳಗಿ ಮುಂದೆ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲಬಹುದು. ತಾನು ಸಾಧಿಸಲಾಗದ್ದನ್ನು ತನ್ನ ಶಿಷ್ಯರ ಮೂಲಕ ಈಡೇರಿಸಿಕೊಂಡು ಮುಂದೊಂದು ದಿನ ವಿನೇಶ್‌ರೇ ಆನಂದಬಾಷ್ಪ ಹರಿಸಬಹುದು. ಅದಕ್ಕೆ ದೇಶದ ಕೋಟ್ಯಂತರ ಜನ ಸಾಕ್ಷಿ ಆಗಬಹುದು. ಮುಂದಿನ ಒಲಿಂಪಿಕ್ಸ್‌ಗೆ ನಾನು ವಿನೇಶ್‌ರನ್ನು ಸಿದ್ಧಪಡಿಸುತ್ತೇನೆ ಎಂದು ವಿನೇಶ್ ಅವರ ಚಿಕ್ಕಪ್ಪ ಮಹಾವೀರ್‌ಸಿಂಗ್ ಫೋಗಟ್ ಈಗಾಗಲೇ ಹೇಳಿದ್ದಾರೆ. ಅದು ಸಾಧ್ಯವಾಗುತ್ತದೋ ಇಲ್ಲವೋ ಬೇರೆ ಮಾತು. ಆದರೆ ವಿನೇಶ್‌ರೇ ತರಬೇತುಗೊಳಿಸಿದ ಅಭ್ಯರ್ಥಿ ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದರೆ ಅದು ವಿನೇಶ್‌ರವರ ಬದುಕಿನ ಅತ್ಯಂತ ಶ್ರೇಷ್ಠವಾದ ನಿರ್ವಚನ ಆಗಬಹುದು.

ದಂಗಲ್ ಹುಡುಗಿಯರ ಸಹೋದರಿ

ಈ ವಿನೇಶ್ ಫೋಗಟ್ ಯಾರು ಎಂಬ ವಿವರ ಕೇಳಿದರೆ ಆಸಕ್ತಿದಾಯಕ ವಿವರಗಳು ಹೊರ ಬರುತ್ತವೆ. ಅಮೀರ್ ಖಾನ್ ದಂಗಲ್ ಎಂಬ ಸಿನಿಮಾ ಮಾಡಿದರಲ್ಲ, ಆ ಸಿನಿಮಾಕ್ಕೆ ಸ್ಫೂರ್ತಿಯಾದವರು ಗೀತಾ ಮತ್ತು ಬಬಿತಾ ಎಂಬ ಸಹೋದರಿಯರು. ಗೀತಾ ಮತ್ತು ಬಬಿತಾ ಬಾಲ್ಯದಲ್ಲಿ ಸ್ಕೂಲಿಗೆ ಹೋಗುತ್ತಿದ್ದಾಗ ತಮ್ಮನ್ನು ಛೇಡಿಸಿದ್ದ ಹುಡುಗರಿಗೆ ನಾಲ್ಕು ಬಾರಿಸಿ ಮನೆಗೆ ಬಂದು ಈ ವಿಷಯ ತಿಳಿದಾಗ ಅವರ ತಂದೆ ತನ್ನ ಹೆಣ್ಣು ಮಕ್ಕಳು ಕುಸ್ತಿಯಲ್ಲಿ ತಾನು ಸಾಧಿಸಲಾಗದ್ದನ್ನು ಇವರು ಸಾಧಿಸಬಹುದು ಎಂದು ನಿರೀಕ್ಷಿಸುತ್ತಾರೆ. (ಮಹಾವೀರ್ ಸಿಂಗ್ ಫೋಗಟ್ ಎಂಬ ಆ ಕುಸ್ತಿಪಟು ನಾಲ್ವರು ಹೆಣ್ಣು ಮಕ್ಕಳನ್ನು ಪಡೆದಿದ್ದರು. ಕುಸ್ತಿಯಲ್ಲಿ ದೇಶಕ್ಕೆ ಪದಕ ತರುವ ತನ್ನ ಕನಸು ನನಸಾಗದೇ ಕೊರಗಿದ್ದರು. ತನಗೆ ಗಂಡು ಮಕ್ಕಳಿದ್ದರೆ ಅವರಾದರೂ ಪದಕ ತರಬಹುದು ಎಂಬ ಆಸೆ ಇದ್ದರೂ ಹೆಣ್ಣು ಮಕ್ಕಳೇ ಜನಿಸಿದಾಗ ತನ್ನ ಕುಟುಂಬಕ್ಕೆ ಪದಕ ತರುವ ಸಾಧ್ಯತೆ ಇಲ್ಲ ಎಂದು ನಿರಾಶೆ ಅನುಭವಿಸಿದ್ದರು) ತನ್ನ ಹೆಣ್ಣು ಮಕ್ಕಳು ತನ್ನನ್ನು ಚುಡಾಯಿಸಿದವರಿಗೆ ತದುಕಿ ಬಂದಾಗ ಹೆಣ್ಣು ಮಕ್ಕಳೂ ಕುಸ್ತಿಯಲ್ಲಿ ಗೆಲ್ಲಬಹುದು ಎಂದು ಭಾವಿಸಿ ಸಮಾಜದ ಪ್ರತಿರೋಧದ ನಡುವೆಯೂ ತನ್ನ ಹೆಣ್ಣು ಮಕ್ಕಳಿಗೆ ಕುಸ್ತಿ ಕಲಿಸುತ್ತಾರೆ. ಅವರು ಏಷ್ಯನ್‌ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆಲ್ಲುತ್ತಾರೆ. ಸ್ವರ್ಣಗೆದ್ದ ಹೆಣ್ಣು ಮಕ್ಕಳ ಕಥೆಯೇ ಮುಂದೆ ದಂಗಲ್ ಸಿನಿಮಾ ಆಗುತ್ತದೆ. ಆ ಹೆಣ್ಣು ಮಕ್ಕಳು ವಿನೇಶ್‌ರ ಚಿಕ್ಕಪ್ಪನ ಮಕ್ಕಳು.

ವಿನೋದ್ ಫೋಗಟ್ ಮತ್ತು ಸರಳಾದೇವಿಯವರ ಪುತ್ರಿಯಾಗಿ 1994ರಲ್ಲಿ ಹರಿಯಾಣದ ಕುಟುಂಬವೊಂದರಲ್ಲಿ ಜನಿಸಿದವರು ವಿನೇಶಾ ಫೋಗಟ್. ಇವರ ಚಿಕ್ಕಪ್ಪ ಮಹಾವೀರಸಿಂಗ್ ಫೋಗಟ್ ದ್ರೋಣಾಚಾರ್ಯ ಪ್ರಶಸ್ತಿ ಗೆದ್ದ ಗೌರವಾನ್ವಿತ ಕುಸ್ತಿಪಟು. ವಿನೇಶ್ ಫೋಗಟ್ ರೋಟಗ್‌ನ ಮಹರ್ಷಿ ದಯಾನಂದ ವಿಶ್ವವಿದ್ಯಾನಿಲಯದ ಪದವೀಧರೆ. ಚಿಕ್ಕಪ್ಪನ ಪ್ರಭಾವದಿಂದ ಕುಸ್ತಿಪಟುವಾಗಿ ರೂಪುಗೊಂಡ ವಿನೇಶ್ 2018ರ ಏಷ್ಯನ್‌ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆಲ್ಲುತ್ತಾರೆ, 2018ರ ವಿಶ್ವ ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿ ಕಂಚಿನ ಪದಕ ಗೆದ್ದ ವಿನೇಶ್ 2018 ಮತ್ತು 2019ರ ಏಷ್ಯನ್ ಚಾಂಪಿಯನ್‌ಶಿಪ್‌ಗಳಲ್ಲಿ ಚಿನ್ನದ ಪದಕ ಗೆದ್ದ ಗೌರವಕ್ಕೆ ಭಾಜನರಾಗುತ್ತಾರೆ. 2016, 2017 ಮತ್ತು 2019ರಲ್ಲಿ ಕಾಮನ್ವೆಲ್ತ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಹೆಗ್ಗಳಿಕೆಯೂ ಅವರದು. 2014ರಲ್ಲಿ ಅರ್ಜುನ ಅವಾರ್ಡ್, 2022ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನು ಭಾರತ ಸರಕಾರ ನೀಡಿತ್ತು.

ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವುದು ಕ್ರೀಡಾಳುಗಳ ಪರಮ ಗುರಿ. ಅದಕ್ಕಾಗಿ ತಮ್ಮ ಬದುಕನ್ನು ತಪಸ್ಸಿನಂತೆ ನಡೆಸುತ್ತಾರೆ. ಸತತ ಮೂರು ಬಾರಿ ಒಲಿಂಪಿಕ್ಸ್‌ನಲ್ಲಿ ಕಣಕ್ಕಿಳಿದ ಫೋಗಟ್ 2016ರ ಒಲಿಂಪಿಕ್ಸ್‌ನಲ್ಲಿ ಕಾಲಿಗೆ ಗಾಯವಾಗಿ ನಿರಾಶೆ ಅನುಭವಿಸಿದರು. 2020ರ ಒಲಿಂಪಿಕ್ಸ್‌ನಲ್ಲಿ ಪ್ರಥಮ ಸುತ್ತಿನಲ್ಲಿಯೇ ಸೋತರು. ಈ ಬಾರಿ ಫೈನಲ್ ತಲುಪಿ ಸ್ವರ್ಣ ಗೆದ್ದು ತಮ್ಮ ಕ್ರೀಡಾ ಬದುಕಿನಲ್ಲಿ ಉತ್ತುಂಗ ತಲುಪುವ ಎಲ್ಲ ಸಾಧ್ಯತೆಗಳನ್ನೂ ತೋರಿಸಿದ್ದರು. ಆದರೆ ದುರದೃಷ್ಟವೇ ತನ್ನ ಕೈವಾಡ ಮೆರೆಯಿತು. ಅವರು ಚಿನ್ನ ಗೆಲ್ಲದಿದ್ದರೂ ಚಿನ್ನದ ಹುಡುಗಿಯಾಗಿದ್ದಾರೆ. ಭಾರತದ ಕೋಟ್ಯಂತರ ಅಭಿಮಾನಿಗಳ ಹೃದಯದಲ್ಲಿ ಅಮರರಾಗಿದ್ದಾರೆ.

(ಲೇಖಕರು: ಹವ್ಯಾಸಿ ಬರಹಗಾರರು)

ಪ್ರಸ್ತುತ
ಅಜಯ್ ಅಂಗಡಿ

ರಾಜಕಾರಣದ ಹಲವು ನೋಟಗಳು

ಇತ್ತೀಚೆಗೆ ರಾಜಕಾರಣ ಮತ್ತು ರಾಜಕಾರಣಿಗಳು ಅಂದರೇನೆ ರೇಜಿಗೆ ಹುಟ್ಟಿಸುವಂತಿದೆ. ಯಾವ ರಾಜಕೀಯ ಪಕ್ಷವೂ ಕೂಡ ತನ್ನ ನೈತಿಕತೆಯನ್ನು ಉಳಿಸಿಕೊಂಡಿಲ್ಲ ಅನ್ನುವುದು ಈಗ ಜಗಜ್ಜಾಹೀರಾದ ಸಂಗತಿ. ಭಾರತದಲ್ಲಿರುವ ಅಷ್ಟೂ ಪಕ್ಷಗಳಲ್ಲಿ ಮುಕ್ಕಾಲು ಪಾಲು ರಾಜಕಾರಣಿಗಳು ಪಕ್ಷಾಂತರಿಗಳೆಂಬುದು ವಿಷಾದನೀಯವಲ್ಲದೆ ಮತ್ತೇನು? ಅದರೊಟ್ಟಿಗೆ ಯಾವ ರಾಜಕೀಯ ಪಕ್ಷವೊಂದು ಹಗರಣರಹಿತ ಆಡಳಿತ ನಿರ್ವಹಣೆ ಮಾಡಿದೆ ಅನ್ನುವುದನ್ನು ಮೈಕ್ರೋಸ್ಕೋಪಿನಲ್ಲಿ ವೀಕ್ಷಿಸಿದರೂ ಕಣ್ಣಿಗೆ ಕಾಣುವುದು ಅಸಾಧ್ಯ. ಈ ಹಗರಣಗಳೇನು ಇತ್ತೀಚಿನ ವ್ಯಸನವಲ್ಲ. ಪ್ರಜಾಪ್ರಭುತ್ವದ ಶುರುವಾತಿನಿಂದಲೂ ಇರುವಂಥದ್ದೇ. ಆದರೆ ಈಗಿನ ಕಾಲಮಾನದಲ್ಲಿ ಹಗರಣದ ಪ್ರಮಾಣ ಅನಂತದೆಡೆಗೆ ಸಾಗುತ್ತಿರುವುದು ಖೇದಕರ. ಅಧಿಕಾರಕ್ಕೇರುವ ಮೊದಲು ನಾವು ಭ್ರಷ್ಟಾಚಾರ ನಿರ್ಮೂಲನೆ ಮಾಡುತ್ತೇವೆ. ಸ್ವಚ್ಛ ಸರಕಾರ ನಡೆಸುತ್ತೇವೆ ಅಂತ ಪ್ರಣಾಳಿಕೆಯಲ್ಲಿ ಮುದ್ರಿಸಿ ಜನರ ಮನೆಮನಗಳು ಮುಟ್ಟುವಲ್ಲಿ ಅಪಾರ ಕಾಳಜಿ ತೋರುತ್ತಾರೆ. ಆದರೆ ಅಧಿಕಾರದ ವೇದಿಕೆ ಏರೋದೆ ತಡ! ಪ್ರಣಾಳಿಕೆಯಲ್ಲಿನ ಸಾಲುಗಳು ಒಂದೊಂದಾಗಿ ಮಾಯವಾಗುತ್ತವೆ. ಯಾಕೆ ಹೀಗೆ ಎಂಬುದು ಯಕ್ಷ ಪ್ರಶ್ನೆಯಾಗಿ ಉಳಿಯುತ್ತದೆಯೇ ಹೊರತು ಅದಕ್ಕೆ ಸೂಕ್ತ ಕಾರಣ ಸಿಗುವುದಿಲ್ಲ. ಇದೇನು ರಾಜಕೀಯ ತಂತ್ರಗಾರಿಕೆ ಅಂದುಕೊಳ್ಳದೆ ಮತದಾರನಿಗೆ ಬೇರೆ ವಿಧಿಯಿಲ್ಲ.

ಇನ್ನು ಪಕ್ಷಾಂತರದ ವಿಚಾರಕ್ಕೆ ಬರುವುದಾದರೆ, ಜಗತ್ತಿನಲ್ಲಿ ಪಕ್ಷಾಂತರದಂತಹ ದೊಡ್ಡ ರಾಜಕೀಯ ಪಿಡುಗು ಮತ್ತೊಂದಿರಲಾರದು. ಒಂದು ಪಕ್ಷದ ಸಿದ್ಧಾಂತಗಳನ್ನು ಒಪ್ಪಿ, ಆ ಪಕ್ಷವನ್ನು ಮನಸ್ಫೂರ್ತಿಯಾಗಿ ಅಪ್ಪಿ ಕಾರ್ಯಕರ್ತರಾಗಿರುತ್ತಾರೆ. ಹಂತ ಹಂತವಾಗಿ ಮುಂಚೂಣಿಯಲ್ಲಿ ನಿಂತು ಪಕ್ಷದ ಬಲವನ್ನು ವಿಸ್ತರಿಸುತ್ತಾರೆ. ಅವರವರ ಜಾತಿ ಬಲ, ಜನಬಲದಿಂದಲೂ ಮುಖಂಡರಾಗಿ ಹೊರಹೊಮ್ಮುತ್ತಾರೆ. ಯಾವುದೋ ಹಂತದಲ್ಲಿ ಬಯಸಿದ ರಾಜಕೀಯ ಪದವಿ ಸಿಗದಿದ್ದಾಗ ಅಥವಾ ಕೈತಪ್ಪಿದಾಗ, ಅಲ್ಲಿಯವರೆಗೆ ನಂಬಿದ್ದ ಸಿದ್ಧಾಂತದ ದಿರಿಸು ಕಳಚಿ ಹೊಸ ಅಥವಾ ಅಲ್ಲಿಯವರೆಗೂ ವಿರೋಧಿಸಿಕೊಂಡು ಬಂದಿದ್ದ ಸಿದ್ಧಾಂತವನ್ನು ಧರಿಸುತ್ತಾರೆ. ಇದೆಂತಹ ವಿಚಿತ್ರ ಪದ್ಧತಿ? ಯಾವ ಸಿದ್ಧಾಂತವನ್ನು ಹೀಗಳೆಯದೆ ಎಲ್ಲವನ್ನೂ ಸಮನಾಗಿ ನೋಡುವಂಥ ಮುಖಂಡರು, ಅಭಿವೃದ್ಧಿಯ ಹೊರತು ಇನ್ಯಾವ ಯೋಚನೆಯೂ ಇರದ ರಾಜಕಾರಣಿಗಳು ಪಕ್ಷಾಂತರವಾದರೆ ಅದು ಅಷ್ಟು ಸುದ್ದಿಯಾಗುವುದಿಲ್ಲ ಮತ್ತು ಅದರಿಂದ ಯಾವ ಪಲ್ಲಟವೂ ಆಗುವುದಿಲ್ಲ. ಆದರೆ ಪ್ರತಿಪಕ್ಷದ ಪ್ರತಿ ನಡೆಯನ್ನೂ ಟೀಕಿಸಿ ವಿರೋಧಿಸಿದ ರಾಜಕೀಯ ಮುಖಂಡನೊಬ್ಬ ಅಧಿಕಾರದ ಆಸೆಯಲ್ಲಿ ಟೀಕಿಸಿದ ಪಕ್ಷವನ್ನೇ ಅಪ್ಪಿಕೊಂಡಾಗ ಆತನ ನಿಷ್ಠಾವಂತ ಸೈದ್ಧಾಂತಿಕ ಅನುಯಾಯಿಗಳ ಪಾಡೇನು? ಆದರೆ ಈಗ ಅದೇನು ಅಂಥ ದ್ರೋಹವಲ್ಲ ಬಿಡಿ!

ಇನ್ನು ಇತ್ತೀಚೆಗೆ ಕೇಳಿಬರುತ್ತಿರುವ ಮಾತೊಂದಿದೆ. 'ಹೊಂದಾಣಿಕೆ ರಾಜಕಾರಣ'. ಅಸಲಿಗೆ ಏನು ಈ ಹೊಂದಾಣಿಕೆ ರಾಜಕಾರಣವೆಂದರೆ? ಆಡಳಿತ ಪಕ್ಷದ ನಾಯಕರು ಮತ್ತು ಪ್ರತಿಪಕ್ಷಗಳ ಮುಖಂಡರ ನಡುವಿನ ಅನಧಿಕೃತ ಒಪ್ಪಂದವಾ? ನಿಮ್ಮ ಕಾರ್ಯವೈಖರಿಯನ್ನು ನಾವು ತೀವ್ರವಾಗಿ ವಿರೋಧಿಸುವುದಿಲ್ಲ ಎಂಬ ಅಲಿಖಿತ ನಿಯಮವಾ?

ಯಾವುದು ಅಂತ ನಿಖರವಾಗಿ ತಿಳಿಯುವುದಿಲ್ಲ ಮತದಾರ ಪ್ರಭುಗಳಿಗೆ. ಒಮ್ಮೊಮ್ಮೆ ಸರಕಾರದ ಹಲವು ಭಿನ್ನ ನಡೆಗಳನ್ನು ಪ್ರತಿಪಕ್ಷದವರು ಟೀಕಿಸದೆ ಸುಮ್ಮನಿದ್ದರೆ ಅಥವಾ ಮೃದುಧೋರಣೆ ತೋರಿದರೆ ಇಂಥ ಸಂಶಯಗಳು ಹುಟ್ಟುವುದು ಸಹಜ.

ಇನ್ನು ಕೆಲವೊಮ್ಮೆ ರಾಜಕೀಯ ಟೀಕೆಗಳು ತಮ್ಮ ಗಡಿಮೀರಿ ವೈಯಕ್ತಿಕ ತೇಜೋವಧೆಯತ್ತ ಮುನ್ನಡೆದ ಎಷ್ಟೋ ನಿದರ್ಶನಗಳು ನಮ್ಮ ಕಣ್ಣ ಮುಂದಿವೆ. ಅಭಿವೃದ್ಧಿ, ಜನಪರ ಆಡಳಿತ, ದೀನದಲಿತರ ಉದ್ಧಾರದ ವಿಚಾರವಾಗಿ ಚರ್ಚೆಯಾಗದೆ ಅನಗತ್ಯ ವೈಯುಕ್ತಿಕ ಚರ್ಚೆಗಳೇ ಹೆಚ್ಚಾಗುತ್ತಿವೆ ಪ್ರಸ್ತುತ ದಿನಮಾನಗಳಲ್ಲಿ. ಇವೆಲ್ಲವುಗಳ ಮಧ್ಯೆ ಬಹುಮುಖ್ಯವಾಗಿ ಸಮಾಜದಲ್ಲಿ ಬಿರುಗಾಳಿ ಎಬ್ಬಿಸುವುದು ರಾಜಕಾರಣಿಗಳ ಓಲೈಕೆಯ ರಾಜಕಾರಣ. ಎಲ್ಲ ವರ್ಗಗಳ ಮತದಾರರು ಇವರನ್ನು ಒಮ್ಮತದಿಂದ ಚುನಾಯಿಸಿದ್ದರೂ ಸಹ ಇವರ ಈ ಓಲೈಕೆಯ ಚಾಳಿ ಎಂಥವರನ್ನೂ ಕೆರಳಿಸುತ್ತದೆ.

ಈಗಿನ ಪರಿಸ್ಥಿತಿಯಲ್ಲಿ ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡುವುದು ಎಷ್ಟರಮಟ್ಟಿಗೆ ಉಪಯುಕ್ತ ಅನ್ನುವುದು ನಾವು, ನೀವು ಮತ್ತು ಆಡಳಿತ ವ್ಯವಸ್ಥೆ ಯೋಚಿಸಬೇಕಿದೆ. ವಾಕ್ ಸ್ವಾತಂತ್ರ್ಯವಿದೆ ಅಂದ ಮಾತ್ರಕ್ಕೆ ಬಾಯಿಗೆ ಬಂದದ್ದನ್ನೆಲ್ಲ ಮಾತಾಡದೆ ಎಲ್ಲರೂ ತಮ್ಮ ತಮ್ಮ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರೆ ಸಾಕು. ಇರುವ ನಾಲ್ಕು ದಿನಗಳಲ್ಲಿ ಈ ಅನಗತ್ಯಗಳ ಅವಶ್ಯಕತೆ ಏನಿದೆ? ಬದಲಾಗಬೇಕಿರುವುದು ಬಹಳಷ್ಟಿದೆ. ಬದಲಾವಣೆ ನಮ್ಮಿಂದಲೇ ಶುರುವಾದರೆ ಉತ್ತಮ.

(ಲೇಖಕರು: ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 94

ಬಾಂಗ್ಲಾ ಗಡಿ ಸ್ಥಿತಿ ನಿಗಾಕ್ಕೆ ಸಮಿತಿ

ಬಾಂಗ್ಲಾ ಸಹವರ್ತಿ ಅಧಿಕಾರಿ ಜತೆ ಸಂಪರ್ಕ ಬೆಳೆಸಿ ಕಾರ್ಯ ನಿರ್ವಹಣೆ: ಅಮಿತ್ ಶಾ

ಬಾಂಗ್ಲಾದಲ್ಲಿನ ಹಿಂದೂ, ಕ್ರೈಸ್ತ, ಸಿಖ್, ಬೌದ್ಧರ ಸುರಕ್ಷತೆ ಖಚಿತಪಡಿಸುವ ಹೊಣೆ ಸಮಿತಿಗೆ

ದೆಹಲಿ: ಭಾರತ-ಬಾಂಗ್ಲಾದೇಶ ಗಡಿಯಲ್ಲಿನ ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲು ಕೇಂದ್ರ ಸರಕಾರ 'ಗಡಿ ಪರಿಸ್ಥಿತಿ ಮೇಲ್ವಿಚಾರಣಾ ಸಮಿತಿ' ರಚಿಸಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಹೇಳಿದ್ದಾರೆ.

ಬಾಂಗ್ಲಾದೇಶದಲ್ಲಿ ವಿದ್ಯಾರ್ಥಿ ಪ್ರತಿಭಟನೆ ಹೆಸರಿನಲ್ಲಿ ನಡೆಯುತ್ತಿರುವ ಹಿಂಸಾಚಾರ ಹಿನ್ನೆಲೆಯಲ್ಲಿ ಇಂಡೋ-ಬಾಂಗ್ಲಾ ಗಡಿಯಲ್ಲಿ(ಐಬಿಬಿ) ಪ್ರಸ್ತುತ ಪರಿಸ್ಥಿತಿಯ ಮೇಲ್ವಿಚಾರಣೆ ಮಾಡಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರ ಈ ಸಮಿತಿಯನ್ನು ರಚಿಸಿದೆ. ಈ ಸಮಿತಿಯು ಎಡಿಜಿ, ಗಡಿ ಭದ್ರತಾ ಪಡೆ, ಪೂರ್ವ ಕಮಾಂಡ್ ನೇತೃತ್ವದಲ್ಲಿರುತ್ತದೆ ಎಂದು ಕೇಂದ್ರ ಗೃಹ ಸಚಿವರು ತಿಳಿಸಿದ್ದಾರೆ.

ಈ ಸಮಿತಿಯು ಭಾಂಗ್ಲಾದೇಶದಲ್ಲಿನ ಭಾರತೀಯ ಪ್ರಜೆಗಳು, ಹಿಂದೂಗಳು ಮತ್ತು ಅಲ್ಲಿ ವಾಸಿಸುವ ಸಿಖ್, ಬೌದ್ಧ, ಕ್ರೈಸ್ತರು ಸೇರಿದಂತೆ ಇತರೆ ಅಲ್ಪಸಂಖ್ಯಾತ ಸಮುದಾಯಗಳ ಸುರಕ್ಷತೆ ಮತ್ತು ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಬಾಂಗ್ಲಾದೇಶದ ತಮ್ಮ ಸಹವರ್ತಿ ಅಧಿಕಾರಿಗಳೊಂದಿಗೆ ಸಂಪರ್ಕ ಕೊಂಡಿಯಾಗಿ ಕಾರ್ಯ ನಿರ್ವಹಿಸುತ್ತದೆ ಎಂದು ಅಮಿತ್ ಶಾ 'ಎಕ್ಸ್' ಸಂದೇಶದಲ್ಲಿ ತಿಳಿಸಿದ್ದಾರೆ.

ಸದಸ್ಯತ್ವ ತಾತ್ಕಾಲಿಕ ಸ್ಥಗಿತ

ಬಾಂಗ್ಲಾ ನ್ಯಾಷನಲಿಸ್ಟ್ ಪಾರ್ಟಿ(ಬಿಎನ್‌ಪಿ) ಹೊಸದಾಗಿ ಪಕ್ಷದ ಸದಸ್ಯತ್ವ ನೀಡುವುದನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ಬೇರೆ ರಾಜಕೀಯ ಪಕ್ಷದ, ರಾಜಕೀಯಕ್ಕೆ ಹೊರತಾದ ಪಕ್ಷದ ನಾಯಕರು, ಕಾರ್ಯಕರ್ತರನ್ನು ಬಿಎನ್‌ಪಿಗೆ ಸದ್ಯಕ್ಕೆ ಸೇರ್ಪಡೆ ಮಾಡಿಕೊಳ್ಳುವುದಿಲ್ಲ ಎಂದು ಬಿಎನ್‌ಪಿಯ ಹಿರಿಯ ಜಂಟಿ ಮಹಾ ಕಾರ್ಯದರ್ಶಿ ರುಹುಲ್ ಕಬೀರ್ ರಿಜ್ವಿ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ನಮ್ಮ ಶತ್ರುವಿಗೆ ರಕ್ಷಣೆ ನೀಡದಿರಿ

ಹಸೀನಾಗೆ ಆಶ್ರಯ: ಭಾರತ ವಿರುದ್ಧ ಬಿಎನ್‌ಪಿ ಸಿಡಿಮಿಡಿ

ಢಾಕಾ: ಬಾಂಗ್ಲಾದೇಶ ಮಾಜಿ ಪ್ರಧಾನಿ ಶೇಕ್ ಹಸೀನಾ ಭಾರತದಲ್ಲಿ ಆಶ್ರಯ ಪಡೆದಿರುವುದು ಅಲ್ಲಿನ ಪ್ರಮುಖ ಪ್ರತಿಪಕ್ಷ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ(ಬಿಎನ್‌ಪಿ) ಸಿಟ್ಟಿಗೆ ಕಾರಣವಾಗಿದೆ. 'ನಮ್ಮ ಶತ್ರುವಿಗೆ ಆಶ್ರಯ ನೀಡಿದರೆ ಬಾಂಗ್ಲಾ-ಭಾರತ ಮಧ್ಯೆ ಪರಸ್ಪರ ಸಹಕಾರ ಕಷ್ಟವಾಗಲಿದೆ' ಎಂದು ಬಿಎನ್‌ಪಿ ಎಚ್ಚರಿಕೆ ನೀಡಿದೆ.

ಮಾಜಿ ಪ್ರಧಾನಿ ಖಲೀದಾ ಜಿಯಾ ಅವರ ನೇತೃತ್ವದ 'ಬಿಎನ್‌ಪಿ', ಶೇಖ್ ಹಸೀನಾ ಅವರ 'ಅವಾಮಿ ಲೀಗ್ ಪಕ್ಷ'ದ ಕಡು ರಾಜಕೀಯ ವಿರೋಧಿಯಾಗಿದೆ.

ಬಿಎನ್‌ಪಿ, ಭಾರತ ವಿರೋಧಿ ಭಾವನೆ ಹೊಂದಿರುವ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪಕ್ಷದ ಹಿರಿಯ ನಾಯಕ ಗಾಯೇಶ್ವರ್ ರಾವ್ 'ನಾವು ಭಾರತ-ಬಾಂಗ್ಲಾ ನಡುವಿನ ಪರಸ್ಪರ ಸಹಕಾರ ಬೆಂಬಲಿಸುತ್ತೇವೆ. ಆದರೆ, ಭಾರತ ನಮ್ಮ ಶತ್ರುವಿಗೆ ರಕ್ಷಣೆ ನೀಡಿದರೆ ಈ ಸಹಕಾರ ಮುಂದುವರಿಸುವುದು ಕಷ್ಟವಾಗುತ್ತದೆ. ಭಾರತ ಸರಕಾರ ಎರಡೂ ರಾಷ್ಟ್ರಗಳ ಹಿತಕ್ಕೆ ಅನುಗುಣವಾಗಿ ನಡೆದುಕೊಳ್ಳಬೇಕು' ಎಂದು ಹೇಳಿದ್ದಾರೆ.

ಅಲ್ಲದೇ, ಭಾರತ ಹಸೀನಾ ಅಧಿಕಾರಕ್ಕೆ ಮರಳಲು ಬೆಂಬಲ ನೀಡುತ್ತಿದೆ ಎಂಬ ಆತಂಕ ಬಿಎನ್‌ಪಿಗಿದೆ. ಬಾಂಗ್ಲಾ-ಭಾರತದ ಜನರಲ್ಲಿ ಸಮಸ್ಯೆ ಇಲ್ಲ. ಆದರೆ

ಭಾರತ ಒಂದು ಪಕ್ಷವನ್ನು ಬೆಂಬಲಿಸಬೇಕೆ ಅಥವಾ ಪೂರ್ಣ ರಾಷ್ಟ್ರವನ್ನು ಬೆಂಬಲಿಸಬೇಕೆ? ಎಂಬುದೇ ನಮ್ಮ ಪ್ರಶ್ನೆ ಎಂದಿದ್ದಾರೆ.

ಸದ್ಯದ ಮಾಹಿತಿ ಪ್ರಕಾರ ಬಾಂಗ್ಲಾದಲ್ಲಿ ಚುನಾವಣೆ ಘೋಷಣೆ ಆಗುತ್ತಿದ್ದಂತೆಯೇ ಶೇಖ್ ಹಸೀನಾ ತಮ್ಮ ದೇಶಕ್ಕೆ ಮರಳುವರು. ಅಲ್ಲಿಯವರೆಗೆ ಭಾರತದಲ್ಲೇ ಉಳಿದುಕೊಳ್ಳಲಿದ್ದಾರೆ.

ಭಾರತದೊಳಕ್ಕೆ ಪ್ರವೇಶಿಸಲು ಯತ್ನ

ನೆರೆಯ ಬಾಂಗ್ಲಾದೇಶದಲ್ಲಿ ಮೀಸಲು ನೀತಿ ವಿರುದ್ಧದ ವಿದ್ಯಾರ್ಥಿಗಳ ಹೋರಾಟದಿಂದಾಗಿ ಚುನಾಯಿತ ಸರಕಾರವೇ ಪತನವಾಗಿದೆ. ವಿದ್ಯಾರ್ಥಿಗಳು ಬಯಸಿದಂತೆಯೇ ನೊಬೆಲ್ ಪ್ರಶಸ್ತಿ ಪುರಸ್ಕೃತ ಮೊಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರಕಾರ ರಚನೆಯಾಗಿದೆ. ಆದರೆ, ಹಿಂಸಾಚಾರ ಕೊನೆಗೊಂಡಿಲ್ಲ. ಕಳೆದ 3 ವಾರಗಳಲ್ಲಿ ವಿದ್ಯಾರ್ಥಿ ಹೋರಾಟದ ನೆಪದಲ್ಲಿ ಭಾರೀ ಹಿಂಸಾಚಾರ ನಡೆದಿದೆ. 400ಕ್ಕೂ ಅಧಿಕ ಜೀವಹಾನಿಯಾಗಿದೆ. ಪತನಗೊಂಡ ಸರಕಾರದ ನೇತೃತ್ವ ವಹಿಸಿದ್ದ ಅವಾಮಿ ಲೀಗ್ ಪಕ್ಷದ ನಾಯಕರನ್ನೂ ಹುಡುಕಿ ಹುಡುಕಿ ಕೊಲ್ಲಲಾಗಿದೆ. ಹಿಂದೂ, ಬೌದ್ಧ, ಸಿಖ್, ಕ್ರೈಸ್ತ ಧರ್ಮೀಯರ ಮೇಲೆ ದಾಳಿ ನಡೆಯುತ್ತಿದೆ. ದೇಗುಲಗಳು, ಭಾರತದ ಸಾಂಸ್ಕೃತಿಕ ಕೇಂದ್ರಗಳನ್ನೂ ಧ್ವಂಸಗೊಳಿಸಲಾಗಿದೆ. ಹಿಂದೂಗಳ 100ಕ್ಕೂ ಅಧಿಕ ಮನೆ-ಅಂಗಡಿಗಳಿಗೆ ಬೆಂಕಿ ಇಡಲಾಗಿದೆ. ಜೀವ ಭಯದಲ್ಲಿ ಸಾವಿರಾರು ಹಿಂದೂಗಳು ಬಾಂಗ್ಲಾದೇಶದ ಗಡಿಗೆ ಧಾವಿಸಿದ್ದು, ಭಾರತದೊಳಕ್ಕೆ ಪ್ರವೇಶಿಸಲು ಯತ್ನಿಸುತ್ತಿದ್ದಾರೆ.

ಅಲ್ಪಸಂಖ್ಯಾತರ ಸುರಕ್ಷತೆ ಖಾತರಿಪಡಿಸಿ: ಮೋದಿ

ದೆಹಲಿ: ಬಾಂಗ್ಲಾದೇಶದಲ್ಲಿರುವ ಹಿಂದೂಗಳು ಸೇರಿದಂತೆ ಅಲ್ಪಸಂಖ್ಯಾತರಾಗಿರುವ ಸಮುದಾಯಗಳ ಜನರ ಸುರಕ್ಷತೆ ಖಾತರಿಪಡಿಸುವಂತೆ, ಅವರಿಗೆ ಭದ್ರತೆ ಒದಗಿಸುವಂತೆ 'ಎಕ್ಸ್' ಸಂದೇಶ ಮೂಲಕ ಬಾಂಗ್ಲಾದೇಶದ ನೂತನ ಮಧ್ಯಂತರ ಸರಕಾರದ ಗಮನ ಸೆಳೆದಿದ್ದಾರೆ. 'ಬಾಂಗ್ಲಾದೇಶದಲ್ಲಿ ಮಧ್ಯಂತರ ಸರಕಾರದ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡಿರುವ ಪ್ರೊ. ಮೊಹಮ್ಮದ್ ಯೂನುಸ್ ಅವರಿಗೆ ಹಾರ್ದಿಕ ಶುಭಾಶಯಗಳು. ಬಾಂಗ್ಲಾದೇಶದಲ್ಲಿನ ಪರಿಸ್ಥಿತಿ ಆದಷ್ಟೂ ಬೇಗ ಸಹಜ ಸ್ಥಿತಿ ಮರಳಲಿ ಎಂದು ಆಶಿಸುವೆ. ಅದೇ ವೇಳೆ, ಅಲ್ಲಿರುವ ಹಿಂದೂ, ಸಿಖ್, ಬೌದ್ಧ, ಕ್ರೈಸ್ತ ಸಮುದಾಯಗಳ ಜನರ ಸುರಕ್ಷತೆಯ ಬಗೆಗೂ ಕಾಳಜಿ ವಹಿಸಬೇಕಿದೆ ಎಂದು ನೆನಪಿಸುವೆ ಎಂದು ಎಕ್ಸ್ ಸಂದೇಶದಲ್ಲಿ ಹೇಳಿದ್ದಾರೆ. ಭಾರತ ಭವಿಷ್ಯದಲ್ಲಿಯೂ ಬಾಂಗ್ಲಾದೇಶದ ಜತೆಗೆ ಸಾಗಲು ಇಚ್ಚಿಸುತ್ತದೆ. ಎರಡೂ ದೇಶಗಳ ಜನರ ಸಮಾನ ಆಸಕ್ತಿ, ಶಾಂತಿ, ಭದ್ರತೆ, ಅಭಿವೃದ್ಧಿಗೆ ನೆರೆ ದೇಶದ ಸರಕಾರದ ಜತೆ ಶ್ರಮಿಸಲು ಬದ್ಧವಾಗಿದೆ ಎಂದೂ ಪ್ರಧಾನಿ ಮೋದಿ ಹೇಳಿದ್ದಾರೆ.

ಖಾತೆ ಹಂಚಿದ ಯೂನುಸ್

ವಿದ್ಯಾರ್ಥಿ ಆಂದೋಲನ ಮುನ್ನಡೆಸಿದವರಿಗೂ ಸ್ಥಾನ | ಮಧ್ಯಂತರ ಸರಕಾರದಲ್ಲಿ 16 ಸದಸ್ಯರ ಸಲಹಾ ಸಮಿತಿ

ಢಾಕಾ: ಬಾಂಗ್ಲಾದೇಶದಲ್ಲಿನ ಮಧ್ಯಂತರ ಸರಕಾರದ ಮುಖ್ಯಸ್ಥ ಮುಹಮ್ಮದ್ ಯೂನುಸ್ ಅವರು ತಾವೇ ರಚಿಸಿದ 16 ಸದಸ್ಯರ ಸಲಹಾ ಸಮಿತಿಗೆ ಶುಕ್ರವಾರ ಖಾತೆಗಳ ಹಂಚಿಕೆ ಮಾಡಿದ್ದಾರೆ. ಶೇಖ್ ಹಸೀನಾ ನೇತೃತ್ವದ ಚುನಾಯಿತ ಸರಕಾರದ ವಿರುದ್ಧ ಮೀಸಲು (ತಾರತಮ್ಯ) ವಿರೋಧಿ ಹೋರಾಟ ಹೆಸರಲ್ಲಿ ವಿದ್ಯಾರ್ಥಿ ಆಂದೋಲನ ಮುನ್ನಡೆಸಿದ್ದ ಇಬ್ಬರು ವಿದ್ಯಾರ್ಥಿ ನಾಯಕರಿಗೂ ಮಹತ್ವದ ಖಾತೆ ನೀಡಲಾಗಿದೆ.

ರಕ್ಷಣಾ ಖಾತೆ, ಶಿಕ್ಷಣ, ಇಂಧನ, ಆಹಾರ, ಜಲ ಸಂಪನ್ಮೂಲ ಸೇರಿದಂತೆ ಮಹತ್ವದ 27 ಖಾತೆಗಳನ್ನು ಯೂನುಸ್ ತಮ್ಮಲ್ಲಿಯೇ ಉಳಿಸಿಕೊಂಡಿದ್ದಾರೆ. ಮಾಜಿ ವಿದೇಶಾಂಗ ಸಚಿವ ತೌಹಿದ್ ಹೊಸೇನ್ ಅವರಿಗೆ ವಿದೇಶಾಂಗ ವ್ಯವಹಾರಗಳ ಖಾತೆ ಹಾಗೂ ನಿವೃತ್ತ ಸೇನಾ ಬ್ರಿಗೇಡಿಯರ್ ಜನರಲ್ ಎಂ.ಸಖಾವತ್ ಹೊಸೇನ್ ಅವರಿಗೆ ಗೃಹ ಖಾತೆ ನೀಡಲಾಗಿದೆ.

ಬಾಂಗ್ಲಾದೇಶ ಬ್ಯಾಂಕ್‌ನ ಮಾಜಿ ಗವರ್ನರ್ ಸಲಾವುದ್ದೀನ್ ಅಹ್ಮದ್, ಹಣಕಾಸು ಮತ್ತು ಯೋಜನಾ ಸಚಿವಾಲಯಗಳ ಉಸ್ತುವಾರಿ ವಹಿಸಿಕೊಂಡಿದ್ದು, ಮಾಜಿ ಅಟಾರ್ನಿ ಜನರಲ್ ಎ.ಎಫ್.ಹಸನ್ ಆರಿಫ್‌ಗೆ ಸ್ಥಳೀಯ ಸರಕಾರದ ಸಚಿವಾಲಯ ಜವಾಬ್ದಾರಿ ನೀಡಲಾಗಿದೆ.

'ತಾರತಮ್ಯ ವಿರೋಧಿ ವಿದ್ಯಾರ್ಥಿ ಆಂದೋಲನ' ಮುನ್ನಡೆಸಿದ ನಹೀದ್ ಇಸ್ಲಾಂ ಮತ್ತು ಆಸಿಫ್ ಮಹಮೂದ್‌ಗೆ ಗಮನಾರ್ಹ ಖಾತೆಗಳನ್ನೇ ನೀಡಲಾಗಿದೆ. ನಹೀದ್ ಇಸ್ಲಾಂಗೆ ದೂರ ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ಹಾಗೂ ಆಸಿಫ್ ಮಹಮೂದ್‌ಗೆ ಯುವಜನ ಹಾಗೂ ಕ್ರೀಡಾ ಖಾತೆ ವಹಿಸಲಾಗಿದೆ.

ಸೇನೆ, ವಿದ್ಯಾರ್ಥಿ ಸಂಘಟನೆ, ನಾಗರಿಕ ಸಮಾಜದ ಪ್ರತಿನಿಧಿಗಳ ಸಲಹೆ ಮೇರೆಗೇ ಸಲಹಾ ಸಮಿತಿ ಸದಸ್ಯರನ್ನು ಆಯ್ಕೆ ಮಾಡಲಾಗಿದೆ.

ಹಿಂಸಾಚಾರ ನಡೆಸದಿರಿ: ಯೂನುಸ್

ಬಾಂಗ್ಲಾದೇಶದಲ್ಲಿ ಮತ್ತೆ ಹಿಂಸಾಚಾರ ನಡೆಸದಂತೆ ದೇಶದ ಜನತೆ ಮತ್ತು ವಿದ್ಯಾರ್ಥಿಗಳಿಗೆ ಮಧ್ಯಂತರ ಸರಕಾರದ ಮುಖ್ಯಸ್ಥ ಮುಹಮ್ಮದ್ ಯೂನುಸ್ ಶುಕ್ರವಾರ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

31 ಸದಸ್ಯರ ಜಂಟಿ ಸಂಸದೀಯ ಸಮಿತಿ

ದೆಹಲಿ: ವಕ್ಫ್ ತಿದ್ದುಪಡಿ ವಿಧೇಯಕ ಪರಿಶೀಲನೆಗೆ 31 ಸದಸ್ಯರ ಜಂಟಿ ಸಂಸದೀಯ ಸಮಿತಿಯನ್ನು ಶುಕ್ರವಾರ ರಚಿಸಲಾಗಿದೆ. ಸಮಿತಿಗೆ ಲೋಕಸಭೆಯ 21 ಹಾಗೂ ರಾಜ್ಯಸಭೆಯ 10 ಸಂಸದರನ್ನು ನೇಮಕ ಮಾಡಲಾಗಿದೆ.

ಕೇಂದ್ರ ಸಚಿವ ಸುರೇಶ್ ಗೋಪಿ, ಎಐಎಂಐಎಂ ಪಕ್ಷದ ಮುಖಂಡ, ಹೈದರಾಬಾದ ಸಂಸದ ಅಸಾದುದ್ದಿನ್ ಒವೈಸಿ, ಕಾಂಗ್ರೆಸ್ ಸಂಸದರಾದ ಇಮ್ರಾನ್ ಮಸೂದ್, ಗೌರವ್ ಗೊಗೋಯ್, ಬಿಜೆಪಿ ಸಂಸದ ತೇಜಸ್ವಿ ಸೂರ್ಯ, ಅಪರಾಜಿತಾ ಸಾರಂಗಿ, ಸಂಜಯ್ ಜೈಸ್ವಾಲ್ ಸೇರಿದಂತೆ 31 ಸಂಸದರು ಜಂಟಿ ಸಂಸದೀಯ ಸಮಿತಿ ಸದಸ್ಯರಾಗಿದ್ದಾರೆ.

ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಗುರುವಾರ ಲೋಕಸಭೆಯಲ್ಲಿ ವಕ್ಫ್ ತಿದ್ದುಪಡಿ ಮಸೂದೆ ಮಂಡನೆ ಮಾಡುತ್ತಿದ್ದಂತೆ ಪ್ರತಿಪಕ್ಷಗಳಿಂದ ಭಾರಿ ವಿರೋಧ ವ್ಯಕ್ತವಾಗಿತ್ತು. ಮಸೂದೆ ಹಿಂಪಡೆಯುವಂತೆ ಅಥವಾ ಸಂಸದೀಯ ಸಮಿತಿ ಪರಿಶೀಲನೆಗೆ ಕಳುಹಿಸುವಂತೆ ಆಗ್ರಹ ಕೇಳಿ ಬಂದಿತ್ತು. ತಿದ್ದುಪಡಿ ವಿಧೇಯಕ ಒಂದು ಕರಾಳ ಶಾಸನವಾಗಿದೆ ಎಂದು ಪ್ರತಿಪಕ್ಷಗಳು ಕಿಡಿಕಾರಿದ್ದವು.

ಸಮಾಚಾರ ಸಣ್ಣದಲ್ಲ

ನಕಲಿ ಎಫ್‌ಐಆರ್: 8 ಪೊಲೀಸರು ಜೈಲಿಗೆ

ಕಾನ್ಪುರ: ಉತ್ತರ ಪ್ರದೇಶದ ಕಾನ್ಪುರದಲ್ಲಿ ಭೂಹಗರಣವೊಂದರ ಸಂಬಂಧ 'ನಕಲಿ ಎಫ್‌ಐಆರ್' ದಾಖಲಿಸಿದ ಪ್ರಕರಣದಲ್ಲಿ ಘಾಟಂಪುರ ಕೊತ್ವಾಲಿ ಪೊಲೀಸ್ ಠಾಣೆಯ ನಾಲ್ವರು ಸಬ್ ಇನ್‌ಸ್ಪೆಕ್ಟರ್‌ಗಳು ಸೇರಿದಂತೆ 8 ಪೊಲೀಸ್ ಸಿಬ್ಬಂದಿ ಅಮಾನತುಗೊಂಡಿದ್ದಾರೆ. ಮನೆಗೆ ನುಗ್ಗಿ 8 ಅಮಾಯಕ ವ್ಯಕ್ತಿಗಳ ಮೇಲೆ ದೌರ್ಜನ್ಯ ನಡೆಸಿರುವುದು, ಬೆಲೆ ಬಾಳುವ ವಸ್ತುಗಳನ್ನು ದೋಚಿರುವುದು, ಮನೆಗೆ ಹಾನಿಗೊಳಿಸಿರುವ ಆರೋಪವನ್ನು 4 ಸಬ್ ಇನ್‌ಸ್ಪೆಕ್ಟರ್‌ಗಳು, ಒಬ್ಬ ಹೆಡ್ ಕಾನ್‌ಸ್ಟೇಬಲ್ ಮತ್ತು ಮೂವರು ಕಾನ್‌ಸ್ಟೇಬಲ್‌ಗಳ ವಿರುದ್ಧ ಹೊರಿಸಲಾಗಿದೆ. ಪ್ರಾಥಮಿಕ ತನಿಖೆಯಲ್ಲಿ ಆರೋಪಗಳು ರುಜುವಾತಾದ ಬಳಿಕ 8 ಮಂದಿ ಪೊಲೀಸ್ ಸಿಬ್ಬಂದಿಯನ್ನೂ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಎಫ್‌ಐಆರ್ ದಾಖಲಾಗಿದ್ದು, ತನಿಖೆ ಮುಂದುವರಿದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಕುಲ್ಗಾಂ: ಕುಕ್ಕರ್‌ನಲ್ಲಿ ಐಇಡಿ ಬಾಂಬ್ ಪತ್ತೆ

ಶ್ರೀನಗರ: ಭಾರತ ಸ್ವಾತಂತ್ರ್ಯ ದಿನಾಚರಣೆ ಸಿದ್ಧತೆ ಮಾಡಿಕೊಳ್ಳುತ್ತಿರುವಾಗಲೇ ಜಮ್ಮು-ಕಾಶ್ಮೀರದಲ್ಲಿ ಬಾಂಬ್ ಮತ್ತು ಉಗ್ರ ಚಟುವಟಿಕೆ ಭೀತಿ ಹೆಚ್ಚುತ್ತಿದೆ. ದಕ್ಷಿಣ ಕಾಶ್ಮೀರ ಭಾಗದ ಕುಲ್ಗಾಂ ಜಿಲ್ಲೆಯಲ್ಲಿ ಬಾಲ್ಲೂ ಪಾರಿಗಾಮ್ ರಸ್ತೆಯಲ್ಲಿ ಪ್ರೆಷರ್ ಕುಕ್ಕರ್‌ನಲ್ಲಿ ಸುಧಾರಿತ ಸ್ಫೋಟಕ (ಐಇಡಿ) ಅಳವಡಿಸಿ ಒಂದೆಡೆ ಇರಿಸಲಾಗಿತ್ತು. ಸ್ಥಳೀಯರಿಂದ ದೊರೆತ ಮಾಹಿತಿ ಆಧರಿಸಿ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಯಾರಿಗೂ ಅಪಾಯವಾಗದಂತೆ ಬಾಂಬ್ ನಿಷ್ಕ್ರಿಯಗೊಳಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾರಿನ ಮೇಲೆ ಕುಳಿತು ರೀಲ್ಸ್; 28,500 ದಂಡ

ನೊಯಿಡಾ: ನೊಯಿಡಾದಲ್ಲಿ ಚಲಿಸುವ ಕಾರಿನ ಮೇಲೆ ಕುಳಿತು ರೀಲ್ ಶೂಟಿಂಗ್ ಮಾಡಿದ್ದ ವ್ಯಕ್ತಿಗೆ ನೊಯಿಡಾದ ಗೌತಮ ಬುದ್ಧ ನಗರ ಪೊಲೀಸರು 28,500 ರು. ದಂಡ ವಿಧಿಸಿದ್ದಾರೆ. ರಸ್ತೆ ಸಂಚಾರದ ವಿವಿಧ ನಿಯಮಗಳ ಉಲ್ಲಂಘನೆ ಆರೋಪದಡಿ ಇಷ್ಟು ದೊಡ್ಡ ಮೊತ್ತದ ದಂಡ ವಿಧಿಸಲಾಗಿದೆ. ರಸ್ತೆ ಸಂಚಾರ ವೇಳೆ ರೀಲ್ಸ್ ಮಾಡಬಾರದು. ಅದರಿಂದ ಇತರೆ ವಾಹನ ಸವಾರರ ಜೀವಕ್ಕೂ ಅಪಾಯ ಎದುರಾಗುತ್ತದೆ ಎಂದು ಸಂಚಾರ ವಿಭಾಗದ ಡಿಸಿಪಿ ಯಮುನಾ ಪ್ರಸಾದ್ ರೀಲ್ಸ್ ಮಾಡುವವರಿಗೆ ಕಿವಿಮಾತು ಹೇಳಿದ್ದಾರೆ.

ವಯನಾಡಿಗಿಂದು ಪ್ರಧಾನಿ ಭೇಟಿ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಚುರಾಲ್‌ಮಲಾ ಮತ್ತು ಮುಂಡಕ್ಕೈ ಗ್ರಾಮಗಳಿಗೆ ಭೇಟಿ ನೀಡಲಿದ್ದಾರೆ. ಅಲ್ಲಿ ನಿರಾಶ್ರಿತರ ತಾಣಗಳಲ್ಲಿರುವ ಪುನರ್ವಸತಿ ಕೇಂದ್ರಗಳಿಗೂ ಭೇಟಿ ನೀಡಲಿದ್ದಾರೆ. ಇದೇ ವೇಳೆ ವಯನಾಡು ಭೂಕುಸಿತ ಘಟನೆಯನ್ನು 'ರಾಷ್ಟ್ರೀಯ ವಿಪತ್ತು' ಎಂದು ಪ್ರಧಾನಿಯೇ ಘೋಷಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ರೈಲ್ವೆ ಮಂಡಳಿ ತಿದ್ದುಪಡಿ ವಿಧೇಯಕ ಮಂಡನೆ

ದೆಹಲಿ: ರೈಲ್ವೆ ಮಂಡಳಿಗೆ ಶಾಸನಬದ್ಧ ಅಧಿಕಾರ ನೀಡುವ ರೈಲ್ವೆ (ತಿದ್ದುಪಡಿ) ವಿಧೇಯಕವನ್ನು ಸಚಿವ ಅಶ್ವಿನಿ ವೈಷ್ಣವ್ ಶುಕ್ರವಾರ ಲೋಕಸಭೆಯಲ್ಲಿ ಮಂಡಿಸಿದರು. ರೈಲ್ವೆ ಮಂಡಳಿಗೆ ಶಾಸನ ಬದ್ಧ ಅಧಿಕಾರ ನೀಡುವುದರ ಜತೆಗೇ 1905ರ ರೈಲ್ವೆ ಮಂಡಳಿ ಕಾಯಿದೆಯನ್ನು 1989ರ ರೈಲ್ವೆ ಕಾಯಿದೆಯಲ್ಲಿ ವಿಲೀನಗೊಳಿಸುವ ಪ್ರಸ್ತಾಪವನ್ನೂ ತಿದ್ದುಪಡಿ ವಿಧೇಯಕ ಒಳಗೊಂಡಿದೆ. ವಿಧೇಯಕದ ಉದ್ದೇಶ ಹಾಗೂ ಕಾರಣವನ್ನು ಲೋಕಸಭೆಗೆ ತಿಳಿಸಿದ ಸಚಿವರು, ತಿದ್ದುಪಡಿಯಿಂದ 2 ಕಾನೂನುಗಳನ್ನು ಪಾಲಿಸುವ ವಿಚಾರದಲ್ಲಿ ಗೊಂದಲ ಇರುವುದಿಲ್ಲ. ರೈಲ್ವೆ ಮಂಡಳಿಗೆ ತನ್ನದೇ ಆದ ಕಾನೂನು ಚೌಕಟ್ಟು ಹೊಂದಲು ಅವಕಾಶ ಸಿಗಲಿದೆ. ಆ ಮೂಲಕ ರೈಲ್ವೆ ಕಾರ್ಯಾಚರಣೆ ಇನ್ನಷ್ಟು ಸರಳವಾಗಲಿದೆ ಎಂದು ವಿವರಿಸಿದರು. ದೇಶ ಸ್ವಾತಂತ್ರ್ಯವಾಗುವುದಕ್ಕೂ ಮೊದಲು ಲೋಕೋಪಯೋಗಿ ಇಲಾಖೆಯಡಿ ಇದ್ದ ರೈಲ್ವೆಯನ್ನು ಸಂಪರ್ಕ ವ್ಯಾಪ್ತಿ ವಿಸ್ತಾರಗೊಳ್ಳುತ್ತಿದ್ದಂತೆಯೇ 1890ರಲ್ಲಿ ಪ್ರತ್ಯೇಕಗೊಳಿಸಿ ರೈಲ್ವೆ ಕಾಯಿದೆ ರಚಿಸಲಾಯಿತು. ಆದರೂ ರೈಲ್ವೆ ಇಲ್ಲಿವರೆಗೆ ಕಾರ್ಯಾಂಗದ ಆದೇಶದಂತೇ ಕಾರ್ಯ ನಿರ್ವಹಿಸುತ್ತಿದೆ. ಅದರದ್ದೇ ಆದ ಕಾನೂನು ಹೊಂದಲು ಅವಕಾಶವಾಗಿಲ್ಲ. ಆದರೆ ಈ ತಿದ್ದುಪಡಿ ವಿಧೇಯಕ ರೈಲ್ವೆ ಮಂಡಳಿಗೆ ಶಾಸನಬದ್ಧ ಅಧಿಕಾರ ನೀಡಿ ಕಾರ್ಯ ಚಟುವಟಿಕೆ ಸರಳ ಹಾಗೂ ಪರಿಣಾಮಕಾರಿ ಮಾಡಲಿದೆ ಎಂದು ವಿವರಿಸಿದರು. ವಿಸ್ತೃತ ಮತ್ತು ಹೊಸ ಸೇವೆ ನಿರ್ವಹಿಸಲು ವಾರ್ಷಿಕ 250 ಕೋಟಿ ರು. ವೆಚ್ಚದ ಅಗತ್ಯವಿದೆ ಎಂದು ಅಂದಾಜಿಸಲಾಗಿದೆ.

{ ಅನುರಾಗ್ ಠಾಕೂರ್ } ಬಿಜೆಪಿ ಸಂಸದ

ಕಾಂಗ್ರೆಸ್, ಗಾಜಾದಲ್ಲಿ ಇಸ್ರೇಲ್ ದಾಳಿ ಖಂಡಿಸುತ್ತದೆ. ಆದರೆ ಬಾಂಗ್ಲಾದಲ್ಲಿ ಅಲ್ಪಸಂಖ್ಯಾತ ಹಿಂದೂಗಳ ಮೇಲೆ ಹಿಂಸಾಚಾರ ನಡೆದರೂ ಕಾಂಗ್ರೆಸ್ ಮೌನ ತಾಳುತ್ತದೆ. ಹಿಂದೂಗಳ ಬಗ್ಗೆ ಮಾತನಾಡಲು ಕಾಂಗ್ರೆಸ್‌ಗೇಕೆ ಇಷ್ಟು ಹಿಂಜರಿಕೆ? ಬಾಂಗ್ಲಾ ಮಧ್ಯಂತರ ಸರಕಾರದ ಮುಖ್ಯಸ್ಥರಿಗೆ ಕರೆ ಮಾಡಿ ಅಭಿನಂದನೆ ಸಲ್ಲಿಸಿದ ರಾಹುಲ್ ಗಾಂಧಿ, ಹಿಂದೂಗಳ ಸುರಕ್ಷತೆ ವಿಚಾರ ಪ್ರಸ್ತಾಪಿಸಲೇ ಇಲ್ಲ.

ನಾಳೆಯೇ ನೀಟ್ ಪಿಜಿ

ಪರೀಕ್ಷೆ ಮುಂದೂಡಲ್ಲ: ಸುಪ್ರೀಂ

ದೆಹಲಿ: ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಸ್ನಾತಕೋತ್ತರ (ಪಿಜಿ) ಕೋರ್ಸ್ ಪ್ರವೇಶಕ್ಕಾಗಿ 'ನೀಟ್ ಪಿಜಿ-2024' ಪರೀಕ್ಷೆ ಭಾನುವಾರ ನಿಗದಿಯಂತೆಯೇ ನಡೆಯಲಿದೆ. ಪರೀಕ್ಷೆ ಮುಂದೂಡುವಂತೆ ಕೋರಿದ್ದ ಐವರು ಅರ್ಜಿದಾರರ ಮನವಿಯನ್ನು ಸುಪ್ರೀಂ ಕೋರ್ಟ್ ತಳ್ಳಿಹಾಕಿದೆ.

ನೀಟ್ ಸ್ನಾತಕೋತ್ತರ ಪರೀಕ್ಷೆ ನಡೆಯುವ ನಗರಗಳ ಪಟ್ಟಿಯನ್ನು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಜು.31ರಂದು ಪ್ರಕಟಿಸಿದೆ. ಪರೀಕ್ಷೆ ನಡೆಯುವ ಕೇಂದ್ರಗಳ ಮಾಹಿತಿ ಆ.8ರಂದು ಪ್ರಕಟಿಸಲಾಗಿದೆ.

ಪರೀಕ್ಷಾ ಕೇಂದ್ರ ಮಾಹಿತಿ ತಡವಾಗಿ ಪ್ರಕಟವಾಗಿದ್ದು, ದೂರದೂರಿನಲ್ಲಿರುವ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರ ತಲುಪುವುದೇ ಕಷ್ಟವಾಗಿದೆ. ಹಾಗಾಗಿ, ಪರೀಕ್ಷೆ ಮುಂದೂಡಬೇಕೆಂದು ಕೋರಲಾಗಿತ್ತು. ಅಲ್ಲದೇ ಪರೀಕ್ಷೆ 2 ಹಂತಗಳಲ್ಲಿ ನಡೆಸಬೇಕು. ನೀಟ್ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಸಾಮಾನ್ಯ ವ್ಯವಸ್ಥೆ ಜಾರಿಗೊಳಿಸಬೇಕೆಂದು ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ನೀಟ್ ಪಿಜಿ ಪರೀಕ್ಷೆ ಮುಂದೂಡಲು ಸಾಧ್ಯವಿಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ನ್ಯಾಯಪೀಠ ತಿಳಿಸಿದೆ. ದೇಶಾದ್ಯಂತ 2 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ನೀಟ್ ಪಿಜಿ ಪರೀಕ್ಷೆಗೆ ಸಿದ್ಧರಾಗಿದ್ದಾರೆ. ಆದರೆ, ಐವರಷ್ಟೇ ಅರ್ಜಿ ಸಲ್ಲಿಸಿದ್ದಾರೆ. ಪರೀಕ್ಷೆ ಮುಂದೂಡಲು ಆಗದು. ಶೈಕ್ಷಣಿಕ ನೀತಿ ಬದಲಿಸಲು ಸಾಧ್ಯವಿಲ್ಲ ಎಂದು ಪೀಠ ಹೇಳಿದೆ.

ಇದಕ್ಕೂ ಮುನ್ನ ಜೂ.23ಕ್ಕೆ ನೀಟ್ ಪಿಜಿ ಪರೀಕ್ಷೆ ನಿಗದಿಪಡಿಸಲಾಗಿತ್ತು. ಬಳಿಕ ಆ.11ಕ್ಕೆ ಮುಂದೂಡಲಾಯಿತು.

ಹಿಜಾಬ್ ನಿಷೇಧ: ಮುಂಬೈ ಕಾಲೇಜು ನಿಯಮಕ್ಕೆ ಸುಪ್ರೀಂ ಭಾಗಶಃ ತಡೆ

ಕ್ಯಾಂಪಸ್‌ನಲ್ಲಿ ಹಿಜಾಬ್‌ಗೆ ಅನುಮತಿ | ತರಗತಿಯಲ್ಲಿ ಬುರ್ಖಾ ಧರಿಸುವಂತಿಲ್ಲ

ದೆಹಲಿ: ಕಾಲೇಜು ಆವರಣದಲ್ಲಿ ಹಿಜಾಬ್, ನಿಕಾಬ್, ಬುರ್ಖಾ, ಟೋಪಿ ಮೊದಲಾದ ಧಿರಿಸು ಧರಿಸುವುದನ್ನು ನಿರ್ಬಂಧಿಸಿದ್ದ ಮುಂಬೈ ಕಾಲೇಜು ಆಡಳಿತದ ಆದೇಶಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ಭಾಗಶಃ ತಡೆಯಾಜ್ಞೆ ನೀಡಿದೆ.

- ತಿಲಕ, ಬಿಂದಿ ಕೂಡಾ ನಿಷೇಧಿಸುವಿರಾ?
- ಮುಂಬೈ ಕಾಲೇಜಿಗೆ ಸುಪ್ರೀಂ ಪ್ರಶ್ನೆ

ಮುಂಬೈ ಕಾಲೇಜು ಆಡಳಿತದ ಹಿಜಾಬ್ ನಿಷೇಧ ನಿರ್ಧಾರದಲ್ಲಿ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ ಎಂಬ ಬಾಂಬೈ ಹೈಕೋರ್ಟ್ ತೀರ್ಪು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗಿತ್ತು. ಅರ್ಜಿ ವಿಚಾರಣೆ ನಡೆಸಿದ ನ್ಯಾ. ಸಂಜೀವ್ ಖನ್ನಾ ಹಾಗೂ ನ್ಯಾ.ಸಂಜಯ್ ಕುಮಾರ್ ಅವರ ಪೀಠ ಹಿಜಾಬ್ ನಿಷೇಧ ನಿರ್ಧಾರಕ್ಕೆ ತಡೆಯಾಜ್ಞೆ ನೀಡಿದೆ. ಆದರೆ, ತರಗತಿ ಕೊಠಡಿಯ ಒಳಗೆ ಬುರ್ಖಾ ಧರಿಸುವಂತಿಲ್ಲ. ಕಾಲೇಜು ಆವರಣದಲ್ಲಿ ಯಾವುದೇ ಧಾರ್ಮಿಕ ಚಟುವಟಿಕೆಗೆ ಅವಕಾಶ ನೀಡುವಂತಿಲ್ಲ ಎಂದೂ ಆದೇಶಿಸಿದೆ.

ಕಾಲೇಜು ಆವರಣದಲ್ಲಿ ಏಕರೂಪ ಉಡುಗೆ ನಿರ್ವಹಿಸುವ ವಿಚಾರವೇನಾದರೂ ಕಾಲೇಜು ಆಡಳಿತ ಮಂಡಳಿಗೆ ಇದ್ದರೆ ಬಿಂದಿ, ತಿಲಕದಂತಹ ಉಳಿದ ಧಾರ್ಮಿಕ ಆಚರಣೆಯ ಗುರುತುಗಳನ್ನೂ ನಿಷೇಧಿಸುತ್ತೀರಾ? ಎಂದು ಪೀಠ ಪ್ರಶ್ನಿಸಿದೆ.

ವಿದ್ಯಾರ್ಥಿಗಳು ಸಿಬ್ಬಂದಿಗಳು ಸೇರಿ ಯಾರೊಬ್ಬರೂ ಕಾಲೇಜು ಆವರಣದಲ್ಲಿ ಹಿಜಾಬ್, ನಿಖಾಬ್, ಬುರ್ಖಾ, ಟೋಪಿ, ಬ್ಯಾಡ್ಜ್

ಇಷ್ಟದ ಧಿರಿಸು ವಿದ್ಯಾರ್ಥಿನಿಯರ ಹಕ್ಕು

ವಿದ್ಯಾರ್ಥಿನಿಯರಿಗೆ ತಮ್ಮ ಇಷ್ಟದ ಧಿರಿಸು ನಿರ್ಧರಿಸಲು ಪೂರ್ಣ ಸ್ವಾತಂತ್ರ್ಯವಿದೆ. ಕಾಲೇಜು ಆಡಳಿತ ಮಂಡಳಿ ಈ ವಿಚಾರದಲ್ಲಿ ಒತ್ತಡ ಹೇರುವಂತಿಲ್ಲ. ಭಾರತದಲ್ಲಿ ಹಲವು ಧರ್ಮಗಳ ಆಚರಣೆ ಇದೆ ಎಂದು ತಡವಾಗಿ ತಿಳಿದಿದ್ದು ದುರದೃಷ್ಟಕರ ಎಂದು ಸುಪ್ರೀಂ ಕೋರ್ಟ್, ಮುಂಬೈನ ಕಾಲೇಜು ಆಡಳಿತಕ್ಕೆ ಚಾಟಿ ಬೀಸಿದೆ.

ಮತ್ತು ಶಾಲು ಧರಿಸುವುದನ್ನು ನಿಷೇಧಿಸಲಾಗಿದೆ ಎಂದು ಚೆಂಬೂರ್ ಟ್ರಾಂಬೆ ಎಜುಕೇಶನ್ ಸೊಸೈಟಿಯ ಎನ್‌ಜಿ ಆಚಾರ್ಯ ಮತ್ತು ಡಿ.ಕೆ.ಮರಾಠೆ ಕಾಲೇಜು ಅಧಿಕೃತ ವಾಟ್ಸಾಪ್ ಗುಂಪಿನಲ್ಲಿ ಸೂಚನೆ ಹೊರಡಿಸಿತ್ತು. ಈ ಸೂಚನೆಯನ್ನು ಯಾವುದೇ ಕಾನೂನು ಅಧಿಕಾರವಿಲ್ಲದೆ ಹೊರಡಿಸಲಾಗಿದೆ ಎಂದು ಅರ್ಜಿದಾರರು ವಾದಿಸಿದ್ದರು.

ಐಸಿಸ್ ಉಗ್ರ ರಿಜ್ವಾನ್ ಸೆರೆ

ಪುಣೆ ಮಾಡ್ಯೂಲ್ ಐಸಿಸ್ ಸಂಪರ್ಕ

ದೆಹಲಿ: ಸ್ವಾತಂತ್ರ್ಯದ ಉತ್ಸವಕ್ಕೆ ದೇಶ ಸಿದ್ಧವಾಗುತ್ತಿರುವಾಗಲೇ ಮೋಸ್ಟ್ ವಾಂಟೆಡ್ ಐಸಸ್ (ಐಸ್‌ಐಎಸ್) ಉಗ್ರ ರಿಜ್ವಾನ್ ಅಲಿಯನ್ನು ದೆಹಲಿ ಪೊಲೀಸರ ವಿಶೇಷ ತಂಡ ಬಂಧಿಸಿದೆ. ದೆಹಲಿಯ ದರಯಾಗಂಜ್ ನಿವಾಸಿ ರಿಜ್ವಾನ್ ಅಲಿ ಉಗ್ರ ಚಟುವಟಿಕೆಗಳಿಂದಾಗಿ ರಾಷ್ಟ್ರೀಯ ತನಿಖಾ ದಳ(ಎನ್‌ಐಎ) ನಿಗಾದಲ್ಲಿದ್ದ.

ಗುಪ್ತಚರ ವರದಿ ಆಧಾರದ ಮೇಲೆ ಗುರುವಾರ ತಡರಾತ್ರಿ ರಿಜ್ವಾನ್ ಅಲಿಯನ್ನು ಬಂಧಿಸಲಾಗಿದೆ. ತುಘಲಕಾಬಾದ್ ಪ್ರದೇಶದ ಜೀವವೈವಿಧ್ಯ ಉದ್ಯಾನವನಕ್ಕೆ ರಾತ್ರಿ 11ರ ವೇಳೆ ರಿಜ್ವಾನ್ ಅಲಿ ಬರುತ್ತಿದ್ದಾನೆಂಬ ಗುಪ್ತಚರ ಮಾಹಿತಿ ಲಭಿಸಿತ್ತು. ರಿಜ್ವಾನ್‌ನನ್ನು ಬಂಧಿಸಿದಾಗ ಪಾಯಿಂಟ್ 30 ಬೋರ್ ಸ್ಟಾರ್ ಪಿಸ್ತೂಲು ಮತ್ತು ಗುಂಡುಗಳು ಹಾಗೂ 2 ಸ್ಮಾರ್ಟ್‌ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ರಿಜ್ವಾನ್ ಅಲಿ ಪುಣೆ ಮಾಡ್ಯೂಲ್‌ನಿಂದ ಐಸಿಸ್ ಜತೆ ಸಂಬಂಧವಿರಿಸಿಕೊಂಡಿದ್ದ. ಅಲಿ ಮತ್ತು ಸಹಚರರು ದೆಹಲಿಯ ಹಲವು ವಿಐಪಿ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದರು ಎಂಬ ಮಾಹಿತಿ ಸಿಕ್ಕಿದೆ. ಅಲಿ ಸದ್ಯದ ಚಟುವಟಿಕೆಗಳು, ಆತನ ಸಹವರ್ತಿಗಳ ಕುರಿತು ತಿಳಿಯಲು ಮೊಬೈಲ್ ಫೋನ್ ಡೇಟಾ ವಿಶ್ಲೇಷಿಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

3 ಲಕ್ಷ ರು. ಬಹುಮಾನ

ಉಗ್ರ ಅಲಿ ಸೆರೆಗೆ ಮಾಹಿತಿ ನೀಡಿದವರಿಗೆ 3 ಲಕ್ಷ ರು. ಬಹುಮಾನವನ್ನು ಎನ್‌ಐಎ ಘೋಷಿಸಿತ್ತು.

ದೆಹಲಿ ಪೊಲೀಸರು ನಗರಾದ್ಯಂತ ಮೋಸ್ಟ್ ವಾಂಟೆಡ್ ಉಗ್ರರ ಫೋಟೋ ಮತ್ತು ಮಾಹಿತಿಗಳು ಇರುವ ಭಿತ್ತಿಚಿತ್ರಗಳನ್ನು ಲಗತ್ತಿಸಿದ್ದು, ಉಗ್ರರ ಬಗ್ಗೆ ಮಾಹಿತಿ ನೀಡಿದವರಿಗೆ ಬಹುಮಾನ ನೀಡುವುದಾಗಿ, ಮಾಹಿತಿದಾರರ ಗೌಪ್ಯತೆ ಕಾಪಾಡುವುದಾಗಿ ಹೇಳಿದ್ದಾರೆ. ಪೋಸ್ಟರ್‌ನಲ್ಲಿ 15 ಉಗ್ರರ ಮಾಹಿತಿ ನೀಡಲಾಗಿದೆ. ಈ ಪೈಕಿ ಅಲ್ ಖೈದಾ ಸಂಘಟನೆ ಜತೆ 6 ಮಂದಿ ನಂಟು ಹೊಂದಿದ್ದಾರೆ ಎಂದು ಹೇಳಲಾಗಿದೆ.

ಸಿಸೋಡಿಯ ಕಡೆಗೂ ಬಂಧಮುಕ್ತ

ದೆಹಲಿ ಮಾಜಿ ಡಿಸಿಎಂಗೆ ಷರತ್ತಿನ ಜಾಮೀನು

ದೆಹಲಿ: ವಿವಾದಿತ ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಭ್ರಷ್ಟಾಚಾರ ಮತ್ತು ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಒಂದೂವರೆ ವರ್ಷದಿಂದ ನ್ಯಾಯಾಂಗ ಬಂಧನದಲ್ಲಿರುವ ದೆಹಲಿ ಸರಕಾರದ ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯ ಅವರಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಸಿಸೋಡಿಯರನ್ನು ಭ್ರಷ್ಟಾಚಾರ ಆರೋಪದಡಿ 2023ರ ಫೆ.26ರಂದು ಸಿಬಿಐ ಬಂಧಿಸಿತು. 2 ವಾರಗಳ ನಂತರ ಜಾರಿ ನಿರ್ದೇಶನಾಲಯ(ಇ.ಡಿ) ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಬಂಧಿಸಿತು. ಈ ಎರಡೂ ಪ್ರಕರಣಗಳಲ್ಲಿ ಈಗ ಸಿಸೊಡಿಯ ಅವರಿಗೆ ಜಾಮೀನು ಸಿಕ್ಕಿದೆ.

ನ್ಯಾಯಮೂರ್ತಿ ಬಿ.ಆರ್.ಗವಾಯಿ ಮತ್ತು ನ್ಯಾ.ಕೆ.ವಿ.ವಿಶ್ವನಾಥನ್ ಅವರ ಪೀಠ ಸಿಸೋಡಿಯರಿಗೆ 10 ಲಕ್ಷ ರು. ಮೌಲ್ಯದ



ಜಾಮೀನು ಬಾಂಡ್, ಜತೆಗೆ ಇಬ್ಬರು ಶ್ಯೂರಿಟಿ ನೀಡುವಂತೆ ಸೂಚಿಸಿ ಜಾಮೀನು ಮಂಜೂರು ಮಾಡಿದೆ. ಅಲ್ಲದೇ ಯಾವುದೇ ಕಾರಣಕ್ಕೂ ದೇಶ ಬಿಟ್ಟು ಹೊರಹೋಗದಂತೆ, ಪೊಲೀಸ್ ಠಾಣೆಗೆ ಪಾಸ್‌ಪೋರ್ಟ್ ಒಪ್ಪಿಸುವಂತೆ, ಪ್ರತಿ ಸೋಮವಾರ ಮತ್ತು ಗುರುವಾರ ತನಿಖಾಧಿಕಾರಿ ಮುಂದೆ ಹಾಜರಾಗುವಂತೆ ಸೂಚಿಸಿದೆ. ಸಾಕ್ಷಿಗಳ ಮೇಲೆ ಪ್ರಭಾವ ಬೀರುವುದು, ಸಾಕ್ಷ್ಯ ನಾಶ ಯತ್ನ ಸಲ್ಲದು ಎಂದೂ ಪೀಠ ಹೇಳಿದೆ.

ವಿಚಾರಣಾ ಕೋರ್ಟ್‌ಗೆ 'ಸುಪ್ರೀಂ' ತರಾಟೆ

ದೆಹಲಿ ಅಬಕಾರಿ ನೀತಿ ಹಗರಣದ ಭ್ರಷ್ಟಾಚಾರ, ಅಕ್ರಮ ಹಣ ವರ್ಗಾವಣೆ ಪ್ರಕರಣಗಳಲ್ಲಿ ವಿಚಾರಣಾ ನ್ಯಾಯಾಲಯ ನಿಧಾನಗತಿಯಲ್ಲಿ ನಡೆಸುತ್ತಿರುವುದನ್ನು ಸುಪ್ರೀಂ ಕೋರ್ಟ್ ತೀವ್ರ ತರಾಟೆಗೆ ತೆಗೆದುಕೊಂಡಿದೆ. ತ್ವರಿತ ವಿಚಾರಣೆ ಮತ್ತು ತ್ವರಿತ ನ್ಯಾಯ ದೇಶದ ನಾಗರಿಕರ ಹಕ್ಕು. ಈ ಹಕ್ಕನ್ನು ನಿರಾಕರಿಸುವಂತಿಲ್ಲ ಮತ್ತು ವಿಚಾರಣೆ ವಿಳಂಬ ಮಾಡುವಂತಿಲ್ಲ ಎಂದು ಕೋರ್ಟ್ ಹೇಳಿದೆ. ಗಂಭೀರ ಅಪರಾಧ ಎಂದು ಹೇಳುವ ಮೂಲಕ ಜಾಮೀನು ನಿರಾಕರಿಸಲಾಗದು. ಜಾಮೀನು ವಿಚಾರದಲ್ಲಿ ಹೈಕೋರ್ಟ್ ಮತ್ತು ವಿಚಾರಣಾ ನ್ಯಾಯಾಲಯ ಸುರಕ್ಷಿತ ಆಟವಾಡುತ್ತಿವೆ. ವಿಚಾರಣೆ ಪೂರ್ಣಗೊಳಿಸುವ ಉದ್ದೇಶದಿಂದ ಆರೋಪಿಯನ್ನು ದೀರ್ಘಕಾಲ ಬಂಧನದಲ್ಲಿಡುವುದು ಸಂವಿಧಾನದ 21ನೇ ವಿಧಿಯ ಉಲ್ಲಂಘನೆ.

ಮೀಸಲು ಕೆನೆಪದರ: ಬಿಜೆಪಿ ಸಂಸದರಿಂದ ಪ್ರಧಾನಿ ಭೇಟಿ

ದೆಹಲಿ: ಎಸ್‌ಸಿ-ಎಸ್‌ಟಿ ಸಮುದಾಯದ ಕೆನೆಪದರ ವರ್ಗವನ್ನು ಮೀಸಲಾತಿಯಿಂದ ಹೊರಗಿಡಬೇಕು ಎಂಬ ಸುಪ್ರೀಂ ಕೋರ್ಟ್ ಆದೇಶ ವಿರೋಧಿಸಿ ಪ್ರಧಾನಿ ನರೇಂದ್ರ ಮೋದಿಗೆ ಎಸ್‌ಸಿ-ಎಸ್‌ಟಿ ಸಮುದಾಯಗಳ ಸಂಸದರು ಮನವಿ ಪತ್ರ ಸಲ್ಲಿಸಿದ್ದಾರೆ.

ದೆಹಲಿಯಲ್ಲಿ ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡಗಳಿಗೆ ಸೇರಿದ ಲೋಕಸಭೆ ಮತ್ತು ರಾಜ್ಯಸಭೆಯ ಬಿಜೆಪಿ ಸಂಸದರು ಪ್ರಧಾನಿ ಮೋದಿ ಅವರನ್ನು ಶುಕ್ರವಾರ ಭೇಟಿಯಾದರು. ಕೆನೆಪದರ ನೀತಿಯನ್ನು ಎಸ್‌ಸಿ ಮತ್ತು ಎಸ್‌ಟಿ ಸಮುದಾಯದ ಮೀಸಲಾತಿಯಲ್ಲಿ ಅನುಷ್ಠಾನಗೊಳಿಸದಂತೆ ಮನವಿ ಪತ್ರ ಸಲ್ಲಿಸಿದರು. ವಿಚಾರವನ್ನು ಪರಿಶೀಲಿಸುವುದಾಗಿ ಪ್ರಧಾನಿ ಮೋದಿ ಭರವಸೆ ನೀಡಿದ್ದಾರೆ.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಂಸದ

ಗೋವಿಂದ ಕಾರಜೋಳ, ಪ್ರಧಾನಿ ಯಾವುದೇ ಕಾರಣಕ್ಕೂ ಕೆನೆಪದರ ನೀತಿಯನ್ನು ಜಾರಿಗೊಳಿಸುವುದಿಲ್ಲ ಎಂದು ತಿಳಿಸಿದ್ದಾರೆ. ಸುಪ್ರೀಂ ಕೋರ್ಟ್‌ನ ಈ ಆದೇಶದ ಬಗ್ಗೆ ಸಂಸದರೆಲ್ಲಾ ಸೇರಿ ಚರ್ಚೆ ನಡೆಸಿದ್ದೇವೆ. ಈ ನೀತಿ ಜಾರಿಯಾದರೆ ಅನ್ಯಾಯವಾಗುತ್ತದೆ ಎಂದು ಪ್ರಧಾನಿಗೆ ಮನವರಿಕೆ ಮಾಡಿಕೊಟ್ಟಿದ್ದೇವೆ ಎಂದರು.

ಆ.1ರಂದು ಸುಪ್ರೀಂ ಕೋರ್ಟ್ ಎಸ್‌ಸಿ ಮತ್ತು ಎಸ್‌ಟಿ ಸಮುದಾಯದಲ್ಲಿ ಉಪವರ್ಗೀಕರಣಕ್ಕೆ (ಒಳಮೀಸಲು ನೀಡಲು) ರಾಜ್ಯ ಸರಕಾರಗಳಿಗೇ ಅಧಿಕಾರ ನೀಡಿದೆ. ಎಸ್‌ಸಿ ಮತ್ತು ಎಸ್‌ಟಿ ಸಮುದಾಯಗಳ ಕೆನೆ ಪದರವನ್ನು ಮೀಸಲಾತಿಯಿಂದ ಹೊರಗಿಡುವಂತೆ ನೀತಿ ರೂಪಿಸಲು ಆದೇಶಿಸಿದೆ.

ವಯನಾಡು ಸುತ್ತಮುತ್ತ ಭೂಕಂಪನ ಅನುಭವ

ನೆಲದಾಳದಿಂದ ನಿಗೂಢ ಶಬ್ದ: ಗ್ರಾಮಸ್ಥರ ಹೇಳಿಕೆ | ಭೂಕಂಪವಾಗಿಲ್ಲ ಎಂದು ಸ್ಪಷ್ಟಪಡಿಸಿದ ಎನ್‌ಸಿಎಸ್ ಕೇಂದ್ರ

ವಯನಾಡು: ಭೂಕುಸಿತವಾಗಿದ್ದ ಕೇರಳದ ವಯನಾಡು ಭಾಗದ ಕೆಲವು ಪ್ರದೇಶಗಳಲ್ಲಿ ಶುಕ್ರವಾರ ಬೆಳಗ್ಗೆ ವಿಚಿತ್ರ ಶಬ್ದ ಕೇಳಿ ಬಂದಿದ್ದು, ಜನರಿಗೆ ಭೂಮಿ ನಡುಗಿದ ಅನುಭವವಾಗಿದೆ. 400ಕ್ಕೂ ಅಧಿಕ ಜನರನ್ನು ಬಲಿ ಪಡೆದ ಭೂಕುಸಿತ ಪ್ರದೇಶದ ಚೇರಲ್‌ಮಲಾ, ಮುಂಡಕ್ಕೈ ಗ್ರಾಮಗಳ ಸಮೀಪದ ಹಲವು ಗ್ರಾಮಗಳ ಜನರು ಭೂಮಿಯಾಳದಿಂದ ವಿಚಿತ್ರ ಸದ್ದು ಕೇಳಿಬಂದಿತು ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಆದರೆ, ವಯನಾಡಿನಲ್ಲಿ ಯಾವುದೇ ಭೂಕಂಪವಾಗಿಲ್ಲ ಎಂದು ಭೂಕಂಪಶಾಸ್ತ್ರ ರಾಷ್ಟ್ರೀಯ ಕೇಂದ್ರ(ಎನ್‌ಸಿಎಸ್) ಸ್ಪಷ್ಟಪಡಿಸಿದೆ. ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರವೂ ಸಹ ಯಾವುದೇ ಭೂಕಂಪನದ ಸೂಚನೆ ಇಲ್ಲ ಎಂದು

ಹೇಳಿದೆ. ಕುರಿಚಿರಾಮಲ, ಅಂಬುಕುಟಿಮಲ, ಎಡಕ್ಕಲ್ ಗುಹೆ ಸುತ್ತಮುತ್ತಲ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಶುಕ್ರವಾರ ಬೆಳಿಗ್ಗೆ 10-10.30ರ ವೇಳೆ ಭೂಮಿಯ ಆಳದಿಂದ ನಿಗೂಢ ಶಬ್ದ ಕೇಳಿ ಬಂದಿದೆ, ಕೆಲವರಿಗೆ ಭೂಮಿ ಕಂಪಿಸಿದ ಅನುಭವವಾಗಿದೆ. ಈ ಬಗ್ಗೆ ಜಿಲ್ಲಾಡಳಿತಕ್ಕೆ ಮಾಹಿತಿ ನೀಡಲಾಗಿದೆ. ಮುಂಜಾಗ್ರತಾ ಕ್ರಮವಾಗಿ ನೆನ್ಮೆನಿ ಗ್ರಾಮ ಪಂಚಾಯತ್‌ನ ಕೆಲ ವಾರ್ಡ್‌ಗಳಲ್ಲಿನ ಜನರನ್ನು ಸ್ಥಳಾಂತರ ಮಾಡಲಾಗಿದೆ. ಕೆಲವೆಡೆ ಶಾಲೆಗಳಿಗೆ ರಜೆ ಘೋಷಿಸಲಾಗಿದೆ.

ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸುವಂತೆ ಗ್ರಾಪಂ ಅಧಿಕಾರಿಗಳಿಗೆ ಸರಕಾರ ಸೂಚನೆ ನೀಡಿದೆ. ಅಂಬಲವಯಲ್‌ನ ಸ್ಥಳೀಯ ಕೃಷಿ ಸಂಶೋಧನಾ ಕೇಂದ್ರದ ಸಿಬ್ಬಂದಿ ಕೂಡ ನಿಗೂಢ ಶಬ್ದ ಕೇಳಿದ್ದಾಗಿ, ಆವರಣದಲ್ಲಿದ್ದ ವಾಹನಗಳಲ್ಲಿ ಅಲರಾಮ್ ಶಬ್ದ ಹೊರಟಿದ್ದಾಗಿ ತಿಳಿಸಿದ್ದಾರೆ. ಅಂಬುಕುಟಿ ಗುಡ್ಡ ಪ್ರದೇಶದ ಎಲ್ಲಾ ಗ್ರಾಮಗಳಲ್ಲೂ ನಿಗೂಢ ಶಬ್ದ ಕೇಳಿ ಬಂದಿದೆ ಎಂದು ವರದಿಯಾಗಿದೆ. ಈ ಬಗ್ಗೆ ಭೂ ವಿಜ್ಞಾನ ತಜ್ಞರ ತಂಡ ತನಿಖೆ ಕೈಗೊಂಡಿದೆ.

ಸಮಾಚಾರ ಸಣ್ಣದಲ್ಲ

ಉದ್ಯೋಗ ಮೇಳ ನೇರ ಸಂದರ್ಶನ ಆ.13ಕ್ಕೆ

ರಾಯಚೂರು: ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ವಿನಿಮಯ ಇಲಾಖೆಯ ಕಚೇರಿಯಲ್ಲಿ ಆ. 13ರ ಬೆಳಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯವರೆಗೆ 5 ವಿವಿಧ ಖಾಸಗಿ ಕಂಪನಿಗಳ ಸಹಭಾಗಿತ್ವದಲ್ಲಿ ನೇರ ಸಂದರ್ಶನ ಆಯೋಜನೆ ಮಾಡಿಲಾಗಿದ್ದು, ಆಸಕ್ತರು ಯುವಕ/ ಯುವತಿರು ಭಾಗಹಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿಗಳು ತಿಳಿಸಿದ್ದಾರೆ. ಕಂಪನಿಯಲ್ಲಿ ಖಾಲಿವಿರುವ ಹುದ್ದೆಗಳನ್ನು ನೇರವಾಗಿ ಭರ್ತಿ ಮಾಡಿಕೊಳ್ಳಲಿದ್ದಾರೆ. ಅಭ್ಯರ್ಥಿಗಳು ಎಸ್ಸೆಸ್ಸೆಲ್ಸಿ , ಪಿ.ಯು.ಸಿ. ಹಾಗೂ ಎಲ್ಲಾ ಪದವೀಧರ ಅಭ್ಯರ್ಥಿಗಳು ಭಾಗವಹಿಸಬಹುದಾಗಿದೆ. 18 ರಿಂದ 32 ವರ್ಷಗಳವರೆಗಿನ ಅಭ್ಯರ್ಥಿಗಳು ಭಾಗವಹಿಸಬಹುದಾಗಿದೆ. ಉದ್ಯೋಗವಕಾಶಕ್ಕಾಗಿ ತಮ್ಮ ವಿದ್ಯಾರ್ಹತೆಯ ಅಂಕ ಪಟ್ಟಿಗಳ ಜೆರಾಕ್ಸ್ ಪ್ರತಿಗಳು ಮತ್ತು ತಮ್ಮ ಬಯೋಡಾಟಾ, ಆಧಾರ್ ಕಾರ್ಡ್ ಪ್ರತಿ ಹಾಗೂ ಭಾವಚಿತ್ರಗಳೊಂದಿಗೆ ಭಾಗವಹಿಸಬಹುದಾಗಿದೆ. ಮೇಳದಲ್ಲಿ ಭಾಗವಹಿಸಲು ಯಾವುದೇ ಶುಲ್ಕವಿರುವುದಿಲ್ಲ, ಬದಲಾಗಿ ತಮ್ಮ ಸ್ವಂತ ಖರ್ಚಿನಲ್ಲಿ ಈ ಸಂದರ್ಶನಕ್ಕೆ ಹಾಜರಾಗಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 08532-231684, 8095125775, ಗೆ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದ್ದಾರೆ.

ಮದರಸಾ ಸಂಸ್ಥೆಗಳಿಂದ ಅರ್ಜಿ ಆಹ್ವಾನ

ರಾಯಚೂರು: ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿರುವ ನೋಂದಾಯಿತ ಮದರಸಾಗಳಿಗೆ ಆಧುನೀಕರಣ, ಔಪಚಾರಿಕ ಮತ್ತು ಗಣಕೀಕೃತ ಶಿಕ್ಷಣ ನೀಡಲು ಜಿಲ್ಲೆಯಲ್ಲಿನ ಅರ್ಹ ಮದರಸಾ ಅಥವಾ ಸಂಸ್ಥೆಗಳಿಂದ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನ. ಆಸಕ್ತರು ಮದರಸಾ ಅಥವಾ ಸಂಸ್ಥೆಗಳು ಕಡ್ಡಾಯವಾಗಿ ಜಿಲ್ಲಾ ವಕ್ಫ್ ಅಧಿಕಾರಿಗಳು, ರಾಯಚೂರು ಜಿಲ್ಲೆ ಇವರ ಶಿಫಾರಸ್ಸಿನೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು. ಅನುದಾನ ಪಡೆಯಲು ಇಚ್ಛಿಸುವ ಮದರಸಾ/ಸಂಸ್ಥೆಗಳು ರಾಜ್ಯದಲ್ಲಿ ವಕ್ಫ್ ನೋಂದಾಯಿತ ಮದರಸಾ ಸಂಸ್ಥೆಯಾಗಿರಬೇಕು. ಮದರಸಾದಲ್ಲಿ ಕನಿಷ್ಠ 10 ಮಕ್ಕಳ ದಾಖಲಾತಿ ಸಂಖ್ಯೆ ಕಡ್ಡಾಯವಾಗಿರತಕ್ಕದ್ದು. ಮದರಸಾಗಳು ಸ್ವಂತ ಕಟ್ಟಡವನ್ನು ಹೊಂದಿರಬೇಕು. ಅಗತ್ಯ ದಾಖಲೆಗಳೊಂದಿಗೆ ಆ. 31ರೊಳಗೆ ಪ್ರಸ್ತಾವನೆಯನ್ನು ಜಿಲ್ಲಾ ಅಧಿಕಾರಿಗಳ ಕಚೇರಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಮಾಹಿತಿ ಕೇಂದ್ರದ ದೂರವಾಣಿ ಸಂಖ್ಯೆ: 9731028420, ದೇವದುರ್ಗ-9148233616, ಲಿಂಗಸ್ಗೂರು -9886447863, ಮಾನ್ವಿ -887334758 ಹಾಗೂ ಸಿಂಧನೂರು-8217621732,ಗೆ ಸಂಪರ್ಕಿಸುವಂತೆ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ.

ವಿವಿಧ ಯೋಜನೆಯಡಿ ಅರ್ಜಿ ಆಹ್ವಾನ

ರಾಯಚೂರು: ಕರ್ನಾಟಕ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮದಿಂದ 2023-24ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಸೌಲಭ್ಯಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ. ಆಸಕ್ತರು ಸೇವಾಸಿಂಧು ಪೋರ್ಟಲ್‌ನಲ್ಲಿ ಗ್ರಾಮ ಒನ್, ಬೆಂಗಳೂರು ಒನ್, ಕರ್ನಾಟಕ ಒನ್‌ಗಳ ಮೂಲಕ ಕ್ರಮ ಸಂಖ್ಯೆ 6 ರಲ್ಲಿನ ಸ್ವಾತಂತ್ರ ಅಮೃತ ಮುನ್ನಡೆ ಯೋಜನೆಗೆ ಅರ್ಜಿಯನ್ನು ಕೌಶಲ ಕರ್ನಾಟಕ ತಂತ್ರಾಂಶದಲ್ಲಿ ಆ. 30ರೊಳಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ನಿಗಮದ ಸಹಾಯವಾಣಿ ಸಂಖ್ಯೆ: 080-29904350, 29904268 ಅಥವಾ ಜಿಲ್ಲಾ ವ್ಯವಸ್ಥಾಪಕರ ದೂರವಾಣಿ ಸಂಖ್ಯೆ: 08532-250440ಗೆ ಕಚೇರಿಯ ಸಮಯದಲ್ಲಿ ಸಂಪರ್ಕಿಸುವಂತೆ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಡುಗೊಲ್ಲ ನಿಗಮ ಯೋಜನೆಯಡಿ ಅರ್ಜಿ

ರಾಯಚೂರು: ರಾಜ್ಯ ಕಾಡುಗೊಲ್ಲ ಅಭಿವೃದ್ಧಿ ನಿಗಮ ವತಿಯಿಂದ 2024-25ನೇ ಸಾಲಿಗೆ ಅನುಷ್ಠಾನಗೊಂಡಿರುವ ವಿವಿಧ ಯೋಜನೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಸೇವಾಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ. ನಿಗಮದ ಯೋಜನೆಗಳು ಸ್ವಯಂ ಉದ್ಯೋಗ, ನೇರಸಾಲ ಯೋಜನೆ, ಅರಿವು-ಶೈಕ್ಷಣಿಕ ನೇರಸಾಲ ಯೋಜನೆ (ಹೊಸದು), ಗಂಗಾ ಕಲ್ಯಾಣ ಯೋಜನೆ, ಸ್ವಯಂ ಉದ್ಯೋಗ ನೇರಸಾಲ (ಬ್ಯಾಂಕ್‌ಗಳ ಸಹಯೋಗದೊಂದಿಗೆ), ಸ್ವಾವಲಂಬಿ ಸಾರಥಿ ಯೋಜನೆ, ವಿದೇಶಿ ವ್ಯಾಸಂಗ ಯೋಜನೆಯಡಿ ಆಸಕ್ತರು ಸೇವಾಸಿಂಧು ಪೋರ್ಟಲ್‌ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ ಆ. 31ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

{ಡಾ.ಜಿ.ಪರಮೇಶ್ವರ} ಗೃಹ ಸಚಿವ

ನಮ್ಮ ಸರಕಾರ ಉರುಳಿಸುವ ಬಗ್ಗೆ ವಿಪಕ್ಷದವರು ಮಾತನಾಡಿದ್ದಾರೆ. ಪಾದಯಾತ್ರೆ ಮಾಡುವವರಿಗೆ ಕೆಲ ಪ್ರಶ್ನೆಗಳನ್ನು ಕೇಳಬೇಕಿದೆ. ಜನರಿಗಾಗಿ, ರಾಜ್ಯದ ಸಂಪತ್ತು ಉಳಿಸಲು ನಾವು ಪಾದಯಾತ್ರೆ ಮಾಡಿದ್ದೇವೆ. ಆದರೆ, ವಿಪಕ್ಷಗಳ ಪಾದಯಾತ್ರೆ ಕ್ಷುಲ್ಲಕ ಕಾರಣಗಳಿಗಾಗಿ ನಡೆದಿದೆ. ನಿಮ್ಮಲ್ಲಿ ಯಾವ ಪುರಾವೆ, ದಾಖಲೆ ಇವೆ ಎಂಬ ಬಗ್ಗೆ ತೋರಿಸಿ. 25ಕ್ಕೂ ಹೆಚ್ಚು ಹಗರಣ ವಿಪಕ್ಷಗಳ ಮೇಲಿವೆ.

ಕೂಡಲಸಂಗಮ ಜಯ ಮೃತ್ಯುಂಜಯ ಸ್ವಾಮೀಜಿಗಳಿಗೆ ಸಾಮಾಜಿಕ ಜಾಲತಾಣದಲ್ಲಿ ಅವಹೇಳನ

ಶ್ರೀಗಳಿಗೆ ಕೊಲೆ ಬೆದರಿಕೆ: ಬಂಧನಕ್ಕೆ ಆಗ್ರಹ

ಕಾರಟಗಿ: ಪಂಚಮಸಾಲಿ ಕೂಡಲಸಂಗಮ ಪೀಠದ ಜಯ ಮೃತ್ಯುಂಜಯ ಸ್ವಾಮೀಜಿಗಳನ್ನು ಸಾಮಾಜಿಕ ಜಾಲತಾಣದಲ್ಲಿ ಅವಹೇಳಿಸಿ, ಕೊಲೆ ಬೆದರಿಕೆ ಹಾಕಿರುವ ವ್ಯಕ್ತಿಗಳ ಬಂಧನಕ್ಕೆ ಆಗ್ರಹಿಸಿ, ಪಂಚಮಸಾಲಿ ಸಮಾಜದ ಮುಖಂಡರು ಪಟ್ಟಣದಲ್ಲಿ ಶುಕ್ರವಾರ ಪ್ರತಿಭಟಿಸಿದರು.

ಪಟ್ಟಣದ ಪೊಲೀಸ್ ಠಾಣೆ ಮುಂದೆ ಜಮಾಯಿಸಿದ್ದ ತಾಲೂಕು ಪಂಚಮಸಾಲಿ ಸಮಾಜದ ಮುಖಂಡರು, ಅವಹೇಳನ ಮಾಡಿದ ವ್ಯಕ್ತಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಶ್ರೀಗಳು ಕಾರು ಖರೀದಿ ಮಾಡಿರುವ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಮಾಡಿದ್ದಲ್ಲದೇ, ಕೊಲೆ ಬೆದರಿಕೆ ಹಾಕಿದ್ದರ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಪೊಲೀಸ್ ಠಾಣೆಗೆ ತೆರಳಿ, ಸ್ವಾಮೀಜಿಗಳ ವಿರುದ್ಧ ಕಾರಟಗಿ ನಾಗರೀಕ ಸಮಾಜ ವ್ಯಾಟ್ಸಾಪ್ ಗ್ರೂಪ್‌ನಲ್ಲಿಯೂ ಕೂಡ ಸ್ವಾಮೀಜಿಗಳ ಘನತೆಗೆ ಚ್ಯುತಿ ಬರುವಂತೆ ಪೋಸ್ಟ್ ಮಾಡಲಾಗಿದೆ. ಕೂಡಲೇ ಈ ವ್ಯಕ್ತಿಯನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮನವಿ ಸಲ್ಲಿಸಿದರು.

ಜಯ ಮೃತ್ಯುಂಜನ ಸ್ವಾಮೀಜಿ ಪಂಚಮಸಾಲಿ ಸಮುದಾಯದ ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿಗೆ ಹಾಗೂ ಸಮಾಜಕ್ಕೆ 2ಎ ಮೀಸಲು ಬೇಡಿಕೆ ಇಟ್ಟು ಹೋರಾಟ ನಡೆಸಿದ್ದಾರೆ. ಇದಕ್ಕೆ ಸಮಾಜದಿಂದ ಬಹುದೊಡ್ಡ ಬೆಂಬಲ ಸಹ ಇದೆ. 2 ಎ ಮೀಸಲು ಜಾರಿಗೆ ಸ್ವಾಮೀಜಿಗಳು ಕೂಡಲಸಂಗಮದಿದ ಬೆಂಗಳೂರುವರೆಗೆ ತಿಂಗಳಗಟ್ಟಲೆ ಪಾದಯಾತ್ರೆ ನಡೆಸಿ ಆಗಿನ ಸರಕಾರಕ್ಕೆ ಬಿಸಿ ಮುಟ್ಟಿಸಿದ್ದಾರೆ. ಸಂವಿಧಾನಾತ್ಮಕ ಮತ್ತು ಕಾನೂನುನಾತ್ಮಕವಾಗಿ ಜನಪರ ಹೋರಾಟ ನಡೆಸಿದ ಸ್ವಾಮೀಜಗಳ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕರ ಪೋಸ್ಟ್ ಮಾಡುವ ಮೂಲಕ ತೇಜೋವಧೆ ಮಾಡುವ ವ್ಯವಸ್ಥಿತ ಷಡ್ಯಂತ ನಡೆದಿದೆ ಎಂದು ದೂರಿದರು.

ಸ್ವಾಮೀಜಿ ಕುರಿತು ಹೆಂಗಿದಾನೆ ನೋಡಿ ನಮ್ಮ ಲಿಂಗಾಯತರ ಸ್ವಾಮೀಜಿ, ಕಡಿದರೆ ಎರಡು ತುಂಡಾಗಬೇಕು?' ಎಂದು ಪೋಸ್ಟ್ ಮಾಡುವ ಮೂಲಕ ಸ್ವಾಮೀಜಿಗಳ ಕೊಲೆಗೆ ಹುನ್ನಾರ ನಡೆಸಿರುವುದು ಆತಂಕಕಾರಿ ವಿಚಾರ. ಜನಪರ ಹೋರಾಟ ನಡೆಸುವ ಜಯಮೃತ್ಯುಂಜ ಸ್ವಾಮೀಜಿಗಳ ಬಗ್ಗೆ ಈ ನಾಡಿನಲ್ಲಿ ಒಂದು ದೊಡ್ಡ ಗೌರವಿದೆ. ಸ್ವಾಮೀಜಿಗಳಿಗೆ ಅಪಮಾನ ಮಾಡಿದ್ದರಿಂದ ಸಮಾಜದ ಜನರ ಭಾವನೆಗೆ ಧಕ್ಕೆಯಾಗಿದೆ. ವಾಟ್ಸಾಪ್ ಗ್ರೂಪ್ ನಲ್ಲಿ ಸಂದೇಶ ಕಳುಹಿಸಿರುವ ವ್ಯಕ್ತಿಗೆ ಸ್ವಾಮೀಜಿಗಳನ್ನು ಕೊಲೆ ಮಾಡುವ ಉದ್ದೇಶ ಇರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಾಣುತ್ತಿದೆ. ಇದರಿಂದ ಪಂಚಮಸಾಲಿ ಸಮಾಜದ ಆತಂಕಕ್ಕೆ ಒಳಗಾಗಿದೆ. ಕೂಡಲೇ ಸಂದೇಶ ಮಾಡಿದ ವ್ಯಕ್ತಿಯನ್ನು ಬಂಧಿಸಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಜಿಲ್ಲಾ ಸೈಬರ್ ಕ್ರೈಮ್ ವಿಭಾಗ ಮತ್ತು ಸ್ಥಳೀಯ ಠಾಣೆಗೆ ಒಟ್ಟು ಮೂರು ಪ್ರತ್ಯೇಕ ಮನವಿ ಪತ್ರಗಳನ್ನು ಪಂಚಮಸಾಲಿ ಸಮಾಜದಿಂದ ಸಲ್ಲಿಸಲಾಯಿತು. ಪಂಚಮಸಾಲಿ ದಾಸೋಹ ಸಮಿತಿ ರಾಜ್ಯಾಧ್ಯಕ್ಷ ಚನ್ನಬಸಪ್ಪ ಸುಂಕದ, ಕಾರಟಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶರಣೆಗೌಡ ಮಾಲೀ ಪಾಟೀಲ್, ಸಮಾಜದ ತಾಲೂಕು ಘಟಕದ ಅಧ್ಯಕ್ಷ ಪಾಲಾಕ್ಷಪ್ಪ ಕೆಂಡದ್, ಜಿಪಂ ಮಾಜಿ ಅಧ್ಯಕ್ಷ ಅಮರೇಶ ಕುಳಗಿ, ಉಳೇನೂರು ಗ್ರಾಪಂ ಅಧ್ಯಕ್ಷ ಶಿವರಾಜ ಈಳಿಗನೂರು, ಶಿವಪೂಜಿ ಶರಣಪ್ಪ, ನಾಗೇಶ ಸಿಂಧನೂರು, ವಿರೂಪಾಕ್ಷಿ ಚಿಂಚಲಿ, ಗುಂಡಪ್ಪ ಕುಳಗಿ, ಸಿ.ಪುರುಷೋತ್ತಮ, ಶರಣಪ್ಪ ಕೆ, ಶಿವಶರಣೇಗೌಡ ಯರಡೋಣಾ, ಬಸವರಾಜ ಗುಂಡೂರು, ಬಜಾರ ನಾಗರಾಜ, ವಿಜಯ ಕುಮಾರ್ ಕೋಲ್ಕಾರ್, ಅಮರೇಶ ಪೊಲೀಸ್ ಪಾಟೀಲ್, ಬಸವರಾಜ ಅಂಗಡಿ, ವೀರನಗೌಡ ಬೂದುಗುಂಪಾ, ಶರಣಪ್ಪ ಕಲಕೇರಿ, ಬೆನಕನಾಳ ಶರಣಪ್ಪ ಇದ್ದರು.

ಕಾರಟಗಿ ಪೊಲೀಸ್ ಠಾಣೆ ಮುಂದೆ ಪಂಚಮಸಾಲಿ ಸಮಾಜದ ಮುಖಂಡರು ಜಯಮೃತ್ಯುಂಜಯ ಸ್ವಾಮೀಜಿ ವಿರುದ್ಧ ಅವಹೇಳನಕಾರಿ ಪೋಸ್ಟ್ ಮಾಡಿರುವ ವ್ಯಕ್ತಿಯ ಬಂಧಿನಕ್ಕೆ ಆಗ್ರಹಿಸಿಬಸಮಾಜದ ಮುಖಂಡರು ಶುಕ್ರವಾರ ಪೊಲೀಸರಿಗೆ ಮನವಿ ಸಲ್ಲಿಸಿದರು.

ಪ್ರಕರಣದ ಹಿನ್ನೆಲೆ ಏನು?

ನಾಗರ ಪಂಚಮಿ ಹಿನ್ನೆಲೆ ನಾಗ ಕಟ್ಟೆಗಳಿಗೆ ಹಾಲು ಹೆರೆವ ಸಂಪ್ರದಾಯ ಉತ್ತರ ಕರ್ನಾಟಕ ಭಾಗದಲ್ಲಿ ಇದೆ. ಈ ಸಂಪ್ರದಾಯ ಅವೈಜ್ಞಾನಿಕ ಮತ್ತು ಮೌಢ್ಯದಿಂದ ಕೂಡಿದೆ. ಇದರಿಂದ ಕಲ್ಲಿನ ನಾಗರ ಕಟ್ಟೆಗೆ ಹಾಲು ಹೆರವ ಬದಲಿಗೆ ಅದೇ ಹಾಲನ್ನು ಮಕ್ಕಳಿಗೆ ನೀಡಬೇಕು ಎಂದು ಜಯಮೃತ್ಯುಂಜಯ ಸ್ವಾಮೀಜಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರು. ಸ್ವಾಮೀಜಿಗಳ ಈ ಪೋಸ್ಟ್ ಗೆ ಮತ್ತೊಂದು ಕಡೆಯಿಂದ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ನಾಗರ ಪಂಚಮಿ ಆಚರಣೆ ಬೆಂಬಲಿಸುವರು ಶ್ರೀಗಳು ಐಷಾರಾಮಿ ಕಾರು ಖರೀದಿಸಿ ಪೂಜೆ ಮಾಡಿದ್ದ ಫೋಟೊದೊಂದಿಗೆ ಶ್ರೀಗಳನ್ನು ಟೀಕಿಸಿದ್ದರು. ಅದೇ ಫೋಟೊ ಸಮೇತ ಕೆಲ ಆಕ್ಷೇಪಾರ್ಹ ಬರಹದೊಂದಿಗೆ ವ್ಯಕ್ತಿಯೊಬ್ಬ ಸ್ಥಳೀಯ ವಾಟ್ಸಾಪ್ ಗ್ರೂಪ್ ಗೆ ಹಾಕಿದ್ದಾನೆ.

ರೈತರಿಗೆ ಸಮರ್ಪಕವಾಗಿ ನೀರು ಹರಿಸಲು ಒತ್ತಾಯ

ರಾಜಾರೋಷವಾಗಿ ನೀರು ಕಳ್ಳತನ

ಮಾನ್ವಿ: ಸಿಪಿಐ (ಎಂ.ಎಲ್) ರೆಡ್ ಸ್ಟಾರ್ ತಾಲೂಕ ಸಮಿತಿ ವತಿಯಿಂದ ನೂರಾರು ರೈತರು ಪಾದಯಾತ್ರೆ ಮೂಲಕ ಬಸವ ವೃತ್ತದಲ್ಲಿ ರಸ್ತೆ ತಡಿದು ಹೋರಾಟ ನಡೆಸಿದರು.

ತಾಲೂಕಿನ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಯ 65 ನೇ ಉಪಕಾಲುವೆ ಮೇಲ್ಭಾಗದಲ್ಲಿ ನೀರಾವರಿ ರಹಿತ ಜಮೀನುಗಳಿಗೆ ಬಲಾಡ್ಯ, ರೈತ ರಾಜಕಾರಣಿಗಳು, ಆಕ್ರಮ ಪೈಪುಗಳನ್ನು ಹಾಕಿರುವುದರ ಮೂಲಕ ಉಸಿರು ಪೈಪ್, ಕಾಲುವೆ ಬೊಂಗಾ, ಮುಂಗಿ ಹಾಕಿ, ಪಂಪ್ ಸೆಟ್ ಮೋಟಾರ್‌ಗಳ ಮೂಲಕ, ಕಲ್ಲವಾಟಾ ಮೂಲಕ (ಅಕ್ವಾಡಕ್ಟ್) ಅಕ್ರಮ ಅನಧಿಕೃತ ಕೆರೆ, ಬಾವಿಗಳನ್ನು ತೋಡಿ, ರಾತ್ರಿ-ಹಗಲು ನೀರು ಕಳ್ಳತನ ರಾಜಾರೋಷವಾಗಿ ನಡೆಯುತ್ತಿರುವುದನ್ನು ತಡೆಯದ ಸಿರವಾರ ಎಇಇ ಅಧಿಕಾರಿ ಹಾಗೂ ಕವಿತಾಳ ನೀರಾವರಿ ಇಲಾಖೆಯ ಅಧಿಕಾರಿಗಳು ಬಲಾಡ್ಯ ನೀರುಗಳ ರೈತರ ಜತೆ ಶಾಮೀಲಾಗಿ ಮತ್ತು ಅಕ್ರಮ ಪಂಪ್‌ಸೆಟ್‌ಗಳಿಗೆ ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಿದ ಅಧಿಕಾರಿಗಳು ಕೂಡಾ ಈ ನೀರು ಕಳ್ಳತನದಲ್ಲಿ ಪಾಲುದಾರರಾಗಿದ್ದಾರೆ.

ಕಾರಣ ತುಂಗಭದ್ರಾ ಮುಖ್ಯ ಕಾಲುವೆಯ 65ನೇ ಉಪ ಕಾಲುವೆಯ ಮೇಲ್ಭಾಗದಲ್ಲಿ ಅಕ್ರಮ ನೀರಾವರಿ ತಡೆದು ಕೆಳಭಾಗದ ರೈತರಿಗೆ ಸಮರ್ಪಕ ನೀರು ಹರಿಸಲು ಒತ್ತಾಯಿಸಿ ಹಾಗೂ ರೈತರ ಜೋಳ ಖರೀದಿ ಮಾಡಿ ಹಣ ಸಂಪೂರ್ಣವಾಗಿ ರೈತರಿಗೆ ತಲುಪಿರುವುದಿಲ್ಲ ಮತ್ತು ಮಾನ್ವಿ ತಾಲೂಕಿನ ಎಲ್ಲಾ ಗೊಬ್ಬರ ಮತ್ತು ಕ್ರಿಮಿನಾಶಕ ಅಂಗಡಿಗಳ ಮಾಲೀಕರು ಗೊಬ್ಬರ ಹಾಗೂ ಕ್ರಿಮಿನಾಶಕದ ದರವನ್ನು ಸಾರ್ವಜನಿಕವಾಗಿ ನಾಮ ಫಲಕ ಹಾಕುವುದರ ಮೂಲಕ ಪ್ರಕಟಿಸಲು ಒತ್ತಾಯಿಸಿ ಹಾಗೂ ಸುಮಾರು ದಿನಗಳಿಂದ ಮಾನ್ವಿ ತಾಲೂಕಿನ ಆಯಾ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗಾವಣೆ ಮಾಡಬೇಕೆಂದು ಆಗ್ರಹಿಸಿ ಹಾಗೂ ಇತರೆ ಜ್ವಲಂತ ಸಮಸ್ಯೆಗಳನ್ನು ಪರಿಹರಿಸಲು ಎಚ್ಚರಿಸಿದರು.

ಈ ವೇಳೆ ಪ್ರಕಾಶ್ ತಡಕಲ್, ಪ್ರಕಾಶ್ ದೋತರಬಂಡಿ, ಯಲ್ಲಪ್ಪ ಉಟಕನೂರ, ರಾಮಕೃಷ್ಣ ಕರಡಿಗುಡ್ಡ, ರವಿ ಪೋತ್ನಳ್, ದೇವು ಪೋತ್ನಳ್, ವೆಂಕಟೇಶ ನಾಯಕ ಬೆಳವಟ, ಶೇಖರಪ್ಪ ಖರಬ ದಿನ್ನಿ,ಗುಂಡಪ್ಪ ಮುದ್ದಿನಗುಡ್ಡಿ, ನಿರಂಜನ ಸಾಹುಕಾರ, ಬಸವರಾಜ್, ಶರಣಯ್ಯ ಸ್ವಾಮಿ, ಬಸವರಾಜ ಕುಂಬಾರ ಇನ್ನೂ ನೂರಾರು ರೈತರು ಭಾಗವಹಿಸಿದರು.

ಮಾನ್ವಿ ತಾಲೂಕ ರೆಡ್ ಸ್ಟಾರ್ ಸಮಿತಿ ವತಿಯಿಂದ ನೂರಾರು ರೈತರು ಪಾದಯಾತ್ರೆ ಮೂಲಕ ಬಸವ ವೃತ್ತದಲ್ಲಿ ರಸ್ತೆ ತಡಿದು ಹೋರಾಟ ನಡೆಸಿದರು.

ಪೀಠಾಧಿಪತಿ ಚರ್ಚೆ ಇಂದು

ರಾಯಚೂರು: ಶ್ರೀ ನಾರದಗಡ್ಡೆ ಚನ್ನಬಸವೇಶ್ವರ ಸ್ವಾಮಿ ಸಂಸ್ಥಾನ ಮಠ ಬುದ್ದಿಪಾಡ್ ಆಸ್ತಿ-ಸ್ಥಿರಸ್ತಿ ಹಾಗೂ ಪೀಠಾಧಿಪತಿಗಳ ಕುರಿತು ಇಂದು ಮುಂಜಾನೆ 11 ಗಂಟೆಗೆ ಸಾರ್ವಜನಿಕರ ಹಾಗೂ ಅಧಿಕಾರಿಗಳ ಜಂಟಿ ಸಭೆ ಕರೆಯಲಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸುರು ಸೇನೆ ಜಿಲ್ಲಾ ಅಧ್ಯಕ್ಷರಾದ ನರಸಿಂಹ ನಾಯಕ ಕಮಲಾಪುರ ಹೇಳಿದರು.

ನಗರದ ಪತ್ರಿಕ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 1984-85ರಲ್ಲಿ ಶ್ರೀ ನಾರದ ಗಡ್ಡೆ ಸಂಸ್ಥಾನ ಮಠ ಪೀಠಾಧಿಪತಿಗಳು ಶ್ರೀ ಬಸವರಾಜ್ ಸ್ವಾಮಿಗಳನ್ನು ಉಚ್ಚ ನ್ಯಾಯಾಲಯ ವಜಾಗೋಳಿಸಿತ್ತು. ಈ ಹಿನ್ನೆಲೆಯಲ್ಲಿ ಇಲ್ಲಿವರೆಗೂ ಯಾವ ಪೀಠಾ ಧಿಪತಿಗಳು ಇಲ್ಲದೆ ಮಠ ನಡೆಯುತ್ತಿದೆ.

ಕೊಡೆಕಲ್ ಶಿವಕುಮಾರ ಸ್ವಾಮಿ ಅವರಿಗೆ ಯಾರು ಅಧಿಕಾರ ಕೊಟ್ಟರು ಎನ್ನುವುದು ಮಾಹಿತಿ ಇಲ್ಲ, ಅಕ್ರಮವಾಗಿ ಅಧಿಕಾರ ಪಡೆದುಕೊಂಡು ನಾರದಗಡ್ಡೆ ಆಸ್ತಿ ಮಾರಾಟ ಮಾಡುತ್ತಿದ್ದಾರೆ ಎನ್ನುವ ಗುಮಾನಿ ಉಂಟಾಗುವಂತೆ ಮಾಡಿದ್ದಾರೆ.

ಇವರು ಈ ಮಠಕ್ಕೆ ಪೀಡಾಧಿಪತಿ ಗಳಾಗಲು ಯೋಗ್ಯರಲ್ಲ,ನಾರದ ಗಡ್ಡೆ ಚನ್ನಬಸವೇಶ್ವರ ಸ್ವಾಮಿ ಶಿಷ್ಯಸಾಂಪ್ರ ದಾಯದ ಪ್ರಕಾರ ಅನಂತಪೂರ ಉರವ ಗೊಂಡ ಅವರಿಗೆ ಮಾತ್ರ ಈ ಮಠದ ಅಧಿಕಾರವಿರುತ್ತದೆ. ಈ ಹಿನ್ನೆಲೆಯಲ್ಲಿ ದಿ 10 ರಂದು ಈ ಬಗ್ಗೆ ಚರ್ಚಿಸಲಾಗು ಇದೆ.ನಾರದ ಗಡ್ಡೆ ಮಠದ ಒಟ್ಟು 1200 ಎಕರೆ ಜಮೀನು ಆಸ್ತಿ ಇದೆ. ಇದರ ಸಂರಕ್ಷಣೆಗೆ ಭಕ್ತರು ಈ ಸಭೆ ಕರೆಯಲಾಗಿದೆ ಎಂದರು. ಈ ಈ ಪತ್ರಿಕಾಗೋಷ್ಠಿಯಲ್ಲಿ ಶಿವಪ್ಪ, ನಾಗೇಂದ್ರಪ್ಪ, ಮಲ್ಲನಗೌಡ, ಧರ್ಮರೆಡ್ಡಿ ಸೇರಿದಂತೆ ಇತರರು ಇದ್ದರು.

ಜಿಲ್ಲೆಯ ಚನ್ನಬಸವೇಶ್ವರ ಸ್ವಾಮಿ ಸಂಸ್ಥಾನ ಮಠ ಪೀಠಾಧಿಪತಿಗಳ ಕುರಿತು ಚರ್ಚೆ ಕೈಗೊಳ್ಳಲಾಗುವುದೆಂದು ನಗರದ ಪತ್ರಿಕ ಭವನದ ಸುದ್ದಿಗೋಷ್ಠಿಯಲ್ಲಿ ನರಸಿಂಹ ನಾಯಕ ಕಮಲಾಪುರ ಮಾತನಾಡಿದರು.

ಭೂ ವಿಜ್ಞಾನಿ ವಿರುದ್ಧ ಡಿಸಿಗೆ ಮನವಿ

ರಾಯಚೂರು: ಜಿಲ್ಲೆಯ ಹಿರಿಯ ಭೂ ವಿಜ್ಞಾನಿ ಪುಷ್ಪಲತಾರನ್ನು ಈ ಕೂಡಲೇ ತೆರವುಗೊಳಿಸಬೇಕು ಮತ್ತು ಹಟ್ಟಿ ಗೋಲ್ಡ್ ಮೈನ್ಸ್ ಭೂ ವಿಜ್ಞಾನಿಯಾದ ವೆಂಕಟೇಶ್ ಮೂರ್ತಿ ಮೇಲೆಯು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗೆ ಟಿಪ್ಪರ್ ಮಾಲೀಕರ ಅಸೋಸಿಯೇಷನ್ ವತಿಯಿಂದ ಮನವಿ ಸಲ್ಲಿಸಿ ಆಗ್ರಹಿಸಿದರು.

ಹೇರುಂಡಿ, ಕರ್ಕಿಹಳ್ಳಿ, ಟೆಂಡರ್ ಬ್ಲಾಕ್ ನಲ್ಲಿ ಈಗಾಗಲೇ ಕಾನೂನು ನಿಯಮಗಳ ಪ್ರಕಾರ ಟಿಪ್ಪರ ವಾಹನ ಮಾಲಕರು ಪರವಾನಿಗೆಯನ್ನು ಪಡೆದುಕೊಂಡು ಮರಳನ್ನು ವಿಲೇವಾರಿ ಮಾಡುತ್ತಾ ಬರುತ್ತಿದ್ದಾರೆ ಆದರೆ ಮರಳು ಲಭ್ಯವಿದ್ದರು ಕೂಡ ಮರಳನ್ನು ವಿಲೇವಾರಿ ಮಾಡದೆ ಸರಕಾರದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡುತಿದ್ದಾರೆ. ಕೂಡಲೇ ತಾವುಗಳು ಮೇಲ್ಕಾಣಿಸಿದ ಬ್ಲಾಕಗಳನ್ನು ಪ್ರಾರಂಭಿಸಿ ಸಾರ್ವಜನಿಕರಿಗೆ ಮರಳು ಸಿಗುವಂತೆ ಅನೂಕೂಲ ಮಾಡಿಕೊಡಬೇಕು. ಹಟ್ಟಿಗೋಲ್ಡ್ ಮೈನ್ಸ ಇಲಾಖೆಗೆ ಸೂಕ್ತ ನಿರ್ದೇಶನ ನೀಡಿ, ಇಲ್ಲದಿದ್ದಲ್ಲಿ ಮೇಲ್ಕಾಣಿಸಿದ ಬ್ಲಾಕಗಳ ಟೆಂಡರನ್ನು ಪಡೆದ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಿ,ನಿರ್ದೇಶಿಸಿ ಮರು ಟೆಂಡರ್ ಮಾಡಬೇಕು. ತಾವುಗಳು ನಮ್ಮ ಮನವಿಯನ್ನು ಅಲ್ಲ ಗೈದಲ್ಲಿ ಆ 12 ರೊಳಗಾಗಿ ಕ್ರಮ ಕೈಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ನಮ್ಮ ಸಂಘದ ವತಿಯಿಂದ ಉಗ್ರಹೋರಾಟ ಹಮ್ಮಿಕೊಳ್ಳಲಾಗುತ್ತದೆಂದು ಮನವಿಯಲ್ಲಿ ತಿಳಿಸಿದರು. ಈ ಸಂದರ್ಭದಲ್ಲಿ ವಾಸುದೇವ ನಾಯಕ್,ಮಾಳಿಂಗರಾಯ,ವೀರಶ್ ಗೌಡ, ಅಮರೇಶ್ ನಾಯಕ್, ಮುದುರಂಗಪ್ಪ ಸೇರಿದಂತೆ ಉಪಸ್ಥಿತರಿದ್ದರು.

ಜಿಲ್ಲೆಯ ಹಿರಿಯ ಭೂ ವಿಜ್ಞಾನಿ ಪುಷ್ಪಲತಾರನ್ನು ಈ ಕೂಡಲೇ ತೆರವುಗೊಳಿಸಬೇಕೆಂದು ಟಿಪ್ಪರ್ ಮಾಲೀಕರ ಅಸೋಸಿಯೇಷನ್ ವತಿಯಿಂದ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಮತ್ತೆ ಹಳೇ ಚಾಳಿ ಮುಂದುವರಿಕೆ

ಪುಷ್ಪಲತಾ ಕವಲೂರು ಎಂಬ ಮಹಿಳೆ ಈಗಾಗಲೇ ಜಿಲ್ಲೆಯಲ್ಲಿ 2018 ರ ಮೇ 24 ರಂದು ಎ.ಸಿ.ಬಿ ದಾಳಿಯಲ್ಲಿ 1,00000 ಲಕ್ಷ ರುಪಾಯಿ ಲಂಚ ಪಡೆಯುವ ಸಂದರ್ಭದಲ್ಲಿ ಎ.ಸಿ. ಬಿ ಅವರ ದಾಳಿಗೆ ಒಳಪಟ್ಟಿದ್ದರು. ಆದರೆ ಮತ್ತೆ ರಾಯಚೂರು ಜಿಲ್ಲೆಗೆ 2023ಕೆ ವರ್ಗಾವಣೆ ಯಾಗಿ ಬಂದು ಈಗ ಮತ್ತೆ ಹಳೆ ಚಾಳಿಯನ್ನು ಮುಂದುವರಿಸಿದ್ದಾರೆ ಈಗ ಟಿಪ್ಪರ್ ಅಸೋಸಿಯನ್ ಎಲ್ಲಾ ಮಾಲೀಕರಿಗೂ ಇಂತಿಷ್ಟು ಮೊತ್ತವನ್ನು ನೀಡಿದರೆ ಮಾತ್ರ ನಿಮ್ಮ ಗಾಡಿಗಳನ್ನು ಓಡಾಡಲು ಬಿಡುತ್ತೇನೆ. ಇಲ್ಲದಿದ್ದರೆ (ತಡೆಯುತ್ತೇನೆ) ಸಿಜ್ ಮಾಡುತ್ತೇನೆ ಎಂದು ಹೆದರಿಸುತ್ತಾ ಮನ ಬಂದಂತೆ ಹಣದ ಬೇಡಿಕೆಯನ್ನು ಇಡುತ್ತಿದ್ದಾರೆ ಹಾಗಾಗಿ ಈ ಕೂಡಲೇ ಅವರನ್ನು ತೆರವುಗೊಳಿಸುವಂತೆ ಶ್ರೀನಿವಾಸ್ ನಾಯಕ್ ಮತ್ತು ಗುರುರಾಜ್ ನಾಗಲಾಪುರ್, ಜಿಲ್ಲಾಧಿಕಾರಿಗಳ ಹತ್ತಿರ ದೀರ್ಘಕಾಲ ಚರ್ಚಿಸಿದರು.

ನಾಗರಪಂಚಮಿ ಸಂಭ್ರಮಾಚರಣೆ

ಮುದಗಲ್: ಪಟ್ಟಣದ ಹಲವು ಕಡೆಗಳಲ್ಲಿ ನಾಗರಮೂರ್ತಿಗೆ ಮಹಿಳೆಯರು ಹಾಲೆರೆರುವ ಮೂಲಕ ನಾಗರ ಪಂಚಮಿ ಹಬ್ಬವನ್ನು ಸಡಗರ-ಸಂಭ್ರಮದಿಂದ ಗುರುವಾರ ಆಚರಣೆ ಮಾಡಿದರು. ಶ್ರಾವಣ ಮಾಸದಲ್ಲಿ ಭೀಮನ ಅಮವಾಸ್ಯೆ 5ನೇ ದಿನಕ್ಕೆ ಬರುವ ಹಬ್ಬವೇ ನಾಗರಪಂಚಮಿ. ಹಿಂದೂ ಸಂಪ್ರದಾಯದಲ್ಲಿ ಮಹಿಳೆಯರಿಗೆ ನಾಗರಪಂಚಮಿ ವಿಶೇಷ ಹಬ್ಬ. ಹೊಸದಾಗಿ ಮದುವೆಯಾದ ಹೆಣ್ಣು ಮಕ್ಕಳು ತವರಿಗೆ ಬಂದು ಸಂಭ್ರಮದಿಂದ ಹಬ್ಬ ಆಚರಿಸುವುದು ಸಂಪ್ರದಾಯವಾಗಿದೆ. ಲಿಂಗಸ್ಗೂರು ರಸ್ತೆಯ ಆಂಜನೇಯ ದೇವಸ್ಥಾನದ ಆವರಣದಲ್ಲಿರುವ ನಾಗದೇವರ ಮೂರ್ತಿಗಳಿಗೆ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ನೂರಾರು ಮಹಿಳೆಯರು ಪೂಜೆ ಸಲ್ಲಿಸಿದರು. ನಾಗದೇವರಿಗೆ ವಿಧವಿಧವಾದ ಉಂಡೆಗಳು, ವಗ್ಗರಣೆ, ಚಕ್ಕಲಿ, ತಬ್ಬಿಟ್ಟು, ಗುಗ್ಗರಿಕಾಳು ಸೇರಿದಂತೆ ಹಲವು ವಿಧದ ಸಿಹಿ ತಿಂಡಿ-ತಿನಿಸುಗಳನ್ನು ನೈವೇದ್ಯ ಮಾಡಿದರು. ಬಂಧು-ಬಾಂಧವರಲ್ಲಿ ಬಾಂಧವ್ಯ ಬೆಸೆಯುವಂತೆ ನಾಗದೇವರ ಶಿಲೆಗೆ ಹಾಲೆರೆದು ಭಕ್ತಿಯ ಪರಾಕಾಷ್ಠೆ ಮೆರೆದರು. ಕಿಲ್ಲಾ ರಾಮಲಿಂಗೇಶ್ವರ ದೇವಸ್ಥಾನದಲ್ಲಿ, ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ, ವೆಂಕಟರಾಯಪೇಟೆ, ಹಳೇಪೇಟೆ, ಮೇಸ್ತ್ರಿಪೇಟೆ, ಮೇಗಳಪೇಟೆ, ಸೋಮವಾರಪೇಟೆ, ಹೂಗಾರ ಓಣ , ರಾಮಲಿಂಗೇಶ್ವರ ಕಾಲೋನಿ ಹಾಗೂ ಆರ್ ಕೆ ನಗರ ಸೇರಿದಂತೆ ಸುತ್ತಲಿನ ಹಳ್ಳಿಗಳಲ್ಲಿ ಸಂಪ್ರದಾಯದಂತೆ ನಾಗದೇವರ ಶಿಲೆಗೆ ಹಾಲೆರೆಯುವ ಮೂಲಕ ಜನರು ನಾಗಪಂಚಮಿ ಹಬ್ಬವನ್ನು ಸಡಗರ-ಸಂಭ್ರಮದಿಂದ ಆಚರಣೆ ಮಾಡಿದರು.

ಶಾಲಾ ಆವರಣದಲ್ಲಿ ನೀರು: ಮಕ್ಕಳ ಪರದಾಟ

ಮುದಗಲ್: ಪಟ್ಟಣ ಸಮೀಪದ ಜನತಾಪೂರು ಗ್ರಾಮದ ಶಾಲಾ ಆವರಣದ ಮುಂದೆ ನೀರು ನಿಂತಿರುವದಿಂದ ಮಕ್ಕಳಿಗೆ ಶಾಲೆಗೆ ಹೋಗಲು ತುಂಬಾ ತೊಂದರೆಯಾಗಿದೆ. ಬನ್ನಿಗೋಳ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಜನತಾಪೂರು ಗ್ರಾಮದ ಶಾಲಾ ಆವರಣದ ಮುಂದೆ ಮಳೆ ನೀರು ನಿಲ್ಲುವದರಿಂದ ಸರಕಾರಿ ಶಾಲಾ ಮಕ್ಕಳಿಗೆ ಹಾಗೂ ಅಂಗನವಾಡಿ ಕೇಂದ್ರದ ಮಕ್ಕಳಿಗೆ ಶಾಲೆಗೆ ಹೋಗಲು ತುಂಬಾ ತೊಂದರೆಯಾಗಿದೆ ಮತ್ತು ಚರಂಡಿ ನೀರು ಮುಂದೆ ಹೋಗದೆ ನಿಂತಲೆ ನಿಂತು ಮಲಿನವಾಗಿ ಸೊಳ್ಳೆಗಳು ಹೆಚ್ಚಾಗಿ ಅನೇಕ ರೋಗಗಳಿಗೆ ಮಕ್ಕಳು ತುತ್ತಾಗುವ ಪರಸ್ಥಿತಿ ನಿರ್ಮಾಣವಾಗಿದೆ ಎಂದು ಮಕ್ಕಳ ಪಾಲಕರು ಆರೋಪಿಸಿದರು. ಈ ಕೂಡಲೇ ಸಂಬಂಧಪಟ್ಟ ಬನ್ನಿಗೋಳ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಗಮನಹರಿಸಿ ಜನತಾಪೂರು ಗ್ರಾಮದ ಶಾಲಾ ಆವರಣದ ಮುಂದೆ ಚರಂಡಿ ನಿರ್ಮಾಣ ಮಾಡಿ ಮಕ್ಕಳಿಗೆ ಶಾಲೆಗೆ ಹೋಗಲು ಅನುಕೂಲ ಮಾಡಿಕೊಂಡಬೇಕು ಎಂದು ಮಕ್ಕಳ ಪಾಲಕರು ಒತ್ತಾಯಿಸಿದರು.



ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನ

ರಾಯಚೂರು: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ರಾಷ್ಟ್ರೀಯ ಆರೋಗ್ಯ ಅಭಿಯಾನದ ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ ಪ್ರಸಕ್ತ ಸಾಲಿಗೆ ಮಂಜೂರಾಗಿ ಖಾಲಿ ಇರುವ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿ ಆಹ್ವಾನ. ಹುದ್ದೆಗಳ ವಿವರ ಇಂತಿದೆ ಸ್ತ್ರೀ ರೋಗ ತಜ್ಞರು- 3 ಹುದ್ದೆಗಳು, ಮಕ್ಕಳ ತಜ್ಞರು-2 ಹುದ್ದೆಗಳು, ಎಂ.ಬಿ.ಬಿ.ಎಸ್. ಎಸ್.ಎನ್.ಸಿ.ಯು. ವಿಭಾಗ-3 ಹುದ್ದೆಗಳು, ಎಂ.ಬಿ.ಬಿ.ಎಸ್. ಹೆಚ್.ಡಿ.ಯು. ವಿಭಾಗ-4, ಎಂ.ಬಿ.ಬಿ.ಎಸ್. ಐ.ಸಿ.ಯು./ಹೆಚ್.ಡಿ.ಯು.-11 ಹುದ್ದೆಗಳು, ಎಂ.ಬಿ.ಬಿ.ಎಸ್. ಎನ್.ಯು.ಹೆಚ್.ಎಂ.-1 ಹುದ್ದೆ, ಎಂ.ಬಿ.ಬಿ.ಎಸ್. ನಮ್ಮ ಕ್ಲಿನಿಕ್-4 ಹುದ್ದೆಗಳು, ಕ್ಷೇತ್ರ ಕಾರ್ಯಕ್ರಮ ವ್ಯವಸ್ಥಾಪಕರು-1 ಹುದ್ದೆ, ತಾಲೂಕಾ ಆಶಾ ಮೇಲ್ವಿಚಾರಕರು-1 ಹುದ್ದೆ, ಶುಶ್ರೂಷಕರು-32 ಹುದ್ದೆಗಳು, ಕಿರಿಯ ಮಹಿಳಾ ಆರೋಗ್ಯ ಸಹಾಯಕಿ-3 ಹುದ್ದೆಗಳು, ಆರೋಗ್ಯ ನಿರೀಕ್ಷಣಾಧಿಕಾರಿಗಳು-10 ಹುದ್ದೆಗಳು, ತಾಲೂಕ ವಿ.ಬಿ.ಡಿ. ತಾಂತ್ರಿಕ ಮೇಲ್ವಿಚಾರಕರು- 1. ಈ ಗುತ್ತಿಗೆ ಆಧಾರದ ನೇಮಕಾತಿಯನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿಯಮಾನುಸಾರ ಗುತ್ತಿಗೆ ಆಧಾರದ ಮೇಲೆ ಮೇರಿಟ್ ಕಮ್ ರೋಷ್ಟರ್ ಆಧಾರದ ಮೇಲೆ ಮಾಡಿಕೊಳ್ಳಲಾಗುವುದು, ಆಸಕ್ತರು ಆ. 29ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಒಳ ಮೀಸಲು ಜಾರಿ ಪ್ರತಿಭಟನೆ 13ರಂದು

ರಾಯಚೂರು: ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಜಾರಿ ಹೋರಾಟ ಸಮಿತಿಯು ಆ. 13 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಬೃಹತ್ ಪ್ರತಿಭಟನೆ ನಡೆಯಲಿದೆ. ಈ ಮೂಲಕ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಶೀಘ್ರ ಜಾರಿಗೆ ಸರಕಾರದ ಮೇಲೆ ಒತ್ತಡ ಹೇರಲಾಗುತ್ತದೆ ಎಂದು ಹೋರಾಟ ಸಮಿತಿಯ ಮುಖಂಡ ಹನುಮಂತಪ್ಪ ಮನ್ನಾಪುರ ಹೇಳಿದರು. ನಗರದ ಪತ್ರಿಕ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಒಳ ಮೀಸಲಿಗಾಗಿ ನಿರಂತರ ಹೋರಾಟ ಕೈಗೊಳ್ಳಲಾಗಿತ್ತು. 2022 ರಿಂದ ಹೋರಾಟ ಜಾತ ಹಮ್ಮಿಕೊಳ್ಳಲಾಗಿತ್ತು. ಸುದೀರ್ಘ ಹೋರಾಟದ ಒತ್ತಡದ ಹಿನ್ನೆಲೆಯಲ್ಲಿ ಹಿಂದಿನ ಸರಕಾರ 2023 ಮಾರ್ಚ್ ತಿಂಗಳಲ್ಲಿ ಸಂಪುಟ ಸಭೆ ತೀರ್ಮಾನಿಸಿ ಒಳಮೀಸಲಾತಿ ಜಾರಿಗೆ ಕೇಂದ್ರಕ್ಕೆ ಶಿಫಾರಸು ಮಾಡಿತ್ತು. ಸರ್ವೋಚ್ಚ ನ್ಯಾಯಾಲಯ ಜನಪದರು ಬಗ್ಗೆ ತೀಪಿನಂತೆ ಕೆನೆಪದರಿನ ವಿಷಯ ಆದ್ಯತೆಯಾಗಿ ಉಳಿದಿಲ್ಲ. ಆದ್ದರಿಂದ ರಾಜ್ಯ ಸರಕಾರ ವಿಳಂಬ ಮಾಡದೆ ತಕ್ಷಣವೇ, ಪರಿಶಿಷ್ಟ ಜಾತಿ ಒಳಮೀಸಕಾತಿ ಜಾರಿಗೆ ತರಬೇಕೆಂದು ಎಂದು ಒತ್ತಾಯಿಸಲು ಈ ಬೃಹತ್ ಹೋರಾಟ ನಡೆಸಲಾಗುತ್ತದೆ ಎಂದು ಹೇಳಿದರು. ಈ ಪತ್ರಿಕಾಗೋಷ್ಠಿಯಲ್ಲಿ ಹೇಮರಾಜ್ ಅಸ್ಕಿಹಾಳ್, ನರಸಿಂಹಲು, ಪರಪ್ಪ ಉಪಸ್ಥಿತರಿದ್ದರು.

ವಿದ್ಯುತ್ ಕಂಬ ಅಳವಡಿಕೆಗೆ ಮನವಿ

ಮುದಗಲ್: ಪಟ್ಟಣದ ವಾರ್ಡ್ ನಂ. 3 ರ ನೋಮನ್ ಕಾಲೋನಿಯಲ್ಲಿ ವಿದ್ಯುತ್ ಕಂಬ ಮತ್ತು ಪರಿವರ್ತಕ ಅಳವಡಿಸುವಂತೆ ನಿವಾಸಿಗಳು ಮುದಗಲ್ ಜೆಸ್ಕಾಂ ಶಾಖಾಧಿಕಾರಿ ಬನ್ನೆಪ್ಪಗೆ ಮನವಿ ಸಲ್ಲಿಸಿದರು. ನಾವುಗಳು ಬೇರೆ ಓಣಿಯಿಂದ ಬಲಿಸ್‌ಗಳನ್ನು ಹಾಕಿಕೊಂಡು ವಿದ್ಯುತ್ ತೆಗೆದುಕೊಂಡಿರುತ್ತೇವೆ. ನಮ್ಮ ಕಾಲೋನಿಯಲ್ಲಿ 60 ರಿಂದ 70ಮನೆಗಳು ಇದ್ದು ಪ್ರತಿ ತಿಂಗಳು ವಿದ್ಯುತ್ ಬಿಲ್ ಕಟ್ಟುತ್ತಿದ್ದೇವೆ. ಕಂಬಗಳು ಇಲ್ಲದಿರುವುದರಿಂದ ಜೋರಾಗಿ ಗಾಳಿ ಬಂದಾಗ ಬಲೀಸ್‌ಗಳು ನೆಲಕ್ಕೆ ಉರುಳುತ್ತಿವೆ. ಇದರಿಂದ ಸಾರ್ವಜನಿಕರಿಗೆ ಸಾಕಷ್ಟು ಬಾರಿ ವಿದ್ಯುತ್ ಹೊಡೆದು ಪ್ರಾಣಪಾಯದಿಂದ ಪಾರಾಗಿದ್ದಾರೆ. ಹಲವಾರು ಜಾನುವಾರುಗಳಿಗೂ ವಿದ್ಯುತ್ ತಗುಲಿ 2 ಆಕಳುಗಳು ಮೃತಪಟ್ಟಿರುತ್ತವೆ. ಇದರಿಂದ ಜನರು ಭಯದ ವಾತವಾರಣದಲ್ಲಿ ಓಡಾಡುತ್ತಿದ್ದಾರೆ. ಈ ಕುರಿತು ಸಾಕಷ್ಟು ಬಾರಿ ಈ ಹಿಂದಿನ ಶಾಖಾಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ರೀತಿಯ ಕ್ರಮ ತೆಗೆದುಕೊಂಡಿರುವುದಿಲ್ಲ. ಹೀಗೆ ಮುಂದುವರಿದಲ್ಲಿ ಅನಾಹೂತಗಳು ಖಂಡಿತ ಇದಕ್ಕೆ ಜೆಸ್ಕಾಂ ಅಧಿಕಾರಿಗಳೇ ಹೊಣೆಗಾರರಾಗುತ್ತಿರಿ ಮತ್ತು ಕೊಡಲೇ ಎಸ್ಟಿಮೇಟ್ ಮಾಡಿಸಿ ನಮ್ಮ ವಾರ್ಡಗೆ ವಿದ್ಯುತ್ ಕಂಬ ಮತ್ತು ಪರಿವರ್ತಕ ಆಳವಡಿಸಿ ವಿದ್ಯುತ್ ಪೂರೈಕೆ ಮಾಡಿಕೊಡಬೇಕೆಂದು ಮನವಿ ಸಲ್ಲಿಸಿದರು. ಈ ವೇಳೆ ಸಂತೋಷ ಕುಮಾರ, ಶ್ಯಾಮಿದ್ ಸಾಬ, ಹುಸೇನಪ್ಪ, ಬುಡೇಸಾಬ ಖಾಸಿಂ ಸಾಬ್ ಇದ್ದರು.

ದರ್ಶನ ಕೃತಿ ಲೋಕಾರ್ಪಣೆ ನಾಳೆ

ರಾಯಚೂರು: ತಾಲೂಕು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಂಯುಕ್ತ ಆಶ್ರಯದಲ್ಲಿ ಹಿರಿಯ ಸಾಹಿತಿಗಳಾದ ಲಕ್ಷ್ಮೀದೇವಿ ಶಾಸ್ತ್ರಿ ಅವರ ಚಾಗಿ ಹಿರೇಮಠದ ಚನ್ನಬಸವ ಶಾಸ್ತ್ರಿಗಳ ದರ್ಶನ ಕೃತಿ ಲೋಕಾರ್ಪಣೆ ಕಾರ್ಯಕ್ರಮ ನಡೆಸಲಾಗುತ್ತದೆ ಎಂದು ಇನ್ಫೋಸಿಸ್ ಅಭಿಯಂತರರಾದ ವಿಶ್ವನಾಥ್ ಶಾಸ್ತ್ರಿ ಹೇಳಿದರು. ನಗರದ ಪ್ರಥಮದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಆ.11 ರಂದು ಮುಂಜಾನೆ 10:30ಕ್ಕೆ ಕನ್ನಡ ಭವನದಲ್ಲಿ ಈ ಕೃತಿ ಲೋಕಾರ್ಪಣೆ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದ ಸಾನಿಧ್ಯವನ್ನು ಕಿಲ್ಲೆ ಬೃಹನ್ ಮಠದ ಸ್ವಾಮಿಗಳಾದ ಶ್ರೀ ಶಾಂತಮಲ್ಲ ಶಿವಾಚಾರ್ಯ ಶ್ರೀಗಳು ವಹಿಸಲಿದ್ದಾರೆ. ಕೃತಿ ಪರಿಚಯ ಕಾರ್ಯಕ್ರಮವನ್ನು ಅಯ್ಯಪ್ಪ ಹುಡ ನಿರ್ವಹಿಸಲಿದ್ದಾರೆ. ಕೃತಿಕಾರರದ ಲಕ್ಷ್ಮೀದೇವಿ ಶಾಸ್ತ್ರಿ ಅವರು ಮಾತನಾಡಿ, ಚಾಗಿ ಹಿರೇಮಠದ ಚೆನ್ನಬಸವ ಶಾಸ್ತ್ರಿಗಳು ಜ್ಯೋತಿಷ್ಯವನ್ನು ಅಚ್ಚುಕಟ್ಟಾಗಿ ಹೇಳುವ ಪಂಡಿತರಾಗಿದ್ದರು. ನಿಜಾಂ ಆಡಳಿತದಲ್ಲಿ ಕನ್ನಡ ಶಿಕ್ಷಕರಾಗಿ ಕಾರ್ಯನಿರ್ವಹಿಸಿದ್ದಾರೆ. ಬಡವರ ಪರ ಧೋರಣೆಯೊಂದಿಗೆ ಯಾವುದೇ ಜಾತಿ ತಾರತಮವಿಲ್ಲದೆ, ಎಲ್ಲರಿಗೂ ಸೇವೆ ನೀಡಿದ ವ್ಯಕ್ತಿತ್ವದ ಬಗ್ಗೆ ಈ ಕೃತಿಯಲ್ಲಿ ಸಂಪೂರ್ಣವಾದ ಪರಿಚಯ ಮಾಡುವ ಪ್ರಯತ್ನ ಮಾಡಲಾಗಿದೆ. ರಾಯಚೂರಿನಲ್ಲಿ ಸಾಂಸ್ಕೃತಿಕ ಪಾಠಶಾಲೆ ನಡೆಸಿದ ಕೀರ್ತಿ ಇವರದಾಗಿದೆ. ಉರ್ದು ಪ್ರಭಾವದ ಮಧ್ಯೆ ಕನ್ನಡ ಕಲಿಕೆಗೆ ಪ್ರೇರಣೆಯಾಗಿ ಶಾಸ್ತ್ರಿಗಳು ಕಾರ್ಯ ನಿರ್ವಹಿಸಿದ್ದಾರೆ ಎಂದರು.

ವಿಶ್ವವಾಣಿ ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
@vishwavaninews
ಬೆಂಗಳೂರು ಶನಿವಾರ 10 | 08 | 2024

ವಯಸ್ಸು ಕೇವಲ ಒಂದು ಸಂಖ್ಯೆ!

ನಿಮ್ಮ ಸುತ್ತಮುತ್ತಲಿನ ಹಲವರನ್ನು ನೋಡಿರಬಹುದು: ತಮಗೆ ವಯಸ್ಸಾಯಿತು, ಇನ್ನೇನೂ ಆಗುವುದಿಲ್ಲ ಎಂದು ಕುಳಿತುಬಿಡುತ್ತಾರೆ. ಒಲಿಂಪಿಕ್ಸ್ ಪದಕಕ್ಕಾಗಿ ಹಂಬಲಿಸಿದ್ದ ಈತನು, 37ನೆಯ ವರ್ಷದಲ್ಲಿ, ಅಂದರೆ ಹೆಚ್ಚಿನ ಕ್ರೀಡಾಪಟುಗಳು ನಿವೃತ್ತರಾಗಿ ಅದೆಷ್ಟೋ ವರ್ಷ ಆಗುವಂತಹ ವಯಸ್ಸಿನಲ್ಲಿ, ತನ್ನ ಗುರಿಯನ್ನು ಸಾಧಿಸಿದ, ಜಗತ್ತಿನ ಎಲ್ಲರಿಗೂ ಸ್ಫೂರ್ತಿ ತುಂಬಿದ.

ಜೋಶ್ ಮಾತು
● ವಿಕ್ರಮ ಜೋಶಿ

ಹದಿನಾರು ವರ್ಷಗಳ ಹಿಂದೆ ಅಂದರೆ 2008ರ ಬೀಜಿಂಗ್ ಒಲಂಪಿಕ್ಸ್ ಆಟದ ಟೆನ್ನಿಸ್ ಸಿಂಗಲ್ಸ್‌ನಲ್ಲಿ ನೋವಾಕ್ ಜೋಕೋವಿಚ್ ಕಂಚಿನ ಪದಕ ಗೆದ್ದಿದ್ದ, ಆಗ ಅವನಿಗೆ ಕೇವಲ 21 ವರ್ಷ ವಯಸ್ಸು. ಅದರ ನಂತರದಲ್ಲಿ ಆತನು ಮಾಡಿದ ಸಾಧನೆಗಳ ಪಟ್ಟಿ ಎರಡು ಪುಟ ಗಳಷ್ಟು ದೊಡ್ಡದಾಗಿದ್ದರೂ ಅಲ್ಲಿ ಓಲಂಪಿಕ್ ಚಿನ್ನದ ಪದಕವೊಂದು ಕಾಣುತ್ತಿರಲಿಲ್ಲ. ಸಂಪೂರ್ಣತೆಯ ಚಿತ್ರವನ್ನು ಬಿಡಿಸಲು ಅದೊಂದು ರತ್ನಬಿಂದು ಇರಲಿಲ್ಲ. ಆತ ಟೆನ್ನಿಸ್ ಲೋಕದ ಅಶ್ವಿನಿ ನಕ್ಷತ್ರ, 24 ಗ್ರ್ಯಾಂಡ್ ಸ್ಲ್ಯಾಮ್‌ಗಳನ್ನು ಗೆದ್ದ ಏಕೈಕ ಟೆನ್ನಿಸ್ ಆಟಗಾರ. ಆದರೆ ಆತನಿಗೆ ಬೀಜಿಂಗ್ ಓಲಂಪಿಕ್ಸ್ ಪಂದ್ಯಗಳ ಬಳಿಕ, ಬೇರೆ ಪಂದ್ಯಗಳಲ್ಲೂ ಒಂದೂ ಪದಕವನ್ನು ಗೆಲ್ಲಲು ಆಗಿರಲಿಲ್ಲ. ಜಗತ್ತಿನ ಟೆನ್ನಿಸ್ ಆಟಗಾರರ ಪಟ್ಟಿಯಲ್ಲಿ 428 ವಾರಗಳ ಕಾಲ ನಂಬರ್ ಓನ್ ಆಗಿ ದಾಖಲೆ ಬರೆದಿದ್ದರೂ ಕೂಡ, ಯಾಕೋ ಏನೋ, ಓಲಂಪಿಕ್ ಸೆಮಿಫೈನಲ್ಸ್ ಎನ್ನುವ ಮೈಲುಗಲ್ಲಿಯನ್ನು ದಾಟಿಯೇ ಇರಲಿಲ್ಲ. ಮತ್ತೆ ಮತ್ತೆ ಸೋಲು ಈತನ ಪಾಲಾಗುತ್ತಿತ್ತು. ಹೃದಯವನ್ನು ಸುಡುವಂತಹ ಆ ಕಹಿ ಅನುಭವವನ್ನು ಪಡೆದು, ನಿರಾಶನಾಗಿ ಮರಳುತ್ತಿದ್ದ.

ಹದಿನಾರು ವರ್ಷ ಚಿಕ್ಕವನು

ಆ ಕೊರಗಿನ ನೋವನ್ನು ಆತ ಹದಿನಾರು ವರುಷಗಳ ಕಾಲ ಹೇಗೆ ಸಹಿಸಿಕೊಂಡನೋ? ಈ ಬಾರಿಯ ಪ್ಯಾರಿಸ್ ಒಲಂಪಿಕ್ಸ್ ಅಂತೂ ಆತನ ಜೀವನದ ಕೊನೆಯ ಒಲಂಪಿಕ್ಸ್ ಆಗಿತ್ತು. ಇವನಿಗೆ ಈಗ 37 ವರ್ಷ, ಫೈನಲ್ ಪಂದ್ಯದಲ್ಲಿದ್ದ ಎದುರಾಳಿ ಅಲ್ಕರಾಜ್‌ಗೆ 21 ವರ್ಷ ವಯಸ್ಸು. ಅಲ್ಕರಾಜ್ ಇತ್ತೀಚೆಗಷ್ಟೇ ಜೊಕೊವಿಕ್ ನನ್ನು ವಿಂಬಲ್ಡನ್ ಫೈನಲ್‌ನಲ್ಲಿ ಸೋಲಿಸಿ ಆ ಕೀರಿಟವನ್ನು ಧರಿಸಿದ್ದ. ತನಗಿಂತ ಹದಿನಾರು ವರ್ಷ ಸಣ್ಣವನ ಜೊತೆ ಸೆಣೆಸಾಡಿ, ಅದೂ ಟೆನ್ನಿಸ್, ಅದರಲ್ಲೂ ಸಿಂಗಲ್ಸ್ ಪಂದ್ಯದಲ್ಲಿ, ಗೆಲ್ಲುವುದು ಸುಲಭವೇ? ಇನ್ನಾರೇ ಆಗಿದ್ದರೂ ಆಡುವ ಮೊದಲೇ ಸೋತು ಬಿಡುತ್ತಿದ್ದರು. ಆದರೆ ಜೋಕೋವಿಚ್ ಜಗತ್ತಿಗೇ ಒಂದು ಕಲಿಕೆಯನ್ನು ನೀಡುವವನಿದ್ದ. ಅವನ ಬದುಕಿನ ಎಲ್ಲಾ ಸಾಧನೆಗಳೂ ಈ ಒಂದು ಸಾಧನೆಗಾಗಿ ಕಾಯುತ್ತಿದ್ದವು. ಜನರು ಎಲ್ಲವನ್ನೂ ಮರೆತು ಇದನ್ನೊಂದನ್ನು ನೆನಪಿಟ್ಟುಕೊಳ್ಳಲಿ ಎನ್ನುತ್ತಿದ್ದವು!

ಅದಕ್ಕಾಗಿಯೇ ನೋವಾಕ ಜೋಕೋವಿಚ್ ತನ್ನ ಮುಂದಿದ್ದ ಎಲ್ಲ ಅಡೆತಡೆಗಳನ್ನೂ ಮೀರಿ, ಹಳೆಯ ಸೋಲುಗಳ ನೆನಪುಗಳನ್ನು ತೂರಿ, ಈ ಬಾರಿ ಒಲಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದಾನೆ. ಓಲಂಪಿಕ್ ಆಟದ ಇತಿಹಾಸದ ಪುಟಗಳಲ್ಲಿ ಈ ಗೆಲುವನ್ನು ಚಿನ್ನದ ಅಕ್ಷರಗಳಲ್ಲಿ ಮುದ್ರಿಸಬೇಕು. ಆತ ಗೆದ್ದು ಖುಷಿಯಿಂದ ನೆಲಕ್ಕೆ ಕುಸಿದಾಗ ಆತನ ಕೈಗಳು ನಡುಗುತ್ತಿದ್ದುದು, ಆತ ಎಷ್ಟು ಭಾವಪರವಶನಾಗಿದ್ದ ಎಂಬುದನ್ನು ತೋರಿಸುತ್ತದೆ. ಓಲಂಪಿಕ್ ಆಟದ ಇತಿಹಾಸದಲ್ಲಿ ಆ್ಯಂಡಿ ಮುರ್ರೆ ಎನ್ನುವಾತ ಸತತವಾಗಿ ಎರಡು ಬಾರಿ ಚಿನ್ನದ ಪದಕಗಳನ್ನು ಗೆದ್ದು ದಾಖಲೆ ಬರೆದಿದ್ದ. ಆದರೆ ಜೋಕೋವಿಚ್ ನದ್ದು ಬೇರೆಯೇ - ಓಲಂಪಿಕ್ ಗೇಮ್ಸಿನ ಟೆನ್ನಿಸ್ ಪುರುಷರ ವಿಭಾಗದ ಸಿಂಗಲ್ಸ್ ಪಂದ್ಯದಲ್ಲಿ ಚಿನ್ನದ ಪದಕ ಪಡೆದ ಅತೀ ಹೆಚ್ಚು ವಯಸ್ಸಿನ ಆಟಗಾರ ಎಂಬ ದಾಖಲೆ!

ಸ್ಫೂರ್ತಿ ತುಂಬುವ ಗೆಲುವು

ಒಂದು ಸೋಲಿಗೆ ಬೇಸತ್ತು ನಾವು ಸುಸ್ತಾಗಿ ಬಿಡುತ್ತೇವೆ. ಮಾಡಿದ ಪ್ರಯತ್ನಕ್ಕೆ ಫಲ ಸಿಗಲು ಒಂದೆರಡು ವರ್ಷಗಳೂ ನಾವು ಕಾಯುವುದಿಲ್ಲ. ಇರುವುದನ್ನು ಬಿಟ್ಟು ಬೇರೆ ಏನನ್ನೋ ಹುಡುಕಲು ಹೋಗುತ್ತೇವೆ. ಜೋಕೋವಿಚ್‌ನ ಗೆಲುವು ನಮಗೆಲ್ಲ ಒಂದು ದಾರಿದೀಪ. ಇಂದು ಈತನ ಗೆಲುವನ್ನು ಬಹುಶಃ ಇಡೀ ಟೆನ್ನಿಸ್ ಲೋಕವು ಕೊಂಡಾಡುತ್ತಿದೆ, ಮುಂದೂ ಕೊಂಡಾಡಲಿದೆ. ಆದರೆ ಆತನು ಕಳೆದ ಹದಿನಾರು ವರ್ಷಗಳಿಂದ ಸತತವಾಗಿ ಪರಿಶ್ರಮ ಪಟ್ಟಿರುವುದು ಯಾರ ಗಮನಕ್ಕೂ ಬಂದಿರಲಿಕ್ಕಿಲ್ಲ. ಜಗತ್ತಿನ ಅತ್ಯಂತ ಶ್ರೇಷ್ಠ ಆಟಗಾರನಿಗೆ ಹಿಂದಿನ ಒಲಂಪಿಕ್ಸ್ ಸೋಲುಗಳು ಎಷ್ಟು ನೋವನ್ನು ಕೊಟ್ಟಿರಬಹುದು? ಎಷ್ಟೊಂದು ಸಲ ಆತ ಹತಾಶನಾಗಿರಲಿಕ್ಕಿಲ್ಲ? 'ಕಂಚಾದರೂ ಸಿಕ್ಕಿದೆಯಲ್ಲ, ಮತ್ತೆ ಸೋಲಿನೊಡೆ ಸರಸಾಟ ಬೇಡ, ಇನ್ನು ಮುಂದೆ ಓಲಂಪಿಕ್ಸ್‌ನಲ್ಲಿ ಆಡಿದ್ದು ಸಾಕು' ಎಂದು ತನಗೆ ತಾನೇ ಎಷ್ಟೊಂದು ಬಾರಿ ಸೋತಿರಬಹುದು? ಆ ಸೋಲುಗಳು ಆತನ ಮನದಾಳದೊಳಗೆ ತಿಕ್ಕಿ ತಿಕ್ಕಿ ಈ ಗೆಲುವಿನ ಜ್ವಾಲೆ ಎದ್ದಿದೆ, ಜಗವನ್ನು ಬೆಳಗುತ್ತಿದೆ. ನಿನ್ನೆ ಸೋತಿದ್ದಕ್ಕಾಗಿ ನಾಳೆಯ ಗೆಲುವಿಗೆ ಪ್ರಯತ್ನ ಪಡುವು ದನ್ನು ನಿಲ್ಲಿಸಲಿಲ್ಲ, ತನ್ನಲ್ಲಿಯ ಭರವಸೆಯ ಸೆಲೆಯನ್ನು ಎಂದಿಗೂ ಕಳೆದುಕೊಳ್ಳಲಿಲ್ಲ. ಸತತವಾಗಿ ಆಡುತ್ತಲೇ ಇದ್ದ. ವರ್ಷ ದಿಂದ ವರ್ಷಕ್ಕೆ ಹೊಸ ಅನುಭವದ ಮೆಟ್ಟಿಲುಗಳನ್ನು ಹತ್ತಿ ಇನ್ನೂ ಚೆಂದವಾಗಿ ಆಡುತ್ತಾ ಹೋದ. ಕ್ರೀಡೆಯ ಗಮ್ಮತ್ತೇ ಇದು, ಇಲ್ಲಿ ಸೋಲು ಗೆಲುವಿಗಿಂತ, ಕ್ರೀಡಾಪಟು ಎಷ್ಟು ಚೆಂದದ ಆಟ ಆಡುತ್ತಾನೆ ಎನ್ನುವುದೇ ಮುಖ್ಯ. ಸಣ್ಣಪುಟ್ಟ ಸೋಲುಗಳಿಗೆ ಜೀವವನ್ನು ಕೊಡುವ ಮನಸ್ಸಾದಾಗ, ಜಗತ್ತಿನಲ್ಲಿ ಇನ್ನು ಆಶಾಕಿರಣವೇ ಇಲ್ಲವೇನೋ ಎನಿಸು ವಾಗ, ಸೋಲು ನಮಗಾಗಿಯೇ ಇದೆಯೇ ಎನ್ನುವಂತೆ ಭಾಸ ವಾದಾಗ, ದುರಾದೃಷ್ಟದ ಮಹಾಪೂರವು ನಮ್ಮನ್ನೇ ಹುಡುಕಿ ಕೊಂಡು ಬರುತ್ತಿದೆ ಎಂಬಂತೆ ಕಾಣುವಾಗ, ಇನ್ನು ವಯಸ್ಸಾಯಿತು ಬದುಕಿನಲ್ಲಿ ಸಾಧಿಸುವುದು ಏನಿದೆ ಎಂಬ ಭಾವವು ನಮ್ಮ ಕಣ್ಣಿಗೆ ಕತ್ತಲೆಯನ್ನು ಕಟ್ಟಿದಾಗ - ಈ 37 ವರ್ಷದ ಜೋಕೋವಿಚ್ ಓಲಂಪಿಕ್ ಆಟದಲ್ಲಿ ಕಂಡ ಹದಿನಾರು ವರ್ಷಗಳ ಸತತ ಸೋಲಿನ ನಂತರ 21 ವರ್ಷದ ತನ್ನ ಎದುರಾಳಿಯೆದುರು 7-6, 7-6 ಅಂಕದ ಅತ್ಯಂತ ಕಠಿಣವಾದ ಎರಡು ನೇರವಾದ ಸೆಟ್‌ಗಳಲ್ಲಿ ಗೆದ್ದ ಆ ಗೆಲುವು ನಮ್ಮ ನೆನಪಿಗೆ ಬರಬೇಕು. 37 ವರ್ಷದ ಈ ಆಟಗಾರನು, ವಯಸ್ಸು ಕೇವಲ ಒಂದು ಸಂಖ್ಯೆ ಎಂದು ಜಗತ್ತಿಗೆ ತೋರಿಸಿಕೊಟ್ಟ.

ಕನಸಿಗೆ ಪ್ರಯತ್ನದ ನೀರನ್ನು ಎರೆಯುತ್ತಲೇ ಇರಬೇಕು, ಆತ್ಮವಿಶ್ವಾಸದ ಬೆಳಕನ್ನು ಹರಿಸುತ್ತಲೇ ಇರಬೇಕು, ಇಂದಲ್ಲ ನಾಳೆ, ನಾಳೆಯಲ್ಲ ನಾಡಿದ್ದು ಅದು ಒಣಗಿದ್ದರೂ ಚಿಗುರೊಡೆದು, ಬೆಳೆದು, ಮರವಾಗಿ, ಫಲವನ್ನು ಕೊಡುತ್ತದೆ. ನಮ್ಮ ಕನಸನ್ನು ಕೊಲ್ಲುವ ತಾಕತ್ತು ಇರುವುದು ನಾವು ತಂದುಕೊಳ್ಳುವ ನಿರಾಶೆಗೆ ಇದೆಯೇ ಹೊರತು ಬೇರೆ ಯಾರಿಗೂ ಇಲ್ಲ!

ಚೆಲುವಿನ ಆಟ

ಕೆಲವೊಮ್ಮೆ ಆಟದಲ್ಲಿ ಸೋತರೂ, ಆಟವಾಡಿದ ರೀತಿ ಜನರ ಮನದಲ್ಲಿ ಅವರನ್ನು ಗೆಲ್ಲಿಸುತ್ತದೆ. ಜೋಕೋವಿಚ್ ಇದೇ ಭರವಸೆಯ ಮೇಲೆ ಓಲಂಪಿಕ್ ಆಟಕ್ಕೆ ಮತ್ತೆ ಬಂದ, ಚೆಂದದ ಆಟವಾಡಿದ, ಎದುರಾಳಿಯ ಬಗ್ಗೆ ಹೆಚ್ಚು ಚಿಂತೆ ಮಾಡದೆ, ತನ್ನ ಆಟವನ್ನು ಆಡುತ್ತಾ ಹೋದ. ಜಗತ್ತೇ ನೆನಪಿಲ್ಲಿಡುವಂತಹ ಗೆಲುವು ಅವನದಾಯಿತು. ಓಲಂಪಿಕ್ ಆಟದ ಮೆರಗು ಇನ್ನಷ್ಟು ಹೆಚ್ಚಿತು.

ಚಿತ್ತ ವಿಹಾರ

ಪ್ರೀತಿಯ ಬೊಗಸೆ ತುಂಬಿರಲಿ

ಜೀವನ ಎನ್ನುವುದು ಅನೇಕ ಬಗೆಯ ಸುಖ, ದುಃಖಗಳ ಸಂಗಮ. ಕನಸು, ನನಸುಗಳ ಸಮಾಗಮ. ಇಲ್ಲಿ ಗೆದ್ದು ಸೋತವರು, ಸೋತು ಗೆದ್ದವರು ಕಾಣಸಿಗುತ್ತಾರೆ. ಸೋಲೇ ಅಂತಿಮವಲ್ಲ.ಸಿಕ್ಕ ಗೆಲುವೇ ಎಲ್ಲಕ್ಕಿಂತ ದೊಡ್ಡದಲ್ಲ. ಗೆಲುವೆನ್ನುವುದನ್ನು ಪ್ರತಿಯೊಬ್ಬರು ತಮ್ಮ ರುಮಾಲಿಗೆ ಸಿಕ್ಕಿಸಿಕೊಳ್ಳಲಿಕ್ಕೆ ಬಯಸುವ ಕಿರೀಟ. ಇಲ್ಲಿ ಸೋತವರ ಸಂಖ್ಯೆಯೇ ಗೆದ್ದವರಿಗಿಂತ ಅಧಿಕ. ಸೋತ ನಂತರ ಒಮ್ಮೊಮ್ಮೆ ಜೀವನದ ಮೇಲೆ ಜುಗುಪ್ಸೆ ಮೂಡುವುದು ಸಹಜ. ಇಂತಹ ಸಂದಿಗ್ಧ ಸ್ಥಿತಿಗಳಲಿ ಸೋತವರ ಬೊಗಸೆ ತುಂಬಾ ಬದುಕಿನ ಕುರಿತಾದ ಅಪಾರ ಪ್ರಾಂಜಲ ಪ್ರೀತಿಯೇ ತುಂಬಿರಲಿ. ನಾವು

ಬದುಕನ್ನು ಪ್ರೀತಿಸುವು ದಾದರೆ ಒಂದೊಂದು ಕ್ಷಣವೂ ನಮಗೆ ಅತ್ಯಮೂಲ್ಯ. ಏಕೆಂದರೆ ಬದುಕು ಮಾಡಲ್ಪಟ್ಟಿರುವುದೆ ಕ್ಷಣಗಳಿಂದ. ಜೀವನದಲ್ಲಿ ಪ್ರೀತಿಯೇ ನಮ್ಮ ಪಾಲಿನ ಸಂಜೀವಿನಿ. ಜಗತ್ತಿನಲ್ಲಿ ಪ್ರೀತಿ ಗಿಂತ ಬೆಲೆಬಾಳುವ ಸಂಪತ್ತು ಮತ್ತೊಂದಿಲ್ಲ. ಪ್ರೀತಿಗೆ ಅಪಾರ ಗೌರವವಿದೆ. ಬದುಕಿನ ಪ್ರೀತಿಗೆ ವಿಶೇಷ ಮೌಲ್ಯವಿದೆ. ಅದೇ ಪ್ರೀತಿಗೆ ಎಲ್ಲವನ್ನು ಗೆಲ್ಲುವ ತಾಕತ್ತಿದೆ. ನಾವು ಯಶಸ್ವಿ ವ್ಯಕ್ತಿಗಳಾಗಲು ಸದಾಕಾಲ ಉತ್ಸಾಹ,ಲವಲವಿಕೆಯಿಂದ ಕೂಡಿರಬೇಕು. ಅಂದಾಗಲೇ ನಾವು ಗೆಲುವಿನ ದೂರ ತೀರವ ಸೇರಲು ಸಾಧ್ಯ.ಭಯವೇ ನಮ್ಮ ಬಗಲ ಮುಳ್ಳಾಗಿದೆ. ಯಾವುದೇ ಕೆಲಸವಿರಲಿ ಭಯಗ್ರಸ್ತರಾಗದೆ ಮೊದಲು ಕೆಲಸವನ್ನು ಉತ್ಕಟವಾಗಿ ಪ್ರೀತಿಸಬೇಕು. ಕೆಲಸವನ್ನು ಪ್ರೀತಿಸಲು ಕಲಿತರೆ ಬದುಕನ್ನು ಪ್ರೀತಿಸಲು ಕಲಿತಂತೆ. ನಮ್ಮ ಹೃದಯ ಪ್ರೀತಿಗೆ ಸೆಲೆ ಆಗಬೇಕು. ಬದುಕಿಗೆ ನೆಲೆ ಆಗಿರಬೇಕು. ಪ್ರೀತಿ ಇರುವ ಕಡೆ ಕೋಪ, ದ್ವೇಷ, ಭಯ ಇರುವುದಿಲ್ಲ. ಪ್ರೀತಿಗೆ ಇಡೀ ಪ್ರಪಂಚವೇ ಸುಂದರ, ಸುಮಧುರ ವಾಗಿ ಕಾಣಿಸುತ್ತದೆ. ಕವಿ ಜಿ.ಎಸ್.ಶಿವರುದ್ರಪ್ಪ ಅವರು ಹೇಳುವಂತೆ -ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ? ಮೋಡ ಕಟ್ಟೀತು ಹೇಗೆ? ಹನಿಯೊಡೆದು ಕೆಳಗಿಳಿದು ನೆಲಕ್ಕೆ ಹಸಿರು ಮೂಡೀತು ಹೇಗೆ? ಪ್ರಕೃತಿಯ ಮಡಿಲಲ್ಲೂ ಪ್ರೀತಿ ತುಂಬಿದೆ. ನಮ್ಮ ಬದುಕಿಗೂ ಪ್ರೀತಿಯೇ ಮುಖ್ಯ.

● ರಂಗನಾಥ್ ಗುಡಿಮನಿ

ಇತಿಹಾಸಕ್ಕೊಂದು ಕಿಂಡಿ

ನಮ್ಮ ದೇಶವು 1900ರಲ್ಲಿ ಮೊದಲ ಬಾರಿಗೆ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿತ್ತು. ನಾರ್ಮನ್ ಪ್ರಿಟ್ ಚಾರ್ಡ್ ಎಂಬಾತ ಅಥ್ಲೆಟಿಕ್ಸ್‌ನಲ್ಲಿ ಎರಡು ಬೆಳ್ಳಿಯ ಪದಕ ಪಡೆದ. ಆದರೆ, ಇದು ಕೇವಲ ಅಂಕಿಸಂಕಿ. ಇತರ ಹಲವು ಕಡೆ ಈತನು ಬ್ರಿಟನ್‌ನ ಕ್ರೀಡಾಪಟು ಎಂದು, ಅವರ ಒಟ್ಟು ಪದಕಗಳಿಗೆ ಇವನನ್ನು ಸೇರಿಸಿದ್ದಾರೆ. 1928ರಲ್ಲಿ ಹಾಕಿಯಲ್ಲಿ ಚಿನ್ನದ ಪದಕ ಪಡೆದಿದ್ದೆವು. 1947ರ ತನಕ ಬ್ರಿಟಿಷ್ ಆಳ್ವಿಕೆಯಲ್ಲಿದ್ದುದರಿಂದ, ಬ್ರಿಟನ್‌ನ ಪದಕ ತಪ್ಪುವ ಸಂದರ್ಭ ಎದುರಾಗದಂತೆ, ನಮ್ಮ ದೇಶದ ಕ್ರೀಡಾಪಟುಗಳು ಭಾಗವಹಿಸಬೇಕಿತ್ತು! ಸರಳವಾಗಿ ಹೇಳಬೇಕೆಂದರೆ, ಇಪ್ಪತ್ತನೆಯ ಶತಮಾನದ ಮೊದಲ ಭಾಗದಲ್ಲಿ ನಮ್ಮಲ್ಲಿ ಕ್ರೀಡಾ ತರಬೇತಿ ಎಂಬ ಪರಿಕಲ್ಪನೆಯೇ ಇರಲಿಲ್ಲ. 1952 ರಲ್ಲಿ ಹೆಲ್ಸಿಂಕಿಯಲ್ಲಿ ನಡೆದ ಒಲಿಂಪಿಕ್ಸ್‌ನಲ್ಲಿ ಕೆ.ಡಿ.ಜಾಧವ್ ಅವರು ಕುಸ್ತಿಯಲ್ಲಿ ಕಂಚಿನ ಪದಕ ಪಡೆದದ್ದೇ, ನಮ್ಮ ದೇಶದ ಮೊದಲ ವೈಯಕ್ತಿಕ ಒಲಿಂಪಿಕ್ಸ್ ಪದಕ ಎನ್ನಬಹುದು. 1948ರಲ್ಲಿ, ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಲಂಡನ್ ಒಲಿಂಪಿಕ್ಸ್‌ನಲ್ಲಿ ಹಾಕಿಯಲ್ಲಿ ಪದಕ ಪಡೆದೆವು. 2020ರಲ್ಲಿ ಟೋಕಿಯೋ ಒಲಿಂಪಿಕ್ಸ್‌ನಲ್ಲಿ ನಮ್ಮ ದೇಶದ ಕ್ರೀಡಾಪಟುಗಳು 7 ಪದಕ ಪಡೆದಿದ್ದು, ಇದೇ ಇಷ್ಟರ ತನಕ ಅತಿ ಹೆಚ್ಚು ಪದಕ ಪಡೆದ ದಾಖಲೆ ಎನಿಸಿದೆ.

ಯುವ ಕಾವ್ಯ

ವಿಕೋಪ

ಪ್ರಕೃತಿಯ ಒಡಲಲ್ಲಿ ಬರಿದಾದ ಕೂಗು
ವಿಕೋಪದ ಅಪತ್ತಿಗೆ ಬಲಿಯಾದವರೆಷ್ಟು
ಮರ ಗಿಡಗಳ ಅಳಿದು ಎತ್ತರದ ಮನೆಗಳು
ಕೃತಕ ಗಾಳಿ ಬೆಳಕಿಗೆ ಮೈಮರೆತು ಸೋತವರು

**ಕೊರೆದು ಕೊರೆದು ಬಂಜಾರಾಗಿದೆ ಇಳೆ
ಮಾನವನ ಆಸೆಗೆ ಇದೆಯೆ ಕೊನೆ?
ಸಹಿಸಿದಷ್ಟು ಭೂಮಿ ಬಿರಿದು ಮಳೆಯ ಸುರಿದು
ತತ್ತರಿಸಿ ಹೋದವರು ಇಲ್ಲಿ ಸಾಕಷ್ಟು**

ಎಷ್ಟೇ ಮುಂದುವರೆದರೇನು ಮಾನವ
ನಲುಗುವನು ಪ್ರಕೃತಿಯ ವಿಕೋಪದ ಮುಂದೆ
ಮನಗಳು ಕೊಚ್ಚಿ ಹೋಗುತಿರುವಾಗ
ಉಳಿವಿಗಾಗಿ ದೇವರ ಮೊರೆಯಿಡುತ್ತಿರುವಾಗ

**ಇನ್ನಾದರೂ ಅರಿಯ ಬೇಕಿದೆ ಎಲ್ಲರೂ
ಉಳಿಯ ಬೇಕಿದೆ ಪ್ರಕೃತಿ ಹಸುರು
ಮುಂದಿನ ಪೀಳಿಗೆಗೆ ಸ್ವಚ್ಛ ಗಾಳಿ ಬೆಳಕು
ಅರಿತರೆ ಉಳಿಗಾಲ ಇಲ್ಲದಿರೆ ಅಳಿಗಾಲ**

● ವಾಣಿ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine@gmail.com

● ವೀಣಾ ಭಟ್

ಸದಾ ಚಳಿ ಪ್ರದೇಶ ಎನಿಸಿರುವ ಅಮೆರಿಕದ ಒರೆಗಾನ್ ರಾಜ್ಯದಲ್ಲಿ ಪ್ರವಾಸ ಮಾಡಿದರೆ, ಹಲವು ದೃಶ್ಯವೈಭವಗಳನ್ನು ಕಾಣಬಹುದು.

ಜ್ವಾಲಾಮುಖಿಯಲ್ಲಿ ಪ್ರವಾಸ!

ಅಮೆರಿಕ ಪ್ರವಾಸಕ್ಕೆ ಹೋದವರ ಪಟ್ಟಿಯಲ್ಲಿ ಒರೆಗಾನ್ ರಾಜ್ಯ ಸಾಮಾನ್ಯವಾಗಿ ಇರುವುದಿಲ್ಲ. ಇದೊಂದು ಸುಂದರ ತಾಣ. ಇಲ್ಲಿ ಎಲ್ಲೆಲ್ಲೂ ಸೌಂದರ್ಯವೇ! ಹೊಳೆ,ಬೆಟ್ಟ, ಹಿಮ, ಹಸಿರು, ಶರತ್ಕಾಲದಲ್ಲಿ ಎಲೆ ಉದುರಿಸುವ ಬಣ್ಣ ಬಣ್ಣದ ಮರಗಳು ಎಲ್ಲವೂ ಇಲ್ಲಿವೆ. ಮೌಂಟ್ ಹುಡ್ ಒರೆಗಾನ್‌ನ ಎತ್ತರದ ಮತ್ತು ಸಕ್ರಿಯ ಜ್ವಾಲಾಮುಖಿಯಿರುವ ಪರ್ವತ. ಒರೆಗಾನ್‌ನ ಅತಿ ಎತ್ತರ. ರಾಷ್ಟ್ರ ಅತಿ ಎತ್ತರದ ಪರ್ವತಗಳಲ್ಲಿ ಒಂದಾಗಿದೆ; ವರ್ಷಪೂರ್ತಿ ಲಿಫ್ಟ್-ಸರ್ವ್ಡ್ ಸ್ಕೀಯಿಂಗ್ ಅನ್ನು ನೀಡುತ್ತದೆ. ಈ ಪರ್ವತವು 100 ಮೈಲಿ ದೂರದಿಂದ ಗೋಚರಿಸುವುದು. ಮೌಂಟ್ ಹುಡ್ ಒಂದು ಜ್ವಾಲಾಮುಖಿ. ಆದರೆ ಇನ್ನು ಮುಂದೆ ತೀವ್ರತರದ ಸ್ಫೋಟ ನಡೆಯಲಾರದು ಎಂದು ಅಂದಾಜಿಸಲಾಗಿದೆ. ಸೌಂದರ್ಯಕ್ಕೂ ಹೆಸರು ವಾಸಿ ಈ ಹಿಮ ಸುಂದರಿ. ಇದರ ಎತ್ತರ ಸರಿಸುಮಾರು 11,249 ಅಡಿ. 12 ಹಿಮನದಿ ಗಳಿಗೆ ಮತ್ತು ಸ್ನೋಫೀಲ್ಡ್ ಗಳಿಗೆ ನೆಲೆಯಾಗಿದೆ.

ಮೌಂಟ್ ಹುಡ್ ಮೌಂಟ್ ಹುಡ್ ರಾಷ್ಟ್ರೀಯ ಅರಣ್ಯವು 1,067,043 ಎಕರೆ ವಿಸ್ತಾರವಿದೆ. ಇಲ್ಲಿ ಚಾರಣದ ಅಥವಾ ಹೈಕಿಂಗ್ ದಾರಿಗಳಿವೆ. 1950 ರಿಂದ, ಮೌಂಟ್ ಹುಡ್‌ನಲ್ಲಿ ಪ್ರತಿ ವರ್ಷ ಹಲವಾರು ಸಣ್ಣ ಪುಟ್ಟ ಭೂಕಂಪಗಳು ಸಂಭವಿಸಿವೆ. ಪ್ರತಿ ವರ್ಷ ಸುಮಾರು 10,000 ಜನರು ಮೌಂಟ್ ಹುಡ್ ಅನ್ನು ಏರಲು ಪ್ರಯತ್ನಿಸುತ್ತಾರೆ.

ಮೋಹಕ ರಸ್ತೆ ಯಣ

ಮೌಂಟ್ ಹುಡ್ ಸೀನಿಕ್ ಬೈವೇ ರಸ್ತೆ ತುಂಬ ಆನಂದದಾಯಕ ಡ್ರೈವ್ ಎನಿಸಿದೆ. ದಾರಿಯುದ್ದಕ್ಕೂ ಸೂಚಿಪರ್ಣ ಮರಗಳನ್ನು ನೋಡುತ್ತ ಮೌಂಟ್ ಹುಡ್ ಬುಡಕ್ಕೆ ತಲುಪಿದರೆ ಅಲ್ಲಿ ಒಂದು ಸುಂದರವಾದ ಲಾಡ್ಜ್ ಸಿಗುತ್ತದೆ. ಅದುವೇ ಟಿಂಬರ್‌ಲೈನ್ ಲಾಡ್ಜ್. ಇದು 1936 ರಲ್ಲಿ ನಿರ್ಮಾಣವಾಯಿತು. ಬೇಸಗೆಯಲ್ಲೂ ಮೌಂಟ್ ಹುಡ್‌ನ ತಾಪಮಾನ ಸೊನ್ನೆ ಡಿಗ್ರಿಗಿಂತ ಕೆಳಗಿಳಿಯಬಹುದು; ಬೇಸಗೆಯಲ್ಲೂ ಹಿಮ ಬೀಳುವುದು.

ಶರತ್ಕಾಲದ ಎಲೆಗಳು

ಒರೆಗಾನ್-ಪೋರ್ಟ್ ಲ್ಯಾಂಡ್ ಪ್ರದೇಶ ಫಾಲ್ ಕಲರ್ಸ್ ಗೂ ಪ್ರಸಿದ್ಧ. ಮೇಪಲ್, ಓಕ್ಸ್ ಮುಂತಾದ ಮರಗಳು ಶರತ್ಕಾಲದಲ್ಲಿ ಎಲೆಗಳನ್ನು ಉದುರಿಸುತ್ತವೆ. ಎಲೆಗಳು ಉದುರುವ ಮುನ್ನ ಕೆಂಪು, ಕೇಸರಿ, ಹಳದಿ , ಕಂದು ಬಣ್ಣಗಳಾಗಿ ಬಣ್ಣ ಬದಲಾಯಿಸುತ್ತವೆ. ಬಣ್ಣ ಚೆಲ್ಲಿದಂತೆ ರಸ್ತೆಗಳೆಲ್ಲ ಈ ರಂಗಿನಲ್ಲಿ ಅಲಂಕೃತವಾಗಿರುತ್ತವೆ. ಮರದ ಮೇಲೂ ಬಣ್ಣದ ಎಲೆಗಳು; ನೆಲದ ಮೇಲೂ ಬಣ್ಣದ ಎಲೆಗಳು; ಕಣ್ಣುಗಳಿಗೆ ಹಬ್ಬ. ಈ 'ಫಾಲ್' ಬಣ್ಣಗಳನ್ನು ನೋಡಲೆಂದೇ ಟೂರಿಸ್ಟ್ ಪ್ಯಾಕೇಜ್‌ಗಳಿವೆ.

ಸೇತುವೆಗಳ ನಗರ

ಒರೆಗಾನ್‌ನ ಮುಖ್ಯನಗರ ಪೋರ್ಟ್‌ಲ್ಯಾಂಡ್ ಅನ್ನು ಬ್ರಿಡ್ಜ್‌ಟೌನ್ ಎಂದು ಕರೆಯುವುದುಂಟು. ಇಲ್ಲಿ ಹಲವು ಹದಿಮೂರು ಸೇತುವೆಗಳಿವೆ! ಎಲ್ಲವೂ ವಿಲ್ಲಾಮೆಟ್ಟೆ ನದಿಗೆ ಅಡ್ಡಲಾಗಿವೆ. ಹಾಗೆ ನೋಡಿದರೆ, ಅಮೆರಿಕದ ಹಲವು ನಗರಗಳಲ್ಲಿ ಹತ್ತಾರು ಸೇತುವೆಗಳಿವೆ. ಅವುಗಳಲ್ಲಿ ಹಲವಾರು ಐತಿಹಾಸಿಕ ಹೆಗ್ಗುರುತುಗಳಾಗಿವೆ. ಪೋರ್ಟ್‌ಲ್ಯಾಂಡ್‌ನ ಹೆಚ್ಚು ಬಳಕೆಯ ಮೂರು ಸೇತುವೆಗಳು 100 ವರ್ಷಗಳಿಗಿಂತ ಹಳೆಯವು. -ಹಾಥಾರ್ನ್ ಸೇತುವೆ - ಕ್ರಿ.ಶ. 1910, ಸ್ಟೀಲ್ ಸೇತುವೆ -ಕ್ರಿ.ಶ. 1912, ಮತ್ತು ಬ್ರಾಡ್‌ವೇ ಸೇತುವೆ -ಕ್ರಿ.ಶ. 1913. ಹೋಲಿಕೆಗೆ ಹೇಳುವುದಾದರೆ, ನ್ಯೂಯಾರ್ಕ್‌ನ ಬ್ರೂಕ್‌ಲಿನ್ ಸೇತುವೆ ನಿರ್ಮಾಣ ಕ್ರಿ.ಶ. 1883. ಪ್ರತಿ ಬೇಸಿಗೆಯಲ್ಲಿ, ಪ್ರಾವಿಡೆನ್ಸ್ ಬ್ರಿಡ್ಜ್ ಪೆಡಲ್ ಇವೆಂಟ್ ಆಚರಿಸುತ್ತಾರೆ. ಭಾಗವಹಿಸು ವವರು 11 ಸೇತುವೆಗಳನ್ನು ದಾಟುವ 8 ಕಿ.ಮೀ., ಎರಡು-ಸೇತುವೆಗಳ ನಡಿಗೆ-60 ಕಿ.ಮೀ., ಬೈಕು-ಸೈಕಲ್ ಸವಾರಿಯ ನಡುವೆ ಯಾವುದನ್ನಾದರೂ ಆಯ್ಕೆ ಮಾಡಬಹುದು. ಈ ಜಲಪಾತವು ಪ್ರತಿ ವರ್ಷ ಇಪ್ಪತ್ತು ಲಕ್ಷ ಪ್ರವಾಸಿಗರನ್ನು ಆಕರ್ಷಿಸುತ್ತದೆ.

ಜಲಪಾತದ ಕೆಳಗೆ ಸೇತುವೆ!

ಮಲ್ಟ್‌ನೋಮಾ ಜಲಪಾತ ಒರೆಗಾನ್‌ನ ಅತಿ ಸುಂದರ ಜಲಪಾತಗಳಲ್ಲೊಂದು. ಮಧ್ಯದಲ್ಲಿರುವ ಕಮಾನಿನಾಕಾರದ ವೀಕ್ಷಣಾ ಸೇತುವೆ ಕನಸಿನ ಲೋಕವನ್ನು ಸೃಷ್ಟಿಸುತ್ತದೆ. ಇದು 620 ಅಡಿ ಎತ್ತರವಿದೆ. 1914 ರಲ್ಲಿ ನಿರ್ಮಿಸಲಾದ ಮಲ್ಟ್ನೋಮಾ ಕ್ರೀಕ್ ಸೇತುವೆಯು, ಜಲಪಾತದ ಕೆಳಗೆ ಹಾದುಹೋಗುತ್ತದೆ ಮತ್ತು ಐತಿಹಾಸಿಕ ಸ್ಥಳ ಗಳ ರಾಷ್ಟ್ರೀಯ ನೋಂದಣಿಯಲ್ಲಿ ಪಟ್ಟಿ ಮಾಡಲಾಗಿದೆ.



ವಿನ್ಯಾಸಕ್ಕೆ ಸ್ಫೂರ್ತಿ ನೀಡುವ ಪ್ರಕೃತಿ

ಚಿತ್ರ ವಿಚಿತ್ರ ಆಕಾರದ ಬಂಡೆಗಳನ್ನು ನೀವು ನೋಡಿರಬಹುದು. ಆ ವಿನ್ಯಾಸದಿಂದ ಸ್ಫೂರ್ತಿ ಪಡೆದ ವಿನ್ಯಾಸದ ಬಹುಮಹಡಿ ಕಟ್ಟಡಗಳೂ ಜಗತ್ತಿನಲ್ಲಿ ಅಲ್ಲಲ್ಲಿ ಇವೆ ಎಂದರೆ ನಿಮಗೆ ಅಚ್ಚರಿ ಎನಿಸಬಹುದು!



● ವಿಶ್ವನಾಥ್ ಬಳುವನೇರಲು

ಪರಿಸರದಲ್ಲಿ ಕಾಣಸಿಗುವ ವಿಶಿಷ್ಟ, ಅಪರೂಪದ ಆಕಾರಗಳನ್ನು ವಿನೂತನ ರೂಪದಲ್ಲಿ ಅಳವಡಿಸಿಕೊಂಡು ಹೊಸದಾದ ಕಲಾಕೃತಿಯನ್ನು ರಚಿಸುವ ಕಲಾವಿದರ ಕಥೆಯಿದು. ಜಪಾನಿನ ವಾಸ್ತುಶಿಲ್ಪಿ ಕೊಯಿಚಿ ತಕಡಾ ಅವರು ಪ್ರಕೃತಿಯಿಂದ ಸ್ಫೂರ್ತಿ ಪಡೆದಿದ್ದಾರೆ. ಪರಿಸರದಲ್ಲಿ ನೋಡಿದ ಚಿತ್ರ ವಿಚಿತ್ರಾ ಆಕೃತಿಗಳಿಂದ ಸ್ಫೂರ್ತಿ ಪಡೆದು, ಅದೇ ರೀತಿಯ ಬೃಹತ್ ಕಟ್ಟಡಗಳ ವಾಸ್ತುಶೈಲಿಯನ್ನು ರೂಪಿಸುವುದು ಅವರ ಹವ್ಯಾಸ.

ಪ್ರಕೃತಿಗೆ ತನ್ನೇ ಆದ ಸೌಂದರ್ಯವಿದೆ. ಆದರೆ ಜಪಾನ್‌ನಲ್ಲಿ ಭೂಕಂಪಗಳು ಮತ್ತು ಸುನಾಮಿಗಳಾಗುತ್ತವೆ. ನೀವು ಪ್ರಕೃತಿಯನ್ನು ಗೌರವಿಸಿ ಅದರ



ಸೌಂದರ್ಯ ಮತ್ತು ಶಕ್ತಿ ಎರಡರ ಸೂಕ್ಷ್ಮತೆಯನ್ನು ಸ್ವೀಕರಿಸಿ ಎಂದು ಅವರು ಹೇಳುತ್ತಾರೆ.

ಇದೇ ರೀತಿಯಲ್ಲಿ ಜಗತ್ತಿನ ವಿವಿಧ ಭಾಗಗಳ ನೈಸರ್ಗಿಕ ಅದ್ಭುತಗಳನ್ನು ಆಧಾರವಾಗಿಟ್ಟುಕೊಂಡು, ಕಟ್ಟಡಗಳ ವಿನ್ಯಾಸಗಳನ್ನು ರೂಪಿಸಿದ್ದನ್ನು ಗುರುತಿಸಬಹುದು. ವಾಸ್ತು ಶಾಸ್ತ್ರ ಇಂದು ಮುಂದುವರಿದಿದೆ, ಆಧುನಿಕಗೊಂಡಿದೆ, ಕಂಪ್ಯೂಟರ್ ಮೂಲಕ, ಎಐ ಮೂಲಕ ಅಪಾರ ಸಾಧ್ಯತೆಗಳನ್ನು ತೆರೆದಿಟ್ಟಿದೆ. ಇದೇ ವೇಳೆಯಲ್ಲಿ, ಪ್ರಕೃತಿಯೇ ಕಡೆದ ಅಪರೂಪದ ಬಂಡೆಗಳ ವಿನ್ಯಾಸಗಳು, ಬಹು ಮಹಡಿಯ ಕಟ್ಟಡಗಳಿಗೂ ಸ್ಫೂರ್ತಿ ನೀಡುತ್ತಿರುವುದು ಒಂದು ಪುಟ್ಟ ವಿಸ್ಮಯ.

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ

10.08.2024 ಶನಿವಾರ

vishwavani.news

ದಿನ ದರ್ಶಿಕೆ

ಶ್ರಾವಣ ಮಾಸ, ಶಷ್ಠಿ, ವಿಕ್ರಮ ಸಂವತ್ಸರ, ಸಧ್ಯ ಯೋಗ, ಚಿತ್ರಾ ನಕ್ಷತ್ರ, ಕೌಲವ ಕರಣ, ಶುಕ್ಲ ಪಕ್ಷ, ಚಂದ್ರ ರಾಶಿ ತುಲಾ, ಸೂರ್ಯ ರಾಶಿ ಕರ್ಕ, ಆಶ್ಲೇಷ ನಕ್ಷತ್ರ, ವರ್ಷಾ ಋತು

ಮನೆಮದ್ದು

ಒಂದು ಕಪ್ ನೀರಿಗೆ, 2 ಪುದೀನಾ ಎಲೆಗಳನ್ನು ಹಾಕಿ ಚೆನ್ನಾಗಿ ಕುದಿಸಿ. ಕೆಳಗಿಳಿಸಿದ ನಂತರ ಅದಕ್ಕೆ ನಿಂಬೆರಸ ಮತ್ತು ಉಪ್ಪು ಸೇರಿಸಿ ಕುಡಿಯುವುದರಿಂದ ವಾಂತಿ ಸಮಸ್ಯೆ ನಿವಾರಣೆಯಾಗುವುದು

ಸೌಂದರ್ಯ ಸೂತ್ರ

ಕಾಫಿ ಪೌಡರ್‌ಗೆ ನೀವು ಬಳಸುವ ನೈಸರ್ಗಿಕ ಐಸ್ ಕ್ರೀಮ್‌ನ್ನು ಸೇರಿಸಿ ಕಣ್ಣಿನ ಕೆಳಗೆ ನಿಯಮಿತವಾಗಿ ಹಚ್ಚಿಕೊಳ್ಳಿ. ವಾರದಲ್ಲಿ ಕನಿಷ್ಠ ಮೂರು ದಿನ ಈ ರೀತಿ ಮಾಡಿ ಇದರಿಂದ ಕಣ್ಣಿನ ಕೆಳಗಿರುವ ಕಪ್ಪು ಕಲೆ ಅಥವಾ ಡಾರ್ಕ್ ಸರ್ಕಲ್ ಮಾಯವಾಗುವುದು.

ದಿನ ಭವಿಷ್ಯ

ಮೇಷ ವಿದ್ಯೆ, ಜ್ಞಾನ ವಿಚಾರದಲ್ಲಿ ಪರಿಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತದೆ. ವ್ಯವಹಾರಗಳಲ್ಲಿ ಗೌರವ ಲಭ್ಯ. ಮೇಲಾಧಿಕಾರಿಗಳಿಂದ ಪ್ರೋತ್ಸಾಹ.

ವೃಷಭ ಮನೆಯಲ್ಲಿ ಸಂತಸದ ವಾತಾವರಣ. ನಿರೀಕ್ಷಿತ ಧನ ಸಂಚಯನ ವೃದ್ಧಿ. ಕೆಲಸ ಕಾರ್ಯಗಳಲ್ಲಿ ಪ್ರಗತಿ. ವಿದ್ಯಾರ್ಥಿಗಳು ಅಧ್ಯಯನಕ್ಕೆ ಆದ್ಯತೆ ನೀಡಬೇಕು.

ಮಿಥುನ ಬಹಳ ಸಮಯದಿಂದ ಬಳಲುತ್ತಿದ್ದ ಅನಾರೋಗ್ಯಕ್ಕೆ ಪರಿಹಾರ. ನೂತನ ಮಿತ್ರರ ಭೇಟಿಯಿಂದ ಸಂತೋಷ. ಸಾಂಸಾರಿಕವಾಗಿ ಉತ್ತಮ ದಿನ.

ಕಟಕ ಧಾರ್ಮಿಕ ಕಾರ್ಯಗಳಿಗೆ ಪ್ರಯಾಣ. ದೇವತಾ ಸ್ಥಳ ಸಂದರ್ಶನ. ಗುರುಹಿರಿಯರಿಂದ ಸಂಭ್ರಮ. ದೂರದ ಮಿತ್ರರೊಂದಿಗೆ ಸಮಾಲೋಚನೆ.

ಸಿಂಹ ವ್ಯವಹಾರದಲ್ಲಿ ಹೊಸ ತಂತ್ರಜ್ಞಾನದ ಅಳವಡಿಕೆಯಿಂದ ಭವಿಷ್ಯದಲ್ಲಿ ಸಾಕಷ್ಟು ಲಾಭ. ಸ್ನೇಹಿತರನ್ನು ಭೇಟಿ ಮಾಡುವಿರಿ.

ಕನ್ಯಾ ಬಹಳ ದಿನಗಳಿಂದ ಕಾಡುತ್ತಿದ್ದ ಸಮಸ್ಯೆಗಳು ಇಂದು ಕೊನೆಗೊಳ್ಳುತ್ತವೆ. ಪ್ರೀತಿಯ ವಿಚಾರದಲ್ಲಿ ಅದೃಷ್ಟದ ದಿನ.

ತುಲಾ ಹೊಸ ವ್ಯವಹಾರವನ್ನು ಪ್ರಾರಂಭಿಸಲು ಯೋಚಿಸುತ್ತಿದ್ದರೆ, ಅನುಭವಿಗಳ ಅಭಿಪ್ರಾಯ ಪಡೆದುಕೊಳ್ಳಿ. ಉದ್ಯೋಗ ಹುಡುಕುತ್ತಿರುವವರಿಗೆ ಅವಕಾಶ.

ವೃಶ್ಚಿಕ ವ್ಯಾಪಾರದಲ್ಲಿ ಲಾಭಕ್ಕಾಗಿ ಹೊಸ ಕ್ರಮ ಅಳವಡಿಸಿಕೊಳ್ಳಬೇಕು. ಕೆಲಸದ ಸ್ಥಳದಲ್ಲಿನ ಬದಲಾವಣೆಗಳು ನಿಮ್ಮ ಪರವಾಗುವುದು.

ಧನು ಕೆಲಸದ ಒತ್ತಡದಿಂದಾಗಿ ದೈಹಿಕವಾಗಿ ಬಳಲುತ್ತೀರಿ. ನಿಮ್ಮ ಬುದ್ಧಿವಂತಿಕೆ, ಚುರುಕುತನ ಪ್ರಶಂಸೆಗೆ ಪಾತ್ರವಾಗುತ್ತದೆ. ವಿದ್ಯಾರ್ಥಿಗಳಿಗೆ ಅನುಕೂಲ.

ಮಕರ ನಿಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಜನಾನುರಾಗಿ ವರ್ತನೆಯಿಂದ ಮೆಚ್ಚುಗೆ. ಕುಟುಂಬದೊಂದಿಗೆ ಪ್ರಯಾಣ.

ಕುಂಭ ನಿರೀಕ್ಷಿತ ಸ್ಥಾನ- ಗೌರವ ದೊರಕುತ್ತದೆ. ಧಾರ್ಮಿಕ ಕಾರ್ಯಗಳಲ್ಲಿ ತಲ್ಲೀನರಾಗುತ್ತೀರಿ. ಧಾರ್ಮಿಕ ಕಾರ್ಯಗಳಿಗೆ ದುಡ್ಡನ್ನು ವಿನಿಯೋಗಿಸುತ್ತೀರಿ.

ಮೀನ ಮಕ್ಕಳಿಂದ ಸಂತೋಷ ವೃದ್ಧಿ. ಆರ್ಥಿಕ ಸಮೃದ್ಧಿಯ ದಿನ. ಪರೀಕ್ಷೆಗೆ ತಯಾರಿ ನಡೆಸುತ್ತಿರುವವರು ಅಧ್ಯಯನದ ಬಗ್ಗೆ ಗಮನ ಹರಿಸಿ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1741: ರಾಜ ಮಾರ್ತಾಂಡ ವರ್ಮ ಭಾರತದಲ್ಲಿನ ಡಚ್ಚರ ಆಳ್ವಿಕೆಯನ್ನು ಕೊನೆಗೊಳಿಸಿದರು.
- 1894: ಭಾರತದ ನಾಲ್ಕನೇ ರಾಷ್ಟ್ರಪತಿ ವಿ.ವಿ ಗಿರಿ ಅವರ ಜನ್ಮದಿನ
- 1977: ಝುಂಡಾ ಉಂಚೆ ರಹೆ ಹಮಾರ ಬರೆದ ಶ್ಯಾಮ್‌ಲಾಲ್ ಗುಪ್ತಾ (ಪರ್ಷದ್) ದೇಹಾಂತ್ಯವಾದ ದಿನ

ಚಿತ್ರಸ್ಫೂರ್ತಿ

ಯುದ್ಧವೂ ಒಂದು ಕರಾಳ ದಿನಗಳ ಸಂತೆ, ಯುದ್ಧ ಕಡು ಕತ್ತಲೆಗೆ ನೂಕುತ್ತದೆ. ಕತ್ತಲೆಯಲ್ಲಿದ್ದ ಕೆಲವು ನಾಯಕರಿಗಾಗಿ, ಆ ದೇಶಗಳ ಕೋಟ್ಯಾಂತರ ಜನರು ಕತ್ತಲೆಯತ್ತ ತಿರುಗುತ್ತಾರೆ. ಯಾರದ್ದೋ ದರ್ಪವನ್ನು ಮೆರೆಸಲಿಕ್ಕಾಗಿ ಯೋಧರ ಮಾರಣಹೋಮ ನಡೆಯುತ್ತೆ. ಈ ಚಿತ್ರ, ರಷ್ಯಾ ಉಕ್ರೇನ್ ಅನ್ನು ಆಕ್ರಮಣ ಮಾಡಿದಾಗ, ರಷ್ಯಾದ ಸೈನಿಕನೊಬ್ಬ ತಮಸೋಮಾಮ್ ಜ್ಯೋತಿರ್ಗಮಯ ಅನ್ನುವ ಹಾಗೆ, ಈ ಚಿತ್ರ, ಒಂದು ಯುದ್ಧದ ಸಣ್ಣ ಸನ್ನಿವೇಶವನ್ನು ಎಷ್ಟು ಪರಿಣಾಮಕಾರಿ ಯಾಗಿ ತೋರಿಸಿದೆ ನೋಡಿ.

ನಿನಗೆ ನೀ ಬೆಳಕಾಗು

ಒಂದು ಸಲ ಬುದ್ಧ, ಒಂದು ಊರಿನ ಮೂಲಕ ಹಾದು ಹೋಗುತ್ತಿದ್ದರು. ರಸ್ತೆಯ ಬದಿಯಲ್ಲಿ ಒಂದು ಹಳೆಯ ಪೆಟ್ಟಿಗೆಯ ಮೇಲೆ ಒಬ್ಬ ಭಿಕ್ಷುಕ ಕುಳಿತು ಭಿಕ್ಷೆ ಬೇಡುತ್ತಿದ್ದ. ಆತ ಬುದ್ಧರ ಮುಂದೆ ಭಿಕ್ಷೆಗಾಗಿ ಕೈ ಚಾಚಿದ. ಅವನಿಗೆ ಭಿಕ್ಷೆ ನೀಡಲು ಬುದ್ಧರ ಬಳಿ ಏನೂ ಇರಲಿಲ್ಲ. ಆದರೆ ಅವರಿಗೆ ಭಿಕ್ಷುಕ ಕುಳಿತಿದ್ದ ಪೆಟ್ಟಿಗೆಯ ಬಗ್ಗೆ ಕುತೂಹಲ ಉಂಟಾಯಿತು. ಈ ಪೆಟ್ಟಿಗೆಯಲ್ಲಿ ಏನಿದೆ? ಎಂದು ಭಿಕ್ಷುಕನನ್ನು ಪ್ರಶ್ನಿಸಿದರು.

'ಆತ ಇದು ಬಹಳ ಹಳೇ ಕಾಲದ ಪೆಟ್ಟಿಗೆ, ಇದರಲ್ಲಿ ಏನಿರಲು ಸಾಧ್ಯ? ಕೂರಲು ಆರಾಮದಾಯಕವಾಗಿದೆ ಎಂದು ಅದನ್ನು ಇಂದಿನವರೆಗೂ ಇಟ್ಟುಕೊಂಡಿದ್ದೇನೆ' ಎಂದು ಉದಾಸೀನದಿಂದ ಉತ್ತರಿಸಿದ. 'ನೀನು ಎಷ್ಟು ಕಾಲದಿಂದ ಈ ಪೆಟ್ಟಿಗೆ ಮೇಲೆ, ಕುಳಿತು ಭಿಕ್ಷೆ ಬೇಡುತ್ತಿರುವೆ?' ಎಂದು ಬುದ್ಧ ಪ್ರಶ್ನಿಸಿದರು.

'ಸುಮಾರು ಮೂವತ್ತು ವರ್ಷಗಳಿಂದ ನಾನು ಇದರ ಮೇಲೇ ಕುಳಿತು ಭಿಕ್ಷೆ ಬೇಡುತ್ತಿದ್ದೇನೆ' ಎಂದ ಭಿಕ್ಷುಕ.

ಒಮ್ಮೆ ಅದರೊಳಗೆ ಏನಿದೆ ಎಂದು ಬೀಗ ಒಡೆದು ನೋಡು ಎಂದರು ಬುದ್ಧ. 'ಅಯ್ಯೋ ಬಿಡಿ, ಸ್ವಾಮಿ, ಅದರಲ್ಲೇನಿದ್ದೀತು?' ಎಂದು ನಿರ್ಲಕ್ಷದಿಂದ ಉತ್ತರ ಕೊಟ್ಟ ಆತ. 'ಹೇಗಾದರೂ ಆಗಲಿ, ಒಮ್ಮೆ ಅದನ್ನು ಒಡೆದು ನೋಡು' ಎಂದು ಬುದ್ಧ ಒತ್ತಾಯಿಸಿದರು.

ಅವರ ಒತ್ತಾಯದ ಮೇರೆಗೆ ಭಿಕ್ಷುಕ ಒಂದು ಕಲ್ಲಿನಿಂದ ಕುಟ್ಟಿ ತುಕ್ಕು ಹಿಡಿದಿದ್ದ ಪೆಟ್ಟಿಗೆಯ ಬೀಗವನ್ನು ಒಡೆದ.

ನೋಡಿದರೆ, ಪೆಟ್ಟಿಗೆಯ ತುಂಬಾ ಚಿನ್ನದ ನಾಣ್ಯಗಳು! ಅವನಿಗೆ ಆಶ್ಚರ್ಯವಾಯಿತು.ಆತ ಇಂಥಹಾ ಅಪಾರ ಸಂಪತ್ತಿನ ಮೇಲೇ ಕುಳಿತು ಮೂವತ್ತು ವರ್ಷಗಳಿಂದ, ದಟ್ಟ ದರಿದ್ರನಂತೆ, ಎಲ್ಲರ ಬಳಿ ಭಿಕ್ಷೆ ಬೇಡುತ್ತಿದ್ದಾನೆ!

ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

ನಮ್ಮ ಬದುಕು ಕೂಡಾ ಹೀಗೆ ಅಲ್ಲವೇ? ಎಲ್ಲವೂ ನಮ್ಮಲ್ಲೇ ಇದ್ದರೂ, ನಮ್ಮ ಒಳಗಿರುವ ಅಂತರಂಗದ ಐಶ್ವರ್ಯವನ್ನು ನಾವು ಕಣ್ಣು ತೆರೆದು ನೋಡುವುದೇ ಇಲ್ಲ, ಅದು ನಮ್ಮೊಳಗೇ ಇದ್ದರೂ ಅದನ್ನು ಗುರುತಿಸಿ ಪಡೆದುಕೊಳ್ಳಲು ಪ್ರಯತ್ನಿಸದೇ ಬಾಹ್ಯ ಸಂಪತ್ತನ್ನೇ ನಂಬಿ ಅದಕ್ಕಾಗಿ ಬಾಯಿ ಬಿಟ್ಟುಕೊಂಡು, ಎಲ್ಲರೂ ಭಿಕ್ಷುಕರಂತೆ ಕೈ ಚಾಚುತ್ತೇವೆ. ನಾವು ನಮ್ಮೊಳಗಿರುವ ಅಂತರಾಳದ ಅರಿವಿನ ಬೆಳಕನ್ನು ಹುಡುಕುವ ಪ್ರಯತ್ನವನ್ನೇ ಮಾಡುವುದಿಲ್ಲ. ನಮ್ಮನ್ನು ನಾವು ಕಂಡುಕೊಳ್ಳುವುದಿಲ್ಲ.

ಬುದ್ಧರ, ಕೊನೆಯ ಸಂದೇಶವೂ ಇದೇ ಆಗಿತ್ತು. ಅವರು ನಿರ್ವಾಣ ಸ್ಥಿತಿಯಲ್ಲಿದ್ದಾಗ ಅವರ ಶಿಷ್ಯ ಆನಂದ 'ಈ ಜಗತ್ತಿಗೆ ನಿಮ್ಮ ಕೊನೆಯ ಸಂದೇಶವೇನು?' ಎಂದು ಕೇಳಿದಾಗ ಬುದ್ಧರು ಹೇಳಿದ್ದು 'ನಿನಗೆ ನೀನು ಬೆಳಕಾಗು' ಎಂದು.

ನಮ್ಮ ಆಂತರಿಕ ಶಕ್ತಿಗಳ ಬಗ್ಗೆ, ಗುಣ ಅವಗುಣಗಳ ಬಗ್ಗೆ ನಮಗೇ ಅರಿವಿರುವುದಿಲ್ಲ. ಆದ್ದರಿಂದಲೇ ನಮ್ಮಿಂದ ಏನು ಮಾಡಲಾದೀತು ಎನ್ನುವ ಒಂದು ಉದಾಸೀನತೆ ಜೀವನದಲ್ಲಿ ಬಂದುಬಿಟ್ಟರೆ ಯಾವುದೇ ಮಹತ್ವದ ಕೆಲಸವನ್ನು ಮಾಡಲು ಸಾಧ್ಯವೇ ಆಗುವುದಿಲ್ಲ. ಅದರ ಬದಲಾಗಿ ನಮ್ಮಲ್ಲಿರುವ ಚಿಕ್ಕ ಚಿಕ್ಕ ಗುಣಗಳನ್ನು ಗುರುತಿಸುತ್ತಾ ಅವುಗಳನ್ನು ಮತ್ತಷ್ಟು ಒರೆಗೆ ಹಚ್ಚುತ್ತಾ, ಆತ್ಮವಿಶ್ವಾಸದಿಂದ ಮುಂದಡಿ ಇಟ್ಟಾಗ ಒಂದಲ್ಲ ಒಂದು ದಿನ ನಮ್ಮ ಗುರಿಯತ್ತ ಖಂಡಿತ ಸಾಗುತ್ತೇವೆ. ಹೊರಗೆ ಯಾರು ನಮ್ಮನ್ನು ಹೊಗಳಿ ನಮ್ಮ ಸಾಮರ್ಥ್ಯವನ್ನು ತಿಳಿಯಪಡಿಸುವುದಕ್ಕಿಂತ

ನಮಗೆ ನಮ್ಮ ಸಾಮರ್ಥ್ಯದ ಅರಿವಾದಾಗ ಭಯವೆನ್ನುವ ಶಬ್ದವೇ ನಮ್ಮ ಜೀವನದಲ್ಲಿ ಇರುವುದಿಲ್ಲ. ಯಾವುದಕ್ಕೂ ಹಿಂಜರಿಯದೆ ಮುನ್ನುಗುವ ಮನೋಭಾವ ನಮ್ಮಲ್ಲಿ ಬೆಳೆಯುತ್ತದೆ. ಅದನ್ನೇ ಬುದ್ಧ ಕೂಡ ಹೇಳಿದ್ದು ಬೆಳಕು ನಮ್ಮೊಳಗೆ ಇದೆ ಅದನ್ನು ನೋಡುವ ದೃಷ್ಟಿಯನ್ನು ನಾವು ಬೆಳೆಸಿಕೊಳ್ಳಬೇಕು ಅಷ್ಟೇ. ಇಂತಹ ಬೆಳಕಿನ ಅರಿವು ನಮಗಾದಾಗ, ಹೊರಗೆ ಎಷ್ಟೇ ಕತ್ತಲು ಇದ್ದರೂ ದಾರಿ ಕಂಡುಕೊಂಡು ಮುಂದೆ ಹೋಗುವ ಸಾಮರ್ಥ್ಯ ನಮ್ಮದಾಗುತ್ತದೆ.

ಇಂತಹ ಒಂದು ಪುಟ್ಟ ಆತ್ಮವಿಶ್ವಾಸದ ಬೆಳಕು ನಮ್ಮೆಲ್ಲರಲ್ಲೂ ಸದಾ ಬೆಳಗುತ್ತಿರಲಿ ಗೆಲ್ಲುವ ಆಶಯ ನನ್ನದು.

ಪ ದ ಬಂ ಧ



ಎಡದಿಂದ ಬಲಕ್ಕೆ:

1. ಹುಡುಕು ಅಥವಾ ತಡವರಿಸು (3)
3. ಸೂರ್ಯ ಮುಳುಗುವುದು (4)
4. ಒಳ್ಳೆಯ ಹತ್ತಿಯಿಂದ ಮಾಡಿದ ಮೆತ್ತನೆಯ ಹಾಸಿಗೆ (4)
6. ಅಸ್ತವ್ಯಸ್ತವಾಗಿ ಬಂದಿರುವ ಜೋಡಿ (3)
8. ಹೊಟ್ಟೆಯ ಸಹಾಯದಿಂದ ಸರಿದು ಹೋಗು (3)
10. ನೋವಿನಿಂದ ಹೇಳಿದ ಬೀಳ್ಕೊಡುಗೆ (3)
12. ಇಪ್ಪತ್ತನಾಲ್ಕು ನಿಮಿಷಗಳ ಅವಧಿಗೆ ಈ ಹೆಸರು (3)
13. ಹೆಂಗಳೆಯರಿಗೆ ಪ್ರಿಯವಾಗುವ ಆಭರಣ (3)
14. ವಿಜೇತರಾದವರಿಗೆ ಸಿಗುವ ಬಿಲ್ಲೆ (3)
16. ಮನುಷ್ಯನಿಗೆ ಮತ್ತೊಂದು ಹೆಸರು (3)
18. ನೈದಿಲೆಯ ಬಳ್ಳಿ (4)
19. ಪರಂಪರೆ ಅಥವಾ ಪದ್ಧತಿ (4)
20. ಅಧಿಕವಾದ ಅಥವಾ ಬಹಳವಾದ (3)

ಎಡದಿಂದ ಬಲಕ್ಕೆ:

1. ಮಗ ಅಥವಾ ಸುತ (3)
2. ಮೂರಕ್ಷರದ ಮತ್ತೊಂದು ಹೂವು (3)
3. ಇನ್ನೊಂದು ಪರಿಮಾಣ (3)
5. ಮಿತ್ರನಿಗೆ ಮತ್ತೊಂದು ಹೆಸರು (3)
7. ಬಾಳೆಗಿಡಗಳ ಕಾಡು? (5)
9. ಮನೆಯ ಹಜಾರ (3)
11. ಬಾಗಿಲಿನ ಚೌಕಟ್ಟು (3)
13. ಮನಸ್ತಾಪ ಅಥವಾ ಬಿರುಕು (3)
15. ಇದೊಂದು ಬಗೆಯ ಕರಿದ ಸಿಹಿಭಕ್ಷ್ಯ (3)
16. ಮಹಿಳೆಗೆ ಮತ್ತೊಂದು ಹೆಸರು (3)
17. ಋತುಗಳ ರಾಜ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಪಾಮರ 3. ಅಂಕಿತ 6. ವಿಧಾನ 7. ತುರಗ 9. ದಿವಾನಗಿರಿ 12. ಪರಿಭ್ರಮಣ 15. ದಡಾರ 16. ಮಾಳಿಗೆ 17. ನಿಶಿತ 18. ಚಂಪಕ

ಮೇಲಿನಿಂದ ಕೆಳಕ್ಕೆ: 2. ಮಹಾನದಿ 4. ತರಾತುರಿ 5. ಕುಲೀನ 6. ವಿತಂಡವಾದ 8. ಗವಸಣಿಗೆ 10. ವಾಧಿರಿ 11. ಗಿತಂಮ 12. ಪರದೇಶಿ 13. ಭ್ರಮರಿ 14. ಣಮಾರಿಪ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಏಳು ಬಣ್ಣಗಳ ಭೂಮಿ

ಮಾರಿಶಸ್‌ನಲ್ಲಿರುವ ಏಳು ಬಣ್ಣದ ಭೂಮಿಯು ನೈಸರ್ಗಿಕ ವಿದ್ಯಮಾನವಾಗಿದ್ದು, ಪ್ರಮುಖ ಪ್ರವಾಸಿ ಆಕರ್ಷಣೆಯಾಗಿದೆ. ಬಸಾಲ್ಟಿಕ್ ಲಾವಾಗಳೇ ಜೇಡಿ ಮಣ್ಣಿನ ಖನಿಜಗಳಾಗಿ ಇಲ್ಲಿನ ಬಣ್ಣಗಳು ವಿಕಸನಗೊಂಡಿವೆ. ಇದು ಮರಳು ದಿಬ್ಬಗಳಿಂದ ಕೂಡಿದ ಸಣ್ಣ ಪ್ರದೇಶವಾಗಿದ್ದು, ಏಳು ವಿಭಿನ್ನ ಬಣ್ಣಗಳ ಮರಳನ್ನು ಒಳಗೊಂಡಿದೆ. ಈ ಮರಳಿನ ದಿಬ್ಬಗಳು ಉಷ್ಣವಲಯದ ಹವಾಮಾನ ಪರಿಸ್ಥಿತಿಗಳಿಂದಾಗಿ ಉಂಟಾಗಿವೆ. ಸಿಲಿಕಾನ್ ಡೈಆಕ್ಸೈಡ್‌ನ ಅಂಶಗಳು ಮಣ್ಣಿನಿಂದ ತೊಳೆಯಲ್ಪಟ್ಟ ಬಳಿಕ ಉಳಿದ ಕಪ್ಪು ಕಬ್ಬಿಣದಿಂದ ಕೆಂಪು ಮತ್ತು ಅಲ್ಯೂಮಿನಿಯಂ ಆಕ್ಸೈಡ್‌ಗಳಿಂದಾಗಿ, ನೀಲಿ ಮತ್ತು ನೇರಳೆ ಬಣ್ಣಗಳು ಉಂಟಾಗಿ ಇಂತಹ ನೈಸರ್ಗಿಕ ಅದ್ಭುತ ಸೃಷ್ಟಿಯಾಗಿದೆ.

ಪುಸ್ತಕ ಲೋಕ

ಪೆರುವಿನ ಪವಿತ್ರ ಕಣಿವೆಯಲ್ಲಿ



ಲೇಖಕಿ ನೇಮಿಚಂದ್ರ ಅವರ ಪೆರುವಿನ ಪವಿತ್ರ ಕಣಿವೆಗಳಲ್ಲಿ ಕೃತಿಯು ಅಮೇಜಾನ್ ನದಿಕಾಡುಗಳಲ್ಲಿ ಸುತ್ತಾಡಿಕೊಂಡು ಬಂದ ಅನುಭವ ನೀಡುತ್ತದೆ. ಪೆರುವಿನ ಚರಿತ್ರೆಯ ಪುಟಗಳು ಇದರಲ್ಲಿದೆ. ಇದು ಒಂದು ಪ್ರವಾಸ ಕಥನವಷ್ಟೇ ಅಲ್ಲ, ಪೆರುವಿನ ಚರಿತ್ರೆಯ ಪುಟಗಳೇ ಇದರಲ್ಲಿದೆ. ಭಾರತ ಮತ್ತು ಪುರಾ ತನ ನಾಗರೀಕತೆಯ ಉಲ್ಲೇಖವನ್ನು ಲೇಖಕಿ ಮಾಡಿದ್ದಾರೆ. ಪ್ರತಿ ಪುಟವೂ ಎಲ್ಲೂ ನಿಲ್ಲಿಸದೆ ಮುಂದಕ್ಕೆ ಓದಿಸಿಕೊಂಡು ಹೋಗುತ್ತದೆ. ಚರಿತ್ರೆಯ ಬಗ್ಗೆ ಒಳವುಳ್ಳವರಿಗೆ ಆಸಕ್ತಿ ಕೆರಳಿಸುವ ಪುಸ್ತಕ.

ಟ್ವೀಟ್‌ಮೆಂಟ್

ಇಶಿತಾ ಪಾಂಡೆ: ಗೊತ್ತಿರದ ಅಭಿಪ್ರಾಯ; ಮಿಲ್ಲೇನಿಯಲ್ಸ್‌ಗಿಂತ ಜಾಸ್ತಿ. ಇಂದಿನ ಜೆನ್ ಝಿಗಳು ಧರ್ಮ ಮತ್ತು ಸಂಸ್ಕೃತಿಯಡೆಗೆ ಒಲವು ತೋರಿಸುತ್ತಿದ್ದಾರೆ.

ವಿಟಲೈಟ ವೈಟಲ್ ಹಬ್: ಜೈ ಶ್ರೀರಾಂ ಅನ್ನುವುದು ಧರ್ಮಾಧರಿತವಲ್ಲ!

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಕೆಳಗಿನವರಲ್ಲಿ ಸೈಟೋಪ್ಲಾಸಂ ಅನ್ನು ಕಂಡುಹಿಡಿದವರು ಯಾರು?

- ಎ. ಕ್ರಿಶ್ಚಿಯನ್ ಡಿ ಡುವೆ.
- ಬಿ. ರುಡಾಲ್ಫ್ ವಾನ್ ಕೊಲ್ಲಿಕರ್.
- ಸಿ. ಲಿವನ್ ಹುಕ್.
- ಡಿ. ಯಾರೂ ಅಲ್ಲ.

ಉತ್ತರ: ಬಿ. ರುಡಾಲ್ಫ್ ವಾನ್ ಕೊಲ್ಲಿಕರ್.

ಮಾಹಿತಿ

ಈ ಪದವನ್ನು 1863 ರಲ್ಲಿ ರುಡಾಲ್ಫ್ ವಾನ್ ಕೊಲ್ಲಿಕರ್ ಪರಿಚಯಿಸಿದರು. ಇದು ಮೂಲತಃ ಪ್ರೋಟೋಪ್ಲಾಸಂಗೆ ಸಮಾನಾರ್ಥಕವಾಗಿತ್ತು, ಆದರೆ ನಂತರ ನ್ಯೂಕ್ಲಿಯಸ್‌ನ ಹೊರಗಿನ ಜೀವಕೋಶದ ವಸ್ತು ಮತ್ತು ಅಂಗಗಳು ಎಂದು ಅರ್ಥೈಸಲಾಯಿತು.

ಭವ್ಯ ಭವಿಷ್ಯಕ್ಕೆ ಐದು ಮನಸ್ಸುಗಳು

ಡಾ.ಎನ್ ಜಯರಾಮ ಶೆಟ್ಟಿ

ಮಹಾನ್ ಭೌತ ವಿಜ್ಞಾನಿ ಐನ್‌ಸ್ಟೀನ್ ಒಮ್ಮೆ ಹೇಳಿದ್ದರು, 'ದೇವರೇ ಮನಸ್ಸು, ಮನಸ್ಸು ಸರ್ವವ್ಯಾಪಿ, ಆದುದರಿಂದ ಎಲ್ಲವೂ ಮನಸ್ಸು'. ಮನಸ್ಸು ನಮ್ಮ ಬದುಕಿನ ರೂವಾರಿ ಮತ್ತು ನಮ್ಮೆಲ್ಲ ಚಟುವಟಿಕೆಗಳನ್ನು ಮೌನದಿಂದ ಗಮನಿಸುವ 'ಚಿತ್ರಗುಪ್ತ' ಎಂದರೂ ಉತ್ಪ್ರೇಕ್ಷೆಯಿಲ್ಲ. ಇಂದು ವಿಜ್ಞಾನ, ಭೌತವಿಜ್ಞಾನ, ತತ್ವಶಾಸ್ತ್ರ, ಮತ್ತು ಮನೋವಿಜ್ಞಾನ ಸಮನಾಗಿ ನಮ್ಮ ಮನಸ್ಸನ್ನು ನಮ್ಮ ಬದುಕು ಮತ್ತು ಬೆಳವಣಿಗೆಯ ಕೇಂದ್ರ ಬಿಂದುವನ್ನಾಗಿಸಿವೆ. ಮನಸ್ಸಿನ ಕುರಿತು ಸಂಶೋಧನಾತ್ಮಕ ಬರಹಗಳು, ಪ್ರಾತ್ಯಕ್ಷಿಕೆಗಳು ಮತ್ತು ಥಿಯರಿಗಳು ಬರುತ್ತಲೇ ಇವೆ. ಅವುಗಳ ಪೈಕಿ, ಹೋವರ್ಡ್ ಗಾರ್ಡನರ್‌ರವರ ಮಲ್ಟಿಪಲ್ ಇಂಟೆಲ್ಲಿಜೆನ್ಸ್ ಥಿಯರಿ ಬಹು ಮುಖ್ಯವಾದುದು. ಇದರ ಮುಂದುವರೆದ ಭಾಗವಾಗಿ, ಅವರ 'ಫೈವ್ ಮೈಂಡ್ಸ್ ಟು ಫ್ಯೂಚರ್' ಎನ್ನುವ ಕೃತಿ ನಮ್ಮ ಭವಿಷ್ಯ ರೂಪಣೆಯಲ್ಲಿ ಈ ಕೆಳಗಿನ ಐದು ಮನಸ್ಸುಗಳ ಕುರಿತಾಗಿ ಬೆಳಕು ಬೀರುತ್ತದೆ.



ಶಿಸ್ತಿನ ಮನಸ್ಸು: ಶಿಸ್ತು ಮತ್ತು ಅಚ್ಚುಕಟ್ಟುತನ ಸಾಧನೆಯಲ್ಲಿ ಕಂಗೊಳಿಸಬೇಕು. ಕೇವಲ ನೌಕರಿ ಗಿಟ್ಟಿಸಿಕೊಳ್ಳುವುದೊ, ಉದ್ಯೋಗದಲ್ಲಿ ಕಳಂಕರಹಿತ ಸೇವೆ ಸಲ್ಲಿಸಿ ಬಡ್ತಿ ಹೊಂದುವುದೊ ಇಷ್ಟಕ್ಕೆ ನಾವು ಸೀಮಿತಗೊಳ್ಳಬಾರದು. ಕಲಿತ ವಿದ್ಯೆ ಮತ್ತು ಗಳಿಸಿದ ಪದವಿಯನ್ನು ಜೀವನ ಪರ್ಯಂತ ಸಾಧನೆಗೆ ಜೋಡಿಸಿ ತನ್ಮೂಲಕ ಅದರ ಘಮಲನ್ನು ಸರ್ವವ್ಯಾಪಿ ಹರಡಬೇಕು. ಓದಿದ ಪುಸ್ತಕಗಳನ್ನು ಅಟ್ಟಕ್ಕೇರಿಸುವುದೊ, ರದ್ದಿ ವ್ಯಾಪಾರಿಗೆ ಮಾರುವುದೊ ಸಲ್ಲ. ಕನಿಷ್ಠ ಮೂರು ವಿಭಾಗಗಳಲ್ಲಿ ಅತೀವ ಆಸಕ್ತಿಯಿಂದ ಅಧ್ಯಯನ ನಡೆಸಿ, ಮುಂದುವರಿಯಬೇಕಂತೆ. ಆರಂಭಿಕ ಹಂತದಲ್ಲಿ ಒಂದು ಕ್ಷೇತ್ರದಲ್ಲಾದರೂ ಅಂತಹ ಪರಿಣತಿ ಸಂಪಾದಿಸುವುದು ಶಿಸ್ತಿನ ಮನಸ್ಸಿನ ಭಾಗವಾಗಬೇಕು. ಆಧಿಕಸ್ಯ ಅಧಿಕಂ ಫಲಂ ಎನ್ನುವಂತೆ ನಮ್ಮ ಹೆಚ್ಚಿನ ಪ್ರಯತ್ನದಿಂದಲೇ ಹೆಚ್ಚಿನ ಫಲ ಸಿಗುವಂತಾದ್ದು. ಕಾಲೇಜು, ವಿಶ್ವವಿದ್ಯಾಲಯ ಮಟ್ಟದ ಶಿಕ್ಷಣ ಪಡೆದವರು, ಡಿಗ್ರಿ ಮತ್ತು ನೌಕರಿ ಸಿಗುತ್ತಲೇ ಜ್ಞಾನಾರ್ಜನೆಗೆ ತಿಲಾಂಜಲಿ ನೀಡಿದರೆ ಏನು ಸಾಧಿಸಿದಂತಾಯಿತು? ವಿದ್ಯಾವಂತರು ಕೇವಲ ಉದ್ಯೋಗಿಗಳೊ, ಉದ್ಯಮಿಗಳೋ ಆದರಷ್ಟೇ ಸಾಲದು. ಅವರು ತಮ್ಮ ವಿದ್ಯಾಲಾಭವನ್ನು ಸಮಾಜಕ್ಕೆ ಹಂಚಬೇಕು, ಸೇವಾ ರೂಪಕ್ಕೆ ಮಾರ್ಪಡಿಸಿಕೊಳ್ಳಬೇಕು.



ಸಮನ್ವಯಾತ್ಮಕ ಮನಸ್ಸು: ವರ್ಷಗಟ್ಟಳೆ ಓದಿದ ವಿದ್ಯೆಯನ್ನು ಒಂದು ಮಾಡೆಲ್ ರೂಪಕ್ಕೆ ತಂದು ಅದನ್ನು ಕಾರ್ಯರಂಗಕ್ಕೆ ತರಬೇಕು. ಎಂಜಿನಿಯರ್ ಒಬ್ಬ ನಾಲ್ಕು ವರ್ಷ ಕಠಿಣ ಶ್ರಮವಹಿಸಿ ಅಧ್ಯಯನ ಮುಗಿಸುತ್ತಾನೆನ್ನಿ. ಆ ಅವಕಾಶ ಬೇರೆ ಸಾವಿರಾರು ಮಂದಿಗೆ ಇರುವುದಿಲ್ಲ. ಅಂತಹವರಿಗೆ ತಾನು ಏನು ಕೊಡುಗೆ ನೀಡಬಹುದು, ತಾನು ಪಡೆದ ಜ್ಞಾನವನ್ನು ಹೇಗೆ ತಳಹಂತಕ್ಕೆ ತಲುಪಿಸಬಹುದು ಈ ಕುರಿತು ಯೋಚಿಸಿ, ಯೋಜಿಸಿ, ಅನುಷ್ಠಾನಕ್ಕೆ ತರುವುದರಲ್ಲಿ ಸಹಕರಿಸುವ ಮನಸ್ಸೇ ಸಮನ್ವಯಾತ್ಮಕ ಮನಸ್ಸು. ಇತ್ತೀಚೆಗಿನ ಕೇರಳದ ಗುಡ್ಡಕುಸಿತ ಮತ್ತು ತತ್ಪರಿಣಾಮ ಆದಂತಹ ಭೀಕರ ಪ್ರಾಣಹಾನಿ, ಆಸ್ತಿನಷ್ಟ ತಾವು ತಿಳಿದಿದ್ದೀರಿ. ರಕ್ಷಣಾ ಪಡೆ ಒಂದೇ ದಿನದಲ್ಲಿ ಕಟ್ಟಿದ ತಾತ್ಕಾಲಿಕ ಸೇತುವೆ ಅವರ ಎಂಜಿನಿಯರ್‌ರ ಮಹತ್ ಸಾಧನೆಯಲ್ಲವೆ? ಅದೆಷ್ಟೋ ಪರಿಣತರ ವಿದ್ಯೆ, ಬುದ್ಧಿ, ಸಾಹಸಕ್ಕೆ ಅದು ಸಾಕ್ಷಿಯಲ್ಲವೆ? ಎಲ್ಲಿ ಸಮಯನ್ವಾತ್ಮಕ ಮನಸ್ಸು ಮತ್ತು ಪ್ರಜ್ಞೆ ಸಾಮೂಹಿಕ ಜವಾಬ್ದಾರಿಯಾಗಿ ಕಾಣಿಸಿಕೊಳ್ಳುತ್ತೊ ಅಲ್ಲಿ ಪವಾಡ ರೂಪದಲ್ಲಿ ಮನಸ್ಸುಗಳು ಕೆಲಸ ನಿರ್ವಹಿಸಬಹುದು ನೋಡಿ. ಇಂತಹ ಘನಕಾರ್ಯಗಳು ಆಪತ್ತಿನ ಸಂದರ್ಭಗಳಲ್ಲಿ ಮಾತ್ರ ಕಾಣಿಸಿಕೊಳ್ಳಬೇಕೆ? ಬೇರೆ ಸಮಯದಲ್ಲಿ ಸಾಮೂಹಿಕ ಸಾಧನೆ ಹಿಂದೇಟು ಹಾಕುವುದೇಕೆ?

ಸೃಜನಾತ್ಮಕ ಮನಸ್ಸು: ಇಷ್ಟೊಂದು ಬೆಳೆದ, ಬದಲಾದ ಪ್ರಪಂಚ ಮನುಕುಲದ ಅದ್ಭುತ ಸೃಜನಾತ್ಮಕತೆಯ ಫಲಶ್ರುತಿಯಲ್ಲವೆ? ಮೂಲತಃ ನಮ್ಮ ಮನಸ್ಸು ಕ್ರಿಯಾಶೀಲವಾದುದು. ನವೋನವಃ ಎನ್ನುವಂತೆ, ಏನಾದರೂ ಹೊಸತನವನ್ನು ಮನಸ್ಸು ಹೊಂದುತ್ತಲೇ ಇರುತ್ತದೆ. ಹೊಸ ಹೊಸಬನಾಗುವನು ಅನುಕ್ಷಣಂ ಮಾನವನು, ವಸುಧೆಯ ಮೂಸೆಯಲಿ ಪುಟಪಾಕವಂತು ಎನ್ನುವಂತೆ, ಬದುಕು ನಮ್ಮನ್ನು ಅಣಿಗೊಳಿಸುತ್ತಿರುವುದು. ಕರ್ಮಭೂಮಿ ನಮ್ಮನ್ನು ಕೆಲವೊಮ್ಮೆ ಸೋಲಿಸಬಹುದು, ಸವೆಯಿಸಬಹುದು ಆದರೆ ಸಾಯಿಸಲಿಕ್ಕಿಲ್ಲ! ಶಕ್ತಿ, ಯುಕ್ತಿ, ಭಕ್ತಿ ಮತ್ತು ಸೃಜನಶೀಲತೆ ಈ ನಾಲ್ಕರ ಸಮ್ಮಿಶ್ರಣದ ಮನಸ್ಸು ನಮ್ಮನ್ನು ಗೆಲ್ಲಿಸಲೇಬೇಕಲ್ಲ? ಸೃಜನ ಶೀಲತೆಯಲ್ಲಿ ಈ ಐದಂಶ ಇರಲೇಬೇಕು. ಅವು ಯಾವುವು ಎಂದರೆ, ವಿಪತ್ ನಿರ್ವಹಣೆ, ಸಮಸ್ಯೆಗಳನ್ನು ಪರಿಹರಿಸುವುದು, ಭಿನ್ನವಾಗಿ ಯೋಚಿಸುವುದು, ಕುತೂಹಲದ ಕಣ್ಣುಗಳಿಂದ ಹೊರಪ್ರಪಂಚವನ್ನು ನೋಡುವುದು ಮತ್ತು ನಿರಂತರತೆ ಉಳಿಸಿಕೊಂಡು ಮುಂದೆ ಸಾಗುವುದು.

ಪರರ ಗೌರವಿಸುವ ಮನಸ್ಸು: ನಾವು ನಮ್ಮ ಜೀವನ ಮತ್ತು ಚೇತನವನ್ನು ಪ್ರಥಮತಃ ಜಾಗೃತಗೊಳಿಸಿಕೊಂಡಾಗ, ಪರರ ಬಗ್ಗೆ ಎಚ್ಚರ, ಕಾಳಜಿ ತನ್ನಿಂತಾನೆ ಮೂಡುವುದು. ಕೊಂಡು ಕೊಳುವ ವ್ಯವಹಾರದ ರೂಪದಲ್ಲೆ ಬದುಕು ಇರುವುದು. ನಮ್ಮ ಮನಸ್ಸು, ಮಾತು ಮತ್ತು ಕೃತಿಯಲ್ಲಿ ನಾವು ಇನ್ನೊಬ್ಬರ ಪರವಾಗಿ ಕಾಣಿಸಿಕೊಂಡಾಗ, ನಾವೆಂದೂ ಒಬ್ಬಂಟಿಯಲ್ಲ. ಬದುಕಿನ ಐದು ವಲಯಗಳಲ್ಲಿ ಪರಸ್ಪರತೆ, ಪರಹಿತಚಿಂತನೆ ಎದ್ದು ಕಾಣಬೇಕು. ಅವು ಯಾವುವು ಎಂದರೆ ವೈಯಕ್ತಿಕ, ಕೌಟುಂಬಿಕ, ಔದ್ಯೋಗಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ.

ನೈತಿಕ ಮನಸ್ಸು: ನೀತಿಯ ನೆಲೆಗಟ್ಟು ಭದ್ರವಾಗಿದ್ದಷ್ಟು ಬದುಕಿನ ಹಂದರ ಸುಂದರವಾಗಿರುವುದು. ಈ ಕೆಳಗಿನ ಆಯಾಮಗಳಲ್ಲಿ ನಮ್ಮ ನೀತಿ ಮಾದರಿಯಾಗಿ ಕಾಣಿಸಿಕೊಳ್ಳಬೇಕು.

- ನಮ್ಮ ಕೆಲಸ ವಿಧಾನಗಳಲ್ಲಿ ಮತ್ತು ನಿರ್ಧಾರ ಕ್ರಮಗಳಲ್ಲಿ ಜವಾಬ್ದಾರಿ ನಿಭಾಯಿಸುವಾಗ ನಾವು ತೋರುವ ಸಿದ್ಧತೆ, ಬದ್ಧತೆ, ಶುದ್ಧತೆ ಮತು ನಿಗ್ರಹತೆ.
- ಒಟ್ಟಾರೆ ವ್ಯವಸ್ಥೆಗೆ ನಮ್ಮ ಕೊಡುಗೆ, ಸಾಮಾಜಿಕ ಸೇವೆಗಳಲ್ಲಿ ಭಾಗವಹಿಸುವಿಕೆ.
- ಹಣಕಾಸಿನ ವ್ಯವಹಾರಗಳಲ್ಲಿ, ಲೆಕ್ಕಪತ್ರ ನಿಭಾವಣೆಯಲ್ಲಿ ಪಾರದರ್ಶಕತೆ.
- ವೃತ್ತಿ (ಪ್ರೊಫೆಷನ್) ಯಲ್ಲಿ ತೋರುವ ನಿಸ್ಪೃಹತೆ, ಗೌಪ್ಯತೆ ಮತ್ತು ತತ್ಪರತೆ.

ತನಗಗಳು

ಸೂರ್ಯ ಹುಟ್ಟಿದನೆಂದು
ಬಿತ್ತರಿಸೋ ಭಜನ।
ಚಿಲಿಪಿಲಿ ಹಾಡುತ್ತ
ಪಕ್ಷಿ ಸಂಕುಲ ಗಾನ।।

ತಿಂಗಳನು ನಕ್ಕಾಗ
ಬೆಳದಿಂಗಳ ಬಾಲೆ।
ಬ್ರಹ್ಮ ಕಮಲ ಸಹ
ಅರಳಿದ್ದು ಸಂಮೋಹ।।

ಬಿದಿಗೆ ಚಂದ್ರಂಜೊತೆ
ಹಸನ್ಮುಖದ ಮಗು।
ಸ್ಪರ್ಧೆಗೆ ಇಳಿಯಲು
ಗೆಲ್ಲೋದು ಯಾರ ನಗು।।

ಹಸಿರೆಲೆಯ ಮೇಲೆ
ಇಬ್ಬನಿ ಹನಿಗಳು।
ರಶ್ಮಿಯ ಕೈಚಳಕ
ಮುತ್ತಂತೆ ಕಾಣುವುವು।।

ಹಸಿರುಟ್ಟ ಭುವಿಗೆ
ಅಣಬೆ ಸಾಲುಗಳು।
ಮುತ್ತಿನ ಸರ, ಮತ್ತು
ನತ್ತು, ಬೆಂಡೋಲೆಗಳು।।

ರೆಂಬೆ ಕೊಂಬೆಗಳಿಗೆ
ಮೇಲೆಳೆಯ ಚಿಗುರು।
ಸಲಹುವದೆಲ್ಲವ
ಪ್ರೀತಿಯ ತಾಯಿ ಬೇರು।।

● ವ್ಯಾಸ ಜೋಶಿ

ನೀರಜ್ ಚೋಪ್ರಾ ಒಬ್ಬ ಅದ್ಭುತ ವ್ಯಕ್ತಿ! ಅವರು ಮತ್ತೊಮ್ಮೆ ಪದಕ ಗೆದ್ದಿದ್ದು ಭಾರತ ಸಂಭ್ರಮ ಪಡುವಂತೆ ಮಾಡಿದೆ. ಬೆಳ್ಳಿ ಗೆದ್ದಿರುವ ಅವರಿಗೆ ಅಭಿನಂದನೆಗಳು. ಅವರು ತಮ್ಮ ಕನಸುಗಳನ್ನು ಮುಂದುವರಿಸಲು ಮತ್ತು ನಮ್ಮ ರಾಷ್ಟ್ರವನ್ನು ಹೆಮ್ಮೆಪಡುವಂತೆ ಮಾಡಲಿ. - ಮೋದಿ, ಪ್ರಧಾನಿ

ಪದಕ ಪಟ್ಟಿ

	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಭಾರತ	0	1	4	5
ಚೀನಾ	32	25	20	77
ಅಮೆರಿಕ	30	38	36	104
ಆಸ್ಟ್ರೇಲಿಯಾ	18	15	14	47
ಫ್ರಾನ್ಸ್	14	19	22	55
ಗ್ರೇಟ್ ಬ್ರಿಟನ್	14	17	21	52
ಜಪಾನ್	13	8	13	34
ದಕ್ಷಿಣ ಕೊರಿಯಾ	13	8	7	28
ಜರ್ಮನಿ	11	9	7	27
ನೆದರ್ಲೆಂಡ್ಸ್	11	6	8	25

ಮೈಕ್ರೋ ಮಾಹಿತಿ

ಜಾವೆಲಿನ್

ಭಾರೀ ಪೈಪೋಟಿಯ ಆಟ ಇದಾಗಿದ್ದು, ಅನೇಕ ಆಟಗಾರರು ವಿಶ್ವದಾಖಲೆ ಮಾಡಿದ್ದಾರೆ.

1996
ಜೆಕ್‌ಗಣರಾಜ್ಯ
ಜ್ಯಾನ್ ಜೆಲ್ಜಿ
98.48 ಮೀಟರ್ ದೂರ ಜಾವೆಲಿನ್ ಎಸದಿದ್ದರು.
(ಈ ವರೆಗಿನ ವಿಶ್ವದಾಖಲೆ)

2008
ಮಹಿಳಾ ವಿಭಾಗ
ಜೆಕ್ ದೇಶದ ಬಾರ್ಬೋರಾ ಸ್ಪೋಟಾಕೊವಾ
72.28 ಮೀಟರ್‌ದೂರ ಜಾವೆಲಿನ್ ಎಸದಿದ್ದರು.

ಶುಭ ಶುಕ್ರವಾರ
ಜಾವೆಲಿನ್ ಥ್ರೋ ಫೈನಲ್
ಪಾಕಿಸ್ತಾನದ **ಅರ್ಷದ್ ನದೀಮ್**
92.97 ಮೀಟರ್ ದೂರ ಜಾವೆಲಿನ್ ಎಸೆಯುವ ಮೂಲಕ ಒಲಿಂಪಿಕ್ಸ್ ದಾಖಲೆ.
ಒಲಿಂಪಿಕ್ಸ್ ಇತಿಹಾಸದ ಗರಿಷ್ಠ ಥ್ರೋ



2004
ಒಲಿಂಪಿಕ್ಸ್
ಮಹಿಳಾ ವಿಭಾಗ
ಕ್ಯೂಬಾದ ಒಲ್ಸೆಡಿಸ್
71.53 ಮೀಟರ್ ದೂರ
ಗರಿಷ್ಠ ಥ್ರೋ

ಬೆಳ್ಳಿಯಲ್ಲೂ ಮಿಂಚಿದ ಚಿನ್ನದ ಹುಡುಗ

ಭಾರತಕ್ಕೆ ಐದನೇ ಪದಕ

ಜಾವೆಲಿನ್ ಥ್ರೋನಲ್ಲಿ ನೀರಜ್ ಚೋಪ್ರಾಗೆ 2ನೇ ಸ್ಥಾನ | ಇತಿಹಾಸ ಬರೆದ ಪಾಕ್‌ನ ನದೀಮ್

ಪ್ಯಾರಿಸ್: ಕಳೆದ ಬಾರಿ ಚಿನ್ನ ಗೆದ್ದು ಮಿಂಚಿದ್ದ ನೀರಜ್ ಚೋಪ್ರಾ ಈ ಬಾರಿ ರಜತ ಪದಕಕ್ಕೆ ರಾಜಿಯಾಗಿದ್ದಾರೆ. ಇತ್ತೀಚಿನ ಟೂರ್ನಿಗಳಲ್ಲಿ ಚಿನ್ನಗೆಲ್ಲುವ ಮೂಲಕ ಎಲ್ಲರೂ ಸೋಲುಂಡರೂ ಭಾರತದ ಏಕೈಕ ಭರವಸೆಯಾಗಿ ಉಳಿದಿದ್ದ ನೀರಜ್ ಈ ಬಾರಿ ಬೆಳ್ಳಿ ಪದಕಕ್ಕೆ ಮುತ್ತಿಟ್ಟಿದ್ದು, ಜಾವೆಲಿನ್ ಎಸೆತದಲ್ಲಿ ತಮ್ಮ ಬಂಗಾರದ ಪದಕವನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಅವರ ಪ್ರತಿಸ್ಪರ್ಧಿ ಹಾಗೂ ನೆರೆಯ ಪಾಕಿಸ್ತಾನದ ಅರ್ಷದ್ ನದೀಮ್ ಒಲಿಂಪಿಕ್ಸ್ ದಾಖಲೆಯ 92.97 ಮೀಟರ್ ಎಸೆಯುವ ಮೂಲಕ ಬಂಗಾರ ಗೆದ್ದರು. ಹೀಗಾಗಿ ನೀರಜ್ ಚೋಪ್ರಾ ಅವರಿಗೆ ಬೆಳ್ಳಿಯ ಪದಕ ಲಭಿಸಿತು. ಅವರು 89.45 ದೂರ ಎಸೆದಿದ್ದು, ಭಾರತಕ್ಕೊಂದು ಪದಕವನ್ನು ತಂದುಕೊಟ್ಟರು. ಇದು ಭಾರತದ ಪಾಲಿಗೆ ಹಾಲಿ ಆವೃತ್ತಿಯ ಒಲಿಂಪಿಕ್ಸ್‌ನಲ್ಲಿ ಐದನೇ ಪದಕವಾಗಿದೆ. ನೀರಜ್ ತಂದ ಬೆಳ್ಳಿಯೇ ಅದರಲ್ಲಿ ಗರಿಷ್ಠ ಪದಕವಾಗಿದೆ. ಆದಾಗ್ಯೂ ನೀರಜ್ ಚಿನ್ನ ಗೆಲ್ಲುತ್ತಾರೆಂಬ ಭಾರತದ ಕೋಟ್ಯಂತರ ಕ್ರೀಡಾಭಿಮಾನಿಗಳ ನಿರೀಕ್ಷೆ ಹುಸಿಯಾಯಿತು.

ನೀರಸ ಆರಂಭ

ಜಾವೆಲಿನ್ ಥ್ರೋನ ಫೈನಲ್‌ನಲ್ಲಿ 6 ಸುತ್ತುಗಳಿರುತ್ತವೆ. ಒಟ್ಟು 12 ಫೈನಲಿಸ್ಟ್‌ಗಳ ಪೈಕಿ ಮೊದಲ ಮೂರು ಸುತ್ತಿನ ನಂತರ ಕೇವಲ ಅಗ್ರ ಎಂಟು ಜನರು 4,5 ಮತ್ತು ಆರನೇ ಸುತ್ತಿನಲ್ಲಿ ಭಾಗವಹಿಸುತ್ತಾರೆ. ನೀರಜ್ ಚೋಪ್ರಾ ಅವರ ಮೊದಲ ಎಸೆತವೇ ಪೌಲ್‌ನೊಂದಿಗೆ ನಿರಾಸೆಯ ಆರಂಭವಾಯಿತು. ನಂತರದ ಎಸೆತದಲ್ಲಿ 89.45 ಮೀಟರ್ ದೂರ ಎಸೆದರು.

> **ಚೋಪ್ರಾ ದಾಖಲೆ**
> ನೀರಜ್ ಈಗಾಗಲೇ ತಮ್ಮ ವೃತ್ತಿಜೀವನದಲ್ಲಿ ಎರಡು ಬಾರಿ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ. ಅಲ್ಲದೆ ಒಲಿಂಪಿಕ್ಸ್‌ನಲ್ಲಿ ಅಭಿನವವ ಬಿಂದ್ರಾ ಅವರ ನಂತರ ಭಾರತಕ್ಕೆ ಚಿನ್ನ ಗೆದ್ದ ಏಕೈಕ ಆಟಗಾರ ಎನ್ನಿಸಿದ್ದರು. ಇದೀಗ ಅವರು ಮತ್ತೊಂದು ಸಾಧನೆ ಮಾಡಿದ್ದು, ಫೀಲ್ಡ್ ಅಥ್ಲೆಟಿಕ್ಸ್‌ನಲ್ಲಿ ಸತತ ಎರಡನೇ ಪದಕ ಗೆದ್ದ ಏಕೈಕ ಪುರುಷ ಎನ್ನಿಸಿದ್ದಾರೆ. ಅಲ್ಲದೆ, ಸ್ವಾತಂತ್ರ್ಯ ನಂತರ ಎರಡು ಪದಕ ಗೆದ್ದ ನಾಲ್ಕನೇ ಆಟಗಾರರಾಗಿದ್ದಾರೆ.

ಅಲ್ಲದೆ ಆ ಬಳಿಕದ ನಾಲ್ಕು ಎಸೆತಗಳು ಪೌಲ್ ಆದವು. ತಮ್ಮ ಎಸೆತಗಳು ನಿರೀಕ್ಷೆಯಷ್ಟು ದೂರ ಹೋಗದ ಕಾರಣ ನಂತರದ ಮೂರು ಬಾರಿ ಅವರು ಅಂತಿಮ ಲೈನ್ ಮೆಟ್ಟಿ ಸ್ವತಃ ಪೌಲ್ ಮಾಡಿದರು. ಅರ್ಷದ್ 92. ಮೀಟರ್ ಗಿಂತಲೂ ದೂರ ಎಸೆದ ತಕ್ಷಣವೇ ಒತ್ತಡಕ್ಕೆ ಬಿದ್ದ ನೀರಜ್‌ಗೆ ಚೇತರಿಸಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಆದರೆ, ಅರ್ಷದ್ ತಮ್ಮ ಕೊನೇ ಎಸೆತವನ್ನೂ 91. 79 ಮೀಟರ್ ದೂರ ಎಸೆದರು. ಇದರೊಂದಿಗೆ ಪಾಕಿಸ್ತಾನಕ್ಕೆ 32 ವರ್ಷಗಳ ಬಳಿಕ ಪದಕ ದೊರೆತಿದ್ದು, ಅದು ಚಿನ್ನದ ಪದಕವಾಗಿದೆ. ಗುರುವಾರ ಮಧ್ಯ ರಾತ್ರಿ ನಡೆದ ಫೈನಲ್‌ನಲ್ಲಿ 12 ಸ್ಪರ್ಧಿಗಳ ಜತೆ ಹೋರಾಡಿ ನೀರಜ್ ಚೋಪ್ರಾ, ರಜತ ಪದಕ ಗೆದ್ದರು. ಭಾರತದ ಉಳಿದ ಅಥ್ಲೆಟಿಕ್ಸ್‌ಗಳ ನಿರಾಶಾದಾಯಕ ಅಭಿಯಾನದ ವೇಳೆ ನೀರಜ್ ಏಕೈಕ ಭರವಸೆಯಾಗಿ ಉಳಿದಿದ್ದರು.

ಸಂಘರ್ಷ ಮಾಡಿ ಗೆದ್ದ ನದೀಮ್

ಜಾವೆಲಿನ್ ಖರೀದಿಸಲು ಹಣವಿಲ್ಲದೆ ಪರದಾಟ ನಡೆಸಿದ್ದ ಪಕ್ಕದ ರಾಷ್ಟ್ರ ಪಾಕ್‌ನ ಅರ್ಷದ್ ನದೀಮ್ ಇದೀಗ ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದ್ದಾರೆ. ಪಾಕಿಸ್ತಾನದ ಪಂಜಾಬ್‌ನಲ್ಲಿರುವ ಮಿಯಾನ್ ಚಾನುವಿನಲ್ಲಿನ ಬಡ ಪಂಜಾಬಿ ಕುಟುಂಬದಲ್ಲಿ ಜನಿಸಿದ ಅರ್ಷದ್ ನದೀಮ್ ಅವರ ತಂದೆ ಮುಹಮ್ಮದ್ ಅಶ್ರಫ್ ಗಾರೆ ಮೇಸ್ತ್ರಿ ಆಗಿದ್ದ ಕಾರಣ, ಕುಟುಂಬಕ್ಕೆ ನೆರವಾಗುವ ನಿಟ್ಟಿನಲ್ಲಿ ಅರ್ಷದ್ ನದೀಮ್ ಕೂಡ ತಂದೆಯ ಜತೆ ಗಾರೆ ಕೆಲಸವನ್ನು ಮಾಡಿದ್ದರು. ಇದರ ಜತೆಗೆ ಕ್ರೀಡೆಯಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಅರ್ಷದ್ ನದೀಮ್, 7ನೇ ತರಗತಿಯಲ್ಲಿದ್ದ ಸಂದರ್ಭದಲ್ಲಿ ಅಥ್ಲೆಟಿಕ್ಸ್ ಕೋಚ್ ರಶೀದ್ ಅಹ್ಮದ್ ಸಾಕಿ ಅವರ ಕಣ್ಣಿಗೆ ಬಿದ್ದು ನಾನು ಅಂತಿವಾಗಿ ಜಾವೆಲಿನ್ ಎಸೆತವನ್ನು ಆಯ್ಕೆ ಮಾಡಿಕೊಂಡೆ ಎಂದು ನದೀಮ್ ಚಿನ್ನದ ಪದಕ ಗೆದ್ದ ಬಳಿಕ ಹೇಳಿಕೊಂಡಿದ್ದಾರೆ. ಒಂದು ಕಾಲದಲ್ಲಿ ಅವರು ಜಾವೆಲಿನ್ ಖರೀದಿ ಮಾಡಲೂ ಕೂಡ ಆರ್ಥಿಕ ಸಂಕಷ್ಟ ಎದುರಿಸಿದ್ದರು. ಜತೆಗೆ ತರಬೇತುದಾರರು ಕೂಡ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಅರ್ಷದ್ ನೆರವಿಗೆ ಬಂದದ್ದು ಅವರ ಊರಿನ ಗ್ರಾಮಸ್ಥರು. ತಾವು ಕೂಡಿಟ್ಟ ಹಣದಲ್ಲಿ ಅರ್ಷದ್‌ಗೆ ಜಾವೆಲಿನ್ ಖರೀದಿಸಲು ಹಣದ ನೆರವು ನೀಡಿದ್ದರು ಎನ್ನಲಾಗಿದೆ.

> ತುಂಬಾ ಸಮಯದಿಂದ ಗಾಯದ ಭೀತಿ ಕಾಡುತ್ತಿದೆ. ಎಲ್ಲ ಸ್ಪರ್ಧೆಯಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ತಪ್ಪುಗಳನ್ನು ಸರಿಪಡಿಸುವುದರತ್ತ ಗಮನ ಹರಿಸಲಿದ್ದೇನೆ. ದೇಶಕ್ಕಾಗಿ ಪದಕ ಗೆಲ್ಲಲು ಸಾಧ್ಯವಾಗಿರು ವುದು ತುಂಬಾ ಸಂತಸವಾಗು ತ್ತಿದೆ. ಚಿನ್ನ ಗೆದ್ದು ರಾಷ್ಟ್ರಗೀತೆ ಮೊಳಗಿಸಲು ಸಾಧ್ಯವಾಗದೇ ಇರಬಹುದು. ಆದರೂ ದೇಶಕ್ಕಾಗಿ ಪದಕ ಗೆಲ್ಲಲು ಸಾಧ್ಯವಾಗಿರುವುದು ಹೆಮ್ಮೆಯ ವಿಷಯ.
> **ನೀರಜ ಚೋಪ್ರಾ,** ಬೆಳ್ಳಿ ವಿಜೇತ

> ನೀರಜ್ ಮತ್ತು ಅರ್ಷದ್ ಉತ್ತಮ ಸ್ನೇಹಿತರು. ಆದರೆ, ನನಗೆ ಇಬ್ರೂ ಕೂಡ ಮಕ್ಕಳಿದಂತೆ. ಯಾರೇ ಸಾಧನೆ ಮಾಡಿದರೂ ಕೂಡ ನನಗೆ ಸಂತಸವಾಗುತ್ತದೆ. ನೀರಜ್ ತುಂಬಾ ಒಳ್ಳೆಯ ವ್ಯಕ್ತಿಯಾಗಿದ್ದಾನೆ. ನೀರಜ್ ಇನ್ನೂ ದೊಡ್ಡ ಮಟ್ಟದಲ್ಲಿ ಸಾಧನೆ ಮಾಡುವ ಆಶೀರ್ವಾದ ದೇವರು ಅವರಿಗೆ ಕರುಣಿಸಲಿ.
> **-ಅರ್ಷದ್** ನದೀಮ್ ತಾಯಿ

> 5 ತಿಂಗಳ ಹಿಂದೆ ಜಾವೆಲಿನ್ ಖರೀದಿಸಲು ಹೆಣಗಾಡುತ್ತಿದ್ದ ವೇಳೆ ನೀರಜ್ ಅವರು ನನಗೆ ಬೆಂಬಲ ಸೂಚಿಸಿದ್ದರು. ಚಿನ್ನ ಗೆದ್ದಾಗಲೂ ಕೂಡ ಈ ಸಾಧನೆಗೆ ನನ್ನ ಗೆಳೆಯ ನೀರಜ್ ಅವರೇ ಸ್ಫೂರ್ತಿ.
> **-ಅರ್ಷದ್ ನದೀಮ್,** ಚಿನ್ನ ಗೆದ್ದ ಅಥ್ಲಿಟ್

> ಮಗನ ಸಾಧನೆ ಬಗ್ಗೆ ಅತೀವ ಸಂತಸವಿದೆ. ಆತ ಮನೆಗೆ ಮರಳಿದ ತಕ್ಷಣ ಪ್ರಿಯವಾದ ಅಡುಗೆ ಮಾಡಿ ಬಡಿಸಲು ಕಾಯುತ್ತಿದ್ದೇನೆ. ನದೀಮ್ ಚಿನ್ನ ಗೆದದ್ದು ಕೂಡ ನನಗೆ ಅಪಾರ ಸಂತಸವಿದೆ. ಆತ ಕೂಡಾ ನಮ್ಮ ಮಗ ಇದ್ದಂತೆ.
> **-ಸರೋಜ್ ದೇವಿ,** ನೀರಜ್ ತಾಯಿ

ಸಮಾಚಾರ ಸಣ್ಣದಲ್ಲ

ಸಮಾರೋಪಕ್ಕೆ ಮನು, ಶ್ರೀಜೇಶ್ ಧ್ವಜಧಾರಿ

ಪ್ಯಾರಿಸ್: ಕಂಚಿನ ಪದಕ ಗೆದ್ದ ಹಾಕಿ ತಂಡದ ಆಟಗಾರ ಪಿ.ಆರ್ ಶ್ರೀಜೇಶ್ ಮತ್ತು ಅವಳಿ ಕಂಚಿನ ಪದಕ ವಿಜೇತೆ ಶೂಟರ್ ಮನು ಭಾಕರ್ ಭಾರದ ಧ್ವಜಧಾರಿಗಳಾಗಿ ಆಯ್ಕೆಯಾಗಿದ್ದಾರೆ. ಸಮಾರೋಪ ಸಮಾರಂಭ ಭಾನುವಾರ ರಾತ್ರಿ ನಡೆಯಲಿದೆ. ಮಹಿಳಾ ಧ್ವಜಧಾರಿಯಾಗಿ ಮನು ಭಾಕರ್ ಅವರನ್ನು ಕಳೆದ ವಾರವೇ ಆಯ್ಕೆ ಮಾಡಲಾಗಿತ್ತು. ಆದರೆ, ಭಾರತದ ಪುರುಷ ಧ್ವಜಧಾರಿ ಕ್ರೀಡಾಳು ಆಯ್ಕೆಯಾಗಿರಲಿಲ್ಲ. ಇದೀಗ ಹಾಕಿಗೆ ವಿದಾಯ ಹೇಳಿರುವ ದಿಗ್ಗಜ ಗೋಲ್ ಕೀಪರ್ ಶ್ರೀಜೇಶ್ ಅವರನ್ನು ಆಯ್ಕೆ ಮಾಡಲಾಗಿದೆ. ಉಭಯ ಕ್ರೀಡಾಪಟುಗಳು ಧ್ವಜಧಾರಿಯಾಗಿ ಸಮಾರೋಪ ಸಮಾರಂಭದಲ್ಲಿ ತ್ರಿವರ್ಣ ಧ್ವಜವನ್ನು ಹೊತ್ತು ಸಾಗಲಿದ್ದಾರೆ. ಉದ್ಘಾಟನ ಸಮಾರಂಭದಲ್ಲಿ ಪಿ.ವಿ ಸಿಂಧು ಮತ್ತು ಟೇಬಲ್ ಟೆನಿಸ್ ಆಟಗಾರ ಶರತ್ ಕಮಲ್ ಭಾರತದ ಧ್ವಜಧಾರಿಗಳಾಗಿದ್ದರು. ಮನು ಭಾಕರ್ ಮತ್ತು ಶ್ರೀಜೇಶ್ ಸಮಾರೋಪ ಸಮಾರಂಭ ದಲ್ಲಿ ಭಾರತದ ಧ್ವಜಧಾರಿಯಾಗಲಿದ್ದಾರೆ. ಉಭಯ ಕ್ರೀಡಾಪಟುಗಳು ಈ ಕೂಟದಲ್ಲಿ ಶ್ರೇಷ್ಠ ಸಾಧನೆ ಗೈದಿದ್ದು, ಈ ಗೌರವಕ್ಕೆ ಅರ್ಹ ಹಾಗೂ ಅತ್ಯಂತ ಸೂಕ್ತ ವಾಗಿದ್ದಾರೆ ಎಂಬುದಾಗಿ ಐಒಎ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬುಧವಾರದಂದು ತವರಿಗೆ ಮರಳಿದ್ದ ಮನು ಭಾಕರ್ ಶನಿವಾರ ಮತ್ತೆ ಪ್ಯಾರಿಸ್‌ಗೆ ಮರಳಲಿದ್ದಾರೆ.

ಇಂದು ಕಣದಲ್ಲಿ

- ಗಾಲ್ಫ್: ಮಹಿಳಾ ರೌಂಡ್ 4 (ಪದಕದ ಸ್ಪರ್ಧೆ) 12:30ಕ್ಕೆ
- ಕುಸ್ತಿ: ಮಹಿಳಾ ಫ್ರೀಸ್ಟೈಲ್ 76 ಕೆಜಿ: 3:00

ಪ್ರಭಾವಿಯಾಗದ ಮಹಿಳಾ ತಂಡ

ರಿಲೇ: ಭಾರತಕ್ಕೆ ಭಾರೀ ನಿರಾಸೆ

ಪ್ಯಾರಿಸ್: ಭಾರತ ಪುರುಷರ ಹಾಗೂ ಮಹಿಳೆಯರ ತಂಡಗಳು ನಿರಾಸೆ ಮೂಡಿಸಿವೆ. ಅಥ್ಲೆಟಿಕ್ಸ್ ವಿಭಾಗದಲ್ಲಿ ಸಾಧನೆ ಮಾಡುವ ಮೂಲಕ ಈ ಬಾರಿ ಪದಕದ ಆಸೆ ಹುಟ್ಟಿಸಿದ್ದ ರಿಲೇ ತಂಡ ಸೋಲುಂಡಿದ್ದು, ಒಲಿಂಪಿಕ್ಸ್ ಅಭಿಯಾನ ಮುಗಿಸಿದೆ. ಶುಕ್ರವಾರ ನಡೆದ 4100 ಮೀ. ರಿಲೇ ವಿಭಾಗದಲ್ಲಿ ಭಾರತದ ತಂಡಗಳು ಫೈನಲ್‌ಗೆ ಪ್ರವೇಶಿಸುವಲ್ಲಿ ವಿಫಲವಾಗಿವೆ. ರಾಜೇಶ್ ರಮೇಶ್, ಮುಹಮ್ಮದ್ ಅನಾಸ್, ಅಮೋಜ್ ಜೇಕಬ್ ಮತ್ತು ಎಂ.ಎ. ವಾರಿಯತೊಡಿ ಅವರನ್ನೊಳಗೊಂಡ ಪುರುಷರ ತಂಡವು ಉತ್ತಮ ಪ್ರದರ್ಶನ ನೀಡಿದರೂ ಐದನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು. ಮೊದಲ ಮೂರು ಸ್ಥಾನ ಪಡೆದ ತಂಡಗಳು ಫೈನಲ್‌ಗೆ ಅರ್ಹತೆ ಪಡೆದುಕೊಂಡಿವೆ. ಭಾರತ ಪುರುಷರ ತಂಡವು 3:00.58 ನಿಮಿಷಗಳಲ್ಲಿ ಗುರಿ ಮುಟ್ಟಿತು. ಫ್ರಾನ್ಸ್ (2:59.53 ನಿಮಿಷ), ನೈಜೀರಿಯಾ (2:59.81 ನಿಮಿಷ) ಹಾಗೂ ಬೆಲ್ಜಿಯಂ (2:59.84 ನಿಮಿಷ) ಮುಂದಿನ ಹಂತಕ್ಕೆ ಪ್ರವೇಶ ಪಡೆದಿದೆ. ಇನ್ನೊಂದೆಡೆ ವಿದ್ಯಾ ರಾಮರಾಜ್, ಪೂವಮ್ಮ ಎಂ.ಆರ್, ಜ್ಯೋತಿಕಾ ಶ್ರೀ ದಂಡಿ ಹಾಗೂ ಸುಭಾ ವೆಂಕಟೇಶನ್ ಅವರನ್ನೊಳಗೊಂಡ ಭಾರತ ಮಹಿಳೆಯರ ತಂಡವು ಮೊದಲ ಸುತ್ತಿನಲ್ಲೇ ಪ್ರಭಾವಿ ಎನಿಸಿಕೊಳ್ಳುವಲ್ಲಿ ವಿಫಲವಾಯಿತು. ಭಾರತ ಮಹಿಳೆಯರ ತಂಡ ಕೊನೆಯವರಾಗಿ (3:32.51 ನಿಮಿಷ) ಗುರಿ ಮುಟ್ಟಿತು. ಈ ವಿಭಾಗದಲ್ಲಿ ಜಮೈಕಾ 3:24.92 ನಿಮಿಷ, ಹಾಲೆಂಡ್ 3:25.03 ನಿಮಿಷ ಮತ್ತು ಐರ್ಲೆಂಡ್ 3:25.05 ನಿಮಿಷಗಳಲ್ಲಿ ಗುರಿ ಮುಟ್ಟುವ ಮೂಲಕ ಫೈನಲ್‌ಗೆ ಪ್ರವೇಶಿಸಿತು.

ಆ.11ರ ಒಳಗೆ ವಿನೇಶ್ ತೀರ್ಪು

ಬೆಳ್ಳಿಗೆ ಕೋರಿಕೆ | ಶುಕ್ರವಾರ ವಿಚಾರಣೆ | ಭಾನುವಾರದ ಆದೇಶ ಸಂಭವ

ದೆಹಲಿ: ಫೈನಲ್ ಅನರ್ಹತೆಯ ಬಳಿಕ ಜಂಟಿ ಬೆಳ್ಳಿ ಪದಕ ನೀಡಬೇಕೆಂದು ಕ್ರೀಡಾ ಮಧ್ಯಸ್ಥಿಕೆ ನ್ಯಾಯಾಲಕ್ಕೆ(ಸಿಎಎಸ್) ವಿನೇಶ್ ಫೋಗಾಟ್ ಅವರು ಸಲ್ಲಿದ್ದ ಮನವಿಯನ್ನು ಗುರುವಾರ ನ್ಯಾಯಾಲಯವು ಸ್ವೀಕರಿಸಿತ್ತು. ಗುರುವಾರವೇ ರಾತ್ರಿ 9.30ರ ವೇಳೆಗೆ ವಿಚಾರಣೆ ನಡೆಸಲು ನಿರ್ಧರಿಸಲಾಗಿತ್ತು. ಆದರೆ, ವಿನೇಶ್‌ಗೆ ಭಾರತೀಯ ವಕೀಲರನ್ನು ನೇಮಿಸಿಕೊಳ್ಳಲು ಹೆಚ್ಚಿನ ಸಮಯ ನೀಡುವ ಸಲುವಾಗಿ ವಿಚಾರಣೆಯನ್ನು ಶುಕ್ರವಾರಕ್ಕೆ ಮುಂದೂಡಲಾಗಿತ್ತು. ಆದರೆ ಸದ್ಯ ವಿಚಾರಣೆ ಜಾರಿಯಲ್ಲಿದ್ದು, ಒಲಿಂಪಿಕ್ಸ್ ಮುಕ್ತಾಯದ ಮೊದಲೇ ತೀರ್ಪನ್ನು ಪ್ರಕಟಿಸುವುದಾಗಿ ಸಿಎಎಸ್ ಹೇಳಿದೆ ಎಂದು ಮೂಲಗಳು ತಿಳಿಸಿವೆ.

ಮಂಗಳವಾರ ನಡೆದ ಅರ್ಹತಾ ಸುತ್ತಿಗೂ ಮುನ್ನ ವಿನೇಶ್ ಅವರ ತೂಕವನ್ನು ಲೆಕ್ಕ ಮಾಡಲಾಗಿತ್ತು. ಈ ವೇಳೆ ಅವರು 49.9 ಕೆಜಿ ತೂಕವಿದ್ದರು. 3 ಬೌಟ್‌ಗಳು ಮುಗಿಯುವ ವೇಳೆಗೆ ಶಕ್ತಿ ಕಾಪಾಡಿಕೊಳ್ಳಲು ಹೈ ಎನರ್ಜಿ ಆಹಾರ ಸೇವಿಸಿದ ಕಾರಣ ಅವರ ತೂಕ 2.8 ಕೆಜಿ ಹೆಚ್ಚಳವಾಗಿತ್ತು. ಈ 2.8 ಕೆಜಿ ಕಡಿಮೆ ಮಾಡಲು ವಿನೇಶ್ ರಾತ್ರಿಯಿಡೀ ಯಾವುದೇ ಆಹಾರ ಸೇವಿಸದೇ, ಸೈಕ್ಲಿಂಗ್ ನಡೆಸಿ, ಸ್ಕಿಪ್ಪಿಂಗ್ ಮಾಡಿದ್ದರು. ತೂಕ ಇಳಿಸಲು ಬೇಕಾಗುವ ಎಲ್ಲ ಕಸರತ್ತುಗಳನ್ನು ಕೈಗೊಂಡಿದ್ದರು. ಈ ಮೂಲಕ ಅವರು ಸಾಕಷ್ಟು ತೂಕ ಇಳಿಸಿದ್ದರು. ಕೊನೆ ಕ್ಷಣದಲ್ಲಿ ಅವರ ಕೂದಲು ಕತ್ತರಿಸಿ, ಬಟ್ಟೆಗಳ ಗಾತ್ರ ಕುಗ್ಗಿಸಿ ಪರೀಕ್ಷೆಗೆ ಕಳುಹಿಸಲಾ ಯಿತು. ಆದರೂ 100 ಗ್ರಾಂ ಹೆಚ್ಚಿದ್ದ ಕಾರಣ ಅನರ್ಹಗೊಂಡರು.

ಬೆಳ್ಳಿ ನೀಡಲು ತೆಂಡೂಲ್ಕರ್ ಆಗ್ರಹ: ವಿನೇಶ್ ಫೋಗಾಟ್ ಅವರಿಗೆ ಅರ್ಹವಾದ ಬೆಳ್ಳಿ ಪದಕವನ್ನು ನೀಡಬೇಕು ಎಂದು ಭಾರತೀಯ ಕ್ರಿಕೆಟ್ ದಂತಕತೆ ಸಚಿನ್ ತೆಂಡೂಲ್ಕರ್ ಆಗ್ರಹಿಸಿದ್ದಾರೆ. ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ತೆಂಡೂಲ್ಕರ್, ವಿನೇಶ್ ನ್ಯಾಯಯುತವಾಗಿ ಫೈನಲ್ ಪ್ರವೇಶಿಸಿದ್ದರು. ಆಕೆಯ ಪಾಲಿನ ಬೆಳ್ಳಿ ಪದಕವನ್ನು ದೋಚಲಾಗಿದೆ. ಒಂದು ವೇಳೆ ಕುಸ್ತಿಪಟುವೇನಾದರೂ ಉದ್ದೀಪನ ಔಷಧವನ್ನು ಸೇವಿಸಿದ್ದರೆ, ಅಂಥವರನ್ನು ಅನರ್ಹಗೊಳಿಸುವುದರಲ್ಲಿ ಅರ್ಥವಿರುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಎಲ್ಲ ಕ್ರೀಡೆಗಳೂ ತಮ್ಮದೇ ಆದ ನಿಯಮಾವಳಿಗಳನ್ನು ಹೊಂದಿರುತ್ತವೆ ಹಾಗೂ ಆ ನಿಯ ಮಾವಳಿಗಳನ್ನು ವಿಷಯದ ಪರಿಧಿಯಲ್ಲಿ ನೋಡಬೇಕಾಗುತ್ತದೆ. ಎಂದು ಅವರು ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

ಕುಸಿದ ಗಾಲ್ಫ್ ಆಟಗಾರರು

ಪ್ಯಾರಿಸ್: ಮಹಿಳೆಯರ ಗಾಲ್ಫ್ ಪಂದ್ಯಾವಳಿಯ ಮೂರನೇ ಸುತ್ತಿನಲ್ಲಿ ಭಾರತದ ಅದಿತಿ ಅಶೋಕ್ ಮತ್ತು ದೀಕ್ಷಾ ದಾಗರ್ ಅವರು ನೀರಸ ಪ್ರದರ್ಶನ ತೋರಿದ್ದು, ಶ್ರೇಯಾಂಕದಲ್ಲಿ ಕುಸಿತ ಕಂಡಿದ್ದಾರೆ. ಕನ್ನಡತಿ ಅದಿತಿ ಅಶೋಕ್ ಅವರು, ಶುಕ್ರವಾರ ನಡೆದ ಮೂರನೇ ಸುತ್ತಿನಲ್ಲಿ 7-ಓವರ್ ಪಾರ್ ಅಂಕಪಟ್ಟಿಯಲ್ಲಿ ಒಟ್ಟು 6-222 ನೊಂದಿಗೆ ಟಿ40ಗೆ ಕುಸಿದಿದ್ದಾರೆ. ಅದರಂತೆ 8-ಓವರ್‌ಗಳ ಸಮಾನ ಪ್ರದರ್ಶನದ ನಂತರ ದೀಕ್ಷಾ ದಾಗರ್, ಅದೇ ರೀತಿ, ಶ್ರೇಯಾಂಕದಲ್ಲಿ ಒಟ್ಟು 7-ಓವರ್ ಪಾರ್‌ನ ನಂತರ 223 ಅಂಕದೊಂದಿಗೆ ಟಿ14 ರಿಂದ ಟಿ42 ಗೆ ಕುಸಿದಿದ್ದಾರೆ. ಮಹಿಳಾ ಗಾಲ್ಫ್ ಪಂದ್ಯಾವಳಿಯಲ್ಲಿ ಪದಕದ ಸ್ಪರ್ಧೆಯಲ್ಲಿ ಮರಳಲು ಭಾರತದ ಜೋಡಿಯು ಶನಿವಾರ ನಾಲ್ಕನೇ ಸುತ್ತಿನಲ್ಲಿ 15 ಕ್ಕಿಂತ ಹೆಚ್ಚು ಅಂತರವನ್ನು ಏರಿಸಬೇಕಿದೆ. ಎರಡನೇ ಸುತ್ತಿನ ನಂತರ ಸ್ವಿಟ್ಜರ್ಲೆಂಡ್‌ನ ಮೋರ್ಗಾನೆ ಮೆಟ್ರಾಕ್ಸ್ ಅವರು, ಮೂರನೇ ಸುತ್ತಿನ ನಂತರ ಎರಡು ಬಾರಿ ಒಲಿಂಪಿಕ್ ಪದಕ ವಿಜೇತ ನ್ಯೂಜಿಲೆಂಡ್‌ನ ಕೊ ಲಿಡಿಯಾ ಅವರೊಂದಿಗೆ ಮೊದಲ ಸ್ಥಾನ ಹಂಚಿಕೊಂಡಿದ್ದಾರೆ.

ಜೂನಿಯರ್ ಹಾಕಿ ತಂಡದ ಕೋಚ್ ಶ್ರೀಜೇಶ್

- ಹಾಕಿ ಪಡೆಯ ಗೋಡೆಗೆ ಗೌರವ
- ಪದಕ ಗೆದ್ದ ನಂತರ ಗೋಲ್‌ಕೀಪರ್‌ಗೆ ಹೊಸ ಜವಾಬ್ದಾರಿ

ಪ್ಯಾರಿಸ್: ಕಂಚಿನ ಪದಕ ಗೆದ್ದ ನಂತರ ಭಾರತ ಹಾಕಿ ತಂಡದ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ವಿದಾಯ ಹೇಳಿದ್ದರು. ಇದೀಗ ಶ್ರೀಜೇಶ್‌ಗೆ ಹಾಕಿ ಇಂಡಿಯಾ ಮಹತ್ವದ ಹುದ್ದೆ ನೀಡಿದೆ.

ಟೀಂ ಇಂಡಿಯಾದ ವಾಲ್ ಎಂದು ಕರೆಯಲ್ಪಡುವ ಪಿ.ಆರ್. ಶ್ರೀಜೇಶ್ ಈ ಹಿಂದೆಯೇ ಇದು ನನ್ನ ಕೊನೆಯ ಒಲಿಂಪಿಕ್ಸ್ ಎಂದು ಹೇಳಿಕೊಂಡಿದ್ದರು. ಅದರಂತೆ ಗುರುವಾರ ನಡೆದಿದ್ದ ಕಂಚು ಸುತ್ತಿನ ಪಂದ್ಯದ ನಂತರ ಅವರು ಹಾಕಿಗೆ ನಿವೃತ್ತಿ ಘೋಷಿಸಿದ್ದರು. ಇದೀಗ ಅವರಿಗೆ ನೂತನ ಜವಾಬ್ದಾರಿ ನೀಡಲಾಗಿದ್ದು, ಅವರನ್ನು ಜೂನಿಯರ್ ಪುರುಷರ ಹಾಕಿ ತಂಡದ ಮುಖ್ಯ ಕೋಚ್ ಆಗಿ ಹಾಕಿ ಇಂಡಿಯಾ ನೇಮಿಸಿದೆ. ಮೊದಲಿನಿಂದಲೂ ಭಾರತ ಹಾಕಿ ತಂಡದ ಪ್ರಮುಖ ಸದಸ್ಯರಾಗಿರುವ ಶ್ರೀಜೇಶ್, ಪ್ಯಾರಿಸ್ ಒಲಿಂಪಿಕ್ಸ್‌ನಲ್ಲೂ ಅದ್ಭುತ ಪ್ರದರ್ಶನ ನೀಡಿ ಎದುರಾಳಿ ತಂಡದ ಮುಂದೆ ಗೋಡೆಯಂತೆ ನಿಂತಿದ್ದರು. ಸ್ಪೇನ್ ವಿರುದ್ಧದ ಕಂಚಿನ ಪದಕದ ಪಂದ್ಯದಲ್ಲೂ ಶ್ರೀಜೇಶ್ ಕೊನೆಯ ಕ್ವಾರ್ಟರ್‌ನಲ್ಲಿ ಅದ್ಭುತ ಸೇವ್‌ಗಳನ್ನು ಮಾಡಿ ಮುನ್ನಡೆ ಸಾಧಿಸದಂತೆ ತಡೆದರು. ಈ ಮೂಲಕ ತಂಡ ಶ್ರೀಜೇಶ್‌ಗೆ ಗೆಲುವಿನೊಂದಿಗೆ ಬೀಳ್ಕೊಟ್ಟಿತು. ಭಾರತದ ಪರ ಒಟ್ಟು 4 ಒಲಿಂಪಿಕ್ಸ್ ಆಡಿರುವ ಶ್ರೀಜೇಶ್, ಇದರಲ್ಲಿ ಎರಡು ಒಲಿಂಪಿಕ್ ಪದಕವನ್ನು ಗೆದ್ದ ತಂಡದ ಭಾಗವಾಗಿದ್ದಾರೆ.

ಗೆಲುವಿನ ಸರದಾರ ಶ್ರೀಜೇಶ್: 2004 ರಲ್ಲಿ ಜೂನಿಯರ್ ತಂಡದೊಂದಿಗೆ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದ ಶ್ರೀಜೇಶ್, 2006ರಲ್ಲಿ ಹಿರಿಯ ತಂಡ ಸೇರಿ ಕೊಂಡರು. ಆ ನಂತರ 2014 ರ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಮತ್ತು 2018 ರ ಏಷ್ಯನ್ ಗೇಮ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಭಾರತ ತಂಡದ ಸದಸ್ಯರಾಗಿದ್ದರು. ಇದಲ್ಲದೆ, 2018 ರಲ್ಲಿ ಏಷ್ಯನ್ ಚಾಂಪಿಯನ್ಸ್ ಟ್ರೋಫಿಯ ಜಂಟಿ ವಿಜೇತ ತಂಡ, ಭುವನೇಶ್ವರದಲ್ಲಿ ನಡೆದ 2019 ಎಫ್‌ಐಹೆಚ್ ಪುರುಷರ ಸರಣಿ ಫೈನಲ್‌ನಲ್ಲಿ ಚಿನ್ನದ ಪದಕ ವಿಜೇತ ತಂಡ ಮತ್ತು ಬರ್ಮಿಂಗ್‌ಹ್ಯಾಮ್ 2022 ಕಾಮನ್ವೆಲ್ತ್ ಗೇಮ್ಸ್‌ನ ಬೆಳ್ಳಿ ಪದಕ ವಿಜೇತ ತಂಡದಲ್ಲಿ ಸದಸ್ಯರಾಗಿದ್ದರು. 2021 ರಲ್ಲಿ ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅವರು 2021ರಲ್ಲಿ ವರ್ಷದ ವರ್ಲ್ಡ್ ಗೇಮ್ಸ್ ಅಥ್ಲೀಟ್ ಪ್ರಶಸ್ತಿ ಪಡೆದರು. ಈ ಮೂಲಕ ವರ್ಲ್ಡ್ ಗೇಮ್ಸ್ ಅಥ್ಲೀಟ್ ಆಫ್ ದಿ ಇಯರ್ ಪ್ರಶಸ್ತಿಯನ್ನು ಗೆದ್ದ ಭಾರತದ ಎರಡನೇ ಆಟಗಾರ ಎನಿಸಿಕೊಂಡರು. 2021, 2022ರಲ್ಲಿ ಗೋಲ್ ಕೀಪರ್ ಆಯ್ಕೆ ಯಾಗಿದ್ದಾರೆ.

ವಿವೇಕ್ ಸಾಗರ್‌ಗೆ 1 ಕೋಟಿ ಬಹುಮಾನ

ಭೋಪಾಲ್: ಪ್ಯಾರಿಸ್‌ನಲ್ಲಿ ನಡೆದಿದ್ದ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಭಾರತ ಹಾಕಿ ತಂಡದ ಸದಸ್ಯರಲ್ಲಿ ಒಬ್ಬರಾದ ವಿವೇಕ್ ಸಾಗರ್ ಪ್ರಸಾದ್ ಅವರಿಗೆ ಮಧ್ಯ ಪ್ರದೇಶದ ಸರಕಾರ ಶುಕ್ರವಾರ ₹1ಕೋಟಿ ಬಹುಮಾನ ಘೋಷಿಸಿದೆ. 52 ವರ್ಷಗಳ ನಂತರ ಭಾರತ ಹಾಕಿ ತಂಡ ಸತತ ಕಂಚಿನ ಪದಕ ಗೆದ್ದುಕೊಂಡಿತ್ತು. ಗುರುವಾರ ಕಂಚು ಸುತ್ತಿನ ಪಂದ್ಯದಲ್ಲಿ 2-1 ಗೋಲುಗಳಿಂ ಸ್ಪೇನ್ ಮೇಲೆ ಜಯಗಳಿಸಿತ್ತು. ವಿವೇಕ್ ಸಾಗರ್ ಅವರು ಮಧ್ಯಪ್ರದೇಶದವರು. ಅವರನ್ನು ಅಭಿನಂದಿಸಿರುವ ಮುಖ್ಯಮಂತ್ರಿ ಮೋಹನ್ ಯಾದವ್ ಬಹುಮಾನ ಪ್ರಕಟಿಸಿದರು. ದೂರವಾಣಿಯಲ್ಲಿ ಅವರನ್ನು ಅಭಿನಂದಿಸಿದ ಯಾದವ್, ನಿಮಗೆ ಬಹುಮಾನವಾಗಿ ಮಧ್ಯಪ್ರದೇಶ ಸರಕಾರ ₹1ಕೋಟಿ ಮೊತ್ತವನ್ನು ನಿಮ್ಮ ಖಾತೆಗೆ ವರ್ಗಾಯಿಸಲಿದೆ ಎಂದಿದ್ದಾರೆ.